ಶ್ರೀಃ

# ಶ್ರೀಸುಮಧ್ವವಿಜಯಮಹಾಕಾವ್ಯಂ

ಶ್ರೀನಾರಾಯಣಪಂಡಿತಾಚಾರ್ಯವಿರಚಿತಂ

## ಭಾಗ–೧

೧ ರಿಂದ ೪ ಸರ್ಗಗಳು

ಕನ್ನಡ ಟೀಕಾಸಹಿತ

★


ಅನುವಾದಕ :

ಆಚಾರ್ಯ ಸಾಣೂರು ಭೀಮಭಟ್ಟರು

ನಿವೃತ್ತ ತರ್ಕಶಾಸ್ತ್ರ ಪ್ರಾಧ್ಯಾಪಕರು

ಸಂಸ್ಕೃತಮಹಾಪಾಠಶಾಲಾ, ಬೆಂಗಳೂರು–೫೬೦ ೦೧೮

ಪ್ರಕಾಶಕರು :
ಆಚಾರ್ಯ ಸಾಣೂರು ಭೀಮಭಟ್ಟರು
"ಈಶಾವಾಸ್ಯಂ" ನಂ. ೨೨/೪, ೫ ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮
ದೂರವಾಣಿ : 620246

ದ್ವಿತೀಯ ಮುದ್ರಣ : ೧೯೯೨

ಸರ್ವಾಧಿಕಾರಗಳೂ ಸುರಕ್ಷಿತ

೧,೦೦೦ ಪ್ರತಿಗಳು

ಬೆಲೆ : ೨೫ ರೂಪಾಯಿಗಳು

ಮುದ್ರಕರು :
ಶ್ರೀ ರಾಘವೇಂದ್ರ ಪ್ರಿಂಟರ್ಸ್
ಚಾಮರಾಜಪೇಟೆ, ಬೆಂಗಳೂರು-೧೮

Rarest Archiver

# ಉಪೋದ್ಘಾತ

ಸರ್ವಕಾಲದಲ್ಲಿಯೂ ಸುಖವೇ ತನಗೆ ಬೇಕೆಂದು ಎಲ್ಲಾ ಮಾನವರೂ ಅಪೇಕ್ಷಿಸುತ್ತಾರೆ. ಆದರೆ ಆ ಸುಖಕ್ಕೆ ಉತ್ತಮವಾದ ಸಾಧನವಾವುದು ಎಂಬ ಬಗ್ಗೆ ಸರಿಯಾದ ತಿಳುವಳಿಕೆಯು ಯಾರಿಗೂ ಇರುವುದಿಲ್ಲ. ಪರಮಾತ್ಮನ ಅನುಗ್ರಹದಿಂದ ಜೀವಾತ್ಮನಿಗೆ ಈ ಬಂಧದ ಬಿಡುಗಡೆಯಾದ ಹೊರತು ನಿತ್ಯ ಸುಖವು ಸಿಗಲಾರದು. ಪರಮಾತ್ಮನ ಅನುಗ್ರಹಕ್ಕೆ ಅವನ ಪ್ರಸಾದವೇ ಕಾರಣ. ಪ್ರಸಾದಕ್ಕೆ ಅವನ ಅಪರೋಕ್ಷಜ್ಞಾನವೇ ಕಾರಣ. ಇಂತಹ ಅಪರೋಕ್ಷಜ್ಞಾನವಾಗಬೇಕಾದರೆ ನಿರಂತರದಲ್ಲಿಯೂ ಶ್ರವಣ ಮನನ ಧ್ಯಾನ ಗಳನ್ನು ಮಾಡಬೇಕು. ಈ ಸಾಧನಗಳ ಅನುಷ್ಠಾನವು ಸರಿಯಾಗಿ ಆಗ ಬೇಕಾದರೆ ಗುರುವಿನ ಅನುಗ್ರಹವು ಬೇಕು. ಯಾವ ದೋಷವೂ ಇಲ್ಲದ, ಸರ್ವಸಮರ್ಥರಾದ, ಪರಮಾತ್ಮನ ಅಪರೋಕ್ಷವನ್ನು ಪಡೆದಿರುವ ಗುರುಗಳನ್ನು ಆಶ್ರಯಿಸಿದ ಹೊರತು ಸಾಧನಮಾರ್ಗದಲ್ಲಿ ಮುನ್ನಡೆಯಲು ಸಾಧ್ಯವಿಲ್ಲ. ಶ್ರೀಮೂಲವಾಯುದೇವರೇ ಇಂತಹ ಗುರೂತ್ತಮರು, ಇವರೇ ಭಾರತೀ ರಮಣ ಮುಖ್ಯ ಪ್ರಾಣರು; ಇವರು ಜೀವೋತ್ತಮರು, ನಿತ್ಯದಲ್ಲಿಯೂ ಪರಮಾತ್ಮನ ಅಪರೋಕ್ಷವುಳ್ಳವರು. ಇವರು ಮುಮುಕ್ಷುಗಳಾದ ಸಾತ್ತ್ವಿಕ ಜೀವರು ಮಾಡಿದ ಪ್ರಾರ್ಥನಾ ಪೂಜಾ ಉಪಾಸನೆಗಳಿಂದ ಪ್ರಸನ್ನರಾಗಿ ದೇವದೇ ವೋತ್ತಮನಾದ ಹರಿಯನ್ನು ಕಾಣಲು ಸಾಧನಗಳನ್ನು ಒದಗಿಸಿ ಅನುಗ್ರಹ ಮಾಡಿ ಮುನ್ನಡೆಸುತ್ತಾರೆ. ಇದಕ್ಕಾಗಿ ನಾವು ಗುರುಮಹಿಮೆಯನ್ನು ತಿಳಿಯಬೇಕಾಗಿದೆ.

ಶ್ರೀಮುಖ್ಯಪ್ರಾಣದೇವರು ಹಿಂದೆ ತ್ರೇತಾಯುಗದಲ್ಲಿ ಹನುಮಂತ ನಾಗಿ ಅವತರಿಸಿ ಶ್ರೀರಾಮಚಂದ್ರರೂಪದಿಂದ ಅವತರಿಸಿದ ಶ್ರೀಮನ್ನಾ ರಾಯಣನ ಸೇವೆ ಮಾಡಿದರು. ಆಗ ಅವರು ಅನೇಕ ಅದ್ಭುತಕಾರ್ಯ ಗಳನ್ನು ಮಾಡಿದರು. ಹಾಗೆಯೇ ದ್ವಾಪರಯುಗದಲ್ಲಿ ಅವತರಿಸಿದ ಶ್ರೀಕೃಷ್ಣನ ಸೇವೆಗಾಗಿ ಭೀಮಸೇನನಾಗಿ ಅವತರಿಸಿ ದುಷ್ಟ ನಿಗ್ರಹವನ್ನು ಮಾಡಿ

Rarest Archiver

ಪರಮಾತ್ಮನ ಅನುಗ್ರಹವನ್ನು ಪಡೆದರು. ಹೀಗೆ ಬಲಕಾರ್ಯದಲ್ಲಿ ಶ್ರೀಹರಿಯ ಸೇವೆ ಮಾಡಿ ಮುಂದೆ ಜ್ಞಾನ ಕಾರ್ಯದಲ್ಲಿಯೂ ಪರಮಾತ್ಮನ ಸೇವೆ ಮಾಡುವ ಸಲುವಾಗಿ ಕಲಿಯುಗದಲ್ಲಿ ಅವತಾರಮಾಡಿ "ಮಧ್ವ" ಎಂಬ ಹೆಸರಿನಿಂದ ಪ್ರಸಿದ್ಧರಾಗಿ ಸಜ್ಜನರಿಗೆ ಜ್ಞಾನೋಪದೇಶಮಾಡಿ ಉದ್ಧರಿಸಿದರು.

ನಾರಾಯಣಾವತಾರರಾದ ಶ್ರೀವೇದವ್ಯಾಸರು ರಚಿಸಿದ ಬ್ರಹ್ಮಸೂತ್ರ ಗಳಿಗೆ ದುರ್ವಾದಿಗಳು ಮಾಡಿರುವ ಅಪವ್ಯಾಖ್ಯಾನವನ್ನು ನಿರಾಕರಿಸಿ, ಉತ್ತಮವಾದ ಬ್ರಹ್ಮಸೂತ್ರಭಾಷ್ಯಾದಿ ಗ್ರಂಥಗಳ ರಚನೆ ಮಾಡಿದ ಲೋಕ ಗುರುಗಳಾದ ಶ್ರೀಮಧ್ವಾಚಾರ್ಯರು ಕ್ರಿ. ಶ. ೧೨೩೮ ವಿಳಂಬಿಸಂವತ್ಸರ ಆಶ್ವಯುಜ ಶುದ್ಧ ದಶಮೀ ಬುಧವಾರ ಮಧ್ಯಾಹ್ನ ಉಡುಪಿಯಿಂದ ೭ ಮೈಲು ದೂರ ಆಗ್ನೇಯ ದಿಕ್ಕಿನಲ್ಲಿರುವ ಪಾಜಕಕ್ಷೇತ್ರದಲ್ಲಿ ಅವತರಿಸಿ ೭೯ ವರ್ಷ ಮನುಷ್ಯದೃಷ್ಟಿಗೆ ಗೋಚರರಾಗಿದ್ದು ಪಿಂಗಲಸಂವತ್ಸರದ ಮಾಘ ಶುದ್ಧ ನವಮಿಯ ದಿನ ಉಡುಪಿಯಲ್ಲಿಯೇ ವಿರಾಜಿಸುತ್ತಿರುವ ಶ್ರೀಮದನಂತಾಸನನ ಸನ್ನಿಧಾನದಲ್ಲಿ ಶಿಷ್ಯರಿಗೆ ಮಹೈತರೇಯೋಪನಿಷತ್ತಿನ ಪಾಠಹೇಳುತ್ತಾ ಇದ್ದು, ಆಗ ದೇವತೆಗಳು ಸ್ತೋತ್ರಮಾಡಿ, ಸುರಿಸಿದ ಪುಷ್ಪಗಳ ರಾಶಿಯಲ್ಲಿ ಒಮ್ಮೆ ಮುಚ್ಚಿಹೋದರು; ಅನಂತರ ಉಡುಪಿಯಿಂದ ಬದರಿಕಾಶ್ರಮಕ್ಕೆ ಹೋದರು. ಅಲ್ಲಿ ಈಗಲೂ ತನ್ನ ಗುರುಗಳಾದ ಶ್ರೀವೇದವ್ಯಾಸರ ಸನ್ನಿಧಾನದಲ್ಲಿ ಅವರ ಸೇವೆಮಾಡುತ್ತಾ ದೃಶ್ಯರಾಗಿ ಇದ್ದಾರೆ. ಒಂದಂಶದಿಂದ ಅದೃಶ್ಯರಾಗಿ ಈಗಲೂ ಅನಂತಾಸನನ ಸನ್ನಿಧಿಯಲ್ಲಿದ್ದಾರೆ. ಅವರ ಶಿಷ್ಯರಾದ ಅಷ್ಟಮಠದ ಸನ್ಯಾಸಿ ಗಳಲ್ಲಿ ಕೃಷ್ಣ ಪರ್ಯಾಯಪೂಜಾಕಾಲದಲ್ಲಿ ವಿಶೇಷವಾಗಿ ಸನ್ನಿಹಿತರಾಗಿರು ತ್ತಾರೆ.

ಹೀಗೆ ಪರಮಾತ್ಮನ ಅನುಗ್ರಹವಾಗಬೇಕಾದರೆ ಗುರುಗಳ ಅನುಗ್ರಹ ವುಂಟಾಗಬೇಕು. ಗುರುಗಳ ಅನುಗ್ರಹ ಉಂಟಾಗಬೇಕಾದರೆ ಅವರಲ್ಲಿ ಭಕ್ತಿ ಯನ್ನು ಮಾಡಬೇಕು. ಭಕ್ತಿ ಎಂದರೆ ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢ ಸ್ನೇಹ. ಮಾಹಾತ್ಮ್ಯಜ್ಞಾನ ಉಂಟಾಗಲು ಅವರ ಚರಿತ್ರೆಯನ್ನು ಯಥಾವತ್ತಾಗಿ ಕೇಳಬೇಕು. ಇದಕ್ಕಾಗಿ ಶ್ರೀಮನ್ನಾರಾಯಣಪಂಡಿತಾ ಚಾರ್ಯರು ಶ್ರೀಮಧ್ವಾಚಾರ್ಯರ ದಿವ್ಯಚರಿತ್ರೆಯನ್ನು ಶ್ರೀಮತ್ಸುಮಧ್ವ ವಿಜಯವೆಂಬ ಮಹಾಕಾವ್ಯರೂಪದಲ್ಲಿ ಬರೆದಿದ್ದಾರೆ. ಇವರು ಆಚಾರ್ಯರ

Rarest Archiver

ಗೃಹಸ್ಥ ಶಿಷ್ಯರಲ್ಲಿ ಅಗ್ರಗಣ್ಯರಾದ ಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯರ ಮೂರನೆಯ ಮಕ್ಕಳು. ಇವರು ಶ್ರೀಮತ್ಸುಮಧ್ವವಿಜಯವನ್ನಲ್ಲದೆ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳ ಹೆಸರುಗಳು ಹೀಗಿವೆ: ೧) ಸಂಗ್ರಹರಾಮಾಯಣ ೨) ಅಣುಮಧ್ವವಿಜಯ ೩) ಮಣಿಮಂಜರೀ ೪) ಶುಭೋದಯ ೫) ಪಾರಿಜಾತ ಹರಣ ೬) ಶಿವಸ್ತುತಿ ೭) ತತ್ತ್ವಮಂಜರೀ ೮) ಪ್ರಮಾಣಲಕ್ಷಣವ್ಯಾಖ್ಯಾನ ೯) ನಯಚಂದ್ರಿಕಾ (ಅನುವ್ಯಾಖ್ಯಾನ ವ್ಯಾಖ್ಯಾ) ೧೦) ಯಮಕಭಾರತವ್ಯಾಖ್ಯಾ ೧೧) ಕೃಷ್ಣಾಮೃತಮಹಾರ್ಣವ ವ್ಯಾಖ್ಯಾ ೧೨) ಯೋಗದೀಪಿಕಾ ೧೩) ಭಾವಪ್ರಕಾಶಿಕಾ (ಸುಮಧ್ವ ವಿಜಯಕ್ಕೆ ಸಂಕ್ಷೇಪವಾದ ಸ್ವಕೃತವ್ಯಾಖ್ಯಾನ).

ಶ್ರೀಮತ್ಸುಮಧ್ವವಿಜಯವು ಮಹಾಕಾವ್ಯ. ಇದರಲ್ಲಿ 16 ಸರ್ಗಗಳಿವೆ. ಇಲ್ಲಿ ಕಾವ್ಯಲಕ್ಷಣಗಳು ಸಮಗ್ರವಾಗಿವೆ. ದೋಷವಿಲ್ಲದ, ಕಾವ್ಯಗುಣಗಳಿಂದ ಕೂಡಿದ, ಅಲಂಕಾರಭರಿತವಾದ, ರಸವತ್ತಾದ, ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದವೇ ಕಾವ್ಯವು. ಇಂತಹ ಕಾವ್ಯಲಕ್ಷಣಯುಕ್ತವಾದ ಈ ಗ್ರಂಥದಲ್ಲಿ ಮಹಾಕವಿಗಳ ಸಂಪ್ರದಾಯದಂತೆ ಮಹಾಕಾವ್ಯಗಳಲ್ಲಿ ವರ್ಣಿಸಬೇಕಾದ, ನಗರ, ಸಮುದ್ರ, ಪರ್ವತ, ಋತು, ಚಂದ್ರೋದಯ, ಸೂರ್ಯೋದಯ, ಉದ್ಯಾನಕ್ರೀಡಾ, ಜಲಕ್ರೀಡಾ ಇತ್ಯಾದಿಗಳ ವರ್ಣನೆಯೂ ಬಂದಿದೆ. ಓಜಸ್ಸು, ಪ್ರಸಾದ, ಮಾಧುರ್ಯಗುಣಪೂರ್ಣವಾದ ಶೈಲಿಯಲ್ಲಿ ಕಾವ್ಯವನ್ನು ಬರೆದು ಇವರು ಸಾತ್ತ್ವಿಕರಾದ ಸಹೃದಯರಿಗೆ ಗುರುಮಹಿಮೆಯು ರಸವತ್ತಾದ ರೀತಿಯಲ್ಲಿ ಮನದಟ್ಟಾಗುವಂತೆ ಮಾಡಿದ್ದಾರೆ.

ಈ ಮಹಾಕಾವ್ಯಕ್ಕೆ ಸಂಸ್ಕೃತದಲ್ಲಿ ವಿಶ್ವಪತಿತೀರ್ಥೀಯ, ಛಲಾರೀಯ ಮುಂತಾದ ವ್ಯಾಖ್ಯಾನಗಳಿವೆ. ಕನ್ನಡ ಭಾಷೆಯಲ್ಲಿಯೂ ಇದು ಅನುವಾದವಾಗಿದೆ. ಆದರೆ ಸಂಸ್ಕೃತಭಾಷೆಯ ವ್ಯಾಖ್ಯಾನವನ್ನು ಓದಿ ಅರ್ಥಮಾಡಿಕೊಳ್ಳುವವರು ವಿರಳ. ಕನ್ನಡವ್ಯಾಖ್ಯಾನ ಪುಸ್ತಕಗಳೂ ಸಿಗುತ್ತಿಲ್ಲ. ಆದರಿಂದಾಗಿ ಸಂಸ್ಕೃತ ವ್ಯಾಖ್ಯಾನಗಳನ್ನು ಅನುಸರಿಸಿ ಈ ಕನ್ನಡ ಅನುವಾದವನ್ನು ಪ್ರಕಟಿಸಲಾಗಿದೆ. ಇದನ್ನು ಸರಿಯಾಗಿ ಓದಿದರೆ ಸಂಸ್ಕೃತದಲ್ಲಿ ವ್ಯುತ್ಪತ್ತಿಯೂ ಹುಟ್ಟುತ್ತದೆ. ಪ್ರತಿಯೊಂದು ಶ್ಲೋಕದಲ್ಲಿಯೂ ವಿಗ್ರಹ, ಧಾತುರೂಪಗಳು,

Rarest Archiver

ವ್ಯಾಕರಣ ವಿಶೇಷಗಳನ್ನೂ ಕೊಟ್ಟಿದೆ. ಅವುಗಳನ್ನು ವಿಧಾನವಾಗಿ ಓದಿ ಜಿಜ್ಞಾಸುಗಳು ಸಂಸ್ಕೃತ ಜ್ಞಾನವನ್ನು ಸಂಪಾದಿಸಬಹುದು.

ಪ್ರಕೃತ ಶ್ರೀಮತ್ಸುಮಧ್ವವಿಜಯದ ಅನುವಾದದ ಈ ಮೊದಲನೆಯ ಭಾಗದಲ್ಲಿ ಮೊದಲಿನ ನಾಲ್ಕು ಸರ್ಗಗಳಿಗೆ ಸರಳವಾದ ಕನ್ನಡವ್ಯಾಖ್ಯಾನವಿದೆ. ಮೊದಲನೆಯ ಸರ್ಗದಲ್ಲಿ ಶ್ರೀಮುಖ್ಯಪ್ರಾಣದೇವರ ಮಹಿಮೆ, ಮಧ್ವಾವತಾರದ ಉಪೋದ್ಘಾತರೂಪವಾಗಿ ಹನುಮಂತ ಮತ್ತು ಭೀಮಸೇನದೇವರ ಸಂಕ್ಷಿಪ್ತಚರಿತ್ರೆ, ಆಚಾರ್ಯರ ಅವತಾರಕ್ಕೆ ಕಾರಣವಾದ ಹಿನ್ನೆಲೆ, ದುರ್ಮತಗಳಿಂದಾದ ತೊಂದರೆಗಳನ್ನು ವರ್ಣಿಸಲಾಗಿದೆ. ಎರಡನೆಯಸರ್ಗದಲ್ಲಿ ಬ್ರಹ್ಮಾದಿಗಳು ಪ್ರಾರ್ಥನೆಮಾಡಿದಾಗ ದೇವರು ಸತ್ತತ್ವಪ್ರಚಾರಕ್ಕಾಗಿ ಶ್ರೀಮುಖ್ಯ ಪ್ರಾಣದೇವರಿಗೆ ಆಜ್ಞೆ ಮಾಡಿದುದು, ಆಚಾರ್ಯರ ಪೂರ್ವಾಶ್ರಮದ ತಂದೆ ತಾಯಿಗಳು ಇಟ್ಟುಕೊಂಡಿದ್ದ ಆಸೆ, ಅವರು ಮಾಡಿದ ದೇವತಾ ಸೇವೆ ತಪಸ್ಸು, ಆಚಾರ್ಯರ ಅವತಾರ, ನಾನಾ ವಿಧವಾದ ಬಾಲಲೀಲೆಗಳು ವರ್ಣಿತವಾಗಿವೆ. ಮೂರನೆಯಸರ್ಗದಲ್ಲಿ ಬಾಲಕ ಮುಖ್ಯಪ್ರಾಣನ ಅದ್ಭುತವಾದ ಧೈರ್ಯ, ಭಗವದ್ಭಕ್ತಿ, ಮೇಧಾಶಕ್ತಿ, ಉಪನಯನ, ವೇದ ವಿದ್ಯಾಭ್ಯಾಸ, ತನ್ನ ವೇದ ಗುರುಗಳನ್ನು ತನ್ನ ಅದ್ಭುತಸ್ಮರಣಶಕ್ತಿಯಿಂದ ಆಶ್ಚರ್ಯಪಡಿಸಿ ಅವರಿಗೆ ಜ್ಞಾನೋಪದೇಶ ಮಾಡಿರುವುದು ಇತ್ಯಾದಿ ವಿಷಯಗಳು ವರ್ಣಿತವಾಗಿವೆ. ನಾಲ್ಕನೆಯಸರ್ಗದಲ್ಲಿ ಆಚಾರ್ಯರು ಸನ್ಯಾಸಿಯಾಗಲು ನಿರ್ಧರಿಸಿ ಅಚ್ಯುತಪ್ರೇಕ್ಷಾಚಾರ್ಯರ ಬಳಿಗೆ ಹೋದುದು, ತನ್ನನ್ನು ಸನ್ಯಾಸದಿಂದ ವಿಮುಖನಾಗಿಸಲು ಪ್ರಯತ್ನಿಸಿದ ತಂದೆ ತಾಯಿಗಳ ಮನವೊಲಿಸಿ, ವಾಸುದೇವನೆಂಬ ಹೆಸರಿನ ಮುಖ್ಯಪ್ರಾಣನು ಶ್ರೀಪೂರ್ಣಬೋಧ ಎಂಬ ಹೆಸರಿನಿಂದ ಸನ್ಯಾಸಿಯಾದುದು, ವಾಸುದೇವಪಂಡಿತಾದಿಗಳನ್ನು ಜಯಿಸಿದುದು. ಗುರುಗಳಿಂದ ಗ್ರಂಥಶ್ರವಣ ಮಾಡಲು ತೊಡಗಿದಾಗ ಗುರುಗಳಿಗೂ ಅವರಿಗೂ ಲೀಲಾವಿವಾದ, ಅವರ ಅದ್ಭುತವಾದ ಗ್ರಂಥಧಾರಣಶಕ್ತಿ ಇವುಗಳ ವರ್ಣನೆಯಿದೆ.

ಈ ಪುಸ್ತಕವನ್ನು ಅತ್ಯಲ್ಪಕಾಲದಲ್ಲಿ ಸುಂದರವಾಗಿ ಮುದ್ರಿಸಿ ಕೊಟ್ಟ "ಶ್ರೀ ವಿಜಯ ಪ್ರಿಂಟಿಂಗ್ ಹೌಸ್" ನವರಿಗೆ ಕೃತಜ್ಞತೆಗಳು.

Rarest Archiver

ಶ್ರದ್ಧಾಳುಗಳಾದ ಭಕ್ತರಾದ ವೈಷ್ಣವರು ಈ ಗ್ರಂಥವನ್ನು ಓದಿ ಗುರು ಭಕ್ತಿಯನ್ನು ಸಂಪಾದಿಸಿ ಹರಿಭಕ್ತಿಯನ್ನು ಮಾಡಿ ಪರಮಾತ್ಮನ ಅನುಗ್ರಹ ವನ್ನು ಪಡೆಯಲೆಂದುಹಾರೈಸಿ, ಈ ಗ್ರಂಥವನ್ನು ಸಜ್ಜನರು ಸಂಗ್ರಹಿಸಿ ನನ್ನ ಶ್ರಮವನ್ನು ಸಾರ್ಥಕಗೊಳಿಸಿ ಪ್ರೋತ್ಸಾಹಿಸಲಿ ಎಂದು ಪ್ರಾರ್ಥಿಸುತ್ತೇನೆ.

ಇತಿ ಹರಿಭಕ್ತರ ಪಾದಸೇವಕ
ಆಚಾರ್ಯ ಸಾಣೂರು ಭೀಮಭಟ್ಟ

ದುರ್ಮತಿ ಸಂ. ಕಾರ್ತಿಕಶ ಶುಕ್ಲ ಬಲಿಪ್ರತಿಪತ್
ಬುಧವಾರ 28–10–1981
ಬೆಂಗಳೂರು

## ಎರಡನೆಯ ಮುದ್ರಣ

ಮೊದಲನೆಯ ಆವೃತ್ತಿಯ ಪ್ರತಿಗಳು ಮುಗಿದುದರಿಂದ ಈ ಎರಡನೆಯ ಆವೃತ್ತಿಯನ್ನು ಹೊರತರಲಾಗಿದೆ. ಕಾಗದದ ಬೆಲೆ, ಮುದ್ರಣದ ವೆಚ್ಚ ಎಲ್ಲವೂ ಇಮ್ಮಡಿ-ಮುಮ್ಮಡಿ, ಅಥವಾ ನಾಲ್ಕು ಮಡಿಯಾಗಿಯೇ ಹೆಚ್ಚಿದೆ ಯೆಂದು ಎಲ್ಲರಿಗೂ ತಿಳಿದಿದೆ. ಆದುದರಿಂದ ಅನಿವಾರ್ಯವಾಗಿ ಬೆಲೆಯನ್ನು ಹೆಚ್ಚಿಸಬೇಕಾಗಿದೆ. ಗುರುಭಕ್ತಿಯಿಂದ ಹರಿಭಕ್ತಿಯನ್ನು ಪಡೆಯಲು ಈ ಗುರುಚರಿತ್ರೆಯನ್ನು ವೈಷ್ಣವ ಬಂಧುಗಳು ಕೊಂಡು ಅಧ್ಯಯನ ಮಾಡಲಿ ಎಂದು ಪ್ರಾರ್ಥಿಸುತ್ತೇನೆ. ಈ ಎರಡನೆಯ ಆವೃತ್ತಿಯನ್ನು ಸುಂದರವಾಗಿ ಮುದ್ರಿಸಿ ಕೊಟ್ಟ 'ಶ್ರೀ ರಾಘವೇಂದ್ರ ಪ್ರಿಂಟರ್ಸ್' ಅವರಿಗೆ ಕೃತಜ್ಞತಾ ಪೂರ್ವಕವಾದ ಧನ್ಯವಾದಗಳು.

ಆಂಗಿರಸ ಭಾದ್ರ ಪೂರ್ಣಿಮಾ — ಹರಿಭಕ್ತರ ಅನುಗ್ರಹಾಕಾಂಕ್ಷಿ
11–9–1992 — ಆಚಾರ್ಯ ಸಾಣೂರು ಭೀಮಭಟ್ಟರು

Rarest Archiver

# ವಿಷಯಾನುಕ್ರಮಣಿಕೆ


| | | |
|---|---|---|
| | | ಪುಟ |
| ೧) | ಪ್ರಥಮಸರ್ಗದ ಕಥಾಸಾರ | ೧ |
| ೨) | ಮಂಗಳಾಚರಣ | ೫ |
| ೩) | ಗ್ರಂಥಕಾರರ ಪ್ರತಿಜ್ಞೆ | ೧೦ |
| ೪) | ಸಜ್ಜನಪ್ರಾರ್ಥನೆ | ೧೧ |
| ೫) | ಹನುಮದವತಾರಚರಿತ್ರ ವರ್ಣನೆ | ೧೫ |
| ೬) | ಸೀತಾದೇವಿಯು ಹನುಮಂತದೇವರನ್ನು ಅನುಗ್ರಹಿಸಿದ್ದು | ೩೦ |
| ೭) | ಭೀಮಸೇನಾವತಾರಚರಿತ್ರ ವರ್ಣನೆ | ೩೬ |
| ೮) | ಮಣಿಮಂತಮುಂತಾದ ದೈತ್ಯರ ಅವಸ್ಥೆಯ ವರ್ಣನೆ | ೫೬ |
| ೯) | ಮಣಿಮಂತನು ಭೂಮಿಯಲ್ಲಿ ಹುಟ್ಟಿಮಾಡಿದ ಅಸನ್ಮತಪ್ರಚಾರ | ೫೮ |
| ೧೦) | ಸಂಕರನೆಂಬ ಹೆಸರು ಬರಲು ಕಾರಣ, ಸಂಕರಮತದ ಸಾರಸಂಗ್ರಹ, ಅದರಿಂದಾದ ತೊಂದರೆ | ೬೬ |
| ೧೧) | ಎರಡನೆ ಸರ್ಗದ ಕಥಾಸಾರ | ೭೦ |
| ೧೨) | ಬ್ರಹ್ಮಾದಿಗಳ ಪ್ರಾರ್ಥನೆಯಂತೆ ವಾಯುದೇವರಿಗೆ ವಿಷ್ಣುವಿನ ಆಜ್ಞೆ | ೭೪ |
| ೧೩) | ದೇವತಾವೇಶದಿಂದ ದಡ್ಡನೊಬ್ಬನು ಧ್ವಜವನ್ನೇರಿ ವಾಯುದೇವರ ಅವತಾರವಾಗಲಿದೆ ಎಂದನು | ೮೦ |
| ೧೪) | ಮಧ್ಯಗೇಹಭಟ್ಟರು ಪತ್ನಿಯೊಡನೆ ಅನಂತಾಸನನನ್ನು ಸೇವಿಸಿದರು | ೮೪ |
| ೧೫) | ವಾಯುದೇವರ ಅವತಾರ | ೧೦೨ |
| ೧೬) | ಮಧ್ಯಗೇಹಭಟ್ಟರ ಸಂತೋಷ–ಜಾತಕವರ್ಮಾದಿಗಳು | ೧೦೪ |
| ೧೭) | ನಾಮಕರಣ–ಹಾಲಿಗಾಗಿ ಗೋದಾನ | ೧೦೮ |
| ೧೮) | ವಾಸುದೇವನನ್ನು ಅನಂತಾಸನನಿಗೆ ಒಪ್ಪಿಸುವುದು | ೧೧೦ |
| ೧೯) | ಭೂತವು ವಾಸುದೇವನ ಮಹಿಮೆಯನ್ನು ಹೇಳಿತು | ೧೧೧ |
| ೨೦) | ಶಿಶು ವಾಸುದೇವನು ಹುರುಳಿ ತಿಂದು ಜೀರ್ಣಿಸಿಕೊಂಡನು | ೧೧೪ |
| ೨೧) | ವಾಸುದೇವನ ತೊದಲುಮಾತು, ಅಂಬೆಗಾಲಿಡುವಿಕೆ | ೧೨೩ |


Rarest Archiver

೨೨) ಒಂದುವರ್ಷದ ವಾಸುದೇವನು ಎತ್ತಿನ ಬಾಲಹಿಡಿದು ಬೆಳಿಗ್ಗೆ ಕಾಡಿಗೆ ಹೋಗಿ ಸಾಯಂಕಾಲ ಹಿಂದಿರುಗಿದನು ೧೨೫

೨೩) ವಾಸುದೇವನು ಹುಣಸೆಬೀಜಗಳನ್ನು ಕೊಟ್ಟು ತಂದೆಯ ಸಾಲವನ್ನು ತೀರಿಸಿದನು ೧೩೦

೨೪) ಎಲ್ಲಾ ಸಜ್ಜನರ ಸಂತೋಷ ೧೩೩

೨೫) ಮೂರನೆ ಸರ್ಗದ ಕಥಾಸಾರ ೧೩೬

೨೬) ವಾಸುದೇವನೊಬ್ಬನೆ ಉತ್ಸವದ ಮನೆಯಿಂದ ಉಡುಪಿಗೆ ಹೋದನು ೧೩೯

೨೭) ಚಂಡಿಕೆಯು ವಾಸುದೇವನನ್ನು ಲಾಲಿಸಿದಳು ೧೪೫

೨೮) ವಾಸುದೇವನ ಅಕ್ಷರಾಭ್ಯಾಸ–ಪ್ರತಿಭಾಪ್ರದರ್ಶನ ೧೪೬

೨೯) ವಾಸುದೇವವಿಜಯಾಂಕುರ ೧೪೯

೩೦) ಪುರಾಣಾರ್ಥಪ್ರವಚನಚತುರವಾಸುದೇವ ೧೬೫

೩೧) ವಾಸುದೇವನ ಉಪನಯನ ೧೬೮

೩೨) ಸರ್ಪಾಕಾರದ ಮಣಿಮಂತನ ದಮನ ೧೭೬

೩೩) ವಾಸುದೇವನ ವೇದಾಧ್ಯಯನ ೧೮೦

೩೪) ಕ್ರೀಡಾಪಟು ಬಲಭೀಮವಾಸುದೇವ ೧೮೧

೩೫) ಗುರುಗಳು ಗದರಿಸಿದಾಗ ಓದದ ವೇದವನ್ನೂ ವಾಸುದೇವನು ಹೇಳಿದನು ೧೮೬

೩೬) ಸ್ನೇಹಿತನ ಶಿರೋವೇದನೆಯನ್ನು ಪರಿಹರಿಸಿದುದು ೧೮೯

೩೭) ವಾಸುದೇವನು ಗುರುದಕ್ಷಿಣೆ ಕೊಟ್ಟು ಮನೆಗೆ ಮರಳಿದನು ೧೯೧

ಚತುರ್ಥಸರ್ಗದ ಕಥಾಸಾರ ೧೯೩

೩೯) ವಾಸುದೇವನು ಸನ್ಯಾಸ ಸ್ವೀಕರಿಸಲು ನಿಶ್ಚಯಿಸಿದನು, ಗುರು ಅನ್ವೇಷಣೆ ೨೦೦

೪೦) ಅಚ್ಯುತಪ್ರೇಕ್ಷರು ಯಾರು ? ಅವರ ಹಿಂದಿನ ಕಥೆಯೇನು ? ೨೦೫

೪೧) ವಾಸುದೇವನು ಅಚ್ಯುತಪ್ರೇಕ್ಷರ ಬಳಿ ಶಿಷ್ಯನಾಗಿ ಸೇರಿದನು ೨೧೩

೪೨) ತಂದೆತಾಯಿಗಳ ತೊಳಲಾಟ ೨೧೪

೪೩) ಮಧ್ಯಗೇಹಭಟ್ಟರ ಕೋಪ–ವಾಸುದೇವನ ಚಾತುರ್ಯ ೨೧೮

Rarest Archiver

೪೪) ವಾಸುದೇವನಿಗೊಬ್ಬ ಅನುಜನು ಹುಟ್ಟಿದ್ದನು, ಸನ್ಯಾಸಕ್ಕೆ ತಂದೆತಾಯಿಗಳ ಒಪ್ಪಿಗೆ ೨೨೫

೪೫) ವಾಸುದೇವನ ಸನ್ಯಾಸಸ್ವೀಕಾರ, ಶ್ರೀಪೂರ್ಣಬೋಧತೀರ್ಥರು ಎಂದು ನಾಮಕರಣ ೨೨೯

೪೬) ಸನ್ಯಾಸಸಾಂಪ್ರದಾಯದ ಆಚಾರ ೨೩೪

೪೭) ಅನಂತಾಸನಸ್ವಾಮಿಯು ಪೂರ್ಣಬೋಧರನ್ನು ಅಚ್ಯುತಪ್ರೇಕ್ಷರಿಗೆ ಒಪ್ಪಿಸಿದನು ೨೩೭

೪೮) ಉಡುಪಿಯ ಅನಂತಸರೋವರಕ್ಕೆ ಭಾಗೀರಥಿಯು ಬಂದಳು– ಅನಂತಸರಸ್ಸು ಮಧ್ವಸರೋವರವಾಯಿತು ೨೩೯

೪೯) ಪಂಡಿತಪರಾಜಯ ; ಶ್ರೀಪೂರ್ಣಪ್ರಜ್ಞರು ಇಷ್ಟಸಿದ್ಧಿಗ್ರಂಥದಲ್ಲಿ ದೋಷಗಳನ್ನು ಹೇಳಿದರು ೨೪೨

೫೦) ತಾವೇ ಅದ್ವೈತ ಪಾಠ ಹೇಳಿದರು–ಸೂತ್ರಾದಿಗಳಿಗೆ ಜೀವೇಶ್ವರ ಭೇದಪರವಾಗಿ ಅರ್ಥ ಹೇಳಿದರು ೨೪೭

೫೧) ಅನಂತಬೋಧರು ಭಾಗವತಪಾಠದ ನಿರ್ಣಯಮಾಡಿದರು– ಭಾಗವತವನ್ನು ಬಾಯಿಪಾಠವಾಗಿ ಹೇಳಿದರು–ಕೀರ್ತಿವಿಸ್ತಾರ ೨೪೯


Rarest Archiver

ಶ್ರೀಃ

# ಶ್ರೀಸುಮಧ್ವ ವಿಜಯ

## ಪ್ರಥಮಸರ್ಗದ ಕಥಾಸಾರ

ಕವಿವರ್ಯರಾದ ಶ್ರೀನಾರಾಯಣಪಂಡಿತಾಚಾರ್ಯರು ಶ್ರೀಮುಖ್ಯಪ್ರಾಣ ದೇವರ ಅವತಾರರೂಪರಾದ ಶ್ರೀಮಧ್ವಾಚಾರ್ಯರ ಚರಿತ್ರೆಯನ್ನು ಹೇಳ ಲೋಸುಗ ಸುಮಧ್ವವಿಜಯವೆಂಬ ಗ್ರಂಥವನ್ನು ರಚಿಸಲು ಬಯಸಿ ಆ ಕಾವ್ಯದ ಆರಂಭದಲ್ಲಿ ಶ್ರೀದೇವಿ, ಮುಖ್ಯಪ್ರಾಣ, ನಾರಾಯಣರನ್ನು ನಮಸ್ಕರಿಸಿ ದರು. ಅನಂತರ ಶ್ರೀವೇದವ್ಯಾಸ ಮತ್ತು ಕೃಷ್ಣರನ್ನು ವಂದಿಸಿ ಆಚಾರ್ಯರ ಕೀರ್ತಿಯನ್ನು ವರ್ಣಿಸಿದರು. ಬಳಿಕ ತಮ್ಮ ಪೂಜ್ಯ ತಂದೆಯವರೂ, ಕವಿಗಳೂ ಆದ ಶ್ರೀವಿಕ್ರಮ ಪಂಡಿತಾಚಾರ್ಯರನ್ನು ನಮಿಸಿ ವಿಶ್ವಗುರುಗಳಾದ ಶ್ರೀ ವಾಯುದೇವರ ಚರಿತ್ರೆಯನ್ನು ವರ್ಣಿಸುವುದಾಗಿ ಸಂಕಲ್ಪಮಾಡಿದರು. ವೇದಪ್ರತಿಪಾದ್ಯವಾದ ವಾಯುದೇವರ ಚರಿತ್ರೆಯನ್ನು ವರ್ಣಿಸುವಾಗ ಸಂಭ ವಿಸಬಹುದಾದ ದೋಷಗಳನ್ನು ಕ್ಷಮಿಸಬೇಕೆಂದು ಪ್ರಾಜ್ಞರನ್ನು ಪ್ರಾರ್ಥಿಸಿ, ಮುಖ್ಯಪ್ರಾಣದೇವರ ಹನುಮ, ಭೀಮ, ಮಧ್ವ ಎಂಬ ಮೂರು ಅವತಾರ ಗಳ ಚರಿತ್ರೆಯನ್ನು ಹೇಳಲು ಪ್ರಾರಂಭಿಸಿ ಮೊದಲು ಶ್ರೀಹನುಮಂತದೇವರ ದಿವ್ಯ ಚರಿತ್ರೆಯನ್ನು ಈ ರೀತಿ ಹೇಳಿದ್ದಾರೆ.

ಹಿಂದೆ ತ್ರೇತಾಯುಗದಲ್ಲಿ ದೈತ್ಯರಿಂದ ಪೀಡಿತರಾದ ದೇವತೆಗಳನ್ನು ಕಾಪಾಡಲು ಶ್ರೀಮಹಾವಿಷ್ಣುವು ಅಯೋಧ್ಯೆಯ ರಾಜನಾದ ದಶರಥನ ಮಗ ರಾಮನಾಗಿ ಅವತರಿಸಿದನು. ಆ ವಿಷ್ಣುವಿನ ಅಪ್ಪಣೆಯಂತೆ ಶ್ರೀವಾಯು ದೇವರು ಕೇಸರಿಯೆಂಬ ಕಪಿಯ ಧರ್ಮಪತ್ನಿ ಅಂಜನಾದೇವಿಯಲ್ಲಿ ಅವತರಿಸಿ

Rarest Archiver

ದರು. ಪ್ರಪಂಚದಲ್ಲಿ ಪ್ರಸಿದ್ಧವಾದ ಗುಣಗಳುಳ್ಳ ಇವರನ್ನು ಹನುಮಂತನೆಂದು ಕರೆದರು. ಇವರು ದೇವತೆಗಳೂ ಕೊಂಡಾಡುವ ಅದ್ಭುತಕಾರ್ಯಗಳನ್ನು ಮಾಡುತ್ತ ಸುಗ್ರೀವನೆಂಬ ಕಪಿರಾಜನ ಮಿತ್ರರಾದರು. ವನವಾಸ ನಿಮಿತ್ತ ವಾಗಿ ವನಕ್ಕೆ ಬಂದು ಹೆಂಡತಿಯನ್ನು ಕಳೆದುಕೊಂಡ ಶ್ರೀರಾಮನನ್ನು ಕಂಡರು. ಸುಗ್ರೀವನಿಗೆ ಆ ರಾಮನಿಂದ ಸಹಾಯ ಮಾಡಿಸಿ ವಾಲಿಯನ್ನು ಕೊಲ್ಲಿಸಿ ಸುಗ್ರೀವನನ್ನು ಕಿಷ್ಕಿಂಧೆಗೆ ಅರಸನನ್ನಾಗಿ ಮಾಡಿಸಿದರು. ಶ್ರೀರಾಮನ ಅಭಿಪ್ರಾಯದಂತೆ ಲಂಕೆಯಲ್ಲಿರುವ ಜಾನಕಿಗೆ ಅವನ ಸಮಾಚಾರವನ್ನು ತಿಳಿಸಿ ಲಂಕೆಯನ್ನು ಸುಟ್ಟು ಮರಳಿ ರಾಮನಿಗೆ ಸೀತೆಯ ವೃತ್ತಾಂತವನ್ನರುಹಿದರು. ಇವರು ವೇಗ ಪರಾಕ್ರಮಗಳಲ್ಲಿ ಗರುಡನನ್ನೂ ಮೀರಿಸಿದರು. ರಾಮನಿಂದ ಹೆದರಿದ ಸಮುದ್ರದ ನಡುವೆ ಸೇತುವನ್ನು ಕಟ್ಟಿ ಅದರ ಮೂಲಕ ಲಂಕೆಗೆ ಹೋಗಿ ರಾವಣನನ್ನು ಮುಷ್ಟಿಯಿಂದ ಹೊಡೆದರು. ಹೀಗೆ ಯುದ್ಧದಲ್ಲಿ ಮುಖ್ಯಸ್ಥರಾಗಿ ಕಾದಾಡಿದ್ದರು. ಲಕ್ಷ್ಮಣನು ಸಮರದಲ್ಲಿ ಮೂರ್ಛೆಗೊಳ್ಳಲು ಒಂದೇ ಕೈಯಿಂದ ನಿರಾಯಾಸವಾಗಿ ಗಂಧಮಾದನ ಪರ್ವತವನ್ನು ತಂದು ಅವನನ್ನು ಎಚ್ಚರಗೊಳಿಸಿದರು. ಅನಂತರ ಯುದ್ಧದಲ್ಲಿ ರಾವಣನನ್ನು ಕೊಂದು ಅಗ್ನಿಪ್ರವೇಶದಿಂದ ಶುದ್ಧಳಾದ ಸೀತೆಯೊಂದಿಗೆ ಅಯೋಧ್ಯೆಗೆ ತೆರಳಿದ ರಾಮನನ್ನು ಹಿಂಬಾಲಿಸಿದರು. ಅಲ್ಲಿ ರಾಮನ ಸೇವೆಯಲ್ಲಿ ಆಸಕ್ತರಾದರು. ಅಯೋಧ್ಯೆಯಲ್ಲಿ ಶ್ರೀರಾಮನು ತನ್ನ ಪಟ್ಟಾಭಿಷೇಕವು ಮುಗಿದ ತರುವಾಯ ಸೀತೆಗೆ 'ನಿನ್ನ ಅತಿ ಪ್ರೀತಿಪಾತ್ರನಾದ ಭಕ್ತನಿಗೆ ಈ ಮಾಲೆಯನ್ನು ಕೊಡು' ಎಂದು ರತ್ನಮಾಲೆಯನ್ನಿತ್ತನು. ಸೀತೆಯು ಆ ಮಾಲೆಯನ್ನು ಈ ಹನುಮಂತ ದೇವರಿಗೆ ಕೊಟ್ಟು, ಅನುಗ್ರಹ ಮಾಡಿದಳು. ಶ್ರೀರಾಮನೂ ಇವರ ಸೇವೆ ಯಿಂದ ತೃಪ್ತನಾಗಿ ಮುಂದಿನ ಬ್ರಹ್ಮಪದವಿಯನ್ನು ಕೊಟ್ಟನು. ರಾಮನಿಗೆ ಅತಿಪ್ರಿಯರಾದ ಇವರಿಗೆ ರಾಮರಾಜ್ಯದಲ್ಲಿ ದುರ್ಲಭವಾದುದು ಯಾವುದೂ ಇಲ್ಲದಿದ್ದರೂ ಆ ಸುಖಭೋಗದಲ್ಲಿ ಆಸಕ್ತರಾಗದೆ ಇವರು ಆ ರಾಮನ ಪಾದ ಸೇವೆಯಲ್ಲಿಯೇ ನಿರತರಾದರು. ರಾಮನು ತಾನು ಪರಂಧಾಮಕ್ಕೆ ತೆರಳುವಾಗ ಈ ಹನುಮಂತದೇವರಿಗೆ ಸೇವಿಸುವುದಕ್ಕಾಗಿ ತನ್ನ ಒಂದು ರೂಪವನ್ನು ಕೊಟ್ಟನು. ಇವರು ಈಗಲೂ ಶ್ರೀರಾಮನ ಕಥೆಯಲ್ಲಿಯೇ ಆಸಕ್ತರಾಗಿ ಕಿಂಪುರುಷ ಖಂಡದಲ್ಲಿ ಶ್ರೀರಾಮನ ಆ ರೂಪವನ್ನೇ ಸೇವಿಸುತ್ತಿದ್ದಾರೆ.

Rarest Archive

ಈ ಮುಖ್ಯಪ್ರಾಣದೇವರೇ ದ್ವಾಪರಯುಗದಲ್ಲಿ ಪಾಂಡುಭೂಪತಿಯ ಪತ್ನಿಯಾದ ಕುಂತಿಯಲ್ಲಿ ಭೀಮನಾಗಿ ಅವತರಿಸಿದರು ಒಂದುದಿನ ಇವರು ತಾಯಿ ಕುಂತಿಯ ಕೈಯಿಂದ ಜಾರಿ ಶತಶೃಂಗ ಪರ್ವತದಲ್ಲಿ ಬೀಳಲು ಅದು ಕೂಡಲೇ ಹೋಳಾಯಿತು. ಹಸ್ತಿನಾನಗರಿಯಲ್ಲಿ ವಾಸಿಸುತ್ತಿರುವಾಗ ಇವರು ದುರ್ಯೋಧನಾದಿಗಳನ್ನು ಸೋಲಿಸಿದರು. ಇವರ ಶೌರ್ಯದಿಂದ ಹೆದರಿದ ದುರ್ಯೋಧನನು ಕೊಲ್ಲಲಿಚ್ಛಿಸಿ ವಿಷವನ್ನು ಅಡಿಗೆಯವನಿಂದ ಇವರಿಗೆ ಕುಡಿಸಿದನು. ಅದನ್ನು ಇವರು ಜೀರ್ಣಿಸಿಕೊಂಡರು. ಹಾವುಗಳಿಂದ ಕಚ್ಚಿಸಿದನು. ಇವರು ಆ ಹಾವುಗಳನ್ನೇ ಅಪ್ಪಳಿಸಿ ಕೊಂದರು. ನಿದ್ರೆ ಮಾಡುತ್ತಿರುವ ಇವರನ್ನು ಹಗ್ಗಗಳಿಂದ ಕಟ್ಟಿ ಗಂಗೆಯಲ್ಲಿರುವ ಪ್ರಮಾಣಕೋಟಿಯೆಂಬ ಮಡುವಿನಲ್ಲಿ ದುರ್ಯೋಧನನು ಎಸೆಯಿಸಿದನು. ಆದರೆ ಇವರು ಅನಾಯಾಸವಾಗಿ ಆ ಹಗ್ಗಗಳನ್ನೆಲ್ಲ ಕಡಿದುಕೊಂಡು ಮೇಲಕ್ಕೆ ಕ್ಷೇಮದಿಂದ ಬಂದರು. ಅನಂತರ ಕೌರವನು ಅರಗಿನ ಮನೆಯಲ್ಲಿ ಪಾಂಡವರನ್ನೆಲ್ಲ ಸುಡಲಿಚ್ಛಿಸಿದನು. ಇವರು ಅರಗಿನ ಮನೆಗೆ ತಾವೇ ಬೆಂಕಿ ಹೊತ್ತಿಸಿ ಸಹೋದರರೊಡನೆ ಹೊರಗೆ ಬಂದರು. ಅಲ್ಲಿ ಹಿಡಿಂಬೆಯನ್ನು ವೇದವ್ಯಾಸರ ಮಾತಿನಂತೆ ಮದುವೆಯಾದರು. ತಾವು ಮಾಡಿದ ಕಾರ್ಯಗಳನ್ನೆಲ್ಲ ಆ ವ್ಯಾಸರಿಗೆ ಸಮರ್ಪಿಸಿದರು. ಮುಂದೆ ದ್ರುಪದ ಕುಮಾರಿಯಾದ ದ್ರೌಪದಿಯನ್ನು ವಿವಾಹವಾದರು. ಅಲ್ಲಿ ಯುದ್ಧ ಮಾಡಲು ಬಂದ ರಾಜರನ್ನೆಲ್ಲ ಗೆದ್ದು ಶ್ರೀಕೃಷ್ಣನನ್ನು ಸಂತೋಷಗೊಳಿಸಿದರು. ಯುಧಿಷ್ಠಿರನು ಜೂಜಿನಲ್ಲಿ ದ್ರೌಪದಿಯನ್ನು ಪಣವಾಗಿಟ್ಟು ಸೋತಾಗ ಅವಳ ಸೀರೆಯನ್ನು ದುಶ್ಶಾಸನನು ಸೆಳೆಯಲು ಅವನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಗೈದು ಯುದ್ಧದಲ್ಲಿ ಶತ್ರುಗಳನ್ನು ಕೊಂದು ದ್ರೌಪದಿಯ ಜಡೆಯನ್ನು ಕಟ್ಟಿದರು. ವನವಾಸ ಕಾಲದಲ್ಲಿ ಕಿರ್ಮೀರ ಮೊದಲಾದ ದುಷ್ಟರನ್ನು ಕೊಂದರು. ದ್ರೌಪದಿಗಾಗಿ ಸೌಗಂಧಿಕಾಪುಷ್ಪವನ್ನು ತರಲು ಹೋಗಿ ಅಲ್ಲಿ ಪ್ರತಿಭಟಿಸಿದ ಮಣಿಮಂತ ಮೊದಲಾದ ಕ್ರೋಧವಶರೆಂಬ ದೈತ್ಯರನ್ನು ಸದೆಬಡಿದರು. ಅಜ್ಞಾತವಾಸಕಾಲದಲ್ಲಿ ವಿರಾಟನಗರದಲ್ಲಿ ದ್ರೌಪದಿಗೆ ತೊಂದರೆಯನ್ನುಂಟುಮಾಡಿದ ಕೀಚಕನನ್ನು ಕೊಂದರು. ಭಾರತಯುದ್ಧದಲ್ಲಿ ಕೃಷ್ಣನ ಪ್ರೇರಣೆಯಂತೆ ಅರ್ಜುನನ ಸಂಗಡ ಭೀಷ್ಮ ದ್ರೋಣಾದಿಗಳೊಡನೆ ಕಾದಾಡಿ ಶತ್ರುಗಳನ್ನು ಕೊಂದರು. ತರುವಾಯ

Rarest Archiver

ಸಾಮ್ರಾಜ್ಯ ಪಾಲನೆಯಲ್ಲಿ ನಿರತರಾಗಿ ಪ್ರಜೆಗಳನ್ನು ಆನಂದಗೊಳಿಸುತ್ತಿದ್ದರು. ಕೊನೆಯಲ್ಲಿ ಅಭಿಮನ್ಯುವಿನ ಮಗ ಪರೀಕ್ಷಿದ್ರಾಜನಿಗೆ ಪಟ್ಟಾಭಿಷೇಕ ಮಾಡಿ ಶ್ರೀಕೃಷ್ಣನನ್ನು ಧ್ಯಾನಿಸುತ್ತ ಸಹೋದರರೊಡನೆ ತಮ್ಮ ಲೋಕಕ್ಕೆ ತೆರಳಿದರು.

ಹಿಂದೆ ಭೀಮಸೇನದೇವರು ಕೊಂದ ಮಣಿಮಂತ ಮೊದಲಾದ ದೈತ್ಯರು ದುಃಖದಿಂದ ವಾಯುದೇವರಿಗೆ ವಿರೋಧವನ್ನಾಚರಿಸಲು ಕಲಿಯುಗದಲ್ಲಿ ಜನಿಸಿದರು. ಅವರು ವಿಷ್ಣುವಿಗೆ ನಿರ್ಗುಣತ್ವವನ್ನು ಬೋಧಿಸುವ ಗ್ರಂಥವನ್ನು ರಚಿಸಿದರು. ಅವರಲ್ಲಿ ಮಣಿಮಂತನೆಂಬ ದೈತ್ಯನು ಕಾಲಟಿ ಎಂಬ ಗ್ರಾಮದಲ್ಲಿ ಜನಿಸಿ ಶಂಕರನನ್ನು ಕುರಿತು ತಪಸ್ಸನ್ನು ಮಾಡಿ ವಾಚಾಲನಾದನು. ಸಾಂಗ ವೇದಾಧ್ಯಯನವನ್ನು ಮಾಡಿದನು. ಜನರೆಲ್ಲ ನಮಸ್ಕಾರ ಮಾಡುವಂತೆ ಮಾಡಿಕೊಳ್ಳಲು ಸಂನ್ಯಾಸವನ್ನು ಸ್ವೀಕರಿಸಿದನು. ವೈದಿಕರು ಹಿಂದೆ ಖಂಡಿಸಿದ್ದ ಬೌದ್ಧ ಸಿದ್ಧಾಂತವನ್ನು ಬೇರೆ ಕ್ರಮದಿಂದ ನಿರೂಪಿಸಿ ಗ್ರಂಥಗಳನ್ನು ರಚಿಸಿದನು. ಬೌದ್ಧರು ಬ್ರಹ್ಮನಿಲ್ಲವೆನ್ನುವರು. ಇವನು ಆ ಬ್ರಹ್ಮನು ಸದಸದ್ವಿಲಕ್ಷಣ (ಇರುವುದೂ ಅಲ್ಲ. ಇಲ್ಲದಿರುವುದೂ ಅಲ್ಲ. ಇದಕ್ಕೆ ವಿಲಕ್ಷಣ)ನೆಂದನು. ಬ್ರಹ್ಮನನ್ನು ಮಾಯೆಯು ಆವರಿಸುವುದು. ಬ್ರಹ್ಮನು ನಿರ್ಗುಣ ಎಂದು ಪ್ರತಿಪಾದಿಸಿದನು. ಇದರಿಂದ ಇವನನ್ನು ಜನರು ಪ್ರಚ್ಛನ್ನ ಬೌದ್ಧನೆಂದರು. ಇವನು ವ್ಯಾಸರು ರಚಿಸಿದ ಬ್ರಹ್ಮಸೂತ್ರಕ್ಕೆ ಅಪಾರ್ಥವನ್ನು ಹೇಳಿದನು. ಆದರೂ ದಯಾಳುವಾದ ವ್ಯಾಸರು ಇವನಿಗೆ ತೊಂದರೆ ಮಾಡಲಿಲ್ಲ. ಇವನು ತನ್ನ ಮಾತಿನ ಚಾತುರ್ಯದಿಂದ ಮೂಢರಿಗೆ ಅಭೇದಜ್ಞಾನವನ್ನುಂಟು ಮಾಡಿದ್ದರಿಂದಲೂ, ಬುದ್ಧಿಸಾಂಕರ್ಯವನ್ನು ಉಂಟು ಮಾಡಿದ್ದರಿಂದಲೂ ಸಂಕರ ಎಂದು ಪ್ರಸಿದ್ಧಿಗೊಂಡನು. ಪ್ರಪಂಚವು ಸದಸದ್ವಿಲಕ್ಷಣ, ಬ್ರಹ್ಮನಿಗೆ ಗುಣವಿಲ್ಲ. ಜೀವಾತ್ಮ ಪರಮಾತ್ಮರಿಗೆ ಭೇದವಿಲ್ಲ. ಇವೇ ಮೊದಲಾದ ಇವನ ಚತುರ ವಚನದಿಂದ ಸಜ್ಜನರೂ ದೇವರ ವಿಷಯದಲ್ಲಿ ಸಂಶಯಗ್ರಸ್ತರಾದರು.

Rarest Archive

ಶ್ರೀಃ

# ಶ್ರೀಸುಮಧ್ವವಿಜಯಃ

## ಪ್ರಥಮಸರ್ಗಃ

ಶ್ರೀಹನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ
ಶ್ರೀಗುರುಭ್ಯೋ ನಮಃ

ಶ್ರೀನಾರಾಯಣಪಂಡಿತಾಚಾರ್ಯರು ಶ್ರೀ ಮಧ್ವಾಚಾರ್ಯರ ಚರಿತ್ರೆಯನ್ನು ಕಾವ್ಯರೂಪದಲ್ಲಿ ರಚಿಸಲು ಬಯಸಿ ಗ್ರಂಥಾರಂಭದಲ್ಲಿ ಇಷ್ಟದೇವತಾ ನಮಸ್ಕಾರರೂಪವಾದ ಮಂಗಳವನ್ನು ಮಾಡುತ್ತಾರೆ :—

*ಕಾಂತಾಯ ಕಲ್ಯಾಣಗುಣೈಕಧಾಮ್ನೇ
ನವದ್ಯುನಾಥಪ್ರತಿಮಪ್ರಭಾಯ ।
ನಾರಾಯಣಾಯಾಖಿಲಕಾರಣಾಯ
ಶ್ರೀಪ್ರಾಣನಾಥಾಯ ನಮಸ್ಕರೋಮಿ ॥೧॥

ಅನ್ವಯ :—(ಅಹಂ) ಕಾಂತಾಯ ಕಲ್ಯಾಣಗುಣೈಕಧಾಮ್ನೇ ನವದ್ಯುನಾಥಪ್ರತಿಮಪ್ರಭಾಯ ಅಖಿಲಕಾರಣಾಯ ಶ್ರೀಪ್ರಾಣನಾಥಾಯ ನಾರಾಯಣಾಯ ನಮಃ ಕರೋಮಿ.

ಅರ್ಥ :—(ಅಹಂ=ನಾನು), ಕಾಂತಾಯ=ಮನೋಹರನಾದ, ಕಲ್ಯಾಣಗುಣ=ಮಂಗಳಕರವಾದ ಗುಣಗಳಿಗೆ, ಏಕಧಾಮ್ನೇ=ಮುಖ್ಯಾಶ್ರಯನಾದ, ಅಥವಾ ಮಂಗಳಕರವಾದ ಗುಣಗಳೇ ಮುಖ್ಯ ದೇಹವಾಗುಳ್ಳ,

---

*ಸ್ಯಾದಿಂದ್ರವಜ್ರಾ ಯದಿ ತೌ ಜಗೌ ಗಃ । ಉಪೇಂದ್ರವಜ್ರಾ ಜತಜಾಸ್ತತೋ ಗೌ ।
ಅನಂತರೋದೀರಿತಲಕ್ಷ್ಮಭಾಜೌ ಪಾದೌ ಯದೀಯಾ ಉಪಜಾತಯಸ್ತಾಃ ।
ಎಂಬಂತೆ ಈ ಸರ್ಗದಲ್ಲಿ ಬಹುಮಟ್ಟಿಗೆ ಉಪಜಾತಿವೃತ್ತ.

Rarest Archives

ನವ = ಹೊಸ (ಉದಯಿಸುತ್ತಿರುವ) ದ್ಯುನಾಥ = ಆಕಾಶಕ್ಕೆ ಒಡೆಯನಾದ ಸೂರ್ಯನಿಗೆ, ಪ್ರತಿಮ = ಸಮಾನವಾದ, ಪ್ರಭಾಯ = ಕಾಂತಿಯುಳ್ಳ, ಅಖಿಲ = ಪ್ರಪಂಚಕ್ಕೆಲ್ಲ, ಕಾರಣಾಯ = ನಿಮಿತ್ತಕಾರಣನಾದ, ಶ್ರೀಪ್ರಾಣನಾಥಾಯ = ಲಕ್ಷ್ಮಿ ಮತ್ತು ಮುಖ್ಯಪ್ರಾಣದೇವರಿಗೆ ಒಡೆಯನಾದ, ಅಥವಾ ಲಕ್ಷ್ಮೀದೇವಿಯ ಪತಿಯಾದ, ಅಥವಾ ಲಕ್ಷ್ಮೀ, ಭಾರತಿ, ಮುಖ್ಯಪ್ರಾಣರಿಗೆ ಒಡೆಯನಾದ, ನಾರಾಯಣಾಯ = (ಮುಕ್ತರಿಗೆ ಆಶ್ರಯನಾದ) ಶ್ರೀಮಹಾ ವಿಷ್ಣುವಿಗೆ, ನಮಃ = ನಮಸ್ಕಾರವನ್ನು, ಕರೋಮಿ = ಮಾಡುತ್ತೇನೆ.

ತಾತ್ಪರ್ಯ :—ಶ್ರೀಮನ್ನಾರಾಯಣನು ಸುಂದರನು. ಮಂಗಳಕರವಾದ ಗುಣಗಳಿಗೆ ಆಶ್ರಯನು. ಹೊಸದಾಗಿ ಉದಯಿಸಿರುವ ಸೂರ್ಯನಿಗೆ ಸಮವಾದ ಕಾಂತಿಯುಳ್ಳವನು. ಸಮಸ್ತ ಜಗತ್ತಿಗೆ ಕಾರಣನು. ಲಕ್ಷ್ಮಿಯ ಪತಿಯು. ವಾಯುದೇವರಿಗೆ ಒಡೆಯನು. ಅಂತಹ ಶ್ರೀಮಹಾವಿಷ್ಣುವಿಗೆ ನಾನು ನಮಸ್ಕಾರವನ್ನು ಮಾಡುತ್ತೇನೆ.

ವ್ಯಾಕರಣ ವಿಶೇಷ :—ಕಲ್ಯಾಣಾಶ್ಚ ತೇ ಗುಣಾಶ್ಚ = ಕಲ್ಯಾಣಗುಣಾಃ (ತತ್ಪುರುಷ ಪ್ರಭೇದ ಕರ್ಮಧಾರಯ ಸಮಾಸ) ಏಕಂ ಚ ತತ್ ಧಾಮ ಚ = ಏಕಧಾಮ (ಕರ್ಮಧಾರಯ) ಕಲ್ಯಾಣಗುಣಾನಾಂ ಏಕಧಾಮ = ಕಲ್ಯಾಣಗುಣೈಕ ಧಾಮ, ತಸ್ಮೈ. ದಿವಃ ನಾಥಃ = ದ್ಯುನಾಥಃ (ತತ್ಪುರುಷ) ದಿವಉತ್ ಎಂಬ ಸೂತ್ರದಿಂದ ದಿವ್‌ಶಬ್ದದ ವಕಾರಕ್ಕೆ 'ಉ' ಬಂದು ದ್ಯು ಎಂದಾಗಿದೆ. ದ್ಯುನಾಥೇನ ಪ್ರತಿಮಾ = ದ್ಯುನಾಥಪ್ರತಿಮಾ, ದ್ಯುನಾಥ-ಪ್ರತಿಮಾ ಪ್ರಭಾ ಯಸ್ಯ ಸಃ = ದ್ಯುನಾಥ ಪ್ರತಿಮಪ್ರಭಃ, ತಸ್ಮೈ. (ಬಹುವ್ರೀಹಿಸಮಾಸ). ನಾರಾಃ ಅಯನಂ ಯಸ್ಯ ಸಃ = ನಾರಾಯಣಃ, ತಸ್ಮೈ. (ಬ.) ಅಖಿಲಾನಾಂ ಕಾರಣಂ = ಅಖಿಲಕಾರಣಂ, ತಸ್ಮೈ. ಶ್ರೀಶ್ಚ ಶ್ರೀಶ್ಚ = ಶ್ರಿಯೌ, ಶ್ರಿಯೌ ಚ ಪ್ರಾಣಶ್ಚ ಶ್ರೀಪ್ರಾಣಾಃ, ಶ್ರೀಪ್ರಾಣಾನಾಂ ನಾಥಃ = ಶ್ರೀಪ್ರಾಣನಾಥಃ, ತಸ್ಮೈ. ಅಥವಾ ಶ್ರಿಯಃ ಪ್ರಾಣನಾಥಃ = ಶ್ರೀಪ್ರಾಣನಾಥಃ ಅಥವಾ ಶ್ರೀಶ್ಚ ಪ್ರಾಣಶ್ಚ ಶ್ರೀಪ್ರಾಣೌ ಶ್ರೀಪ್ರಾಣಯೋಃ ನಾಥಃ = ಶ್ರೀಪ್ರಾಣನಾಥಃ, ತಸ್ಮೈ. ಕರೋಮಿ—ಡು ಕೃಞ್ ಕರಣೇ, ಎಂಟನೆ ಗಣ, ಸಕರ್ಮಕ, ಲಟ್, ಪರಸ್ಮೈಪದ, ಉತ್ತಮಪುರುಷೈಕವಚನ. ಕರೋತಿ,

Rarest Archiver

ಕುರುತಃ, ಕುರ್ವಂತಿ. ಕರೋಷಿ, ಕುರುಥಃ, ಕುರುಥ, ಕರೋಮಿ, ಕುರ್ವಃ, ಕುರ್ಮಃ, ನಮಃ=ಅವ್ಯಯ.

ಈ ಪದ್ಯದಿಂದ ಶ್ರೀವೇದವ್ಯಾಸ ಮತ್ತು ಕೃಷ್ಣರನ್ನು ವಂದಿಸುತ್ತಾರೆ:—

ಅನಾಕುಲಂ ಗೋಕುಲಮುಲ್ಲಲಾಸ
ಯತ್ಪಾಲಿತಂ ನಿತ್ಯಮನಾವಿಲಾತ್ಮ ।
ತಸ್ಮೈ ನಮೋ ನೀರದನೀಲಭಾಸೇ
ಕೃಷ್ಣಾಯ ಕೃಷ್ಣಾರಮಣಪ್ರಿಯಾಯ ॥ ೨ ॥

ಅ:—ಯತ್ಪಾಲಿತಂ ನಿತ್ಯಂ ಗೋಕುಲಂ ಅನಾಕುಲಂ ಅನಾವಿಲಾತ್ಮ ಉಲ್ಲಲಾಸ, ನೀರದನೀಲಭಾಸೇ ಕೃಷ್ಣಾರಮಣಪ್ರಿಯಾಯ ತಸ್ಮೈ ಕೃಷ್ಣಾಯ ನಮಃ.

ಅ:—ಯತ್=ಯಾವ ವೇದವ್ಯಾಸರಿಂದ, ಮತ್ತು ಕೃಷ್ಣನಿಂದ, ಪಾಲಿತಂ=ಕಾಪಾಡಲ್ಪಟ್ಟ, ನಿತ್ಯಂ ಗೋಕುಲಂ=ಅನಾದಿಯಾದ ವೇದಗಳ ಸಮೂಹವು, ಮತ್ತು ಹಸುಗಳ ಸಮೂಹವು, ಅನಾಕುಲಂ=ವ್ಯತ್ಯಾಸವಿಲ್ಲದೆಯೂ, ವ್ಯಥೆಯಿಲ್ಲದೆಯೂ, ಅನಾವಿಲಾತ್ಮ=ಸ್ವಚ್ಛವಾದ ಸ್ವರೂಪವುಳ್ಳದ್ದೂ, ಶುದ್ಧವಾದ ಮನಸ್ಸುಳ್ಳದ್ದೂ ಆಗಿ (ನಿತ್ಯಂ=ಯಾವಾಗಲೂ) ಉಲ್ಲಲಾಸ=ಪ್ರಕಾಶಗೊಂಡಿತೊ, ನೀರದ=ಮೋಡದಂತೆ, ನೀಲ=ಕಪ್ಪಾದ ಭಾಸೇ=ಕಾಂತಿಯುಳ್ಳ, ಕೃಷ್ಣಾರಮಣ=ದ್ರೌಪದಿಯ ಗಂಡಂದಿರಾದ ಪಾಂಡವರಿಗೆ, ಪ್ರಿಯಾಯ=ಇಷ್ಟರಾದ, ತಸ್ಮೈ=ಆ, ಕೃಷ್ಣಾಯ=ವೇದವ್ಯಾಸರಿಗೆ, ಶ್ರೀಕೃಷ್ಣದೇವರಿಗೆ, ನಮಃ=ನಮಸ್ಕಾರವು.

ತಾ:— ಯಾರಿಂದಲೂ ಮಾಡಲ್ಪಡದಿರುವುದರಿಂದ ಅನಾದಿಯಾದ ವೇದವನ್ನು ವೇದವ್ಯಾಸರು, ಕಾಪಾಡಿದರು. ಅದ್ದರಿಂದ ಅದು ವ್ಯತ್ಯಾಸವಾಗದೆ ನಿರ್ದುಷ್ಟವಾಗಿರುವುದು. ಶ್ರೀಕೃಷ್ಣನು ನಂದಗೋಕುಲದಲ್ಲಿರುವ ಗೋವುಗಳನ್ನು ಪ್ರತಿದಿನವೂ ಕಾಪಾಡಿದನು. ಅದರಿಂದ ಆ ಗೋವುಗಳು ಕಷ್ಟವಿಲ್ಲದೆ ಶುದ್ಧ ಮನಸ್ಸಿನಿಂದಿದ್ದುವು. ಅಂತಹ ನೀಲಮೇಘದಂತೆ ನೀಲವರ್ಣರೂ, ದ್ರೌಪದಿಯ ಪತಿಗಳಾದ ಪಾಂಡವರಿಗೆ ಹಿತವನ್ನುಂಟು ಮಾಡುವವರೂ ಆದ ಶ್ರೀವೇದವ್ಯಾಸರಿಗೂ, ಶ್ರೀಕೃಷ್ಣನಿಗೂ ನಮಸ್ಕಾರವನ್ನು ಮಾಡುತ್ತೇನೆ.

Rarest Archiver

ವ್ಯಾ.ವಿ :—ಆಕುಲಂ ನ ಭವತೀತಿ=ಅನಾಕುಲಂ (ನಞ್ ಸಮಾಸ), ಗವಾಂ ಕುಲಂ=ಗೋಕುಲಂ. ಯೇನ ಪಾಲಿತಂ—ಯತ್ಪಾಲಿತಂ. ಆವಿಲಃ ನ ಭವತೀತಿ, ಅನಾವಿಲಃ ಆತ್ಮಾ ಯಸ್ಯ ತತ್=ಅನಾವಿಲಾತ್ಮ. ನೀರಂ ದದಾತೀತಿ=ನೀರದಃ, ನೀರದ ಇವ ನೀಲಾ, ನೀರದನೀಲಾ ಭಾಃ ಯಸ್ಯ ಸಃ=ನೀರದ ನೀಲಭಾಃ, ತಸ್ಮೈ. ಕೃಷ್ಣಾಯಾಃ ರಮಣಃ, ಕೃಷ್ಣಾ ರಮಣಸ್ಯಪ್ರಿಯಃ=ಕೃಷ್ಣಾರಮಣಪ್ರಿಯಃ, ತಸ್ಮೈ. ಉಲ್ಲಲಾಸ-ಲಸ ಶ್ಲೇಷಣಕ್ರೀಡನಯೋಃ, ಒಂದನೆ ಗಣ, ಅಕರ್ಮಕ, ಲಿಟ್, ಪರಸ್ಮೈಪದ, ಪ್ರಥಮ ಪುರುಷೈಕವಚನ, ಉತ್ ಉಪಸರ್ಗ, ಉತ್+ಲಲಾಸ, ಲೇಸತುಃ, ಲೇಸುಃ. ಲೇಸಿಥ, ಲೇಸಥುಃ, ಲೇಸ, ಲಲಾಸ ಲಲಸ, ಲೇಸಿವ, ಲೇಸಿಮ.

ಈಗ ಶ್ರೀಮದಾಚಾರ್ಯರ ಕೀರ್ತಿಯನ್ನು ವರ್ಣಿಸುವುದರಿಂದ ತಮಗೆ ನಿರ್ಮಲಜ್ಞಾನವು ಒದಗಲೆಂದು ಬೇಡಿಕೊಳ್ಳುತ್ತಾರೆ :—

ಅಪಿ ತ್ರಿಲೋಕ್ಯಾ ಬಹಿರುಲ್ಲಸಂತೀ
ತಮೋ ಹರಂತೀ ಮುಹುರಾಂತರಂ ಚ ।
ದಿಶ್ಯಾದ್ದೃಶಂ ನೋ ವಿಶದಾಂ ಜಯಂತೀ
ಮಧ್ವಸ್ಯ ಕೀರ್ತಿರ್ದಿನನಾಥದೀಪ್ತಿಮ್ ॥ ೩ ॥

ಅ :—ತ್ರಿಲೋಕ್ಯಾಃ ಬಹಿಃ ಅಪಿ ಉಲ್ಲಸಂತೀ, ಮುಹುಃ ಆಂತರಂ ತಮಃ ಚ ಹರಂತೀ, ದಿನನಾಥದೀಪ್ತಿಂ ಜಯಂತೀ ಮಧ್ವಸ್ಯ ಕೀರ್ತಿಃ ನಃ ವಿಶದಾಂ ದೃಶಂ ದಿಶ್ಯಾತ್.

ಅ:—ತ್ರಿಲೋಕ್ಯಾಃ=ಮೂರುಲೋಕಗಳ, ಬಹಿಃ ಅಪಿ=ಹೊರಗೂ, ಉಲ್ಲಸಂತೀ=ಪ್ರಕಾಶಿಸುವುದೂ, ಮುಹುಃ=ಮತ್ತೂ ಮತ್ತು, ಆಂತರಂ=ಒಳಗಿನ, ತಮಃಚ=ಅಜ್ಞಾನವನ್ನೂ (ಕತ್ತಲೆಯನ್ನು), ಹರಂತೀ=ನಿವಾರಿಸುವುದೂ, ದಿನನಾಥದೀಪ್ತಿಂ=ಸೂರ್ಯನ ಪ್ರಕಾಶವನ್ನು, ಜಯಂತೀ=ಜಯಿಸುವುದೂ ಆದ, ಮಧ್ವಸ್ಯ=ಶ್ರೀಮಧ್ವಾಚಾರ್ಯರ, ಕೀರ್ತಿಃ=ಯಶಸ್ಸು, ನಃ=ನಮಗೆ, ವಿಶದಾಂ=ಶುದ್ಧವಾದ, ದೃಶಂ=ಜ್ಞಾನವೆಂಬ ದೃಷ್ಟಿಯನ್ನು, ದಿಶ್ಯಾತ್=ಕೊಡಲಿ.

ತಾ :—ಶ್ರೀಮಧ್ವಾಚಾರ್ಯರ ಕೀರ್ತಿಯು ಸ್ವರ್ಗ, ಮರ್ತ್ಯ,

Rarest Archiver

ಪಾತಾಳವೆಂಬ ಮೂರು ಲೋಕಗಳ ಹೊರಗೂ ಪ್ರಕಾಶಿಸುವುದು. ಮನಸ್ಸಿನಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ನಿವಾರಿಸುವುದು. ಆದ್ದರಿಂದಲೇ ಮೂರು ಲೋಕಗಳ ಒಳಗೆ ಮಾತ್ರ ಪ್ರಕಾಶಿಸುವ, ಹೊರಗಿನ ಕತ್ತಲೆಯನ್ನು ಮಾತ್ರ ಪರಿಹರಿಸುವ ಸೂರ್ಯನ ಪ್ರಕಾಶಕ್ಕಿಂತ ಮಿಗಿಲಾದುದು. ಇಂತಹ ಕೀರ್ತಿಯು ನಮಗೆ ಶುದ್ಧವಾದ ಜ್ಞಾನವನ್ನು ನೀಡಲಿ.

ವ್ಯಾ. ವಿ :—ತ್ರಯಾಣಾಂ ಲೋಕಾನಾಂ ಸಮಾಹಾರಃ=ತ್ರಿಲೋಕೀ, ತಸ್ಯಾಃ (ಸಮಾಹಾರ ದ್ವಿಗುಸಮಾಸಃ) ಅಂತರೇ ಭವಂ=ಅಂತರಂ, ತತ್. ದಿನಸ್ಯ ನಾಥಃ=ದಿನನಾಥಃ, ದಿನನಾಥಸ್ಯ ದೀಪ್ತಿಃ=ದಿನನಾಥದೀಪ್ತಿಃ, ತಾಮ್. ದಿಶ್ಯಾತ್–ದಿಶ ಅತಿಸರ್ಜನೇ, ಆರನೆ ಗಣ, ಸಕ. ಆಶೀರ್ಲಿಙ್, ಪರ. ಪ್ರ. ಏ. ದಿಶ್ಯಾತ್, ದಿಶ್ಯಾಸ್ತಾಂ, ದಿಶ್ಯಾಸುಃ, ದಿಶ್ಯಾಃ, ದಿಶ್ಯಾಸ್ತಂ ದಿಶ್ಯಾಸ್ತ. ದಿಶ್ಯಾಸಂ, ದಿಶ್ಯಾಸ್ವ, ದಿಶ್ಯಾಸ್ಮ.

ಈಗ ಪಂಡಿತಾಚಾರ್ಯರು ತಮ್ಮ ತಂದೆ ತ್ರಿವಿಕ್ರಮ ಪಂಡಿತಾಚಾರ್ಯರನ್ನು ನಮಸ್ಕರಿಸುತ್ತಾರೆ :—

ತಮೋನುದಾನಂದಮವಾಪ ಲೋಕ-
ಸ್ತತ್ತ್ವಪ್ರದೀಪಾಕೃತಿಗೋಗಣೇನ
ಯದಾಸ್ಯಶೀತಾಂಶುಭುವಾ ಗುರೂಂಸ್ತಾನ್
ತ್ರಿವಿಕ್ರಮಾರ್ಯಾನ್ ಪ್ರಣಮಾಮಿ ವರ್ಯಾನ್ ॥೪॥

ಅ :—ಲೋಕಃ ತಮೋನುದಾ ಯದಾಸ್ಯಶೀತಾಂಶುಭುವಾ ತತ್ತ್ವ ಪ್ರದೀಪಾಕೃತಿಗೋಗಣೇನ ಆನಂದಂ ಅವಾಪ, ವರ್ಯಾನ್ ಗುರೂನ್ ತಾನ್ ತ್ರಿವಿಕ್ರಮಾರ್ಯಾನ್ ಪ್ರಣಮಾಮಿ.

ಅ :—ಲೋಕಃ=ಜನಗಳು, ತಮೋನುದಾ=ಅಜ್ಞಾನ ಮತ್ತು ಕತ್ತಲೆಯನ್ನು ಹೋಗಲಾಡಿಸುವ, ಯತ್=ಯಾವ ತ್ರಿವಿಕ್ರಮ ಪಂಡಿತಾಚಾರ್ಯರ, ಆಸ್ಯ=ಮುಖವೆಂಬ, ಶೀತಾಂಶು=ಚಂದ್ರನಿಂದ, ಭುವಾ=ಉಂಟಾದ, ತತ್ತ್ವ ಪ್ರದೀಪಾಕೃತಿ=ತತ್ತ್ವಪ್ರದೀಪವೆಂಬ ಗ್ರಂಥದ ಪದಾರ್ಥಗಳನ್ನು ತೋರಿಸುವ ವಿಷಯದಲ್ಲಿ ದೀಪದಂತೆ ಪ್ರಕಾಶಿಸುವ ಆಕಾರವುಳ್ಳ, ಗೋಗಣೇನ=ಮಾತುಗಳ ಸಮೂಹದಿಂದ, ಕಾಂತಿಗಳ ಸಮೂಹದಿಂದ,

Rarest Archiver

ಆನಂದಂ=ಸಂತೋಷವನ್ನು, ಅವಾಪ=ಹೊಂದಿದರೋ, ವರ್ಯಾನ್= ಶ್ರೇಷ್ಠರಾದ, ಗುರೂನ್=ತಂದೆಯಾದ, ತಾನ್=ಆ, ತ್ರಿವಿಕ್ರಮಾರ್ಯಾನ್= ತ್ರಿವಿಕ್ರಮಪಂಡಿತಾಚಾರ್ಯರನ್ನು, ಪ್ರಣಮಾಮಿ=ಅತಿಶಯವಾಗಿ ನಮಸ್ಕಾರ ಮಾಡುತ್ತೇನೆ.

ತಾ :—ಪ್ರಪಂಚದ ಜನರು ಕತ್ತಲೆಯನ್ನು ನಿವಾರಿಸಿ ದೀಪದಂತೆ ಪದಾರ್ಥಗಳನ್ನು ತೋರಿಸುವ ಚಂದ್ರನ ಕಾಂತಿಗಳ ಸಮೂಹದಿಂದ ಆನಂದ ವನ್ನು ಪಡೆಯುವರು. ಅದರಂತೆಯೇ ಭಕ್ತಜನರು ಅಜ್ಞಾನವನ್ನು ಪರಿಹರಿ ಸುವ ನಮ್ಮ ತಂದೆಯವರಾದ ತ್ರಿವಿಕ್ರಮಪಂಡಿತಾಚಾರ್ಯರು ರಚಿಸಿರುವ ಶ್ರೀಮದಾಚಾರ್ಯರ ಭಾಷ್ಯದ ವ್ಯಾಖ್ಯಾನವಾದ ತತ್ತ್ವಪ್ರದೀಪವೆಂಬ ಗ್ರಂಥ ದಿಂದ ಸಂತೋಷವನ್ನು ಹೊಂದಿರುವರು. ಅಂತಹ ಶ್ರೇಷ್ಠರಾದ ನಮ್ಮ ತಂದೆ ಯವರನ್ನು ವಂದಿಸುತ್ತೇನೆ.

ವ್ಯಾ.ವಿ :—ತಮಃ ನುದತೀತಿ=ತಮೋನುತ್, ತೇನ, ತತ್ತ್ವಂ ಪ್ರದೀಪಯತೀತಿ=ತತ್ತ್ವಪ್ರದೀಪಃ, ತತ್ತ್ವಪ್ರದೀಪಃ ಏವ ಆಕೃತಿಃ ಯಸ್ಯ ಸಃ=ತತ್ತ್ವಪ್ರದೀಪಾಕೃತಿಃ. ಗವಾಂ ಗಣಃ=ಗೋಗಣಃ, ತತ್ತ್ವ- ಪ್ರದೀಪಾಕೃತಿಶ್ಚಾಸೌ ಗೋಗಣಶ್ಚ=ತತ್ತ್ವಪ್ರದೀಪಾಕೃತಿಗೋಗಣಃ, ತೇನ. ಶೀತಾಃ ಅಂಶವಃ ಯಸ್ಯ ಸಃ=ಶೀತಾಂಶುಃ, ಯೇಷಾಂ ಆಸ್ಯಂ, ಯದಾಸ್ಯಂ ಏವ ಶೀತಾಂಶುಃ, ಯದಾಸ್ಯಶೀತಾಂಶುನಾ ಭವತೀತಿ=ಯದಾಸ್ಯಶೀತಾಂಶು- ಭೂಃ, ತೇನ, ತ್ರಿವಿಕ್ರಮಾಃ ಇತಿ ಆರ್ಯಾಃ-ತ್ರಿವಿಕ್ರಮಾರ್ಯಾಃ, ತಾನ್. ಪ್ರಣಮಾಮಿ-ಣಮು ಪ್ರಹತ್ವೇ ಶಬ್ದೇ ಚ, ಒಂದನೆ ಗಣ, ಸಕ, ಲಟ್, ಪರ. ಉತ್ತಮಪುರುಷೈಕ ವಚನ, ಪ್ರ ಉಪಸರ್ಗ. ನಮತಿ, ನಮತಃ, ನಮಂತಿ. ನಮಸಿ, ನಮಥಃ, ನಮಥ. ನಮಾಮಿ, ನಮಾವಃ, ನಮಾಮಃ. ಯದಾಸ್ಯ ಶೀತಾಂಶುಭುವಾ ಎನ್ನುವಲ್ಲಿ ಮುಖದಲ್ಲಿ ಚಂದ್ರನ ಅಭೇದವನ್ನು ಹೇಳಿರು ವುದರಿಂದ ರೂಪಕಾಲಂಕಾರ.

ಈಗ ತಾವು ಮಾಡತಕ್ಕ ಕಾರ್ಯವನ್ನು ತಿಳಿಸುತ್ತಾರೆ :

ಮುಕುಂದಭಕ್ತ್ಯೈ ಗುರುಭಕ್ತಿಜಾಯೈ
ಸತಾಂ ಪ್ರಸತ್ತ್ಯೈ ಚ ನಿರಂತರಾಯೈ ।
ಗರೀಯಸೀಂ ವಿಶ್ವಗುರೋರ್ವಿಶುದ್ಧಾಂ
ವಕ್ಷ್ಯಾಮಿ ವಾಯೋರವತಾರಲೀಲಾಮ್ ॥ ೫ ॥

Rarest Archiver

ಅ :—ಗುರುಭಕ್ತಿಜಾಯೈ ಮುಕುಂದಭಕ್ತ್ಯೈ ನಿರಂತರಾಯೈ ಸತಾಂ ಪ್ರಸಕ್ತ್ಯೈ ಚ ವಿಶ್ವಗುರೋಃ ವಾಯೋಃ ಗರೀಯಸೀಂ ವಿಶುದ್ಧಾಂ ಅವತಾರ ಲೀಲಾಂ ವಕ್ಷ್ಯಾಮಿ.

ಅ :—ಗುರು=ಗುರುಗಳಲ್ಲಿರುವ, ಭಕ್ತಿಜಾಯೈ = ಭಕ್ತಿಯಿಂದ ಉಂಟಾದ, ಮುಕುಂದ=ಶ್ರೀಮನ್ನಾರಾಯಣನ. ಭಕ್ತ್ಯೈ=ಭಕ್ತಿಗಾಗಿ, (ಮಾಹಾತ್ಮ್ಯ ಜ್ಞಾನಪೂರ್ವಕವಾದ ಸುದೃಢ ಸ್ನೇಹಕ್ಕಾಗಿ) ನಿರಂತರಾಯೈ =ಎಡೆಬಿಡದ, ಸತಾಂ=ಸಜ್ಜನರ, ಪ್ರಸಕ್ತ್ಯೈ ಚ=ಅನುಗ್ರಹಕ್ಕಾಗಿಯೂ, ವಿಶ್ವ=ಸಮಸ್ತ ಮುಕ್ತಿಯೋಗ್ಯ ಜನರಿಗೆ, ಗುರೋಃ=ಜ್ಞಾನೋಪದೇಶ ವನ್ನು ಮಾಡುವ, ವಾಯೋಃ=ಮುಖ್ಯ ಪ್ರಾಣದೇವರ, ಗರೀಯಸೀಂ= ಅತ್ಯಂತ ಶ್ರೇಷ್ಠವಾದ, ವಿಶುದ್ಧಾಂ=ದೋಷವಿಲ್ಲದ, ಅವತಾರಲೀಲಾಂ= ಹನುಮಂತ ಮೊದಲಾದ ಅವತಾರಗಳ ಚರಿತ್ರೆಯನ್ನು, ವಕ್ಷ್ಯಾಮಿ=ಹೇಳು ವೆನು.

ತಾ :—ಗುರುಗಳಲ್ಲಿರುವ ಭಕ್ತಿಯ ಮೂಲಕ ಶ್ರೀಹರಿಯಲ್ಲಿ ಭಕ್ತಿಯನ್ನು ಪಡೆಯಲಿಚ್ಛಿಸುವೆನು. ತಡೆಯಿಲ್ಲದ ಸಜ್ಜನರ ಅನುಗ್ರಹದ ಲಾಭವನ್ನೂ ಬಯಸುವೆನು. ಆದ್ದರಿಂದ ಸಮಸ್ತ ಮುಕ್ತಿಯೋಗ್ಯ ಜನರಿಗೆ ಜ್ಞಾನವನ್ನು ಉಪದೇಶ ಮಾಡುವ ಶ್ರೀವಾಯುದೇವರ ಶ್ರೇಷ್ಠವೂ, ಶುದ್ಧವೂ ಆದ ಹನುಮದಾದಿ ಮೂರು ಅವತಾರಗಳ ಚರಿತ್ರೆಯನ್ನು ಈ ಗ್ರಂಥದಲ್ಲಿ ವರ್ಣಿಸುವೆನು.

ವ್ಯಾ.ವಿ :—ಮುಕುಂದಸ್ಯ ಭಕ್ತಿಃ=ಮುಕುಂದಭಕ್ತಿಃ, ತಸ್ಯೈ. ಗುರುಷು ಭಕ್ತಿಃ, ಗುರುಭಕ್ತೇಃ ಜಾಯತ ಇತಿ=ಗುರುಭಕ್ತಿಜಾ. ತಸ್ಯೈ. ನಿರ್ಗತಂ ಅಂತರಂ ಯಸ್ಯಾಃ ಸಾ=ನಿರಂತರಾ, ತಸ್ಯೈ. ಅತಿಶಯೇನ ಗುರ್ವೀ =ಗರೀಯಸೀ, ತಾಮ್. ವಿಶ್ವಸ್ಯ ಗುರುಃ=ವಿಶ್ವಗುರುಃ, ತಸ್ಯ. ಅವತಾರಸ್ಯ ಲೀಲಾ=ಅವತಾರಲೀಲಾ, ತಾಮ್. ವಕ್ಷ್ಯಾಮಿ-ಬ್ರೂಞ್ ವ್ಯಕ್ತಾಯಾಂ ವಾಚಿ, ಮೂರನೆ ಗಣ ಸಕ. ಲೃಟ್, ಪರ. ಉ.ಏ. ವಕ್ಷ್ಯತಿ, ವಕ್ಷ್ಯತಃ, ವಕ್ಷ್ಯಂತಿ. ವಕ್ಷ್ಯಸಿ, ವಕ್ಷ್ಯಥಃ, ವಕ್ಷ್ಯಥ. ವಕ್ಷ್ಯಾಮಿ, ವಕ್ಷ್ಯಾವಃ, ವಕ್ಷ್ಯಾಮಃ.

ತಾಂ ಮಂತ್ರವರ್ಣೈರನುವರ್ಣನೀಯಾಂ
ಶರ್ವೇಂದ್ರಪೂರ್ವೈರಪಿ ವಕ್ತುಕಾಮೋ ।

Rarest Archiver

ಸಂಕ್ಷಿಪ್ತವಾಕ್ಯೇ ಮಯಿ ಮಂದಬುದ್ಧೌ
ಸಂತೋ ಗುಣಾಢ್ಯಾಃ ಕರುಣಾಂ ಕ್ರಿಯಾಸುಃ ॥ ೬ ॥

ಅ :—ಶರ್ವೇಂದ್ರಪೂರ್ವೈಃ ಅಪಿ ಮಂತ್ರವರ್ಣೈಃ ಅನುವರ್ಣನೀಯಾಂ ತಾಂ ವಕ್ತುಕಾಮೇ ಮಂದಬುದ್ಧೌ ಸಂಕ್ಷಿಪ್ತವಾಕ್ಯೇ ಮಯಿ ಗುಣಾಢ್ಯಾಃ ಸಂತಃ ಕರುಣಾಂ ಕ್ರಿಯಾಸುಃ.

ಅ :—ಶರ್ವೇಂದ್ರಪೂರ್ವೈಃ ಅಪಿ=ರುದ್ರ ಮತ್ತು ಇಂದ್ರ ಮೊದಲಾದ ದೇವತೆಗಳಿಂದಲೂ, ಮಂತ್ರವರ್ಣೈಃ=ವೇದ ವಾಕ್ಯಗಳಿಂದ, ಅನುವರ್ಣನೀಯಾಂ=ವರ್ಣಿಸಲು ಯೋಗ್ಯವಾದ, ತಾಂ=ಆ ವಾಯುದೇವರ ಅವತಾರಚರಿತ್ರೆಯನ್ನು, ವಕ್ತುಕಾಮೇ=ಹೇಳಲಪೇಕ್ಷೆಯುಳ್ಳ, ಮಂದಬುದ್ಧೌ=ಸ್ವಲ್ಪಬುದ್ಧಿಯುಳ್ಳ, ಸಂಕ್ಷಿಪ್ತವಾಕ್ಯೇ=ಸಂಕ್ಷೇಪವಾದ ಮಾತುಗಳುಳ್ಳ, ಮಯಿ=ನನ್ನಲ್ಲಿ, ಗುಣಾಢ್ಯಾಃ=ಗುಣಗಳನ್ನು ಮಾತ್ರ ಗ್ರಹಿಸುವಿಕೆ ಮೊದಲಾದ ಗುಣಗಳಿಂದ ಕೂಡಿದ, ಸಂತಃ=ಉತ್ತಮ ಜನರು, ಕರುಣಾಂ=ದಯೆಯನ್ನು, ಕ್ರಿಯಾಸುಃ=ಮಾಡಲಿ.

ತಾ :—ಶ್ರೀಮುಖ್ಯಪ್ರಾಣದೇವರ ಅವತಾರಗಳ ಚರಿತ್ರೆಯನ್ನು ರುದ್ರ ಇಂದ್ರ ಮೊದಲಾದ ದೇವತೆಗಳೂ ಬಳಿತ್ಥಾದಿ ವೇದಮಂತ್ರಗಳಿಂದ ವರ್ಣಿಸುತ್ತಾರೆ. ನಾನು ಅಲ್ಪಬುದ್ಧಿಯುವನು. ಆದ್ದರಿಂದ ಹೆಚ್ಚಾಗಿ ವರ್ಣಿಸಲು ಸಮರ್ಥನಲ್ಲ. ಆದರೂ ಅದನ್ನು ವರ್ಣಿಸಲು ಬಯಸುತ್ತಿದ್ದೇನೆ. ಆದುದರಿಂದ ಗುಣಗ್ರಾಹಿಗಳಾದ ಸಾಧು ಶ್ರೇಷ್ಠರು ಸ್ವಲ್ಪವಾಗಿ ವರ್ಣಿಸುವ ನನ್ನಲ್ಲಿ ಕುಪಿತರಾಗದೆ ದಯೆಗೈಯ್ಯಬೇಕು.

ವ್ಯಾ.ವಿ :—ಅನುವರ್ಣಯಿತುಂ ಯೋಗ್ಯಾ=ಅನುವರ್ಣನೀಯಾ, ತಾಮ್. ಶರ್ವಶ್ಚ ಇಂದ್ರಶ್ಚ, ಶರ್ವೇಂದ್ರೌ ಪೂರ್ವೌ ಯೇಷಾಂ ತೇ=ಶರ್ವೇಂದ್ರಪೂರ್ವಾಃ, ತೈಃ ವಕ್ತುಂ ಕಾಮಃ ಯಸ್ಯ ಸಃ=ವಕ್ತುಕಾಮಃ ತಸ್ಮಿನ್, ಸಂಕ್ಷಿಪ್ತ ವಾಕ್ಯಂ ಯಸ್ಯ ಸಃ=ಸಂಕ್ಷಿಪ್ತವಾಕ್ಯಃ, ತಸ್ಮಿನ್, ಮಂದಾ ಬುದ್ಧಿಃ ಯಸ್ಯ ಸಃ=ಮಂದಬುದ್ಧಿಃ, ತಸ್ಮಿನ್. ಗುಣೈಃ ಆಢ್ಯಾಃ ಗುಣಾಢ್ಯಾಃ, ಕ್ರಿಯಾಸುಃ=ಡು ಕೃಞ್ ಕರಣೇ ಎಂಟನೆ ಗಣ, ಸಕ.

Rarest Archiver

ಆಶೀರ್ಲಿಙ್, ಪರ. ಪ್ರ. ಬ. ಕ್ರಿಯಾತ್, ಕ್ರಿಯಾಸ್ತಾಂ, ಕ್ರಿಯಾಸುಃ, ಕ್ರಿಯಾಃ, ಕ್ರಿಯಾಸ್ತಂ, ಕ್ರಿಯಾಸ್ತ. ಕ್ರಿಯಾಸಂ, ಕ್ರಿಯಾಸ್ವ. ಕ್ರಿಯಾಸ್ಮ.

ಉಚ್ಚಾವಚಾ ಯೇನ ಸಮಸ್ತಚೇಷ್ಟಾಃ
ಕಿಂ ತತ್ರ ಚಿತ್ರಂ ಚರಿತಂ ನಿವೇದ್ಯಮ್ ।
ಕಿಂ ತೂತ್ತಮಶ್ಲೋಕಶಿಖಾಮಣೀನಾಂ
ಮನೋವಿಶುದ್ಧ್ಯೈ ಚರಿತಾನುವಾದಃ ॥ ೭ ॥

ಅ :—ಯೇನ ಉಚ್ಚಾವಚಾಃ ಸಮಸ್ತಚೇಷ್ಟಾಃ (ಸ್ಯುಃ) ತತ್ರ ಕಿಂ ಚರಿತಂ ನಿವೇದ್ಯಂ ? ಕಿಂ ತು ಉತ್ತಮಶ್ಲೋಕಶಿಖಾಮಣೀನಾಂ ಚರಿತಾನು-ವಾದಃ ಮನೋವಿಶುದ್ಧ್ಯೈ (ಭವತಿ).

ಅ :—ಯೇನ=ಯಾವ ವಾಯುದೇವರಿಂದ ಉಚ್ಚಾವಚಾಃ=ಅನೇಕ ಬಗೆಯಾದ, ಸಮಸ್ತಚೇಷ್ಟಾಃ=ಸಕಲ ಕೆಲಸಗಳು (ಸ್ಯುಃ=ಆದಾವು), ತತ್ರ=ಅವುಗಳಲ್ಲಿ, ಕಿಂ ಚರಿತಂ=ಯಾವಚರಿತ್ರೆಯು, ಚಿತ್ರಂ=ಆಶ್ಚರ್ಯಕರವಾದುದೆಂದು, ನಿವೇದ್ಯಂ=ವರ್ಣಿಸಲು ಶಕ್ಯವು ? ಕಿಂ ತು=ಆದರೆ, ಉತ್ತಮಶ್ಲೋಕ=ಪುಣ್ಯವನ್ನುಂಟುಮಾಡುವ ಕೀರ್ತಿಯುಳ್ಳವರಿಗೆ, ಶಿಖಾಮಣೀನಾಂ=ಶಿರೋರತ್ನದಂತಿರುವ ವಾಯುದೇವರ, ಚರಿತ=ಚರಿತ್ರೆಯ, ಅನುವಾದಃ=ವರ್ಣಿಸುವುದು, ಮನೋವಿಶುದ್ಧ್ಯೈ=ಮನಸ್ಸಿನ ಶುದ್ಧತೆಗಾಗಿ (ಆಗುವುದು).

ತಾ :—ಶ್ರೀಮುಖ್ಯಪ್ರಾಣದೇವರು ಸಮಸ್ತ ಪ್ರಾಣಿಗಳಿಗೆ ನಿಯಾಮಕರಾಗಿ ಅನೇಕ ಬಗೆಯ ಅದ್ಭುತ ಕಾರ್ಯಗಳನ್ನು ಮಾಡುತ್ತಿರುವರು. ಅವುಗಳಲ್ಲಿ ಯಾವ ಚರಿತ್ರೆಯು ಆಶ್ಚರ್ಯಕರವಾದುದೆಂದು ವರ್ಣಿಸಲಿ ? ಆದರೆ ಪುಣ್ಯಕರ ಕೀರ್ತಿಯುಳ್ಳವರಲ್ಲಿ ಶ್ರೇಷ್ಠರಾದ ಶ್ರೀಮುಖ್ಯಪ್ರಾಣದೇವರ ಯಾವುದಾದರೂ ಪವಿತ್ರ ಚರಿತ್ರೆಯನ್ನು ವರ್ಣಿಸುವುದರಿಂದ ಮನಸ್ಸು ಶುದ್ಧವಾಗುವುದು.

ವ್ಯಾ. ವಿ:—ಉದೀಚ್ಯಶ್ಚ ಅವಾಚ್ಯಶ್ಚ=ಉಚ್ಚಾವಚಾಃ, ಸಮಸ್ತಾಶ್ಚ ತಾಃ ಚೇಷ್ಟಾಶ್ಚ=ಸಮಸ್ತಚೇಷ್ಟಾಃ. ಉತ್ತಮಃ ಶ್ಲೋಕಃ ಯೇಷಾಂ ತೇ, ಉತ್ತಮಶ್ಲೋಕೇಷು ಶಿಖಾಮಣಯಃ=ಉತ್ತಮಶ್ಲೋಕಶಿಖಾಮಣಯಃ

Rarest Archiver

ತೇಷಾಮ್. ಮನಸಃ ವಿಶುದ್ಧಿಃ=ಮನೋವಿಶುದ್ಧಿಃ, ತಸ್ಯೈ. ಚರಿತಾನಾಂ ಅನುವಾದಃ=ಚರಿತಾನುವಾದಃ.

ಮಾಲಾಕೃತಸ್ತಚ್ಚರಿತಾಖ್ಯರತ್ನೈ-
ರಸೂಕ್ಷ್ಮದೃಷ್ಟೇಃ ಸಕುತೂಹಲಸ್ಯ ।
ಪೂರ್ವಾಪರೀಕಾರಮಥಾಪರಂ ವಾ
ಕ್ಷಾಮ್ಯಂತು ಮೇ ಹಂತ ಮುಹುರ್ಮಹಾಂತಃ ॥ ೮ ॥

ಅ :—ಮಹಾಂತಃ ತಚ್ಚರಿತಾಖ್ಯರತ್ನೈಃ ಮಾಲಾಕೃತಃ ಅಸೂಕ್ಷ್ಮದೃಷ್ಟೇಃ ಸಕುತೂಹಲಸ್ಯ ಮೇ ಪೂರ್ವಾಪರೀಕಾರಂ ಅಥ ಅಪರಂ ವಾ ಹಂತ ಮುಹುಃ ಕ್ಷಾಮ್ಯಂತು.

ಅ :—ಮಹಾಂತಃ=ಸಜ್ಜನರು. ತತ್=ಆ ವಾಯುದೇವರ, ಚರಿತ=ಚರಿತ್ರೆಯೆಂದು (ಕೆಲಸವೆಂದು) ಆಖ್ಯಾ=ಹೆಸರುಳ್ಳ, ರತ್ನೈಃ=ಮಣಿಗಳಿಂದ, ಮಾಲಾಕೃತಃ=ಸರವನ್ನು ಮಾಡುವ, ಅಸೂಕ್ಷ್ಮದೃಷ್ಟೇಃ=ಸೂಕ್ಷ್ಮಜ್ಞಾನವಿಲ್ಲದ, ಸಕುತೂಹಲಸ್ಯ=ಕೌತುಕದಿಂದ ಕೂಡಿದ, ಮೇ=ನನ್ನ ಪೂರ್ವಾಪರೀಕಾರಂ=ಮೊದಲು ವರ್ಣಿಸಬೇಕಾದ್ದನ್ನು ಅನಂತರ ವರ್ಣಿಸುವುದನ್ನಾಗಲಿ, ಅಥ=ಅಥವಾ, ಅಪರಂ ವಾ=(ಅಪರಪೂರ್ವೀಕಾರಂ) ಅನಂತರ ವರ್ಣಿಸಬೇಕಾದ್ದನ್ನು ಮೊದಲು ವರ್ಣಿಸುವುದನ್ನೇ ಆಗಲಿ, ಹಂತ=ದಯೆಯಿಂದ, ಮುಹುಃ=ಬಹಳವಾಗಿ, ಕ್ಷಾಮ್ಯಂತು=ಸಹಿಸಲಿ.

ತಾ :—ನಾನು ಈಗ ಆ ವಾಯುದೇವರ ಚರಿತ್ರೆಯನ್ನು ಒಂದೆಡೆ ಸೇರಿಸಿ ವರ್ಣಿಸಲು ಬಯಸುತ್ತೇನೆ. ನನಗೆ ಸರಿಯಾಗಿ ವಿಮರ್ಶಿಸುವಷ್ಟು ಬುದ್ಧಿಯಿಲ್ಲ. ಆದರೆ ಬೇಗನೆ ವರ್ಣಿಸಲು ಕುತೂಹಲವುಳ್ಳವನಾಗಿದ್ದೇನೆ. ಸೂಕ್ಷ್ಮಬುದ್ಧಿಯಿಲ್ಲದೆ ಕುತೂಹಲದಿಂದ ರತ್ನಮಾಲೆಯನ್ನು ರಚಿಸುವ ಅಕ್ಕಸಾಲಿಗನು ರತ್ನಗಳನ್ನು ವ್ಯತ್ಯಾಸದಿಂದ ಜೋಡಿಸುವಂತೆ ನಾನು ಹಾಗೆ ಚರಿತ್ರೆಯನ್ನು ವರ್ಣಿಸುವಾಗ ಮೊದಲು ವರ್ಣಿಸಬೇಕಾದ್ದನ್ನು ಆಮೇಲೂ, ಆಮೇಲೆ ವರ್ಣಿಸಬೇಕಾದ್ದನ್ನು ಮೊದಲೂ ವರ್ಣಿಸಿ ವ್ಯತ್ಯಾಸಗೊಳಿಸಬಹುದು. ಇಂತಹ ತಪ್ಪನ್ನು ಸಜ್ಜನರು ಕರುಣಿಸಿ ಸಹಿಸಲಿ.

ವ್ಯಾ. ವಿ :—ಮಾಲಾಂ ಕರೋತೀತಿ=ಮಾಲಾಕೃತ್, ತಸ್ಯ. ತಸ್ಯ

Rarest Archiver

ಚರಿತಾನಿ, ತಚ್ಚರಿತಾನಿ ಇತಿ ಆಖ್ಯಾ ಯೇಷಾಂ ತಾನಿ, ತಚ್ಚರಿತಾಖ್ಯಾನಿ ಚ ತಾನಿ ರತ್ನಾನಿ ಚ — ತಚ್ಚರಿತಾಖ್ಯರತ್ನಾನಿ, ತೈಃ. ಸೂಕ್ಷ್ಮಾ ನ ಭವತೀತಿ, ಅಸೂಕ್ಷ್ಮಾ ದೃಷ್ಟಿಃ ಯಸ್ಯ ಸಃ — ಅಸೂಕ್ಷ್ಮದೃಷ್ಟಿಃ, ತಸ್ಯ. ಕುತೂಹಲೇನ ಸಹಿತಃ — ಸಕುತೂಹಲಃ, ತಸ್ಯ. ಪೂರ್ವಸ್ಯಅಪರೀಕಾರಃ — ಪೂರ್ವಾಪರೀಕಾರಃ, ತಮ್. ಕ್ಷಾಮ್ಯಂತು—ಕ್ಷಮೂಷ್ ಸಹನೇ, ನಾಲ್ಕನೆಗಣ, ಸಕ. ಲೋಟ್ ಪರ. ಪ್ರ. ಬ. ಕ್ಷಾಮ್ಯತು ಕ್ಷಾಮ್ಯತಾತ್, ಕ್ಷಾಮ್ಯತಾಂ, ಕ್ಷಾಮ್ಯಂತು, ಕ್ಷಾಮ್ಯ ಕ್ಷಾಮ್ಯತಾತ್ ಕ್ಷಾಮ್ಯತಂ, ಕ್ಷಾಮ್ಯತ. ಕ್ಷಾಮ್ಯಾಣಿ, ಕ್ಷಾಮ್ಯಾವ, ಕ್ಷಾಮ್ಯಾಮ.

ಶ್ರೀವಲ್ಲಭಾಜ್ಞಾಂ ಸಸುರೇಂದ್ರಯಾಚ್ಞಾಂ
ಸಂಭಾವ್ಯ ಸಂಭಾವ್ಯತಮಾಂ ತ್ರಿಲೋಕ್ಯಾಮ್ ।
ಪ್ರಾಣೇಶ್ವರಃ ಪ್ರಾಣಿಗಣಪ್ರಣೇತಾ
ಗುರುಸ್ಸತಾಂ ಕೇಸರಿಣೋ ಗೃಹೇಽಭೂತ್ ॥ ೯ ॥

ಹಿಂದೆ ಶ್ರೀವಾಯುದೇವರ ಅವತಾರಲೀಲೆಯನ್ನು ಹೇಳುತ್ತೇನೆ ಎಂದು ಹೇಳಿದ್ದಾರೆ. ಆ ಅವತಾರಗಳಲ್ಲಿ ಹನುಮಂತದೇವರ ಅವತಾರವು ಮೊದಲನೆಯದಾದ್ದರಿಂದ ಈಗ ಆ ಹನುಮಂತದೇವರ ಲೀಲೆಯನ್ನು ಹೇಳಲು ಆರಂಭಿಸುತ್ತಾರೆ.

ಅ :—ಪ್ರಾಣಿಗಣಪ್ರಣೇತಾ ಸತಾಂ ಗುರುಃ ಪ್ರಾಣೇಶ್ವರಃ ಸಸುರೇಂದ್ರಯಾಚ್ಞಾಂ ತ್ರಿಲೋಕ್ಯಾಂ ಸಂಭಾವ್ಯತಮಾಂ ಶ್ರೀವಲ್ಲಭಾಜ್ಞಾಂ ಸಂಭಾವ್ಯ ಕೇಸರಿಣಃ ಗೃಹೇ ಅಭೂತ್.

ಅ :—ಪ್ರಾಣಿ = ಜೀವಗಳ, ಗಣ = ಸಮೂಹಗಳಿಗೆ, ಪ್ರಣೇತಾ = ಪ್ರೇರಕರಾದ, ಸತಾಂ = ಮುಕ್ತಿಯೋಗ್ಯ ಜೀವರಿಗೆ, ಗುರುಃ = ಹಿತವನ್ನು ಉಪದೇಶಿಸುವ, ಪ್ರಾಣೇಶ್ವರಃ = ಇಂದ್ರಿಯಾಭಿಮಾನಿ ಸೂರ್ಯಾದಿದೇವತೆಗಳಿಗೆ ಒಡೆಯರಾದ ಮುಖ್ಯಪ್ರಾಣದೇವರು, ಸಸುರೇಂದ್ರಯಾಚ್ಞಾಂ = ದೇವಶ್ರೇಷ್ಠರ ಬೇಡಿಕೆಯಿಂದ ಸಹಿತವಾದ, ತ್ರಿಲೋಕ್ಯಾಂ = ಮೂರು ಲೋಕಗಳಲ್ಲಿ, ಸಂಭಾವ್ಯತಮಾಂ = ಬಹುಮಾನಿಸಲು ಯೋಗ್ಯವಾದ, ಶ್ರೀವಲ್ಲಭ = ಲಕ್ಷ್ಮೀಪತಿಯ, ಆಜ್ಞಾಂ = ಅಪ್ಪಣೆಯನ್ನು, ಸಂಭಾವ್ಯ = ಸನ್ಮಾನಿಸಿ (ಒಪ್ಪಿ), ಕೇಸರಿಣಃ = ಕೇಸರಿಯೆಂಬ ಕಪಿಯ, ಗೃಹೇ = ಹೆಂಡತಿಯಲ್ಲಿ, ಅಭೂತ್ = ಹುಟ್ಟಿದರು.

Rarest Archiver

ತಾ :—ಮುಖ್ಯಪ್ರಾಣದೇವರು ಸಕಲ ಪ್ರಾಣಿಗಳಿಗೆ ಪ್ರೇರಕರೂ. ಸಜ್ಜನರಿಗೆ ಜ್ಞಾನೋಪದೇಶಕರೂ ಆಗಿರುವರು. ಅವರನ್ನು ದೇವತೆಗಳು ಅವತರಿಸಬೇಕೆಂದು ಬೇಡಿಕೊಂಡರು. ಆದರಂತೆ ಶ್ರೀಹರಿಯೂ ಅಪ್ಪಣೆ ಮಾಡಿದನು. ಮೂರು ಲೋಕಗಳಲ್ಲಿ ಸನ್ಮಾನಿಸಲು ಯೋಗ್ಯವಾದ ಆ ಶ್ರೀನಾರಾಯಣದೇವರ ಅಪ್ಪಣೆಯನ್ನು ಒಪ್ಪಿ ಅವರು ಕೇಸರಿಯೆಂಬ ಕಪಿಯ ಹೆಂಡತಿಯಾದ ಅಂಜನಾದೇವಿಯಲ್ಲಿ ಜನಿಸಿದರು.

ವ್ಯಾ. ವಿ : ಶ್ರಿಯಃ ವಲ್ಲಭಃ, ಶ್ರೀವಲ್ಲಭಸ್ಯ ಆಜ್ಞಾ=ಶ್ರೀವಲ್ಲಭಾಜ್ಞಾ, ತಾಮ್. ಸುರೇಂದ್ರಾಣಾಂ ಯಾಚ್ಞಾ=ಸುರೇಂದ್ರಯಾಚ್ಞಾ, ಸುರೇಂದ್ರಯಾಚ್ಞಯಾ ಸಹಿತಾ=ಸಸುರೇಂದ್ರಯಾಚ್ಞಾ, ತಾಮ್. ಅತಿಶಯೇನ ಸಂಭಾವ್ಯಾ. ಸಂಭಾವ್ಯತಮಾ, ತಾಮ್. ಪ್ರಾಣಾನಾಂ ಈಶ್ವರಃ=ಪ್ರಾಣೇಶ್ವರಃ ಪ್ರಾಣಿನಾಂ ಗಣಃ, ಪ್ರಾಣಿಗಣಸ್ಯಪ್ರಣೇತಾ=ಪ್ರಾಣಿಗಣಪ್ರಣೇತಾ. ಅಭೂತ್–ಭೂ ಸತ್ತಾಯಾಂ, ಒಂದನೆ ಗಣ, ಅಕ. ಲುಙ್, ಪರ. ಪ್ರ. ಏ. ಅಭೂತ್, ಅಭೂತಾಂ, ಅಭೂವನ್. ಅಭೂಃ, ಅಭೂತಂ, ಅಭೂತ. ಅಭೂವಂ, ಅಭೂವ, ಅಭೂಮ.

ವಿಶೇಷ ವಿಷಯ:—ಹಿಂದೆ (ಮೇರುಪರ್ವತದ ಹತ್ತಿರ) ಒಂದು ಗಜವು ಭರದ್ವಾಜ ಮೊದಲಾದ ಮುನಿಗಳ ತೀರ್ಥಗಳನ್ನು ಕೆಡಿಸುತ್ತಿದ್ದಿತು. ಅದನ್ನು ಕೇಸರಿಯೆಂಬ ಕಪಿಯು ಕೊಂದನು. ಆದರಿಂದ ಸಂತೋಷಗೊಂಡ ಮುನಿಗಳು ಕೇಸರಿಗೆ ಹನುಮಂತನೆಂಬ ಪುತ್ರನನ್ನು ಇತ್ತರು. ಇವರು ಮುಖ್ಯಪ್ರಾಣದೇವರ ಸ್ಪರ್ಶಮಾತ್ರದಿಂದ ಅಂಜನಾದೇವಿಯಲ್ಲಿ ಹುಟ್ಟಿದವರು.

ಯೇ ಯೇ ಗುಣಾ ನಾಮ ಜಗತ್ಪ್ರಸಿದ್ಧಾ
ಯಂ ತೇಷು ತೇಷು ಸ್ಮ ನಿದರ್ಶಯಂತಿ ।
ಸಾಕ್ಷಾನ್ಮಹಾಭಾಗವತಪ್ರಬರ್ಹಂ
ಶ್ರೀಮಂತಮೇನಂ ಹನುಮಂತಮಾಹುಃ ॥ ೧೧ ॥

ಅ :—ಯೇ ಯೇ ಗುಣಾಃ ನಾಮ ಜಗತ್ಪ್ರಸಿದ್ಧಾಃ, ತೇಷು ತೇಷು ಯಂ ನಿದರ್ಶಯಂತಿ ಸ್ಮ, ಸಾಕ್ಷಾತ್ ಮಹಾಭಾಗವತಪ್ರಬರ್ಹಂ ಶ್ರೀಮಂತಂ ಏನಂ ಹನುಮಂತಂ ಆಹುಃ.

Rarest Archiver

ಅ :—ಯೇ ಯೇ = ಯಾವ ಯಾವುವು, ಗುಣಾಃ ನಾಮ = ಗುಣ ಗಳೆಂದು, ಜಗತ್ಪ್ರಸಿದ್ಧಾಃ = ಪ್ರಪಂಚದಲ್ಲಿ ಪ್ರಸಿದ್ಧವಾಗಿವೆಯೋ; ತೇಷು ತೇಷು = ಆಯಾ ಗುಣಗಳಲ್ಲಿ, ಯಂ = ಯಾವ ಕೇಸರಿಯ ಮಗನನ್ನು, ನಿದರ್ಶಯಂತಿ ಸ್ಮ = ದೃಷ್ಟಾಂತವಾಗಿ ತೋರಿಸಿದರೊ ; ಸಾಕ್ಷಾತ್ = ಮುಖ್ಯವಾಗಿ, ಮಹಾ ಭಾಗವತಪ್ರಬರ್ಹಂ = ಶ್ರೇಷ್ಠರಾದ ಭಗವದ್ಭಕ್ತರಲ್ಲಿ ಶ್ರೇಷ್ಠರಾದ, ಶ್ರೀಮಂತಂ = ಕಾಂತಿಯುಳ್ಳ, ಏನಂ = ಈ ಕೇಸರಿಯ ಮಗನನ್ನು, ಹನುಮಂತಂ = ಹನುಮಂತನೆಂದು, ಆಹುಃ = ಹೇಳುತ್ತಾರೆ.

ತಾ :—ಪ್ರಪಂಚದಲ್ಲಿ ಯಾವ ಯಾವುವು ಗುಣಗಳೆಂದು ಪ್ರಸಿದ್ಧ ವಾಗಿರುವುವೊ ; ಯಾವ ಕೇಸರಿಯ ಮಗನನ್ನು ಆಯಾ ಗುಣಗಳುಳ್ಳವನೆಂದು ದೃಷ್ಟಾಂತವಾಗಿ ತೋರಿಸುತ್ತಿದ್ದರೊ ; ಅಂತಹ, ಉತ್ತಮ ಭಗವದ್ಭಕ್ತರಲ್ಲಿ ಉತ್ತಮರೂ, ಕಾಂತಿಯುಳ್ಳವರೂ ಆದ ಕೇಸರಿಯ ಮಗನನ್ನು ಹನುಮಂತ ದೇವರೆಂದು ಹೇಳುತ್ತಾರೆ.

ವ್ಯಾ.ವಿ. :—ಜಗತ್ಸು ಪ್ರಸಿದ್ಧಾಃ = ಜಗತ್ಪ್ರಸಿದ್ಧಾಃ. ಭಗವಾನ್ ಭಕ್ತಿಃ ಏಷಾಂ ಇತಿ = ಭಾಗವತಾಃ, ಮಹಾಂತಶ್ಚ ತೇ ಭಾಗವತಾಶ್ಚ, ಸಾಕ್ಷಾಚ್ಚ ತೇ ಮಹಾಭಾಗವತಾಶ್ಚ, ಸಾಕ್ಷಾನ್ಮಹಾಭಾಗವತೇಷು ಪ್ರಬರ್ಹಃ = ಸಾಕ್ಷಾನ್ಮಹಾಭಾಗವತಪ್ರಬರ್ಹಃ, ತಮ್. ಶ್ರೀರಸ್ಯಾಸ್ತೀತಿ = ಶ್ರೀಮಾನ್, ತಮ್. ನಿದರ್ಶಯಂತಿ–ದೃಶಿರ್ ಪ್ರೇಕ್ಷಣೇ, ಒಂದನೇ ಗಣ, ಸಕ. ಲಟ್, ಣಿಜನ್ತ, ಪರ.ಪ್ರ.ಬ.ಉಪಸರ್ಗ. ನಿ + ದರ್ಶಯತಿ, ದರ್ಶಯತಃ, ದರ್ಶಯಂತಿ. ದರ್ಶಯಸಿ, ದರ್ಶಯಥಃ, ದರ್ಶಯಥ. ದರ್ಶಯಾಮಿ, ದರ್ಶಯಾವಃ, ದರ್ಶಯಾಮಃ. ಆಹುಃ–ಬ್ರೂಞ್ ವ್ಯಕ್ತಾಯಾಂ ವಾಚಿ, ಮೂರನೆ ಗಣ, ಲಟ್, ಪರ.ಪ್ರ.ಬ. ಬ್ರವೀತಿ ಆಹ, ಬ್ರೂತಃ ಆಹತುಃ, ಬ್ರುವಂತಿ ಆಹುಃ. ಬ್ರವೀಷಿ ಆತ್ಥ, ಬ್ರೂಥಃ ಆಹಥುಃ, ಬ್ರೂಥ. ಬ್ರವೀಮಿ, ಬ್ರೂವಃ, ಬ್ರೂಮಃ. ಮಹಾಭಾಗವತಪ್ರಬರ್ಹಂ–'ಆನ್ಮಹತಃ ಸಮಾನಾಧಿಕರಣ ಜಾತೀಯಯೋಃ' ಈ ಸೂತ್ರದಿಂದ ಮಹತ್ ಶಬ್ದಕ್ಕೆ ಆತ್ವ ಬಂದಿದೆ. ನಿದರ್ಶ-ಯಂತಿ ಸ್ಮ–ಸೂ. 'ಲಟ್ ಸ್ಮೇ' ಸ್ಮ ಎಂಬುದರ ಯೋಗವಿರುವುದರಿಂದ ಭೂತ ಕಾಲಾರ್ಥದಲ್ಲಿ ಲಟ್‌ಲಕಾರ ಬಂದಿದೆ.

Rarest Archiver

ಕರ್ಮಾಣಿ ಕುರ್ವನ್ ಪರಮಾದ್ಭುತಾನಿ
ಸಭಾಸು ದೈವೀಷು ಸಭಾಜಿತಾನಿ ।
ಸುಗ್ರೀವಮಿತ್ರಂ ಸ ಜಗತ್ಪವಿತ್ರಂ
ರಮಾಪತಿಂ ರಾಮತನುಂ ದದರ್ಶ ॥ ೧೧ ॥

ಅ :—ಪರಮಾದ್ಭುತಾನಿ ದೈವೀಷು ಸಭಾಸು ಸಭಾಜಿತಾನಿ ಕರ್ಮಾಣಿ ಕುರ್ವನ್ ಸುಗ್ರೀವಮಿತ್ರಂ ಸಃ ಜಗತ್ಪವಿತ್ರಂ ರಾಮತನುಂ ರಮಾಪತಿಂ ದದರ್ಶ.

ಅ :—ಪರಮಾದ್ಭುತಾನಿ=ಅತ್ಯಂತ ಆಶ್ಚರ್ಯಕರವಾದ, ದೈವೀಷು=ದೇವತೆಗಳ ಸಂಬಂಧವಾದ, ಸಭಾಸು=ಸಭೆಗಳಲ್ಲಿ, ಸಭಾಜಿತಾನಿ=ಸನ್ಮಾನ ಮಾಡಲ್ಪಟ್ಟ, ಕರ್ಮಾಣಿ=ಕೆಲಸಗಳನ್ನು, ಕುರ್ವನ್=ಮಾಡುತ್ತಿರುವ, ಸುಗ್ರೀವಮಿತ್ರಂ=ಸುಗ್ರೀವನ ಸ್ನೇಹಿತರಾದ, ಸಃ=ಆ ಹನುಮಂತದೇವರು, ಜಗತಿ=ಲೋಕದಲ್ಲಿ, ಪವಿತ್ರಂ=ಶುದ್ಧನಾದ, ರಾಮತನುಂ=ಶ್ರೀರಾಮನ ಸ್ವರೂಪವುಳ್ಳ, ರಮಾಪತಿಂ=ಲಕ್ಷ್ಮೀಪತಿಯಾದ ಶ್ರೀರಾಮಚಂದ್ರದೇವರನ್ನು, ದದರ್ಶ=ನೋಡಿದರು.

ತಾ :—ಹನುಮಂತದೇವರ ಕಾರ್ಯವು ಅತ್ಯಂತ ಆಶ್ಚರ್ಯಕರವು, ದೇವತೆಗಳ ಸಭೆಗಳಲ್ಲಿ ಹೊಗಳಲ್ಪಟ್ಟಿದು. ಅಂತಹ ಕಾರ್ಯಗಳನ್ನು ಮಾಡುತ್ತಿರುವ ಆ ಹನುಮಂತದೇವರು, ವಾಲಿಯ ತಮ್ಮ ಸುಗ್ರೀವನ ಸ್ನೇಹಿತರಾದರು. ಅವರು ಜಗತ್ತಿನಲ್ಲಿ ಪರಿಶುದ್ಧನಾದ, ದಶರಥನ ಮಗ ರಾಮಚಂದ್ರನಾಗಿ ಅವತರಿಸಿರುವ, ಶ್ರೀಮನ್ನಾರಾಯಣನನ್ನು ಋಷ್ಯಮೂಕಪರ್ವತದಲ್ಲಿ ನೋಡಿದರು.

ವ್ಯಾ.ವಿ. :—ಪರಮಾಣಿ ಚ ತಾನಿ ಅದ್ಭುತಾನಿ ಚ=ಪರಮಾದ್ಭುತಾನಿ. ದೇವಾನಾಂ ಇಮಾಃ=ದೈವ್ಯಃ, ತಾಸು. ಸುಗ್ರೀವಸ್ಯ ಮಿತ್ರಂ=ಸುಗ್ರೀವಮಿತ್ರಮ್, ತತ್. ಜಗತಿ ಪವಿತ್ರಃ=ಜಗತ್ಪವಿತ್ರಃ, ತಂ. ರಮಾಯಾಃ ಪತಿಃ=ರಮಾಪತಿಃ, ತಂ. ರಾಮಃ ಇತಿ ತನುಃ ಯಸ್ಯ ಸಃ ರಾಮತನುಃ, ತಮ್. ದದರ್ಶ–ದೃಶಿರ್ ಪ್ರೇಕ್ಷಣೇ, ಲಿಟ್, ಪರ. ಪ್ರ.ಏ. ದದರ್ಶ, ದದೃಶತುಃ, ದದೃಶುಃ. ದದರ್ಶಿಥ ದದ್ರಷ್ಠ, ದದೃಶಥುಃ, ದದೃಶ. ದದರ್ಶ ದದೃಶಿವ, ದದೃಶಿಮ.

Rarest Archiver

ಪಾದಾರವಿಂದಪ್ರಣತೋ ಹರೀಂದ್ರ-
ಸ್ತದಾ ಮಹಾಭಕ್ತಿಭರಾಭಿನುನ್ನಃ ।
ಅಗ್ರಾಹಿ ಪದ್ಮೋದರಸುಂದರಾಭ್ಯಾಂ
ದೋರ್ಭ್ಯಾಂ ಪುರಾಣೇನ ಸ ಪೂರುಷೇಣ ॥ ॥ ೧೨ ॥

ಅ :—ತದಾ ಮಹಾಭಕ್ತಿಭರಾಭಿನುನ್ನಃ ಪಾದಾರವಿಂದಪ್ರಣತಃ ಸಃ ಹರೀಂದ್ರಃ ಪುರಾಣೇನ ಪೂರುಷೇಣ ಪದ್ಮೋದರಸುಂದರಾಭ್ಯಾಂ ದೋರ್ಭ್ಯಾಂ ಅಗ್ರಾಹಿ.

ಅ :—ತದಾ = ಆಗ, ಮಹಾಭಕ್ತಿ = ಹೆಚ್ಚು ಭಕ್ತಿಯೆಂಬ, ಭರ = ಭಾರದಿಂದ, ಅಭಿನುನ್ನಃ = ಹೆಚ್ಚಾಗಿ ಪ್ರೇರಿಸಲ್ಪಟ್ಟ, ಪಾದಾರವಿಂದ = ಕಮಲ ದಂತಿರುವ ಪಾದಗಳಲ್ಲಿ, ಪ್ರಣತಃ = ನಮಸ್ಕಾರ ಮಾಡಿದ, ಹರೀಂದ್ರಃ = ಕಪಿಗಳಲ್ಲಿ ಶ್ರೇಷ್ಠರಾದ, ಸಃ = ಆ ಹನುಮಂತದೇವರು, ಪುರಾಣೇನ = ಅನಾದಿಯಾದ, ಪೂರುಷೇಣ = ಪೂರ್ಣಷಡ್ಗುಣನಾದ ಶ್ರೀರಾಮನಿಂದ, ಪದ್ಮೋದರ-ಸುಂದರಾಭ್ಯಾಂ = ತಾವರೆಹೂವಿನ ಒಳಭಾಗದಂತೆ ಮನೋಹರವಾದ, ದೋರ್ಭ್ಯಾಂ = ಎರಡು ತೋಳುಗಳಿಂದ, ಅಗ್ರಾಹಿ = ಹಿಡಿದು ಎಬ್ಬಿಸಲ್ಪಟ್ಟರು.

ತಾ :—ಹನುಮಂತದೇವರು ಆ ರಾಮನನ್ನು ನೋಡಿ ಅತ್ಯಂತ ಭಕ್ತಿಯೆಂಬ ಹೊರೆಯಿಂದ ಬಗ್ಗಿ ಪದ್ಮದಂತಿರುವ ಅವನ ಕಾಲಿಗೆ ನಮಸ್ಕಾರ ಮಾಡಿದರು. ಆಗ ಅನಾದಿಪುರುಷನಾದ ಶ್ರೀರಾಮನು ತಾವರೆ ಹೂವಿನ ಒಳಭಾಗದಂತೆ ರಮ್ಯವಾದ ತನ್ನ ಕೈಗಳಿಂದ, ಭಾರವಾದ ಹೊರೆಯನ್ನು ಹೊತ್ತಿರುವುದರಿಂದ ಬಗ್ಗಿದ ಮನುಷ್ಯನನ್ನು ಎತ್ತುವಂತೆ ಆ ಹನುಮಂತದೇವರನ್ನು ಮೇಲಕ್ಕೆ ಎತ್ತಿದನು.

ವ್ಯಾ. ವಿ. :—ಪಾದೌ ಅರವಿಂದೇ ಇವ, ಪಾದಾರವಿಂದಯೋಃ ಪ್ರಣತಃ = ಪಾದಾರವಿಂದಪ್ರಣತಃ. ಹರೀಣಾಂ ಇಂದ್ರಃ = ಹರೀಂದ್ರಃ. ಮಹತೀ ಚ ಸಾ ಭಕ್ತಿಶ್ಚ, ಮಹಾಭಕ್ತೇಃ ಭರಃ, ಮಹಾಭಕ್ತಿಭರೇಣ ಅಭಿನುನ್ನಃ = ಮಹಾಭಕ್ತಿಭರಾಭಿನುನ್ನಃ. ಪದ್ಮಸ್ಯ ಉದರಂ, ಪದ್ಮೋದರಂ ಇವ ಸುಂದರೌ = ಪದ್ಮೋದರಸುಂದರೌ, ತಾಭ್ಯಾಂ. ಅಗ್ರಾಹಿ–ಗ್ರಹ ಉಪಾದಾನೇ, ಒಂಭತ್ತನೆ ಗಣ, ಸಕ. ಕರ್ಮಣಿ, ಲುಙ್, ಆತ್ಮ. ಪ್ರ. ಏ. ಅಗ್ರಾಹಿ, ಅಗ್ರಾಹಿಷಾತಾಂ. ಅಗ್ರಾಹಿಷತ. ಅಗ್ರಾಹಿಷ್ಠಾಃ, ಅಗ್ರಾಹಿಷಾಥಾಂ, ಅಗ್ರಾ-

Rarest Archiver

ಹಿಢ್ವಂ ಅಗ್ರಾಹಿಢ್ವಂ. ಅಗ್ರಾಹಿಷಿ, ಅಗ್ರಾಹಿಷ್ವಹಿ, ಅಗ್ರಾಹಿಷ್ಮಹಿ (ತಂ ಹರೀಂದ್ರಂ ಪುರಾಣಃ ಪೂರುಷಃ ಅಗ್ರಹೀತ್, ಕರ್ತರಿ).

ಅದಾರ್ಯಸಾಲಾವಲಿದಾರಣೇನ
ವ್ಯಾಪಾದಿತೇಂದ್ರಪ್ರಭವೇನ ತೇನ ।
ಪ್ರಾದ್ಯೋತನಿಪ್ರೀತಿಕೃತಾ ನಿಕಾಮಂ
ಮಧುದ್ವಿಷಾ ಸಂದಿದಿಶೇ ಸ ವೀರಃ ॥ ॥ ೧೩ ॥

ಅ :—ಅದಾರ್ಯಸಾಲಾವಲಿದಾರಣೇನ ವ್ಯಾಪಾದಿತೇಂದ್ರಪ್ರಭವೇನ ನಿಕಾಮಂ ಪ್ರಾದ್ಯೋತನಿಪ್ರೀತಿಕೃತಾ ಮಧುದ್ವಿಷಾ ತೇನ ವೀರಃ ಸಃ ಸಂದಿದಿಶೇ.

ಅ :—ಅದಾರ್ಯ=ಸೀಳಲಾಗದ, ಸಾಲಾವಲಿ=ಸಾಲವೆಂಬ ಮರಗಳ ಸಾಲಿನ, ದಾರಣೇನ=ಸೀಳುವಿಕೆಯುಳ್ಳ, ವ್ಯಾಪಾದಿತ=ಕೊಲ್ಲಲ್ಪಟ್ಟ, ಇಂದ್ರಪ್ರಭವೇನ=ಇಂದ್ರನ ಮಗನಾದ ವಾಲಿಯುಳ್ಳ, ನಿಕಾಮಂ=ಬಹಳವಾಗಿ, ಪ್ರಾದ್ಯೋತನಿ=ಸೂರ್ಯನ ಮಗನಾದ ಸುಗ್ರೀವನಿಗೆ, ಪ್ರೀತಿಕೃತಾ=ಸಂತೋಷವನ್ನುಂಟುಮಾಡಿದ, ಮಧುದ್ವಿಷಾ=ಮಧುವೆಂಬ ದೈತ್ಯನ ಶತ್ರುವಾದ, ತೇನ=ಆ ರಾಮನಿಂದ, ವೀರಃ=ಪರಾಕ್ರಮಶಾಲಿಯಾದ, ಸಃ=ಆ ಹನುಮಂತದೇವರು, ಸಂದಿದಿಶೇ=ಸೀತೆಯನ್ನು ಹುಡುಕಲು ಕಳುಹಿಸಲ್ಪಟ್ಟರು.

ತಾ : ಶ್ರೀರಾಮಚಂದ್ರನು ತನ್ನ ಬಲದ ವಿಷಯದಲ್ಲಿ ಸುಗ್ರೀವನಿಗೆ ನಂಬಿಕೆಯನ್ನುಂಟುಮಾಡಲು ಏಳು ಸಾಲವೆಂಬ ಮರಗಳನ್ನು ಕತ್ತರಿಸಿದನು. ಅನಂತರ ವಾಲಿಯನ್ನು ಕೊಂದು ಆ ಸುಗ್ರೀವನಿಗೆ ಸಂತೋಷವನ್ನುಂಟುಮಾಡಿದನು. ಮಧುದೈತ್ಯನನ್ನು ಕೊಂದ ಅಂತಹ ಶ್ರೀರಾಮನು ಸೀತೆಯನ್ನು ಹುಡುಕುವುದಕ್ಕಾಗಿ ಹನುಮಂತದೇವರನ್ನು ಕಳುಹಿಸಿಕೊಟ್ಟನು.

ವ್ಯಾ. ವಿ:—ದಾರಯಿತುಂ ಅಶಕ್ಯಾಃ, ಅದಾರ್ಯಾಶ್ಚ ತೇ ಸಾಲಾಶ್ಚ, ಅದಾರ್ಯಸಾಲಾನಾಂ ಆವಲಿಃ, ಅದಾರ್ಯಸಾಲಾವಲೇಃ ದಾರಣಂ=ಯೇನ ಸಃ ತೇನ. ಇಂದ್ರಾತ್ ಪ್ರಭವತೀತಿ=ಇಂದ್ರಪ್ರಭವಃ, ವ್ಯಾಪಾದಿತಃ ಇಂದ್ರಪ್ರಭವಃ ಯೇನ ಸಃ=ವ್ಯಾಪಾದಿತೇಂದ್ರಪ್ರಭವಃ, ತೇನ. ಪ್ರದ್ಯೋತನಸ್ಯ ಅಪತ್ಯಂ ಪುಮಾನ್=ಪ್ರಾದ್ಯೋತನಿಃ, ಪ್ರಾದ್ಯೋತನೌಪ್ರೀತಿಃ=

Rarest Archiver

ಪ್ರಾದ್ಯೋತನಿಪ್ರೀತಿಃ, ಪ್ರಾದ್ಯೋತನಿಪ್ರೀತಿಂ ಕರೋತೀತಿ=ಪ್ರಾದ್ಯೋತನಿ-ಪ್ರೀತಿಕೃತ್, ತೇನ. ಮಧುಂ ದ್ವೇಷ್ಟೀತಿ=ಮಧುದ್ವಿಟ್. ತೇನ. ಸಂದಿದಿಶೇ–ದಿಶ ಅತಿಸರ್ಜನೇ, ನಾಲ್ಕನೆ ಗಣ, ಕರ್ಮಣಿ ಲಿಟ್, ಆತ್ಮ. ಪ್ರ. ಏ. ಸಮ್ ಉಪಸರ್ಗ. ಸಂ+ದಿದಿಶೇ, ದಿದಿಶಾತೇ, ದಿದಿಶಿರೇ, ದಿದಿಶಿಷೇ. ದಿದಿಶಾಥೇ, ದಿದಿಶಿಧ್ವೇ. ದಿದಿಶೇ, ದಿದಿಶಿವಹೇ, ದಿದಿಶಿಮಹೇ. ಕರ್ತರಿ-ಮಧುದ್ವಿಟ್ ಸಃ ವೀರಂ ತಂ ಸಂದಿದೇಶ.

ಕರ್ಣಾಂತಮಾನೀಯ ಗುಣಗ್ರಹೀತ್ರಾ
ರಾಮೇಣ ಮುಕ್ತೋ ರಣಕೋವಿದೇನ ।
ಸ್ಫುರನ್ನಸೌ ವೈರಿಭಯಂಕರೋಽಭೂ-
ತ್ಸತ್ಪಕ್ಷಪಾತೀ ಪ್ರದರೋ ಯಥಾಗ್ರ್ಯಃ ॥ ೧೪ ॥

ಅ :—ಗುಣಗ್ರಹೀತ್ರಾ ರಣಕೋವಿದೇನ ರಾಮೇಣ ಕರ್ಣಾಂತಂ ಆನೀಯ ಮುಕ್ತಃ ಸ್ಫುರನ್ ಸತ್ಪಕ್ಷಪಾತೀ ಅಸೌ ಅಗ್ರ್ಯಃ ಪ್ರದರಃ ಯಥಾ ವೈರಿಭಯಂಕರಃ ಅಭೂತ್.

ಅ :—ಗುಣ = ಪರಾಕ್ರಮಾದಿಗುಣಗಳನ್ನು, ಬಿಲ್ಲಿನ ಹಗ್ಗವನ್ನು, ಗ್ರಹೀತ್ರಾ = ತಿಳಿದುಕೊಳ್ಳುವ, ಹಿಡಿದುಕೊಳ್ಳುವ, ರಣ = ಯುದ್ಧದಲ್ಲಿ, ಕೋವಿದೇನ=ಕುಶಲನಾದ, ರಾಮೇಣ=ಶ್ರೀರಾಮಚಂದ್ರನಿಂದ, ಕರ್ಣಾಂ-ತಂ = ಕಿವಿಯ ಸಮೀಪಕ್ಕೆ, ಆನೀಯ = ಕರೆದು, ಎಳೆದು, ಮುಕ್ತಃ= ಕಳುಹಿಸಲ್ಪಟ್ಟ, ಬಿಡಲ್ಪಟ್ಟ, ಸ್ಫುರನ್=ಪ್ರಕಾಶಿಸುವ, ಸತ್ಪಕ್ಷಪಾತೀ= ಸಜ್ಜನರಲ್ಲಿ ಪ್ರೀತಿಯುಳ್ಳ, ಒಳ್ಳೆ ಹಕ್ಕಿಯ ರೆಕ್ಕೆಯಿಂದ ಗಮನವುಳ್ಳ, ಅಸೌ= ಈ ಹನುಮಂತದೇವರು, ಅಗ್ರ್ಯಃ=ಶ್ರೇಷ್ಠವಾದ, ಪ್ರದರಃ ಯಥಾ=ಬಾಣ ದಂತೆ, ವೈರಿ=ಶತ್ರುಗಳಿಗೆ, ಭಯಂಕರಃ=ಭಯವನ್ನುಂಟುಮಾಡುವವರು, ಅಭೂತ್=ಆದರು.

ತಾ :—ಯುದ್ಧದಲ್ಲಿ ಚತುರನಾದ ಯೋಧನು ಬಿಲ್ಲಿಗೆ ಬಾಣವನ್ನು ಹೂಡಿ ಅದರ ವೇಗವನ್ನು ಹೆಚ್ಚಿಸಲು ಹಗ್ಗವನ್ನು ಕಿವಿಯವರೆಗೆ ಎಳೆದು ಬಾಣ ವನ್ನು ಬಿಡುವನು. ಹದ್ದಿನ ರೆಕ್ಕೆಯಿಂದ ವೇಗವಾಗಿ ಹೋಗುವ ಶ್ರೇಷ್ಠವಾದ ಆ ಬಾಣವು ಹೊಳೆಯುತ್ತ ಶತ್ರುಗಳಿಗೆ ಭಯವನ್ನುಂಟುಮಾಡುವುದು. ಹಾಗೆಯೇ ಹನುಮಂತದೇವರ ಗುಣಗಳನ್ನು ತಿಳಿದ ಆ ರಾಮನು ಅವರನ್ನು

Rarest Archive

ಕಿವಿಯ ಬಳಿಗೆ ಕರೆದನು. ಗುಟ್ಟಾಗಿ ಸೀತೆಗೆ ಹೇಳತಕ್ಕ ಮಾತನ್ನು ಹೇಳಿ ಮುದ್ರೆ ಉಂಗುರವನ್ನು ಕೊಟ್ಟು ಕಳುಹಿಸಿದನು. ಸಜ್ಜನರಲ್ಲಿ ಪ್ರೀತಿಯುಳ್ಳ ಅವರು ವಿರಾಜಿಸುತ್ತ ಶತ್ರುವಾದ ರಾವಣನ ಹತ್ತಿರ ಹೋಗಿ ಅವನಿಗೆ ಭಯ ವನ್ನುಂಟುಮಾಡಿದರು. ಎಂದರೆ ಹನುಮಂತ ದೇವರು ರಾಮನಿಗೆ ಬಾಣದಂತೆ ಬೆಂಬಲಿಗರಾಗಿದ್ದರು ಎಂದು ಭಾವ.

ವ್ಯಾ.ವಿ. :—ಕರ್ಣಸ್ಯ ಅಂತಃ = ಕರ್ಣಾಂತಃ, ತಂ. ಗುಣಾನಾಂ ಗ್ರಹೀತಾ = ಗುಣಗ್ರಹೀತಾ, ತೇನ. ರಣೇ ಕೋವಿದಃ = ರಣಕೋವಿದಃ, ತೇನ. ವೈರಿಣಾಂ ಭಯಂಕರಃ = ವೈರಿಭಯಂಕರಃ. ಸತ್ಸು ಪಕ್ಷಪಾತಃ, ಸತ್ಪಕ್ಷಪಾತಃ ಅಸ್ಯಾಸ್ತೀತಿ = ಸತ್ಪಕ್ಷಪಾತೀ. ಸಂಶ್ಚಾಸೌ ಪಕ್ಷಶ್ಚ, ಸತ್ಪಕ್ಷೇಣ ಪತತೀತಿ = ಸತ್ಪಕ್ಷಪಾತೀ. ಉಪಮಾಲಂಕಾರ.

ಗೋಭಿಸ್ಸಮಾನಂದಿತರೂಪಸೀತಃ
ಸ್ವವಹ್ನಿನಿರ್ದಗ್ಧಪಲಾಶಿರಾಶಿಃ ।
ಅಹೋ ಹನೂಮನ್ನವವಾರಿದೋಽಸೌ
ತೀರ್ಣಾಂಬುಧಿರ್ವಿಷ್ಣುಪದೇ ನನಾಮ ॥ ॥ ೧೫ ॥

ಅ :—ಗೋಭಿಃ ಸಮಾನಂದಿತರೂಪಸೀತಃ ಸ್ವವಹ್ನಿನಿರ್ದಗ್ಧಪಲಾಶಿ-ರಾಶಿಃ ಅಸೌ ಹನೂಮನ್ನವವಾರಿದಃ ತೀರ್ಣಾಂಬುಧಿಃ ವಿಷ್ಣುಪದೇ ನನಾಮ. ಅಹೋ.

ಅ :—ಗೋಭಿಃ = ಮಾತುಗಳಿಂದ, ನೀರಿನಿಂದ, ಸಮಾನಂದಿತ = ಸಂತೋಷಗೊಳಿಸಲ್ಪಟ್ಟ, ರೂಪಸೀತಃ = ಸೀತಾಕೃತಿಯುಳ್ಳ, ಸಂತೋಷಗೊಳಿ ಸಲ್ಪಟ್ಟ ಆಕೃತಿಯುಳ್ಳ ಸಸ್ಯಗಳುಳ್ಳ, ಸ್ವ = ತನ್ನ, ವಹ್ನಿ = ಬಾಲದ ಬೆಂಕಿ ಯಿಂದ, ನಿರ್ದಗ್ಧ = ಸುಡಲ್ಪಟ್ಟ, ಪಲಾಶಿ = ಮಾಂಸವನ್ನು ತಿನ್ನುವ ರಾಕ್ಷಸರ, ರಾಶಿಃ = ಸಮೂಹವುಳ್ಳ, ತನ್ನ ಮಿಂಚಿನ ಬೆಂಕಿಯಿಂದ ಸುಡಲ್ಪಟ್ಟ ಮರಗಳ ಸಮೂಹವುಳ್ಳ, ಅಸೌ = ಈ, ಹನೂಮಾನ್ = ಹನುಮಂತದೇವ ರೆಂಬ, ನವ = ಹೊಸ, ವಾರಿದಃ = ಮೋಡವು, ತೀರ್ಣಾಂಬುಧಿಃ = ದಾಟಲ್ಪಟ್ಟ ಸಮುದ್ರವುಳ್ಳದ್ದಾಗಿ, ವಿಷ್ಣುಪದೇ = ನಾರಾಯಣರೂಪಿಯಾದ ರಾಮನ ಕಾಲಿನಲ್ಲಿ, ಆಕಾಶದಲ್ಲಿ, ನನಾಮ = ನಮಸ್ಕರಿಸಿತು, ಅಡಗಿಹೋಯಿತು. ಅಹೋ = ಆಶ್ಚರ್ಯ.

Rarest Archiver

ತಾ :—ನೀರಿನಿಂದ ತುಂಬಿದ ಮೋಡವು ನೀರನ್ನು ಸುರಿಸಿ ಹೊಲಗಳಲ್ಲಿರುವ ಸಸ್ಯಗಳನ್ನು ಸಂತೋಷಗೊಳಿಸುವುದು. ತನ್ನಲ್ಲಿರುವ ವಿದ್ಯುತ್ತಿನ ಬೆಂಕಿಯಿಂದ ಮರಗಳ ಸಮೂಹವನ್ನು ಸುಡುವುದು. ಗಾಳಿಯ ವೇಗದಿಂದ ಸಮುದ್ರವನ್ನು ದಾಟಿ ಆಕಾಶದಲ್ಲಿ ಅಡಗಿಹೋಗುವುದು. ಅಂತೆಯೇ ಹನುಮಂತದೇವರು ಮಾತುಗಳಿಂದ ಸೀತಾಕೃತಿಯನ್ನು ಸಂತೋಷಗೊಳಿಸಿದರು. ತಮ್ಮ ಬಾಲದ ಬೆಂಕಿಯಿಂದ ಲಂಕಾಪಟ್ಟಣವನ್ನು ಸುಡುವ ಮೂಲಕ ರಾಕ್ಷಸರನ್ನು ಸುಟ್ಟರು. ಮರಳಿ ಸಮುದ್ರವನ್ನು ದಾಟಿ ಶ್ರೀರಾಮಚಂದ್ರನ ಪಾದಕ್ಕೆ ಎರಗಿದರು. ಇವರ ಕಾರ್ಯವು ಆಶ್ಚರ್ಯಕರವಾದುದು.

ವ್ಯಾ. ವಿ. :—ಸಮಾನಂದಿತಾ ರೂಪಸೀತಾ ಯೇನ ಸಃ = ಸಮಾನಂದಿತರೂಪಸೀತಃ. ಸ್ವಸ್ಯ ವಹ್ನಿಃ, ಸ್ವವಹ್ನಿನಾ ನಿರ್ದಗ್ಧಃ, ಪಲಾಶಿನಾಂ ರಾಶಿಃಪಲಾಶಿರಾಶಿಃ, ಸ್ವವಹ್ನಿನಿರ್ದಗ್ಧಃ ಪಲಾಶಿರಾಶಿಃ ಯೇನ ಸಃ = ಸ್ವವಹ್ನಿನಿರ್ದಗ್ಧಪಲಾಶಿರಾಶಿಃ, ನವಶ್ಚಾಸೌ ವಾರಿದಶ್ಚ = ನವವಾರಿದಃ, ಹನೂಮಾನೇವ ನವವಾರಿದಃ = ಹನೂಮನ್ನವವಾರಿದಃ. ತೀರ್ಣಃ ಅಂಬುಧಿಃ ಯೇನ ಸಃ = ತೀರ್ಣಾಂಬುಧಿಃ. ವಿಷ್ಣೋಃ ಪದಂ = ವಿಷ್ಣುಪದಂ, ತಸ್ಮಿನ್. ನನಾಮ-ಣಮು ಪ್ರಹ್ವತ್ವೇ ಶಬ್ದೇ ಚ, ಒಂದನೆ ಗಣ, ಲಿಟ್, ಪರ.ಪ್ರ.ಏ. ನನಾಮ, ನೇಮತುಃ, ನೇಮುಃ. ನೇಮಿಥ ನನಂಥ, ನೇಮಥುಃ, ನೇಮ. ನನಾಮ ನನಮ, ನೇಮಿವ, ನೇಮಿಮ. ಉಪಮಾಲಂಕಾರ.

ಅಪಕ್ಷಪಾತೀ ಪುರುಷಸ್ತ್ರಿಲೋಕ್ಯಾ -<br>
ಮಭೋಗಭೋಕ್ತಾ ಪತಗಾಧಿರಾಜವತ್ ।<br>
ವಿಶ್ವಂಭರಂ ಬಿಭ್ರದಸೌ ಜಿಗಾಯ<br>
ತ್ವರಾಪರಾಕ್ರಾಂತಿಷು ಚಿತ್ರಮೇತತ್ ॥ ೧೬ ॥

ಅ॥ ಅಪಕ್ಷಪಾತೀ ಪುರುಷಃ ಅಭೋಗಭೋಕ್ತಾ ವಿಶ್ವಂಭರಂ ಬಿಭ್ರತ್ ಅಸೌ ತ್ವರಾಪರಾಕ್ರಾಂತಿಷು ಪತಗಾಧಿರಾಜಂ ಜಿಗಾಯ. ಏತತ್ ತ್ರಿಲೋಕ್ಯಾಂ ಚಿತ್ರಮ್.

ಅ :—ಅಪಕ್ಷಪಾತೀ = ಪಕ್ಷಪಾತವಿಲ್ಲದ, ರೆಕ್ಕೆಗಳಿಂದ ಹಾರದಿರುವ, ಪುರುಷಃ = ಪುರುಷನಾದ, ಅಭೋಗಭೋಕ್ತಾ = ವಿಷಯ ಸುಖಗಳನ್ನು ಅನು

Rarest Archives

ಭವಿಸದಿರುವ, ಸರ್ಪಗಳ ದೇಹವನ್ನು ತಿನ್ನದಿರುವ, ಅಸೌ= ಈ ಹನುಮಂತ ದೇವರು, ವಿಶ್ವಂಭರಂ = ಶ್ರೀರಾಮನನ್ನು, ಶ್ರೀಮನ್ನಾರಾಯಣನನ್ನು, ಬಿಭ್ರತ್ = ಹೊತ್ತಿರುವವರಾಗಿ, ತ್ವರಾ = ವೇಗ, ಪರಾಕ್ರಾಂತಿಷು= ಪರಾಕ್ರಮ ಇವುಗಳಲ್ಲಿ, ಪತಗಾಧಿರಾಜಂ = ಗರುಡನನ್ನು, ಜಿಗಾಯ = ಗೆದ್ದರು. ಏತತ್ = ಇದು, ತ್ರಿಲೋಕ್ಯಾಂ = ಮೂರು ಲೋಕಗಳಲ್ಲಿ, ಚಿತ್ರಂ = ಆಶ್ಚರ್ಯಕರವಾದುದು.

ತಾ :—ಗರುಡನು ರೆಕ್ಕೆಗಳಿಂದ ಹಾರುವನು. ಸರ್ಪಗಳನ್ನು ತಿನ್ನುವನು. ಶ್ರೀಮನ್ನಾರಾಯಣನನ್ನು ಹೊತ್ತುಕೊಂಡು ಹೋಗುವನು. ವೇಗಪರಾಕ್ರಮಗಳಲ್ಲಿ ಪ್ರಸಿದ್ಧನು. ಶ್ರೀಹನುಮಂತದೇವರು ಪಕ್ಷಪಾತವಿಲ್ಲದ ಪುರುಷರು. ನೈಷ್ಠಿಕ ಬ್ರಹ್ಮಚಾರಿಯಾದ್ದರಿಂದ ವಿಷಯ ಸುಖಗಳನ್ನು ತ್ಯಜಿಸಿದವರು. ಇವರು ಗರುಡನಂತಿಲ್ಲದಿದ್ದರೂ ಶ್ರೀರಾಮಚಂದ್ರನನ್ನು ಹೊತ್ತುಕೊಂಡು ಹೋಗುತ್ತ ವೇಗ ಮತ್ತು ಪರಾಕ್ರಮಗಳಲ್ಲಿ ಆ ಗರುಡನನ್ನು ಜಯಿಸಿದರೆಂಬುದು ಮೂರು ಲೋಕಗಳಲ್ಲಿ ಆಶ್ಚರ್ಯವನ್ನುಂಟು ಮಾಡುವುದು.

ವ್ಯಾ. ವಿ. :—ಪಕ್ಷಾಭ್ಯಾಂ ಪತತೀತಿ=ಪಕ್ಷಪಾತೀ, ಪಕ್ಷಪಾತೀ ನ ಭವತೀತಿ=ಅಪಕ್ಷಪಾತೀ. ಭೋಗಾನಾಂ ಭೋಕ್ತಾ, ಭೋಗಭೋಕ್ತಾ ನ ಭವತೀತಿ=ಅಭೋಗಭೋಕ್ತಾ. ಪತಗಾನಾಂ ಅಧಿರಾಜಃ=ಪತಗಾಧಿರಾಜಃ, ತಂ. ವಿಶ್ವಂ ಬಿಭರ್ತೀತಿ=ವಿಶ್ವಂಭರಃ, ತಂ. ತ್ವರಾಶ್ಚ ಪರಾಕ್ರಾಂತಯಶ್ಚ= ತ್ವರಾ ಪರಾಕ್ರಾಂತಯಃ, ತಾಸು. ಜಿಗಾಯ–ಜಿ ಅಭಿಭವೇ, ಒಂದನೆ ಗಣ, ಸಕ. ಲಿಟ್, ಪರ. ಪ್ರ. ಏ. ಜಿಗಾಯ, ಜಿಗ್ಯತುಃ, ಜಿಗ್ಯುಃ. ಜಿಗಯಿಥ, ಜಿಗೇಥ, ಜಿಗ್ಯಥುಃ, ಜಿಗ್ಯ. ಜಿಗಾಯ ಜಿಗಯ, ಜಿಗ್ಯಿವ, ಜಿಗ್ಯಿಮ.

ನಿಬಧ್ಯ ಸೇತುಂ ರಘುವಂಶಕೇತು-
ಭ್ರೂಭಂಗಸಂಭ್ರಾಂತಪಯೋಧಿಮಧ್ಯೇ ।
ಮುಷ್ಟಿಪ್ರಹಾರಂ ದಶಕಾಯ ಸೀತಾ-
ಸಂತರ್ಜನಾಗ್ರ್ಯೋತ್ತರಮೇಷಕೋऽದಾತ್ ॥೧೭॥

ಅ :—ಏಷಕಃ ರಘುವಂಶಕೇತುಭ್ರೂಭಂಗಸಂಭ್ರಾಂತಪಯೋಧಿಮಧ್ಯೇ

Rarest Archiver

ಸೇತುಂ ನಿಬಧ್ಯ ದಶಕಾಯ ಸೀತಾಸಂತರ್ಜನಾಗ್ರ್ಯೋತ್ತರಂ ಮುಷ್ಟಿಪ್ರಹಾರಂ ಅದಾತ್.

ಅ :—ಏಷಕಃ = ಈ ಹನುಮಂತದೇವರು, ರಘುವಂಶ = ರಘುರಾಜನ ವಂಶದಲ್ಲಿ, ಕೇತು = ಧ್ವಜದಂತಿರುವ ಶ್ರೀರಾಮನ, ಭ್ರೂಭಂಗ = ಹುಬ್ಬು ಗಂಟಿನಿಂದ, ಸಂಭ್ರಾಂತ = ಹೆದರಿದ, ಪಯೋಧಿ = (ದಕ್ಷಿಣ) ಸಮುದ್ರದ, ಮಧ್ಯೇ = ನಡುವೆ, ಸೇತುಂ = ಸೇತುವೆಯನ್ನು, ನಿಬಧ್ಯ = ಕಟ್ಟಿ, ದಶಕಾಯ = ಹತ್ತು ತಲೆಗಳುಳ್ಳ ರಾವಣನಿಗೆ, ಸೀತಾ = ಜಾನಕಿಯ, ಸಂತರ್ಜನ = ಹೆದರಿಸುವಿಕೆಗೆ, ಅಗ್ರ್ಯ = ಶ್ರೇಷ್ಠವಾದ, ಉತ್ತರಂ = ಉತ್ತರದಂತಿರುವ, ಮುಷ್ಟಿಪ್ರಹಾರಂ = ಮುಷ್ಟಿಯ ಏಟನ್ನು, ಅದಾತ್ = ಕೊಟ್ಟರು.

ತಾ :—ಶ್ರೀರಾಮನು ಕೋಪದಿಂದ ಹುಬ್ಬುಗಂಟಿಕ್ಕಿ ದಾರಿಗೆ ಅಡ್ಡ ವಾದ ಸಮುದ್ರವನ್ನು ನೋಡಿದನು. ಅದರಿಂದ ಹೆದರಿದ ಸಮುದ್ರರಾಜನು ತನ್ನಲ್ಲಿ ಸೇತುವೆ ಕಟ್ಟಿ ಲಂಕೆಗೆ ಹೋಗು ಎಂದು ಶ್ರೀರಾಮನನ್ನು ಪ್ರಾರ್ಥಿಸಿತು. ಶ್ರೀಹನುಮಂತದೇವರು ಅಂತಹ ದಕ್ಷಿಣ ಸಾಗರದ ನಡುವೆ ಸೇತುವೆಯನ್ನು ಕಟ್ಟಿ ಅದರ ಮೂಲಕ ಲಂಕೆಗೆ ಹೋದರು. ಅಲ್ಲಿ ಜಾನಕಿಯನ್ನು ಪತ್ನಿಯಾಗು ಇಲ್ಲದಿದ್ದರೆ ನಿನ್ನನ್ನು ಕೊಲ್ಲುವೆನೆಂದು ಹೆದರಿಸುತ್ತಿದ್ದ ದಶಕಂಠನ ಎದೆಗೆ ಯುದ್ಧದಲ್ಲಿ ಮುಷ್ಟಿಯಿಂದ ಗುದ್ದಿದರು.

ವ್ಯಾ.ವಿ. :—ರಘೋಃ ವಂಶಃ, ರಘುವಂಶಸ್ಯ ಕೇತುಃ, ರಘುವಂಶ-ಕೇತೋಃ ಭ್ರುವೌ, ರಘು....ಭ್ರುವೋಃ ಭಂಗಃ, ರಘು....ಭಂಗೇನ ಸಂಭ್ರಾಂತಃ, ರಘು....ಭ್ರೂಭಂಗಸಂಭ್ರಾಂತಶ್ಚಾಸೌ ಪಯೋಧಿಶ್ಚ, ರಘು.... ಪಯೋಧೇಃ ಮಧ್ಯಂ = ರಘು....ಮಧ್ಯಂ, ತಸ್ಮಿನ್. ಮುಷ್ಟಿನಾ ಪ್ರಹಾರಃ = ಮುಷ್ಟಿಪ್ರಹಾರಃ; ತಮ್. ಸೀತಾಯಾಃ ಸಂತರ್ಜನಂ, ಅಗ್ರ್ಯಂ ಚ ತತ್ ಉತ್ತರಂ ಚ, ಅಗ್ರ್ಯೋತ್ತರಂ, ಸೀತಾಸಂತರ್ಜನಸ್ಯ ಅಗ್ರ್ಯೋತ್ತರಂ = ಸೀತಾಸಂತರ್ಜನಾಗ್ರ್ಯೋತ್ತರಂ, ತತ್. ಅದಾತ್ = ಡು. ದಾಞ್ ದಾನೇ, ಮೂರನೆ ಗಣ, ಸಕ. ಲುಙ್, ಪರ. ಪ್ರ. ಏ. ಅದಾತ್, ಅದಾತಾಂ. ಅದುಃ. ಅದಾಃ, ಅದಾತಂ, ಅದಾತ. ಅದಾಂ, ಅದಾವ, ಅದಾಮ.

ಜಾಜ್ವಲ್ಯಮಾನೋಜ್ವಲರಾಘವಾಗ್ನೌ
ಚಕ್ರೇ ಸ ಸುಗ್ರೀವಸುಯಾಯಜೂಕೇ ।

Rarest Archives

ಆಧ್ವರ್ಯವಂ ಯುದ್ಧಮುಖೇ ಪ್ರತಿಪ್ರ-
ಸ್ಥಾತ್ರಾ ಸುಮಿತ್ರಾತನಯೇನ ಸಾಕಮ್ ॥ ೧೮ ॥

ಅ:—ಸಃ ಜಾಜ್ವಲ್ಯಮಾನೋಜ್ವಲರಾಘವಾಗ್ನೌ ಸುಗ್ರೀವಸುಯಾಯಜೂಕೇ ಯುದ್ಧಮುಖೇ ಪ್ರತಿಪ್ರಸ್ಥಾತ್ರಾ ಸುಮಿತ್ರಾತನಯೇನ ಸಾಕಂ ಆಧ್ವರ್ಯವಂ ಚಕ್ರೇ.

ಅ :—ಸಃ=ಆ ಹನುಮಂತದೇವರು, ಜಾಜ್ವಲ್ಯಮಾನ=ಚೆನ್ನಾಗಿ ಉರಿಯುತ್ತಿರುವ, ಉಜ್ಜ್ವಲ=ಪ್ರಕಾಶಮಾನವಾದ, ರಾಘವ=ರಾಮಚಂದ್ರನೆಂಬ, ಅಗ್ನೌ=ಬೆಂಕಿಯುಳ್ಳ, ಸುಗ್ರೀವ=ಸುಗ್ರೀವನೆಂಬ, ಯಾಯಜೂಕೇ=ಯಾಗ ಮಾಡುವ ಯಜಮಾನನುಳ್ಳ, ಯುದ್ಧಮುಖೇ=ಯುದ್ಧವೆಂಬ ಯಜ್ಞದಲ್ಲಿ, ಪ್ರತಿಪ್ರಸ್ಥಾತ್ರಾ=ಪ್ರತಿಪ್ರಸ್ಥಾತೃವೆಂಬ ಋತ್ವಿಕ್ ಆದ, ಸುಮಿತ್ರಾತನಯೇನ=ಸುಮಿತ್ರೆಯ ಮಗನಾದ ಲಕ್ಷ್ಮಣನಿಂದ, ಸಾಕಂ=ಕೂಡಿ, ಆಧ್ವರ್ಯವಂ=ಅಧ್ವರ್ಯುವೆಂಬ ಋತ್ವಿಜನ ಕೆಲಸವನ್ನು, ಚಕ್ರೇ=ಮಾಡಿದರು.

ತಾ :—ರಾವಣನಲ್ಲಿ ಕುಪಿತನಾದ ರಾಮನು ಉರಿಯುವ ಬೆಂಕಿಯಂತಿದ್ದನು. ಸುಗ್ರೀವನು ಯಾಗ ಮಾಡುವ ಯಜಮಾನನಂತಿದ್ದನು. ಲಕ್ಷ್ಮಣನು ಯುದ್ಧವೆಂಬ ಯಜ್ಞದಲ್ಲಿ ಪ್ರತಿಪ್ರಸ್ಥಾತೃವೆಂಬ ಋತ್ವಿಜನಾದನು. ಆಗ ಹನುಮಂತದೇವರು ಆ ಯಜ್ಞದಲ್ಲಿ ಅಧ್ವರ್ಯುವೆಂಬ ಪುರೋಹಿತನ ಕೆಲಸವನ್ನು ಮಾಡಿದರು. ಅವರು ಹೀಗೆ ರಾವಣನನ್ನು ಕೊಲ್ಲಲು ಸಹಾಯಕರಾದರು.

ವ್ಯಾ.ವಿ. :—ಅತಿಶಯೇನ ಜ್ವಲತೀತಿ=ಜಾಜ್ವಲ್ಯಮಾನಃ, ರಾಘವ ಏವ ಅಗ್ನಿಃ=ರಾಘವಾಗ್ನಿಃ, ಉಜ್ವಲಶ್ಚಾಸೌ ರಾಘವಾಗ್ನಿಶ್ಚ, ಜಾಜ್ವಲ್ಯಮಾನಃ ಉಜ್ವಲರಾಘವಾಗ್ನಿಃ ಯಸ್ಮಿನ್ ಸಃ=ಜಾಜ್ವಲ್ಯಮಾನೋಜ್ವಲರಾಘವಾಗ್ನಿಃ, ತಸ್ಮಿನ್. ಶೋಭನಶ್ಚಾಸೌ ಯಾಯಜೂಕಶ್ಚ=ಸುಯಾಯಜೂಕಃ, ಸುಗ್ರೀವಃ ಏವ ಸುಯಾಯಜೂಕಃ ಯಸ್ಮಿನ್ ಸಃ=ಸುಗ್ರೀವಸುಯಾಯಜೂಕಃ, ತಸ್ಮಿನ್. ಅಧ್ವರ್ಯೋಃ ಇದಂ ಆಧ್ವರ್ಯವಂ. ಯುದ್ಧಂ ಏವ ಮುಖಃ=ಯುದ್ಧಮುಖಃ, ತಸ್ಮಿನ್. ಸುಮಿತ್ರಾಯಾಃ ತನಯಃ=ಸುಮಿತ್ರಾತನಯಃ, ತೇನ. ಚಕ್ರೇ–ಡು ಕೃಞ್ ಕರಣೇ, ಎಂಟನೆ ಗಣ,

Rarest Archiver

ಲಿಟ್, ಆತ್ಮ. ಪ್ರ.ಏ. ಚಕ್ರೇ, ಚಕ್ರಾತೇ, ಚಕ್ರಿರೇ. ಚಕೃಷೇ, ಚಕ್ರಾಥೇ, ಚಕೃಢ್ವೇ. ಚಕ್ರೇ, ಚಕೃವಹೇ, ಚಕೃಮಹೇ. ರೂಪಕಾಲಂಕಾರ.

ರಾಮಾರ್ಚನೇ ಯೋ ನಯತಃ ಪ್ರಸೂನಂ
ದ್ವಾಭ್ಯಾಂ ಕರಾಭ್ಯಾಮಭವತ್ಪ್ರಯತ್ನಃ ।
ಏಕೇನ ದೋಷ್ಣಾ ನಯತೋ ಗಿರೀಂದ್ರಂ
ಸಂಜೀವನಾದ್ಯಾಶ್ರಯಮಸ್ಯ ನಾಭೂತ್ ॥ ೧೯ ॥

ಅ :—ರಾಮಾರ್ಚನೇ ದ್ವಾಭ್ಯಾಂ ಕರಾಭ್ಯಾಂ ಪ್ರಸೂನಂ ನಯತಃ ಯಃ ಪ್ರಯತ್ನಃ ಅಭವತ್ ; ಏಕೇನ ದೋಷ್ಣಾ ಸಂಜೀವನಾದ್ಯಾಶ್ರಯಂ ಗಿರೀಂದ್ರಂ ನಯತಃ ಅಸ್ಯ ಸಃ ನ ಅಭೂತ್.

ಅ :—ರಾಮಾರ್ಚನೇ = ರಾಮನ ಪೂಜೆಗಾಗಿ, ದ್ವಾಭ್ಯಾಂ = ಎರಡು, ಕರಾಭ್ಯಾಂ = ಕೈಗಳಿಂದ, ಪ್ರಸೂನಂ = ಹೂವನ್ನು, ನಯತಃ = ತೆಗೆದುಕೊಂಡು ಹೋಗುತ್ತಿರುವ ಹನುಮಂತದೇವರಿಗೆ, ಯಃ = ಯಾವ, ಪ್ರಯತ್ನಃ = ಆಯಾಸವು, ಅಭವತ್ = ಆಯಿತೊ ; ಏಕೇನ = ಒಂದು, ದೋಷ್ಣಾ = ಕೈಯಿಂದ, ಸಂಜೀವನ = ಸಂಜೀವನವೆಂಬ ಔಷಧವೇ, ಆದಿ = ಮೊದಲಾದವುಗಳಿಗೆ, ಆಶ್ರಯಂ = ಆಶ್ರಯವಾದ, ಗಿರೀಂದ್ರಂ = ಗಂಧಮಾದನಪರ್ವತವನ್ನು, ನಯತಃ = ತೆಗೆದುಕೊಂಡು ಹೋಗುತ್ತಿರುವ ಹನುಮಂತದೇವರಿಗೆ, (ಸಃ = ಆ ಪ್ರಯತ್ನವು) ನಾಭೂತ್ = ಆಗಲಿಲ್ಲ.

ತಾ :—ಇಂದ್ರಜಿತುವಿನ ಬಾಣದಿಂದ ಮೂರ್ಛೆಗೊಂಡ ಕಪಿಗಳೇ ಮೊದಲಾದವರಿಗೆ ಜ್ಞಾನವನ್ನುಂಟುಮಾಡಲು ಆ ಹನುಮಂತದೇವರು ಸಂಜೀವನ ಮೊದಲಾದ ಔಷಧಗಳು ತುಂಬಿರುವ ಗಂಧಮಾದನಪರ್ವತವನ್ನು ಕಿತ್ತು ಲಂಕೆಯ ಯುದ್ಧಭೂಮಿಗೆ ತಂದರು. ಆದರೆ ಅವರು ಶ್ರೀರಾಮನ ಪೂಜೆಗೆ ಹೂವನ್ನು ತರುವಾಗ ಎಷ್ಟು ಪ್ರಯಾಸವಾಯಿತೋ ಆಗ ಅಷ್ಟು ಪ್ರಯಾಸವಾಗಲಿಲ್ಲ. ಅತಿ ಬಲಶಾಲಿಗಳಾದ ಅವರಿಗೆ ಪರ್ವತವನ್ನು ಎತ್ತುವುದು ಹೂವನ್ನು ಎತ್ತುವಂತೆಯೇ ಆಗಿತ್ತು. ಅಪಚಾರವಾಗದಂತೆ ಹೂವು ತರುವುದು ಅದಕ್ಕಿಂತ ಕಷ್ಟವಾಗಿತ್ತು.

ವ್ಯಾ.ವಿ. :—ರಾಮಸ್ಯ ಅರ್ಚನಂ = ರಾಮಾರ್ಚನಂ, ತಸ್ಮಿನ್.

Rarest Archive

ಗಿರೀಣಾಂ ಇಂದ್ರಃ=ಗಿರೀಂದ್ರಃ, ತಮ್. ಸಂಜೀವನಂ ಆದಿ ಯೇಷಾಂ ತೇ =ಸಂಜೀವನಾದಯಃ, ಸಂಜೀವನಾದೀನಾಂ ಆಶ್ರಯಃ=ಸಂಜೀವನಾದ್ಯಾಶ್ರಯಃ, ತಮ್.

ಸ ದಾರಿತಾರಿಂ ಪರಮಂ ಪುಮಾಂಸಂ
ಸಮನ್ವಯಾಸೀನ್ನರದೇವಪುತ್ರ್ಯಾ ।
ವಹ್ನಿಪ್ರವೇಶಾಧಿಗತಾತ್ಮಶುದ್ಧ್ಯಾ
ವಿರಾಜಿತಂ ಕಾಂಚನಮಾಲಯೇವ ॥ ೨೦ ॥

ಅ :—ಸಃ ದಾರಿತಾರಿಂ ವಹ್ನಿಪ್ರವೇಶಾಧಿಗತಾತ್ಮಶುದ್ಧ್ಯಾ ನರದೇವ ಪುತ್ರ್ಯಾ ಕಾಂಚನಮಾಲಯಾ ಇವ ವಿರಾಜಿತಂ ಪರಮಂ ಪುಮಾಂಸಂ ಸಮನ್ವಯಾಸೀತ್.

ಅ :—ಸಃ=ಆ ಹನುಮಂತದೇವರು, ದಾರಿತ=ಕೊಂದ, ಅರಿಂ= ರಾವಣ ಮೊದಲಾದ ಶತ್ರುಗಳುಳ್ಳ, ವಹ್ನಿ=ಅಗ್ನಿಯಲ್ಲಿ, ಪ್ರವೇಶ=ಪ್ರವೇಶ ಮಾಡುವುದರಿಂದ, ಅಧಿಗತ=ತಿಳಿಯಲ್ಪಟ್ಟ, ಆತ್ಮಶುದ್ಧ್ಯಾ=ತನ್ನ ಶುದ್ಧಿ ಯುಳ್ಳ, ನರದೇವಪುತ್ರ್ಯಾ= ಜನಕರಾಜನ ಮಗಳಾದ ಸೀತೆಯಿಂದ, ಕಾಂಚನಮಾಲಯೇವ,=ಚಿನ್ನದ ಸರದಿಂದಲೋಪಾದಿಯಲ್ಲಿ, ವಿರಾಜಿತಂ= ಪ್ರಕಾಶಗೊಂಡ, ಪರಮಂ=ಸರ್ವೋತ್ತಮನಾದ, ಪುರುಷಂ=ಶ್ರೀರಾಮ ನನ್ನು, ಸಮನ್ವಯಾಸೀತ್=ಅನುಸರಿಸಿ ಅಯೋಧ್ಯೆಗೆ ಹೋದರು.

ತಾ :—ಶ್ರೀರಾಮಚಂದ್ರನು ರಾವಣಾದಿ ಶತ್ರುಗಳನ್ನು ಕೊಂದನು. ಅನಂತರ ಜನರ ಮೆಚ್ಚಿಗೆಗಾಗಿ ಸೀತೆಯನ್ನು ಅಗ್ನಿಪ್ರವೇಶ ಮಾಡಿಸಿದನು. ಅವಳು ಶುದ್ಧಳೆಂದು ಎಲ್ಲರೂ ತಿಳಿದಮೇಲೆ ಬೆಂಕಿಯಲ್ಲಿ ಕಾಯಿಸಿದ್ದರಿಂದ ಹೊಳಪನ್ನು ಹೊಂದಿರುವ ಚಿನ್ನದ ಸರದಂತಿರುವ ಆ ಸೀತೆಯೊಡನೆ ಅಯೋಧ್ಯೆಗೆ ತೆರಳಿದನು. ಆಗ ಹನುಮಂತದೇವರು ಅವನನ್ನು ಹಿಂಬಾಲಿಸಿ ಹೋದರು.

ವ್ಯಾ.ವಿ. :—ದಾರಿತಾಃ ಅರಯಃ ಯೇನ ಸಃ=ದಾರಿತಾರಿಃ, ತಮ್, ನರಾಣಾಂ ದೇವಃ, ನರದೇವಸ್ಯ ಪುತ್ರೀ=ನರದೇವಪುತ್ರೀ, ತಯಾ, ವಹ್ನೌ ಪ್ರವೇಶಃ, ವಹ್ನಿಪ್ರವೇಶೇನ ಅಧಿಗತಾ=ವಹ್ನಿಪ್ರವೇಶಾಧಿಗತಾ, ಆತ್ಮನಃ

Rarest Archiver

ಶುದ್ಧಿಃ=ಆತ್ಮಶುದ್ಧಿಃ, ವಹ್ನಿಪ್ರವೇಶಾಧಿಗತಾ ಆತ್ಮಶುದ್ಧಿಃ ಯಸ್ಯಾಸ್ಸಾ=ವಹ್ನಿಪ್ರವೇಶಾಧಿಗತಾತ್ಮಶುದ್ಧಿಃ, ತಯಾ. ಕಾಂಚನಸ್ಯ ಮಾಲಾ=ಕಾಂಚನ-ಮಾಲಾ, ತಯಾ. ಸಮನ್ವಯಾಸೀತ್-ಯಾ ಪ್ರಾಪಣೇ, ಎರಡನೆ ಗಣ, ಅಕ. ಲುಙ್, ಪರ. ಪ್ರ. ಏ. ಸಮ್, ಅನು ಉಪಸರ್ಗಗಳು. ಸಮನು+ಅಯಾಸೀತ್, ಅಯಾಸಿಷ್ಟಾಂ, ಅಯಾಸಿಷುಃ. ಅಯಾಸೀಃ, ಅಯಾಸಿಷ್ಟಂ, ಅಯಾಸಿಷ್ಟ. ಅಯಾಸಿಷಂ, ಅಯಾಸಿಷ್ವ, ಅಯಾಸಿಷ್ಮ. ಉಪಮಾಲಂಕಾರ.

ಶ್ಯಾಮಂ ಸ್ಮಿತಾಸ್ಯಂ ಪೃಥುದೀರ್ಘಹಸ್ತಂ
ಸರೋಜನೇತ್ರಂ ಗಜರಾಜಯಾತ್ರಮ್ ।
ವಪುರ್ಜಗನ್ಮಂಗಲಮೇಷ ದೃಗ್ಭ್ಯಾಂ
ಚಿರಾದಯೋಧ್ಯಾಧಿಪತೇಃ ಸಿಷೇವೇ ॥ ೨೧ ॥

ಅ :—ಏಷಃ ಶ್ಯಾಮಂ ಸ್ಮಿತಾಸ್ಯಂ ಪೃಥುದೀರ್ಘಹಸ್ತಂ ಸರೋಜ-ನೇತ್ರಂ ಗಜರಾಜಯಾತ್ರಂ ಜಗನ್ಮಂಗಲಂ ಅಯೋಧ್ಯಾಧಿಪತೇಃ ವಪುಃ ದೃಗ್ಭ್ಯಾಂ ಚಿರಾತ್ ಸಿಷೇವೇ.

ಅ :—ಏಷಃ=ಈ ಹನುಮಂತದೇವರು, ಶ್ಯಾಮಂ=ಕೃಷ್ಣವರ್ಣವಾದ, ಸ್ಮಿತ=ಮಂದಹಾಸದಿಂದ ಕೂಡಿದ, ಆಸ್ಯಂ=ಮುಖವುಳ್ಳ, ಪೃಥು=ದಪ್ಪವಾದ, ದೀರ್ಘ=ಉದ್ದವಾದ, ಹಸ್ತಂ=ಕೈಗಳುಳ್ಳ, ಸರೋಜ=ಕಮಲದಂತೆ, ನೇತ್ರಂ = ಕಣ್ಣುಗಳುಳ್ಳ, ಗಜರಾಜ = ಐರಾವತದಂತೆ, ಯಾತ್ರಂ=ಗಮನವುಳ್ಳ, ಜಗತ್=ಲೋಕಗಳಿಗೆ, ಮಂಗಲಂ=ಶುಭವನ್ನು ಉಂಟುಮಾಡುವ, ಅಯೋಧ್ಯಾಧಿಪತೇಃ=ಅಯೋಧ್ಯೆಯಲ್ಲಿ ಪಟ್ಟಾಭಿಷೇಕಗೊಂಡು ಸಾರ್ವಭೌಮನಾದ ರಾಮನ, ವಪುಃ=ಶರೀರವನ್ನು, ದೃಗ್ಭ್ಯಾಂ=ಕಣ್ಣುಗಳಿಂದ, ಚಿರಾತ್=ಬಹಳ ಕಾಲ, ಸಿಷೇವೇ=ಸೇವಿಸಿದರು.

ತಾ :—ಶ್ರೀರಾಮನ ಶರೀರವು ಶ್ಯಾಮಲವರ್ಣವಾಗಿದ್ದಿತು. ಮುಗುಳ್ನಗೆಯ ಮುಖವುಳ್ಳದ್ದಾಗಿ ದಪ್ಪಗೆ ಉದ್ದವಾದ ಕೈಗಳುಳ್ಳದ್ದಾಗಿತ್ತು. ಕಮಲದಂತೆ ಕಣ್ಣುಗಳುಳ್ಳದ್ದಾಗಿ ಐರಾವತದಂತೆ ನಡಿಗೆಯುಳ್ಳದ್ದಾಗಿತ್ತು. ಜಗತ್ತಿಗೆ ಶುಭವನ್ನುಂಟುಮಾಡುವ ಅಯೋಧ್ಯಾಸಾರ್ವಭೌಮ ರಾಮನ ಅಂತಹ ಶರೀರವನ್ನು ಈ ಹನುಮಂತದೇವರು ಬಹುಕಾಲ ಸೇವಿಸಿಕೊಂಡಿದ್ದರು.

Rarest Archives

ವ್ಯಾ. ವಿ. :—ಸ್ಮಿತಂ ಆಸ್ಯಂ ಯಸ್ಯ ತತ್=ಸ್ಮಿತಾಸ್ಯಂ, ತತ್. ಪೃಥೂ ದೀರ್ಘೌ ಹಸ್ತೌ ಯಸ್ಯ ತತ್—ಪೃಥುದೀರ್ಘಹಸ್ತವತ್, ತತ್. ಸರೋಜೇ ಇವ ನೇತ್ರೇ ಯಸ್ಯ ತತ್—ಸರೋಜನೇತ್ರಂ, ತತ್. ಗಜಾನಾಂ ರಾಜಾ—ಗಜರಾಜಃ, ಗಜರಾಜಸ್ಯ ಯಾತ್ರಾ ಇವ ಯಾತ್ರಾ ಯಸ್ಯ ತತ್—ಗಜರಾಜ ಯಾತ್ರಂ, ತತ್. ಜಗತಃ ಮಂಗಲಂ ಯಸ್ಮಾತ್ ತತ್—ಜಗನ್ಮಂಗಲಂ, ತತ್. ಅಯೋಧ್ಯಾಯಾಃ ಅಧಿಪತಿಃ ಅಯೋಧ್ಯಾಧಿಪತಿಃ, ತಸ್ಯ. ಸಿಷೇವೇ=ಷೇವೃ ಸೇವಾಯಾಂ, ಒಂದನೆ ಗಣ, ಸಕ. ಲಿಟ್. ಆತ್ಮ. ಪ್ರ.ಏ. ಸಿಷೇವೇ, ಸಿಷೇವಾತೇ, ಸಿಷೇವಿರೇ. ಸಿಷೇವಿಷೇ, ಸಿಷೇವಾಥೇ, ಸಿಷೇವಿಧ್ವೇ ಸಿಷೇವಿಢ್ವೇ. ಸಿಷೇವೇ, ಸಿಷೇವಿವಹೇ, ಸಿಷೇವಿಮಹೇ.

ರಾಜ್ಯಾಭಿಷೇಕೇಽವಸಿತೇಽತ್ರ ಸೀತಾ
ಪ್ರೇಷ್ಠಾಯ ನಸ್ತಾಂ ಭಜತಾಂ ದಿಶೇತಿ ।
ರಾಮಸ್ಯ ವಾಣ್ಯಾ ಮಣಿಮಂಜುಮಾಲಾ-
ವ್ಯಾಜೇನ ದೀರ್ಘಾಂ ಕರುಣಾಂ ಬಬಂಧ ॥ ೨೨ ॥

ಅ :—ರಾಜ್ಯಾಭಿಷೇಕೇ ಅವಸಿತೇ 'ನಃ ಭಜತಾಂ ಪ್ರೇಷ್ಠಾಯ ತಾಂ ದಿಶ' ಇತಿ ರಾಮಸ್ಯ ವಾಣ್ಯಾ, ಸೀತಾ ಮಣಿಮಂಜುಮಾಲಾವ್ಯಾಜೇನ ಅತ್ರ ದೀರ್ಘಾಂ ಕರುಣಾಂ ಬಬಂಧ.

ಅ :—ರಾಜ್ಯಾಭಿಷೇಕೇ=ಅಯೋಧ್ಯಾ ರಾಜ್ಯದ ಪಟ್ಟಾಭಿಷೇಕವು, ಅವಸಿತೇ=ಮುಗಿಯಲು, ನಃ=ನಮ್ಮನ್ನು, ಭಜತಾಂ=ಸೇವಿಸುವವರ ಮಧ್ಯದಲ್ಲಿ, ಪ್ರೇಷ್ಠಾಯ=ಅತಿಶಯ ಪ್ರೀತಿಪಾತ್ರನಿಗೆ, ತಾಂ=ಆ ಮಾಲೆಯನ್ನು ದಿಶ=ಕೊಡು ಇತಿ=ಹೀಗೆಂಬ, ರಾಮಸ್ಯ=ಶ್ರೀರಾಮನ, ವಾಣ್ಯಾ=ಮಾತಿನಿಂದ, ಸೀತಾ=ಜಾನಕಿಯು, ಮಣಿ=ರತ್ನದ, ಮಂಜು ಮನೋಹರವಾದ, ಮಾಲಾ=ಸರದ, ವ್ಯಾಜೇನ=ನೆಪದಿಂದ, ಅತ್ರ=ಈ ಹನುಮಂತದೇವರಲ್ಲಿ, ದೀರ್ಘಾಂ=ಹೆಚ್ಚಾದ, ಅವಿಚ್ಛಿನ್ನವಾದ, ಕರುಣಾಂ =ದಯೆಯನ್ನು, ಬಬಂಧ=ಇಟ್ಟಳು.

ತಾ :—ಪಟ್ಟಾಭಿಷೇಕವು ಮುಗಿದ ಕೂಡಲೆ ಶ್ರೀರಾಮನು ಸೀತೆಗೆ ನೀನು ಹಿಡಿದುಕೊಂಡಿರುವ ರತ್ನಮಾಲೆಯನ್ನು ನಮ್ಮನ್ನು ಸೇವಿಸುವವರಲ್ಲಿ

Rarest Archiver

ಅತ್ಯಂತ ಪ್ರಿಯನಾದವನಿಗೆ ಕೊಡು ಎಂದನು. ಆಗ ಸೀತೆಯು ತನ್ನನ್ನು ಅನೇಕ ಪ್ರಕಾರ ಸೇವಿಸಿ ಉಪಕಾರ ಮಾಡಿದ ಹನುಮಂತದೇವರಿಗೆ ಅದನ್ನು ಕೊಟ್ಟು, ಅವರಲ್ಲಿ ಅತಿಶಯಾನುಗ್ರಹವನ್ನು ಮಾಡಿದಳು.

ವ್ಯಾ.ವಿ. :—ರಾಜ್ಯೇ ಅಭಿಷೇಕಃ = ರಾಜ್ಯಾಭಿಷೇಕಃ, ತಸ್ಮಿನ್. ಮಣೀನಾಂ ಮಂಜುಮಾಲಾ, ಮಣಿಮಂಜುಮಾಲಾಯಾಃ ವ್ಯಾಜಃ = ಮಣಿಮಂಜುಮಾಲಾವ್ಯಾಜಃ, ತೇನ. ದಿಶ–ದಿಶ ಅತಿಸರ್ಜನೇ, ಆರನೆ ಗಣ, ಸಕ. ಲೋಟ್, ಮ.ಏ. ದಿಶತು ದಿಶತಾತ್, ದಿಶತಾಂ, ದಿಶಂತು. ದಿಶ ದಿಶತಾತ್, ದಿಶತಂ, ದಿಶತ. ದಿಶಾನಿ, ದಿಶಾವ, ದಿಶಾಮ. ಬಬಂಧ–ಬಂಧ ಬಂಧನೇ, ಒಂಭತ್ತನೆ ಗಣ, ಸಕ. ಲಿಟ್, ಪರ.ಪ್ರ.ಏ. ಬಬಂಧ, ಬಬಂಧತುಃ, ಬಬಂಧುಃ. ಬಬಂಧಿಥ, ಬಬಂಧಥುಃ, ಬಬಂಧ. ಬಬಂಧ, ಬಬಂಧಿವ, ಬಬಂಧಿಮ.

ಹೃದೋರುಸೌಹಾರ್ದಭೃತಾಧಿಮೌಲಿ-
ನ್ಯಸ್ತೇನ ಹಸ್ತೇನ ದಯಾರ್ದ್ರದೃಷ್ಟ್ಯಾ ।
ಸೇವಾಪ್ರಸನ್ನೋಽಮೃತಕಲ್ಪವಾಚಾ
ದಿದೇಶ ದೇವಃ ಸಹಭೋಗಮಸ್ಮೈ ॥ ೨೩ ॥

ಅ :—ಉರುಸೌಹಾರ್ದಭೃತಾ ಹೃದಾ ಅಧಿಮೌಲಿನ್ಯಸ್ತೇನ ಹಸ್ತೇನ ದಯಾರ್ದ್ರದೃಷ್ಟ್ಯಾ ಅಮೃತಕಲ್ಪವಾಚಾ ಸೇವಾಪ್ರಸನ್ನಃ ದೇವಃ ಅಸ್ಮೈ ಸಹಭೋಗಂ ದಿದೇಶ.

ಅ :—ಉರು = ಹೆಚ್ಚಾದ, ಸೌಹಾರ್ದ = ಸ್ನೇಹವನ್ನು, ಭೃತಾ = ಧರಿಸಿದ, ಹೃದಾ = ಮನಸ್ಸಿನಿಂದ, ಅಧಿಮೌಲಿ = ತಲೆಯ ಮೇಲೆ, ನ್ಯಸ್ತೇನ = ಇಡಲ್ಪಟ್ಟ, ಹಸ್ತೇನ = ಕೈಯಿಂದ, ದಯಾರ್ದ್ರ = ದಯೆಯಿಂದ ಕೂಡಿದ, ದೃಷ್ಟ್ಯಾ = ನೋಟದಿಂದ, ಅಮೃತಕಲ್ಪ = ಅಮೃತಕ್ಕೆ ಸಮಾನವಾದ, ವಾಚಾ = ಮಾತಿನಿಂದ, (ಕೂಡಿದ) ಸೇವಾಪ್ರಸನ್ನಃ = ಸೇವೆಯಿಂದ ಸಂತೋಷಗೊಂಡ, ದೇವಃ = ಶ್ರೀರಾಮನು, ಅಸ್ಮೈ = ಈ ಹನುಮಂತದೇವ ರಿಗೆ, ಸಹಭೋಗಂ = ಸಹಭೋಗವೆಂಬ ಸತ್ಯಲೋಕಾಧಿಪತ್ಯವನ್ನು, ದಿದೇಶ = ಕೊಟ್ಟನು.

ತಾ :—ಶ್ರೀರಾಮನು ಈ ಹನುಮಂತದೇವರ ಅಮೋಘ ಸೇವೆಯಿಂದ

Rarest Archiver

ಸಂತುಷ್ಟನಾದನು. ಅವನ ಮನಸ್ಸು ಸ್ನೇಹದಿಂದ ತುಂಬಿತು. ದೃಷ್ಟಿಯು ದಯಾಪೂರ್ಣವಾಯಿತು. ಆದರಿಂದ ಅಮೃತದಂತಿರುವ ಮಾತಿನಿಂದ ರಾಮ ದೇವರು ಆವರನ್ನು ಹೊಗಳಿದನು. ತಲೆಯ ಮೇಲೆ ಕೈಯನ್ನಿರಿಸಿ ಅವರಿಗೆ ತನ್ನ ರೂಪಗಳೊಡನೆ ಸುಖವನ್ನು ಅನುಭವಿಸುವ ಸತ್ಯಲೋಕದ ಆಧಿಪತ್ಯ ವನ್ನಿತ್ತನು.

ವ್ಯಾ. ವಿ.—ಉರು ಚ ತತ್ ಸೌಹಾರ್ದಂ ಚ, ಉರುಸೌಹಾರ್ದಂ ಬಿಭರ್ತೀತಿ=ಉರುಸೌಹಾರ್ದಭೃತ್, ತೇನ. ಮೌಲೌ=ಅಧಿಮೌಲಿ, ಅಧಿ =ಮೌಲಿ ನ್ಯಸ್ತಃ=ಅಧಿಮೌಲಿನ್ಯಸ್ತಃ, ತೇನ. ದಯಯಾ ಆರ್ದ್ರಾ, ದಯಾರ್ದ್ರಾ ಚ ಸಾ ದೃಷ್ಟಿಶ್ಚ=ದಯಾರ್ದ್ರದೃಷ್ಟಿಃ ತಯಾ, ಸೇವಯಾ ಪ್ರಸನ್ನಃ=ಸೇವಾ ಪ್ರಸನ್ನಃ. ಅಮೃತೇನ ಈಷನ್ನ್ಯೂನಾ=ಅಮೃತಕಲ್ಪಾ, ಅಮೃತಕಲ್ಪಾ ಚ ಸಾ ವಾಕ್ಚ=ಅಮೃತಕಲ್ಪವಾಕ್, ತಯಾ. ಸಹ ಭುಜ್ಯತೇ ಇತಿ=ಸಹಭೋಗಃ, ತಮ್. ದಿದೇಶ=ದಿಶ ಅತಿಸರ್ಜನೇ, ಲಿಟ್. ದಿದೇಶ, ದಿದಿಶತುಃ, ದಿದಿಶುಃ. ದಿದೇಶಿಥ, ದಿದಿಶಥುಃ, ದಿದಿಶ. ದಿದೇಶ, ದಿದಿಶಿವ, ದಿದಿಶಿಮ.

> ಪ್ರೇಷ್ಠೋ ನ ರಾಮಸ್ಯ ಬಭೂವ ತಸ್ಮಾ-
> ನ್ನ ರಾಮರಾಜ್ಯೇಽಸುಲಭಂ ಚ ಕಿಂಚಿತ್ ।
> ತತ್ಪಾದಸೇವಾರತಿರೇಷ ನೈಚ್ಛ-
> ತ್ತಥಾಪಿ ಭೋಗಾನ್ನನು ಸಾ ವಿರಕ್ತಿಃ ॥ ೨೪ ॥

ಅ :—ರಾಮಸ್ಯ ತಸ್ಮಾತ್ ಪ್ರೇಷ್ಠಃ ನ ಬಭೂವ. ರಾಮರಾಜ್ಯೇ ಕಿಂಚಿತ್ ಚ ಅಸುಲಭಂ ನ. ತಥಾ ಅಪಿ ತತ್ಪಾದಸೇವಾರತಿಃ ಏಷಃ ಭೋಗಾನ್ ನ ಐಚ್ಛತ್. ಸಾ ವಿರಕ್ತಿಃ ನನು.

ಅ :—ರಾಮಸ್ಯ=ಶ್ರೀರಾಮನಿಗೆ, ತಸ್ಮಾತ್=ಆ ಹನುಮಂತದೇವರಿ ಗಿಂತ ಬೇರೆ, ಪ್ರೇಷ್ಠಃ=ಅತಿಶಯ ಪ್ರೀತಿಪಾತ್ರರು, ನ ಬಭೂವ=ಇರಲಿಲ್ಲ. ರಾಮರಾಜ್ಯೇ = ಶ್ರೀರಾಮನ ರಾಜ್ಯದಲ್ಲಿ, ಕಿಂಚಿತ್ ಚ=ಯಾವುದೂ, ಅಸುಲಭಂ=ದುರ್ಲಭವಾದುದು, ನ=ಇಲ್ಲ. ತಥಾ ಅಪಿ=ಹಾಗಿದ್ದಾಗ್ಯೂ, ತತ್=ಆ ರಾಮನ, ಪಾದ=ಪಾದಗಳ, ಸೇವಾ=ಸೇವೆಗಳಲ್ಲಿ, ರತಿಃ= ಪ್ರೀತಿಯುಳ್ಳ, ಏಷಃ=ಈ ಹನುಮಂತದೇವರು, ಭೋಗಾನ್=ವಿಷಯ

Rarest Archiver

ಸುಖಾನುಭವಗಳನ್ನು, ನ ಐಚ್ಛತ್=ಬಯಸಲಿಲ್ಲ. ಸಾ=ಅದು, ವಿರಕ್ತಿಃ ನನು=ವೈರಾಗ್ಯವಷ್ಟೆ.

ತಾ:—ಶ್ರೀರಾಮನಿಗೆ ಆ ಹನುಮಂತದೇವರಿಗಿಂತ ಹೆಚ್ಚಾದ ಬೇರಾರೂ ಅತ್ಯಂತ ಪ್ರಿಯ ಭಕ್ತರಿಲ್ಲ. ಆ ರಾಮರಾಜ್ಯದಲ್ಲಿ ದುರ್ಲಭವಾದುದು ಯಾವುದೂ ಇಲ್ಲ. ಆದರೂ ಹನುಮಂತದೇವರು ರಾಮನ ಪಾದಸೇವೆ ಯಲ್ಲಿಯೇ ಆಸಕ್ತರಾಗಿ ಇತರ ಸುಖಾನುಭವಗಳನ್ನು ಇಚ್ಛಿಸಲಿಲ್ಲ. ಸುಖ ಸಾಧನ ವಸ್ತುಗಳು ಸನ್ನಿಹಿತವಾಗಿದ್ದರೂ ಅವುಗಳನ್ನು ಆಶಿಸದಿರುವುದೇ ನಿಜ ವಾದ ವೈರಾಗ್ಯವಲ್ಲವೆ.

ವ್ಯಾ.ವಿ : ಅತಿಶಯೇನ ಪ್ರಿಯಃ=ಪ್ರೇಷ್ಠಃ, ರಾಮಸ್ಯ ರಾಜ್ಯಂ= ರಾಮರಾಜ್ಯಂ, ತಸ್ಮಿನ್, ನ ಸುಲಭಂ=ಅಸುಲಭಮ್, ತಸ್ಯ ಪಾದೌ, ತತ್ಪಾದಯೋಃ ಸೇವಾ, ತತ್ಪಾದಸೇವಾಯಾಂ ರತಿಃ ಯಸ್ಯ ಸಃ=ತತ್ಪಾದ- ಸೇವಾರತಿಃ. ಬಭೂವ-ಭೂ ಸತ್ತಾಯಾಂ, ಒಂದನೆ ಗಣ, ಲಿಟ್. ಬಭೂವ ಬಭೂವತುಃ, ಬಭೂವುಃ. ಬಭೂವಿಥ, ಬಭೂವಥುಃ ಬಭೂವ, ಬಭೂವ, ಬಭೂವಿವ, ಬಭೂವಿಮ. ಐಚ್ಛತ್=ಇಷು ಇಚ್ಛಾಯಾಂ, ಆರನೆ ಗಣ, ಸಕ. ಲಙ್, ಪರ, ಪ್ರ. ಏ. ಐಚ್ಛತ್, ಐಚ್ಛತಾಂ, ಐಚ್ಛನ್, ಐಚ್ಛಃ, ಐಚ್ಛತಂ, ಐಚ್ಛತ. ಐಚ್ಛಂ, ಐಚ್ಛಾವ, ಐಚ್ಛಾಮ.

ನಮೋ ನಮೋ ನಾಥ ನಮೋ ನಮಸ್ತೇ
ನಮೋ ನಮೋ ರಾಮ ನಮೋ ನಮಸ್ತೆ ।
ಪುನಃ ಪುನಸ್ತೇ ಚರಣಾರವಿಂದಂ
ನಮಾಮಿ ನಾಥೇತಿ ನಮನ್ ಸ ರೇಮೇ ॥ ೨೫ ॥

ಅ:—ಸಃ 'ನಾಥ! ತೇ ನಮಃ ನಮಃ ನಮಃ ನಮಃ. ರಾಮ! ತೇ ನಮಃ ನಮಃ ನಮಃ ನಮಃ. ನಾಥ! ತೇ ಚರಣಾರವಿಂದಂ ಪುನಃ ಪುನಃ ನಮಾಮಿ' ಇತಿ ನಮನ್ ಸನ್ ರೇಮೇ.

ಅ :—ಸಃ=ಆ ಹನುಮಂತ ದೇವರು, ನಾಥ=ಸ್ವಾಮಿಯೆ! ತೇ= ನಿನಗೆ, ನಮಃ ನಮಃ ನಮಃ ನಮಃ=ನಮಸ್ಕಾರಗಳು ೪. ರಾಮ=ಶ್ರೀ ರಾಮಚಂದ್ರನೆ! ತೇ=ನಿನಗೆ, ನಮಃ ನಮಃ ನಮಃ ನಮಃ=ನಮಸ್ಕಾರ ಗಳು ೪. ನಾಥ, ತೇ=ನಿನ್ನ, ಚರಣಾರವಿಂದಂ=ತಾವರೆ ಹೂವಿನಂತಿರುವ

Rarest Archiver

ಪಾದವನ್ನು, ಪುನಃ ಪುನಃ=ಮರಳಿ ಮರಳಿ, ನಮಾಮಿ=ನಮಸ್ಕಾರ ಮಾಡುತ್ತೇನೆ. ಇತಿ=ಹೀಗೆ, ನಮನ್ ಸನ್ ನಮಸ್ಕಾರ ಮಾಡುತ್ತ, ರೇಮೇ=ವಿಹರಿಸಿದರು.

ತಾ :—ಆ ಹನುಮಂತದೇವರು ಸ್ವಾಮಿ! ನಿನಗೆ ಅನೇಕ ನಮಸ್ಕಾರಗಳು. ಶ್ರೀರಾಮಚಂದ್ರನೆ! ನಿನಗೆ ಅನೇಕ ನಮಸ್ಕಾರಗಳು. ಸ್ವಾಮಿ! ನಿನ್ನ ಪಾದ ಕಮಲವನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇನೆ. ಈ ರೀತಿ ಹೇಳುತ್ತ ನಮಸ್ಕರಿಸುತ್ತ ಆನಂದಪಟ್ಟರು. (ಇದೇ ದಾಸ್ಯಭಕ್ತಿ).

ವ್ಯಾ.ವಿ:—ಚರಣಃ ಅರವಿಂದಂ ಇವ = ಚರಣಾರವಿಂದಂ ತತ್. ರೇಮೇ– ರಮು ಕ್ರೀಡಾಯಾಂ, ಒಂದನೆ ಗಣ, ಅಕರ್ಮಕ, ಲಿಟ್, ಆತ್ಮ. ಪ್ರ. ಏ. ರೇಮೇ, ರೇಮಾತೇ, ರೇಮಿರೇ. ರೇಮಿಷೇ, ರೇಮಾಥೇ, ರೇಮಿಧ್ವೇ, ರೇಮೇ, ರೇಮಿವಹೇ, ರೇಮಿಮಹೇ.

> ಕಿಂ ವರ್ಣಯಾಮಃ ಪರಮಂ ಪ್ರಸಾದಂ
> ಸೀತಾಪತೇಸ್ತತ್ರ ಹರಿಪ್ರಬರ್ಹೇ।
> ಮುಂಚನ್ಮಹೀಂ ನಿತ್ಯನಿಷೇವಣಾರ್ಥಂ
> ಸ್ವಾತ್ಮಾನಮೇವೈಷ ದದೌ ಯದಸ್ಮೈ ॥ ೨೬ ॥

ಅ :—ಯತ್ ಏಷಃ ಮಹೀಂ ಮುಂಚನ್, (ಸನ್) ನಿತ್ಯನಿಷೇವಣಾರ್ಥಂ ಅಸ್ಮೈ ಸ್ವಾತ್ಮಾನಂ ಏವ ದದೌ; ಹರಿಪ್ರಬರ್ಹೇ ತತ್ರ ಸೀತಾಪತೇಃ ಪರಮಂ ಪ್ರಸಾದಂ ಕಿಂ ವರ್ಣಯಾಮಃ.

ಅ :—ಯತ್=ಯಾವ ಕಾರಣದಿಂದ, ಏಷಃ=ಈ ರಾಮನು, ಮಹೀಂ=ಭೂಮಿಯನ್ನು, ಮುಂಚನ್ (ಸನ್)=ಬಿಡುವವನಾಗಿ, ನಿತ್ಯಂ ಯಾವಾಗಲೂ, ನಿಷೇವಣಾರ್ಥಂ=ಸೇವೆಗಾಗಿ, ಅಸ್ಮೈ=ಈ ಹನುಮಂತ ದೇವರಿಗೆ, ಆತ್ಮಾನಂ ಏವ=ತನ್ನನ್ನೇ, ದದೌ=ಕೊಟ್ಟನೊ; ಹರಿಪ್ರಬರ್ಹೇ =ಕಪಿಶ್ರೇಷ್ಠರಾದ, ತತ್ರ=ಆ ಹನುಮಂತದೇವರಲ್ಲಿ, ಸೀತಾಪತೇಃ= ಶ್ರೀರಾಮಚಂದ್ರನ, ಪರಮಂ=ಹೆಚ್ಚಾದ, ಪ್ರಸಾದಂ=ಅನುಗ್ರಹವನ್ನು, ಕಿಂ ವರ್ಣಯಾಮಃ=ಏನೆಂದು ವರ್ಣಿಸುತ್ತೇವೆ.

ತಾ:—ಶ್ರೀರಾಮಚಂದ್ರನು ತನ್ನ ಅವತಾರಕಾರ್ಯವನ್ನು ಮುಗಿಸಿ

Rarest Archives

ವೈಕುಂಠಕ್ಕೆ ತೆರಳಲನುವಾದನು. ಆಗ ಈ ಹನುಮಂತದೇವರಿಗೆ ಯಾವಾಗಲೂ ಸೇವಿಸುವುದಕ್ಕಾಗಿ ತನ್ನ ರೂಪವನ್ನೇ ಕೊಟ್ಟನು. ಆದ್ದರಿಂದ ಶ್ರೀರಾಮನು ಕಪಿಶ್ರೇಷ್ಠರಾದ ಹನುಮಂತದೇವರಲ್ಲಿ ಎಷ್ಟು ಅನುಗ್ರಹ ಮಾಡಿರುವನೆಂದು ಹೇಳಲು ಸಾಧ್ಯವಿಲ್ಲ.

ವ್ಯಾ. ವಿ :—ಸೀತಾಯಾಃ ಪತಿಃ=ಸೀತಾಪತಿಃ, ತಸ್ಯ. ಹರಿಷು ಪ್ರಬರ್ಹಃ=ಹರಿಪ್ರಬರ್ಹಃ, ತಸ್ಮಿನ್. ನಿತ್ಯಂ ನಿಷೇವಣಂ, ನಿತ್ಯನಿಷೇವ-ಣಾಯ=ನಿತ್ಯನಿಷೇವಣಾರ್ಥಮ್. ವರ್ಣಯಾಮಃ=ವರ್ಣ ವರ್ಣಕ್ರಿಯಾ ವಿಸ್ತಾರಗುಣ ವಚನೇಷು, ಹತ್ತನೆ ಗಣ, ಸಕ. ಲಟ್, ಪರ. ಉ. ಬ. ವರ್ಣ ಯತಿ, ವರ್ಣಯತಃ, ವರ್ಣಯಂತಿ. ವರ್ಣಯಸಿ, ವರ್ಣಯಥಃ, ವರ್ಣ ಯಥ. ವರ್ಣಯಾಮಿ, ವರ್ಣಯಾವಃ, ವರ್ಣಯಾಮಃ. ದದೌ–ಡು ದಾಞ್ ದಾನೇ, ಮೂರನೆ ಗಣ, ಸಕ. ಲಿಟ್, ಪರ. ಪ್ರ. ಏ. ದದೌ, ದದತುಃ, ದದುಃ. ದದಿಥ ದದಾಥ, ದದಥುಃ, ದದ. ದದೌ, ದದಿವ, ದದಿಮ.

ಸ್ವಾನಂದಹೇತೌ ಭಜತಾಂ ಜನಾನಾಂ
ಮಗ್ನಸ್ಸದಾ ರಾಮಕಥಾಸುಧಾಯಾಮ್ ।
ಅಸಾವಿದಾನೀಂ ಚ ನಿಷೇವಮಾಣೋ
ರಾಮಂ ಪತಿಂ ಕಿಂಪುರುಷೇ ಕಿಲಾಸ್ತೇ ॥ ೨೭ ॥

ಅ :—ಅಸೌ ಇದಾನೀಂ ಚ ಭಜತಾಂ ಜನಾನಾಂ ಸ್ವಾನಂದಹೇತೌ ರಾಮಕಥಾಸುಧಾಯಾಂ ಸದಾ ಮಗ್ನಃ ಪತಿಂ ರಾಮಂ ನಿಷೇವಮಾಣಃ ಕಿಂ-ಪುರುಷೇ ಆಸ್ತೇ ಕಿಲ.

ಅ :—ಅಸೌ=ಈ ಹನುಮಂತದೇವರು, ಇದಾನೀಂ ಚ=ಈಗಲೂ, ಭಜತಾಂ=ಸೇವಿಸುವ, ಜನಾನಾಂ=ಭಕ್ತಜನರಿಗೆ, ಸ್ವಾನಂದ=ಸ್ವರೂಪಾ ನಂದಾವಿರ್ಭಾವರೂಪಮೋಕ್ಷಕ್ಕೆ, ಹೇತೌ=ಕಾರಣವಾದ, ರಾಮಕಥಾ=ಶ್ರೀರಾಮನ ಚರಿತ್ರೆಯೆಂಬ, ಸುಧಾಯಾಂ=ಅಮೃತದಲ್ಲಿ, ಸದಾ=ಯಾವಾ ಗಲೂ, ಮಗ್ನಃ=ಮುಳುಗಿದವರಾಗಿ, (ಅತ್ಯಾಸಕ್ತರಾಗಿ) ಪತಿಂ=ಪ್ರಭು ವಾದ, ರಾಮಂ=ಶ್ರೀರಾಮಚಂದ್ರದೇವರನ್ನು, ನಿಷೇವಮಾಣಃ=ಸೇವಿ ಸುತ್ತ, ಕಿಂಪುರುಷೇ=ಕಿಂಪುರುಷವೆಂಬ ಖಂಡದಲ್ಲಿ, ಆಸ್ತೇ ಕಿಲ=ಇದ್ದಾರೆ ಯಷ್ಟೆ !

Rarest Archiver

ತಾ:—ಈ ಹನುಮಂತದೇವರು ಈಗಲೂ ಕಿಂಪುರುಷವೆಂಬ ಖಂಡದಲ್ಲಿ, ಸೇವಿಸುವ ಭಕ್ತರಿಗೆ ಮೋಕ್ಷಸುಖನ್ನೀಯುವ ರಾಮಚರಿತ್ರೆಯೆಂಬ ಅಮೃತ ವನ್ನು ಯಾವಾಗಲೂ ಆಸ್ವಾದಿಸುತ್ತ ಆ ಶ್ರೀರಾಮಚಂದ್ರಸ್ವಾಮಿಯನ್ನು ಸೇವಿಸುತ್ತಿದ್ದಾರೆ. (ಈ ವಿಷಯವು ಜ್ಞಾನಿಗಳಿಗೆ ತಿಳಿದಿದೆ).

ವ್ಯಾ.ವಿ :—ಸ್ವಾನಂದಸ್ಯ ಹೇತುಃ=ಸ್ವಾನಂದಹೇತುಃ, ತಸ್ಮಿನ್. ರಾಮಸ್ಯ ಕಥಾ, ರಾಮಕಥೈವ ಸುಧಾ=ರಾಮಕಥಾಸುಧಾ, ತಸ್ಯಾವ್. ಆಸ್ತೇ–ಆಸ ಉಪವೇಶನೇ, ಎರಡನೆ ಗಣ, ಅಕ. ಲಟ್, ಆತ್ಮ ಪ್ರ. ಏ. ಆಸ್ತೇ, ಆಸಾತೇ, ಆಸತೇ. ಆಸ್ಸೇ, ಆಸಾಥೇ, ಆಧ್ವೇ, ಆಸೇ, ಆಸ್ವಹೇ, ಆಸ್ಮಹೇ.

ಈಗ ಶ್ರೀಮುಖ್ಯಪ್ರಾಣದೇವರ ಎರಡನೆ ಅವತಾರವಾದ ಭೀಮಸೇನ ದೇವರ ಚರಿತ್ರೆಯನ್ನು ಹೇಳಲು ಆರಂಭಿಸುತ್ತಾರೆ :—

ತಸ್ಯೈವ ವಾಯೋರವತಾರಮೇನಂ
ಸಂತೋ ದ್ವಿತೀಯಂ ಪ್ರವದಂತಿ ಭೀಮವ್ ।
ಸ್ಪೃಷ್ಟೈವ ಯಂ ಪ್ರೀತಿಮತಾಽನಿಲೇನ
ನರೇಂದ್ರಕಾಂತಾ ಸುಷುವೇಽತ್ರ ಕುಂತೀ ॥ ೨೮ ॥

ಅ:—ಪ್ರೀತಿಮತಾ ಅನಿಲೇನ ಸ್ಪೃಷ್ಟಾ ಏವ ನರೇಂದ್ರಕಾಂತಾ ಕುಂತೀ ಯಂ ಅತ್ರ ಸುಷುವೇ; ಸಂತಃ ಏನಂ ಭೀಮಂ ತಸ್ಯ ಏವ ವಾಯೋಃ ದ್ವಿತೀಯಂ ಅವತಾರಂ ಪ್ರವದಂತಿ.

ಅ :—ಪ್ರೀತಿಮತಾ = ಪ್ರಸನ್ನರಾದ, ಅನಿಲೇನ=ಮುಖ್ಯಪ್ರಾಣ ದೇವರಿಂದ, ಸ್ಪೃಷ್ಟೈವ=ಕೇವಲ ಮುಟ್ಟಲ್ಪಟ್ಟವಳಾಗಿಯೇ, ನರೇಂದ್ರ= ಪಾಂಡುರಾಜನ, ಕಾಂತಾ=ಹೆಂಡತಿಯಾದ, ಕುಂತೀ=ಕುಂತೀದೇವಿಯು, ಯಂ=ಯಾವ ಮಗನನ್ನು, ಅತ್ರ=ಈ ಭೂಮಿಯಲ್ಲಿ, ಸುಷುವೇ=ಹಡೆ ದಳೊ ; ಸಂತಃ=ಸಜ್ಜನರು. ಏನಂ=ಈ, ಭೀಮಂ=ಭೀಮಸೇನದೇವ ರನ್ನು, ತಸ್ಯೈವ=ಅದೇ, ವಾಯೋಃ=ಮುಖ್ಯಪ್ರಾಣದೇವರ, ದ್ವಿತೀಯಂ =ಎರಡನೇ, ಅವತಾರಂ=ಅವತಾರರನ್ನಾಗಿ, ಪ್ರವದಂತಿ=ಹೇಳುತ್ತಾರೆ.

ತಾ:—ವಾಯುದೇವರು ಪ್ರೀತಿಯಿಂದ ಪಾಂಡುರಾಜನ ಹೆಂಡತಿಯಾದ

Rarest Archiver

ಕುಂತಿಯನ್ನು ಮುಟ್ಟಿದರು. ಆದರಿಂದಲೇ ಅವಳು ಕೂಡಲೇ ಭೀಮಸೇನ ದೇವರನ್ನು ಹಡೆದಳು. ಅವರಿಗೆ ಗರ್ಭವಾಸಾದಿಗಳಿರಲಿಲ್ಲ. ಬಳಿತ್ಥಾದಿ ವೇದ ಮಂತ್ರಗಳ ಅರ್ಥವನ್ನರಿತ ಸಜ್ಜನರು ಈ ಭೀಮಸೇನ ದೇವರನ್ನು ವಾಯು ದೇವರ ಎರಡನೆಯ ಅವತಾರವೆಂದು ಹೇಳುತ್ತಾರೆ.

ವ್ಯಾ.ವಿ :—ಪ್ರೀತಿಃ ಅಸ್ಯಾಸ್ತೀತಿ=ಪ್ರೀತಿಮಾನ್, ತೇನ, ನರಾಣಾಂ ಇಂದ್ರಃ, ನರೇಂದ್ರಸ್ಯ ಕಾಂತಾ=ನರೇಂದ್ರಕಾಂತಾ. ಸುಷುವೇ-ಷೂಙ್ ಪ್ರಾಣಿಗರ್ಭವಿಮೋಚನೆ, ಎರಡನೆ ಗಣ, ಸಕ. ಲಿಟ್, ಆತ್ಮ. ಪ್ರ.ಏ. ಸುಷುವೇ, ಸುಷುವಾತೇ, ಸುಷುವಿರೇ, ಸುಷುವಿಷೇ, ಸುಷುವಾಥೇ, ಸುಷುವಿಢ್ವೇ ಸುಷುವಿಧ್ವೇ. ಸುಷುವೇ, ಸುಷುವಿವಹೇ, ಸುಷುವಿಮಹೇ.

ಇಂದ್ರಾಯುಧಂ ಹೀಂದ್ರಕರಾಭಿನುನ್ನಂ
ಚಿಚ್ಛೇದ ಪಕ್ಷಾನ್ ಕ್ಷಿತಿಧಾರಿಣಾಂ ಪ್ರಾಕ್ ।
ಬಿಭೇದ ಭೂಭೃದ್ವಪುರಂಗಸಂಗಾ-
ಚ್ಚಿತ್ರಂ ಸ ಪನ್ನೋ ಜನನೀಕರಾಗ್ರಾತ್ ॥ ೨೯ ॥

ಅ:—ಪ್ರಾಕ್ ಇಂದ್ರಕರಾಭಿನುನ್ನಂ ಇಂದ್ರಾಯುಧಂ ಕ್ಷಿತಿಧಾರಿಣಾಂ ಪಕ್ಷಾನ್ ಚಿಚ್ಛೇದ ಹಿ. ಸಃ ಜನನೀಕರಾಗ್ರಾತ್ ಪನ್ನಃ ಅಂಗಸಂಗಾತ್ ಭೂಭೃದ್ವಪುಃ ಬಿಭೇದ, ಚಿತ್ರಮ್.

ಅ :—ಪ್ರಾಕ್=ಹಿಂದೆ, ಇಂದ್ರಕರಾಭಿನುನ್ನಂ=ದೇವೇಂದ್ರನ ಕೈಯಿಂದ ಪ್ರೇರಿಸಲ್ಪಟ್ಟ, ಇಂದ್ರಾಯುಧಂ=ಇಂದ್ರನ ಆಯುಧವಾದ ವಜ್ರವು, ಕ್ಷಿತಿಧಾರಿಣಾಂ=ಭೂಮಿಯನ್ನು ಧರಿಸಿರುವ ಭೂಧರ ಎಂದು ಪ್ರಸಿದ್ಧವಾದ ಬೆಟ್ಟಗಳ, ಪಕ್ಷಾನ್=ರೆಕ್ಕೆಗಳನ್ನು, ಚಿಚ್ಛೇದ ಹಿ=ಕತ್ತರಿಸಿತಷ್ಟೆ. ಸಃ=ಆ ಭೀಮಸೇನದೇವರು, ಜನನೀ=ತಾಯಿಯಾದ ಕುಂತಿಯ, ಕರಾಗ್ರಾತ್=ಕೈಯ ಕೊನೆಯಿಂದ, ಪನ್ನಃ=ಬಿದ್ದವರಾಗಿ, ಅಂಗ=ದೇಹದ, ಸಂಗಾತ್=ಸಂಬಂಧದಿಂದ, ಭೂಭೃತ್=ಶತಶೃಂಗ ಪರ್ವತದ, ವಪುಃ=ಶರೀರವನ್ನು, ಬಿಭೇದ=ಸೀಳಿದರು. ಚಿತ್ರಂ=ಇದು ಆಶ್ಚರ್ಯ.

ತಾ :—ಹಿಂದೆ ಪರ್ವತಗಳಿಗೆ ರೆಕ್ಕೆಗಳಿದ್ದುವು. ಆದುದರಿಂದ ಅವು ಅಹಂಕಾರಪಟ್ಟು ಹಾರಿ ಗ್ರಾಮನಗರಗಳ ಮೇಲೆ ಬಿದ್ದು ಅಲ್ಲಿನ ಎಲ್ಲಾ ಜಂತು

Rarest Archiver

ಗಳಿಗೂ ಹಿಂಸೆಯನ್ನು ಮಾಡುತ್ತಿದ್ದವು. ಇದನ್ನು ನೋಡಿ ದೇವರಾಜನು ತನ್ನ ವಜ್ರಾಯುಧದಿಂದ ಬಲವಾಗಿ ಹೊಡೆದು ಅವುಗಳ ರೆಕ್ಕೆಗಳನ್ನು ಕತ್ತರಿಸಿದನು. ಆ ಭೀಮಸೇನದೇವರು ಶಿಶುವಾಗಿದ್ದಾಗ ಎತ್ತಿಕೊಂಡಿರುವ, ಹುಲಿಯ ಗರ್ಜನೆ ಕೇಳಿ ಹೆದರಿದ ಕುಂತಿಯ ಕೈಯಿಂದ ಅಕಸ್ಮಾತ್ ಕೆಳಗೆ ಬಿದ್ದರು. ಆಗ ಅವರ ದೇಹದ ಸಂಬಂಧದಿಂದ ಅವರು ವಾಸಿಸುತ್ತಿದ್ದ ಶತಶೃಂಗ ಪರ್ವತವು ಸೀಳಿ ಹೋಯಿತು. ಇದು ಆಶ್ಚರ್ಯ. ಎಂದರೆ ಇಂದ್ರನು ಬುದ್ಧಿಪೂರ್ವಕವಾಗಿ ಬಲವಾಗಿ ಪ್ರಯೋಗಿಸಿದ ವಜ್ರಾಯುಧದಿಂದ ಪರ್ವತದ ರೆಕ್ಕೆ ಮಾತ್ರ ಕತ್ತರಿಸಿ ಹೋಯಿತು. ಆ ಭೀಮಸೇನದೇವರು ಅಕಸ್ಮಾತ್ ಬಿದ್ದಮಾತ್ರದಿಂದ ಪರ್ವತವೇ ಹೋಳಾಯಿತು. ಇದರಿಂದ ಅವರ ಶಕ್ತಿಯು ಅದ್ಭುತವಾದುದು ಎಂದು ತಿಳಿದುಬರುತ್ತದೆ.

ವ್ಯಾ.ವಿ :—ಇಂದ್ರಸ್ಯ ಆಯುಧಂ=ಇಂದ್ರಾಯುಧಮ್, ಇಂದ್ರಸ್ಯ ಕರಃ, ಇಂದ್ರಕರೇಣ ಅಭಿನುನ್ನಂ=ಇಂದ್ರಕರಾಭಿನುನ್ನಮ್. ಕ್ಷಿತಿಂ ಧರಂತೀತಿ=ಕ್ಷಿತಿಧಾರಿಣಃ, ತೇಷಾಮ್. ಭುವಂ ಬಿಭರ್ತೀತಿ = ಭೂಭೃತ್, ಭೂಭೃತಃ ವಪುಃ = ಭೂಭೃದ್ವಪುಃ. ಅಂಗಸ್ಯ ಸಂಗಃ = ಅಂಗಸಂಗಃ, ತಸ್ಮಾತ್. ಜನನ್ಯಾಃ ಕರಃ, ಜನನೀಕರಸ್ಯ ಅಗ್ರಂ=ಜನನೀಕರಾಗ್ರಂ, ತಸ್ಮಾತ್, ಚಿಚ್ಛೇದ, ಛಿದಿರ್ ದ್ವೈಧೀಕರಣೇ, ಏಳನೆ ಗಣ, ಸಕ. ಲಿಟ್, ಪರ. ಏ. ಚಿಚ್ಛೇದ, ಚಿಚ್ಛಿದತುಃ, ಚಿಚ್ಛಿದುಃ, ಚಿಚ್ಛೇದಿಥ, ಚಿಚ್ಛಿದಥುಃ, ಚಿಚ್ಛಿದ. ಚಿಚ್ಛೇದ, ಚಿಚ್ಛಿದಿವ, ಚಿಚ್ಛಿದಿಮ. ಬಿಭೇದ—ಭಿದಿರ್ ವಿದಾರಣೇ, ಏಳನೆಯ ಗಣ, ಸಕ. ಲಿಟ್, ಪರ, ಪ್ರ. ಏ. ಬಿಭೇದ, ಬಿಭಿದತುಃ, ಬಿಭಿದುಃ. ಬಿಭೇದಿಥ, ಬಿಭಿದಥುಃ, ಬಿಭಿದ. ಬಿಭೇದ, ಬಿಭಿದಿವ, ಬಿಭಿದಿಮ.

ಪುರೇ ಕುಮಾರಾನಲಸಾನ್ ವಿಹಾರಾ-
ನ್ನಿರೀಕ್ಷ್ಯ ಸರ್ವಾನಪಿ ಮಂದಲೀಲಃ ।
ಕೈಶೋರಲೀಲಾಂ ಹತಸಿಂಹಸಂಘಾಂ
ವನೇ ಪ್ರವೃತ್ತಾಂ ಸ್ಮರತಿ ಸ್ಮ ಸೂತ್ಕಃ ॥ ೩೯ ॥

ಅ:—ಪುರೇ ಮಂದಲೀಲಃ ಅಪಿ ವಿಹಾರಾತ್ ಅಲಸಾನ್ ಸರ್ವಾನ್ ಕುಮಾರಾನ್ ನಿರೀಕ್ಷ್ಯ ವನೇ ಪ್ರವೃತ್ತಾಂ ಹತಸಿಂಹಸಂಘಾಂ ಕೈಶೋರ ಲೀಲಾಂ ಸೂತ್ಕಃ ಸ್ಮರತಿ ಸ್ಮ.

Rarest Archiver

ಅ :—ಸಃ = (ಭೀಮಸೇನದೇವರು) ಪುರೇ = ಹಸ್ತಿನಾಪುರದಲ್ಲಿ, ಮಂದಲೀಲಃ ಅಪಿ=ಸ್ವಲ್ಪವೇ ಆಟವುಳ್ಳವರಾದಾಗ್ಯೂ, ವಿಹಾರಾತ್=ಆಟದಿಂದ, ಅಲಸಾನ್=ಆಯಾಸಗೊಂಡ, ಸರ್ವಾನ್=ಎಲ್ಲ, ಕುಮಾರಾನ್= ದುರ್ಯೋಧನ ಮೊದಲಾದ ರಾಜಕುಮಾರರನ್ನು, ನಿರೀಕ್ಷ್ಯ=ನೋಡಿ, ವನೇ =ಕಾಡಿನಲ್ಲಿ, ಪ್ರವೃತ್ತಾಂ=ನಡೆದ, ಹತ=ಕೊಲ್ಲಲ್ಪಟ್ಟ, ಸಿಂಹಸಂಘಾಂ= ಸಿಂಹಗಳ ಗುಂಪುಳ್ಳ, ಕೈಶೋರ=ಬಾಲ್ಯದ, ಲೀಲಾಂ=ಆಟವನ್ನು, ಸೋತ್ಕಃ (ಸನ್) ಅತ್ಯಂತ ಔತ್ಸುಕ್ಯವುಳ್ಳವರಾಗಿ, ಸ್ಮರತಿ ಸ್ಮ=ಸ್ಮರಿಸಿದರು.

ತಾ :—ಈ ಭೀಮಸೇನದೇವರು ಹಸ್ತಿನಾಪಟ್ಟಣದಲ್ಲಿ ದುರ್ಯೋಧನಾದಿಗಳೊಡನೆ ಸಾಮಾನ್ಯವಾಗಿ ಆಡುತ್ತಿದ್ದರು. ಆದರೂ ಆ ದುರ್ಯೋಧನ ಮೊದಲಾದ ರಾಜಕುಮಾರರು ಅದರಿಂದಲೇ ಆಯಾಸಗೊಳ್ಳುತ್ತಿದ್ದರು. ಅದನ್ನು ನೋಡಿ ಈ ಭೀಮಸೇನ ದೇವರು ಹಿಂದೆ ತಾವು ಶತಶೃಂಗ ಪರ್ವತದ ಕಾಡಿನಲ್ಲಿ ಸಿಂಹಗಳೊಡನೆ ಆಡುತ್ತಿದ್ದುದನ್ನು, ಅವುಗಳನ್ನು ಕೊಂದುದನ್ನು ಜ್ಞಾಪಿಸಿಕೊಂಡು ಅಂತಹ ಆಟವಾಡಲು ಉತ್ಸುಕರಾದರು, ಆ ಆಟಗಳನ್ನು ನೆನೆಸಿದರು.

ವ್ಯಾ. ವಿ :—ಮಂದಾ ಲೀಲಾ ಯಸ್ಯ ಸಃ=ಮಂದಲೀಲಃ. ಕಿಶೋರಸ್ಯ ಇಯಂ=ಕೈಶೋರೀ, ಕೈಶೋರೀ ಚ ಸಾ ಲೀಲಾ ಚ=ಕೈಶೋರಲೀಲಾ ತಾಮ್. ಸಿಂಹಾನಾಂ ಸಂಘಾಃ, ಹತಾಃ ಸಿಂಹಸಂಘಾಃ ಯಸ್ಯಾಂ ಸಾ= ಹತಸಿಂಹಸಂಘಾ, ತಾಮ್. ಸ್ಮರತಿ–ಸ್ಮೃ ಚಿಂತಾಯಾಂ, ಒಂದನೆ ಗಣ, ಸಕ. ಲಟ್, ಪರ. ಪ್ರ. ಏ. ಸ್ಮರತಿ, ಸ್ಮರತಃ, ಸ್ಮರಂತಿ. ಸ್ಮರಸಿ, ಸ್ಮರಥಃ, ಸ್ಮರಥ. ಸ್ಮರಾಮಿ, ಸ್ಮರಾವಃ, ಸ್ಮರಾಮಃ.

ಭುಕ್ತಂ ಚ ಜೀರ್ಣಂ ಪರಿಪಂಥಿದತ್ತಂ
ವಿಷಂ ವಿಷಣ್ಣೋ ವಿಷಭೃದ್ಗಣೋಽತಃ ।
ಪ್ರಮಾಣಕೋಟೇಃ ಸ ಹಿ ಹೇಲಯಾಗಾ-
ನ್ನೇದಂ ಜಗಜ್ಜೀವನದೇಽತ್ರ ಚಿತ್ರಮ್ ॥ ೩೦ ॥

ಅ :—ಪರಿಪಂಥಿದತ್ತಂ ವಿಷಂ ಭುಕ್ತಂ ಚ ಜೀರ್ಣಂ. ಅತಃ ವಿಷಭೃದ್ಗಣಃ ವಿಷಣ್ಣಃ. ಸಃ ಪ್ರಮಾಣಕೋಟೇಃ ಹೇಲಯಾ ಅಗಾತ್ ಹಿ. ಇದಂ ಜಗಜ್ಜೀವನದೇ ಅತ್ರ ಚಿತ್ರಂ ನ.

Rarest Archiver

ಅ :—ಪರಿಪಂಥಿ=ಶತ್ರುಗಳಾದ ದುರ್ಯೋಧನ ಮೊದಲಾದವರಿಂದ, ದತ್ತಂ=ಕೊಡಲ್ಪಟ್ಟ, ವಿಷಂ=ವಿಷವು, ಭುಕ್ತಂ ಚ = ತಿನ್ನಲ್ಪಟ್ಟರೂ, ಜೀರ್ಣಂ=ಜೀರ್ಣವಾಯಿತು. ಅತಃ=ಈ ಭೀಮಸೇನದೇವರಿಂದ, ವಿಷಭೃದ್ಗಣಃ=ಹಾವುಗಳ ಸಮೂಹವು, ವಿಷಣ್ಣಃ=ವ್ಯಥೆಗೊಳಿಸಲ್ಪಟ್ಟಿತು. ಸಃ=ಅವರು, ಪ್ರಮಾಣಕೋಟೇಃ=ಕೋಟಿ ಗಾವುದ ಆಳವಾದ ಪ್ರಮಾಣಕೋಟಿಯೆಂಬ ಮಡುವಿನಿಂದ, ಹೇಲಯಾ=ಅನಾಯಾಸದಿಂದ, ಆಗಾತ್ಹಿ=ಬಂದರಷ್ಟೆ. ಇದಂ=ಇದು, ಜಗತ್=ಲೋಕಕ್ಕೆ, ಜೀವನದೇ=ಜೀವನವನ್ನು ಕೊಡುವ ಮುಖ್ಯಪ್ರಾಣರೂಪರಾದ, ಅತ್ರ=ಈ ಭೀಮಸೇನದೇವರಲ್ಲಿ, ಚಿತ್ರಂ=ಆಶ್ಚರ್ಯಕರವಾದುದು, ನ=ಅಲ್ಲ.

ತಾ :—ದುರ್ಯೋಧನಾದಿಗಳು ಈ ಭೀಮಸೇನದೇವರನ್ನು ಕೊಲ್ಲುವುದಕ್ಕಾಗಿ ಅಡಿಗೆಯವರ ಮೂಲಕ ವಿಷಮಿಶ್ರಿತವಾದ ಭಕ್ಷ್ಯಗಳನ್ನು ಅವರಿಗೆ ಕೊಟ್ಟರು. ಅವರು ಅದನ್ನು ತಿಂದು ಜೀರ್ಣಿಸಿಕೊಂಡರು. ಮಲಗಿರುವ ಅವರನ್ನು ಕಚ್ಚಲು ಶತ್ರುಗಳು ಸಾರಥಿಯ ಮೂಲಕ ಪ್ರಯೋಗಿಸಿದ ಹಾವುಗಳನ್ನು ಅವರು ಸಾರಥಿ ಸಹಿತವಾಗಿ ಗುದ್ದಿ ಪುಡಿ ಮಾಡಿ ಕೊಂದರು. ಶತ್ರುಗಳು ಅವರನ್ನು ಪ್ರಮಾಣಕೋಟಿಯೆಂಬ ಆಳವಾದ ಮಡುವಿಗೆ ನೂಕಿದರು. ಅವರು ಅದರಿಂದ ಆಯಾಸವಿಲ್ಲದೆ ಮೇಲೆ ಬಂದರು. ಇದು ಪ್ರಪಂಚದ ಜಂತುಗಳಿಗೆ ಜೀವನವನ್ನೀಯುವ ಮುಖ್ಯಪ್ರಾಣದೇವರ ವಿಷಯದಲ್ಲಿ ಆಶ್ಚರ್ಯವಲ್ಲ.

ವ್ಯಾ.ವಿ :—ಪರಿಪಂಥಿಭಿಃ ದತ್ತಂ=ಪರಿಪಂಥಿದತ್ತಮ್. ವಿಷಂ ಬಿಭರ್ತೀತಿ=ವಿಷಭೃತಃ, ವಿಷಭೃತಾಂ ಗಣಃ=ವಿಷಭೃದ್ಗಣಃ. ಪ್ರಮಾಣೇನ ಕೋಟಿಃ ಯಸ್ಯ ಸಃ=ಪ್ರಮಾಣಕೋಟಿಃ, ತಸ್ಮಾತ್. ಜೀವನಂ ದದಾತೀತಿ=ಜೀವನದಃ, ಜಗತಃ ಜೀವನದಃ=ಜಗಜ್ಜೀವನದಃ, ತಸ್ಮಿನ್. ಆಗಾತ್-ಇಣ್ ಗತೌ, ಎರಡನೆ ಗಣ, ಸಕ. ಲುಙ್, ಪರ. ಪ್ರ. ಏ. ಆಙ್ ಉಪಸರ್ಗ, ಆ+ಅಗಾತ್, ಅಗಾತಾಂ, ಅಗುಃ ಅಗಾಃ, ಅಗಾತಂ, ಅಗಾತ. ಅಗಾಂ, ಅಗಾವ, ಅಗಾಮ.

ದಗ್ಧ್ವಾ ಪುರಂ ಯೋಗಬಲಾತ್ ಸ ನಿರ್ಯನ್
ಧರ್ಮಾನಿವ ಸ್ವಾನ್ ಸಹಜಾನ್ ದಧಾನಃ ।

Rarest Archiver

ಅದಾರಿಭಾವೇನ ಜಗತ್ಸು ಪೂಜ್ಯೋ
ಯೋಗೀವ ನಾರಾಯಣಮಾಸಸಾದ || ೩೨ ||

ಅ :—ಯೋಗಬಲಾತ್ ಪುರಂ ದಗ್ಧ್ವಾ ನಿರ್ಯನ್ ಸ್ವಾನ್ ಸಹಜಾನ್ ಧರ್ಮಾನ್ ಇವ ದಧಾನಃ ಅದಾರಿಭಾವೇನ ಜಗತ್ಸು ಪೂಜ್ಯಃ ಸ ಯೋಗೀ ಇವ ನಾರಾಯಣಂ ಆಸಸಾದ.

ಅ:—ಯೋಗ=ಉಪಾಯದ, ಸಮಾಧಿಯ ಪಶ್ಚಾವಸ್ಥೆಯ, ಬಲಾತ್=ಸಾಮರ್ಥ್ಯದಿಂದ, ಪುರಂ=ಅರಗಿನ ಮನೆಯನ್ನು, ಶತ್ರು ಪಟ್ಟಣವನ್ನು, ದೇಹವನ್ನು, ದಗ್ಧ್ವಾ=ಸುಟ್ಟು, ನಿರ್ಯನ್=ಹೊರಡುತ್ತ, ಸ್ವಾನ್=ತನ್ನ, ಸಹಜಾನ್=ಸಹೋದರರನ್ನು, ಜೊತೆಗೆ ಉಂಟಾದ, ಧರ್ಮಾನ್ ಇವ=ಧರ್ಮಗಳನ್ನು ಎಂಬಂತೆ, ದಧಾನಃ=ಧರಿಸುತ್ತಿರುವ, ಅದಾರಿಭಾವೇನ=ಹಿಡಿಂಬರಾಕ್ಷಸನ ಶತ್ರುತ್ವದಿಂದ, ಶತ್ರುಗಳಿಂದ ಸೋಲಿಲ್ಲದಿರುವುದರಿಂದ, ದೇಹದ ಸೀಳುವಿಕೆಯಿಲ್ಲದಿರುವುದರಿಂದ, ಜಗತ್ಸು=ಲೋಕಗಳಲ್ಲಿ, ಪೂಜ್ಯಃ=ಮಾನ್ಯರಾದ, ಸಃ=ಆ ಭೀಮಸೇನದೇವರು, ಯೋಗೀ ಇವ=ಉಪಾಯವುಳ್ಳ ಗೂಢಚಾರನಂತೆ, ಯೋಗಾಭ್ಯಾಸ ಮಾಡಿದವನಂತೆ, ನಾರಾಯಣಂ=ವೇದವ್ಯಾಸರನ್ನು, ಸ್ವಾಮಿಯನ್ನು, ವಿಷ್ಣುವನ್ನು, ಆಸಸಾದ=ಹೊಂದಿದರು.

ತಾ :—ಉಪಾಯವುಳ್ಳ ಗೂಢಚಾರನು ತನ್ನ ಉಪಾಯದ ಸಾಮರ್ಥ್ಯದಿಂದ ಶತ್ರು ಪಟ್ಟಣವನ್ನು ಸುಟ್ಟು ಅಲ್ಲಿಂದ ಹೊರಡುವನು. ಅದೃಷ್ಟ ಬಲದಿಂದ ಶತ್ರುಗಳ ಬಾಧೆಯಿಲ್ಲದೆ ಪ್ರಪಂಚದಲ್ಲಿ ಪೂಜ್ಯನಾಗಿ ತನ್ನ ಸ್ವಾಮಿಯನ್ನು ಸೇರುವನು. ಯೋಗಾಭ್ಯಾಸ ಮಾಡಿದ ಯೋಗಿಯೂ ಧ್ಯಾನ ಶಕ್ತಿಯಿಂದ ತನ್ನ ಶರೀರವನ್ನು ಸುಟ್ಟು ಹೊರಟು ಪುಣ್ಯವಿಶೇಷದಿಂದ ಶರೀರ ಸೀಳುವಿಕೆಯಿಲ್ಲದೆ ಪ್ರಪಂಚಪೂಜ್ಯನಾಗಿ ಬಿಂಬರೂಪಿಯಾದ ನಾರಾಯಣನನ್ನು ಸೇರುವನು. ಹಾಗೆಯೇ ಈ ಭೀಮಸೇನದೇವರು ಉಪಾಯದ ಬಲದಿಂದ ದುರ್ಯೋಧನನು ತಮ್ಮನ್ನು ಕೊಲ್ಲಲು ನಿರ್ಮಿಸಿದ ಅರಗಿನ ಮನೆಯನ್ನು ಸುಟ್ಟರು. ಅಲ್ಲಿಂದ ಸಹೋದರರನ್ನು ಹೊತ್ತುಕೊಂಡು ಹೊರಟು ಹಿಡಿಂಬ ರಾಕ್ಷಸನನ್ನು ಕೊಂದು ಪ್ರಪಂಚದಲ್ಲಿ ಪೂಜ್ಯರಾದರು. ಮತ್ತು ಹಿಡಿಂಬೆಯನ್ನು ಮದುವೆಯಾಗಲು ಒಪ್ಪಿಸುವುದಕ್ಕೆ ಅಲ್ಲಿಗೆ ಬಂದ ವೇದವ್ಯಾಸರ ಹತ್ತಿರ ತೆರಳಿದರು, ಅವರನ್ನು ಸಮೀಪಿಸಿದರು.

Rarest Archives

ವ್ಯಾ.ವಿ. :—ಯೋಗಃ ಏವ ಬಲಂ=ಯೋಗಬಲ, ತಸ್ಮಾತ್. ಅದಸ್ಯ ಅರಿಭಾವಃ=ಅದಾರಿಭಾವಃ, ತೇನ. ಆಸಸಾದ-ಷದ್ಲೃ ವಿಶರಣಗತ್ಯ-ವಸಾದನೇಷು, ಒಂದನೆ ಗಣ, ಸಕ. ಲಿಟ್, ಪರ.ಪ್ರ.ಏ.ಆಙ್ ಉಪಸರ್ಗ. ಆ+ಸಸಾದ, ಸೇದತುಃ, ಸೇದುಃ. ಸೇದಿಥ ಸಸತ್ಥ, ಸೇದಥುಃ, ಸೇದ. ಸಸಾದ ಸಸದ, ಸೇದಿವ, ಸೇದಿಮ.

ಸಮರ್ಪ್ಯ ಕೃತ್ಯಾನಿ ಕೃತೀ ಕೃತಾನಿ
ವ್ಯಾಸಾಯ ಭೂಮ್ನೇ ಸುಕೃತಾನಿ ತಾವತ್ ।
ಕರಿಷ್ಯಮಾಣಾನಿ ಚ ತಸ್ಯ ಪೂಜಾಂ
ಸಂಕಲ್ಪಯಾಮಾಸ ಶುದ್ಧಬುದ್ಧಿಃ ॥ ೩೩ ॥

ಅ :—ಕೃತೀ ಶುದ್ಧಬುದ್ಧಿಃ ಸಃ ಸುಕೃತಾನಿ ಕೃತ್ಯಾನಿ ಕೃತಾನಿ ಭೂಮ್ನೇ ವ್ಯಾಸಾಯ ತಾವತ್ ಸಮರ್ಪ್ಯ ಕರಿಷ್ಯಮಾಣಾನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ.

ಅ :—ಕೃತೀ = ಚತುರರಾದ, ಶುದ್ಧಬುದ್ಧಿಃ = ಯಾವಾಗಲೂ ಭಗವಂತನಲ್ಲಿಡಲ್ಪಟ್ಟ ಮನಸ್ಸುಳ್ಳ, ಸಃ= ಆ ಭೀಮಸೇನದೇವರು, ಸುಕೃತಾನಿ =ಚೆನ್ನಾಗಿ ಮಾಡಲ್ಪಟ್ಟ, ಕೃತ್ಯಾನಿ=ಮಾಡಲು ಯೋಗ್ಯವಾದ, ಕೃತಾನಿ =ಕಾರ್ಯಗಳನ್ನು, ಭೂಮ್ನೇ=ಪೂರ್ಣರಾದ, ವ್ಯಾಸಾಯ=ವೇದವ್ಯಾಸರಿಗೆ, ತಾವತ್=ಪೂರ್ತಿಯಾಗಿ, ಸಮರ್ಪ್ಯ=ಒಪ್ಪಿಸಿ, ಕರಿಷ್ಯಮಾಣಾನಿ ಚ= ಮುಂದೆ ಮಾಡುವ ಕಾರ್ಯಗಳನ್ನೂ, ತಸ್ಯ=ಆ ವ್ಯಾಸರ, ಪೂಜಾಂ=ಪೂಜೆ ಯನ್ನಾಗಿ, ಸಂಕಲ್ಪಯಾಮಾಸ=ಆಲೋಚನೆ ಮಾಡಿದರು. (ತಿಳಿದರು, ಸಂಕಲ್ಪಿಸಿದರು).

ತಾ :—ಕುಶಲರೂ, ಭಗವದ್ವಿಷಯಕವಾದ ಬುದ್ಧಿಯುಳ್ಳವರೂ ಆದ ಆ ಭೀಮಸೇನದೇವರು ತಾವು ಮಾಡಿದ ಹಿಡಿಂಬನ ಸಂಹಾರ ಮೊದಲಾದ ಕಾರ್ಯಗಳನ್ನು ಗುಣಪೂರ್ಣರಾದ ವ್ಯಾಸರಿಗೆ ಸಮರ್ಪಿಸಿದರು. ಮುಂದೆ ತಾವು ಮಾಡುವ ಬಕಾಸುರನ ವಧೆ ಮೊದಲಾದ ಕಾರ್ಯಗಳೂ ಆ ವ್ಯಾಸರ ಪೂಜೆ ಯೆಂದೇ ಭಾವಿಸಿದರು.

ವ್ಯಾವಿ. :—ಶುದ್ಧಾ ಬುದ್ಧಿಃ ಯಸ್ಯ ಸಃ=ಶುದ್ಧಬುದ್ಧಿಃ. ಸಂಕಲ್ಪ-ಯಾಮಾಸ-ಕೃಪೂ ಸಾಮರ್ಥ್ಯೇ, ಒಂದನೆ ಗಣ, ಸಕ. ಲಿಟ್, ಣಿಜನ್ತ, ಪರ.

Rarest Archiver

ಲಿಟ್ ಪ್ರ. ಪು. ಏಕ. ಸಂ. ಉಪಸರ್ಗ. ಸಂ+ಕಲ್ಪಯಾಮಾಸ, ಕಲ್ಪಯಾ-ಮಾಸತುಃ, ಕಲ್ಪಯಾಮಾಸುಃ. ಕಲ್ಪಯಾಮಾಸಿಥ, ಕಲ್ಪಯಾಮಾಸಥುಃ, ಕಲ್ಪಯಾಮಾಸ. ಕಲ್ಪಯಾಮಾಸ, ಕಲ್ಪಯಾಮಾಸಿವ, ಕಲ್ಪಯಾಮಾಸಿಮ.

ವಿಷ್ಣೋಃ ಪದಶ್ರಿದ್ಬಕಸನ್ನಿರಾಸೀ
ಕ್ಷಿಪ್ತಾನ್ಯಪಕ್ಷಿಪ್ರಕರಃ ಸುಪಕ್ಷಃ ।
ಸಸೋದರೋಽಥಾದಿತ ರಾಜಹಂಸಃ
ಸ ರಾಜಹಂಸೀಮಿವ ರಾಜಕನ್ಯಾಮ್ ॥೩೪॥

ಅ :—ಅಥ ವಿಷ್ಣೋಃ ಪದಶ್ರಿತ್ ಬಕಸನ್ನಿರಾಸೀ ಕ್ಷಿಪ್ತಾನ್ಯಪಕ್ಷಿ-ಪ್ರಕರಃ ಸುಪಕ್ಷಃ ಸಸೋದರಃ ಸಃ ರಾಜಹಂಸಃ ರಾಜಹಂಸೀಂ ಇವ ರಾಜ-ಕನ್ಯಾಂ ಆದಿತ.

ಅ :—ಅಥ=ತರುವಾಯ, ವಿಷ್ಣೋಃ = ಶ್ರೀಮನ್ನಾರಾಯಣನ, ಪದಶ್ರಿತ್=ಪಾದವನ್ನು ಆಶ್ರಯಿಸಿದ, ಅವಕಾಶವನ್ನು ಆಶ್ರಯಿಸಿದ, ಬಕ =ಬಕಾಸುರನನ್ನು, ಕೊಕ್ಕರೆಯನ್ನು, ಸನ್ನಿರಾಸೀ=ಕೊಂದ, ಕ್ಷಿಪ್ತ=ನಿರಾ ಕರಿಸಿದ, ಅನ್ಯಪಕ್ಷಿಪ್ರಕರಃ=ಶತ್ರುಪಕ್ಷದವರ ಸಹಾಯಕರುಳ್ಳ, ಅಥವಾ ಬೇರೆ ಸಿದ್ಧಾಂತಗಳ ಸಮೂಹವುಳ್ಳ, ಇತರ ಹಕ್ಕಿಗಳ ಗುಂಪುಗಳುಳ್ಳ, ಸುಪಕ್ಷಃ= ಶ್ರೀಕೃಷ್ಣನ ಸಹಾಯವುಳ್ಳ, ಅಥವಾ ಒಳ್ಳೆ ಸಿದ್ಧಾಂತವುಳ್ಳ, ಒಳ್ಳೆ ರೆಕ್ಕೆ ಯುಳ್ಳ, ಸಸೋದರಃ=ಅಣ್ಣ ತಮ್ಮಂದಿರಿಂದ ಕೂಡಿದ, ಸಃ=ಆ ಭೀಮಸೇನ ದೇವರು, ರಾಜಹಂಸಃ=ರಾಜಹಂಸಪಕ್ಷಿಯು, ರಾಜಹಂಸೀಂ ಇವ=ಹೆಣ್ಣು ರಾಜಹಂಸ ಪಕ್ಷಿಯನ್ನೋಪಾದಿಯಲ್ಲಿ, ರಾಜಕನ್ಯಾಂ=ದ್ರುಪದ ರಾಜನ ಮಗಳಾದ ದ್ರೌಪದಿಯನ್ನು, ಆದಿತ=ಪಡೆದರು.

ತಾ :—ಹಂಸವು ಆಕಾಶದಲ್ಲಿ ಹಾರುವುದು. ಕೊಕ್ಕರೆಗಳನ್ನು ಓಡಿಸು ವುದು. ಇತರ ಪಕ್ಷಿಗಳ ಗುಂಪನ್ನು ಚದುರಿಸುವುದು. ಸುಂದರ ರೆಕ್ಕೆಯುಳ್ಳ ಅಂತಹ ಹಂಸವು ಹೆಣ್ಣುಹಂಸವನ್ನು ತನಗೆ ಸಹಚಾರಿಣಿಯನ್ನಾಗಿ ಮಾಡಿ ಕೊಳ್ಳುವುದು. ಅಂತೆಯೇ ಭೀಮಸೇನದೇವರು ಶ್ರೀಮನ್ನಾರಾಯಣನ ಭಕ್ತರು ಬಕಾಸುರನನ್ನು ಕೊಂದವರು. ಇತರ ಸಿದ್ಧಾಂತಗಳನ್ನು ಖಂಡಿಸಿದವರು. ಒಳ್ಳೆ

Rarest Archives

ಸಿದ್ಧಾಂತವನ್ನು ಸ್ಥಾಪಿಸಿದವರು. ಅಂತಹ ಭೀಮಸೇನದೇವರು ಅಣ್ಣ ತಮ್ಮಂದಿರೊಡನೆ ದ್ರುಪದರಾಜ ಕುವರಿ ದ್ರೌಪದಿಯನ್ನು ಮದುವೆಯಾದರು.

ವ್ಯಾ.ವಿ. :—ಶ್ರಯತೇ ಇತಿ=ಶ್ರಿತ್. ಪದಸ್ಯ ಶ್ರಿತ್=ಪದಶ್ರಿತ್. ಸಮ್ಯಕ್ ನಿರಸನಂ ಶೀಲಂ ಅಸ್ಯೇತಿ=ಸನ್ನಿರಾಸೀ. ಬಕಸ್ಯ ಸನ್ನಿರಾಸೀ= ಬಕಸನ್ನಿರಾಸೀ. ಅನ್ಯೇ ಚ ತೇ ಪಕ್ಷಿಣಶ್ಚ, ಅನ್ಯಪಕ್ಷಿಣಾಂ ಪ್ರಕರಃ=ಅನ್ಯ-ಪಕ್ಷಿಪ್ರಕರಃ, ಕ್ಷಿಪ್ತಃ ಅನ್ಯಪಕ್ಷಿಪ್ರಕರಃ ಯೇನ ಸಃ=ಕ್ಷಿಪ್ತಾನ್ಯಪಕ್ಷಿಪ್ರಕರಃ. ಶೋಭನಃ ಪಕ್ಷಃ ಯಸ್ಯ ಸಃ=ಸುಪಕ್ಷಃ. ಸೋದರೇಣ ಸಹಿತಃ=ಸಸೋದರಃ. ಹಂಸಾನಾಂ ರಾಜಾ=ರಾಜಹಂಸಃ. ರಾಜ್ಞಃ ಕನ್ಯಾ=ರಾಜಕನ್ಯಾ, ತಾಮ್. ಆದಿತ=ಡುದಾಞ್ ದಾನೇ, ಮೂರನೇ ಗಣ, ಸಕ. ಲುಙ್, ಆತ್ಮ. ಪ್ರ.ಪು. ಆಙ್ ಉಪಸರ್ಗ. ಆ+ಅದಿತ, ಅದಿಷಾತಾಂ, ಅದಿಷತ. ಅದಿಥಾಃ ಅದಿಷಾ-ಥಾಂ, ಅದಿಧ್ವಂ ಅದಿಢ್ವಂ. ಅದಿಷಿ ಅದಿಷ್ವಹಿ, ಅದಿಷ್ಮಹಿ.

ಇಂದೀವರಶ್ರೀಜಯಿಸುಂದರಾಭಂ
ಸ್ಮೇರಾನನೇಂದುಂ ದಯಿತಂ ಮುಕುಂದಮ್ ।
ಸ್ವಮಾತುಲೇಯಂ ಕಮಲಾಯತಾಕ್ಷಂ
ಸಮಭ್ಯನಂದತ್ಸುಚಿರಾಯ ಭೀಮಃ ॥ ೩೫ ॥

ಅ :—ಭೀಮಃ ಇಂದೀವರಶ್ರೀಜಯಿಸುಂದರಾಭಂ ಸ್ಮೇರಾನನೇಂದುಂ ದಯಿತಂ ಸ್ವಮಾತುಲೇಯಂ ಕಮಲಾಯತಾಕ್ಷಂ ಮುಕುಂದಂ ಸುಚಿರಾಯ ಸಮಭ್ಯನಂದತ್.

ಅ :—ಭೀಮಃ=ಭೀಮಸೇನದೇವರು, ಇಂದೀವರಶ್ರೀ=ಕನ್ನೈದಿಲೆ ಹೂವಿನ ಕಾಂತಿಯನ್ನು, ಜಯಿ=ಜಯಿಸುವ, ಸುಂದರ=ಮನೋಹರ ವಾದ, ಆಭಂ=ಕಾಂತಿಯುಳ್ಳ, ಸ್ಮೇರ=ಮುಗುಳು ನಗೆಯಿಂದ ಕೂಡಿರುವ, ಆನನ=ಮುಖವೆಂಬ, ಇಂದುಂ=ಚಂದ್ರನುಳ್ಳ, ದಯಿತಂ=ಅತ್ಯಂತ ಪ್ರಿಯ ನಾದ, ಸ್ವ=ತನ್ನ, ಮಾತುಲೇಯಂ=ಸೋದರಮಾವನಾದ ವಸುದೇವನ ಮಗನಾದ, ಕಮಲ=ತಾವರೆಹೂವಿನಂತೆ, ಆಯತ=ವಿಶಾಲವಾದ, ಅಕ್ಷಂ =ಕಣ್ಣುಳ್ಳ, ಮುಕುಂದಂ=ಶ್ರೀಕೃಷ್ಣನನ್ನು (ನೋಡಿ), ಸುಚಿರಾಯ= ಬಹಳ ಹೊತ್ತು, ಸಮಭ್ಯನಂದತ್ = ಸಂತೋಷಗೊಂಡರು. ಅಥವಾ

Rarest Archive

ಮುಕುಂದಂ=ಶ್ರೀಕೃಷ್ಣನನ್ನು, ಸುಚಿರಾಯ=ಬಹಳಹೊತ್ತು, ಸಮಭ್ಯನಂದತ್=ಸಂತೋಷಗೊಳಿಸಿದರು.

ತಾ :—ಈ ಭೀಮಸೇನದೇವರು ದ್ರೌಪದಿಯ ಸ್ವಯಂವರದಲ್ಲಿ, ಕನ್ನೈದಿಲೆ ಹೂವಿನಂತೆ ನೀಲವರ್ಣನೂ, ಮುಗುಳ್ನಗೆಯ ಮುಖವುಳ್ಳವನೂ, ತಮಗೆ ಅತ್ಯಂತ ಪ್ರಿಯನೂ, ತಮ್ಮ ಸೋದರಮಾವನಾದ ವಸುದೇವನ ಮಗನೂ, ತಾವರೆಯಂತೆ ವಿಶಾಲವಾದ ಕಣ್ಣುಗಳುಳ್ಳವನೂ ಆದ ಶ್ರೀಕೃಷ್ಣನನ್ನು ನೋಡಿ ಬಹಳ ಹೊತ್ತು ಆನಂದಗೊಂಡರು. (ಅಥವಾ ದ್ರೌಪದೀ ಸ್ವಯಂವರದಲ್ಲಿ ತಮ್ಮ ಮೇಲೆ ಯುದ್ಧಮಾಡಲು ಬಂದ ರಾಜರನ್ನು ಸೋಲಿಸಿ ಶ್ರೀಕೃಷ್ಣನನ್ನು ಸಂತೋಷಗೊಳಿಸಿದರು.)

ವ್ಯಾ.ವಿ. :—ಇಂದೀವರಸ್ಯ ಶ್ರೀಃ, ಇಂದೀವರಶ್ರಿಯಂ ಜಯತಿ ತಾಚ್ಛೀಲ್ಯೇನೇತಿ, ಇಂದೀವರಶ್ರೀಜಯಿನೀ ಸುಂದರೀ ಆಭಾ ಯಸ್ಯ ಸಃ= ಇಂದೀವರಶ್ರೀಜಯಿಸುಂದರಾಭಃ, ತಮ್. ಆನನಂ ಇಂದುಃ ಇವ, ಸ್ಮೇರಃ ಆನನೇಂದುಃ ಯಸ್ಯ ಸಃ=ಸ್ಮೇರಾನನೇಂದುಃ, ತಮ್. ಮಾತುಲಸ್ಯ ಅಪತ್ಯಂ ಪುಮಾನ್=ಮಾತುಲೇಯಃ, ಸ್ವಸ್ಯ ಮಾತುಲೇಯಃ=ಸ್ವಮಾತುಲೇಯಃ, ತಮ್. ಕಮಲೇ ಇವ ಆಯತೇ, ಕಮಲಾಯತೇ ಅಕ್ಷಿಣೀ ಯಸ್ಯ ಸಃ= ಕಮಲಾಯತಾಕ್ಷಃ, ತಮ್. ಕಮಲಾಯತಾಕ್ಷಃ – 'ಬಹುವ್ರೀಹೌ ಸಕ್ಥ್ಯಕ್ಷ್ಣೋಃ ಸ್ವಾಂಗಾತ್ಷಚ್' ಈ ಸೂತ್ರದಿಂದ ಬಹುವ್ರೀಹಿಸಮಾಸದಲ್ಲಿ ಅಕ್ಷಿಶಬ್ದವು ಅಕಾರಾನ್ತವಾಗಿದೆ, ಸಮಭ್ಯನಂದತ್–ಟು ನದಿ ಸಮೃದ್ಧೌ, ಒಂದನೆ ಗಣ, ಅಕ. ಲಙ್, ಪರ. ಪ್ರ. ಏ. ಸಮ್ ಅಭಿ ಉಪಸರ್ಗಗಳು. ಸಮಭಿ+ಆನಂದತ್ ; ಅನಂದತಾಂ, ಅನಂದನ್. ಅನಂದಃ, ಅನಂದತಂ, ಅನಂದತ. ಅನಂದಂ, ಅನಂದಾವ, ಅನಂದಾಮ.

ಮಹಾಗದಂ ಚಂಡರಣಂ ಪೃಥಿವ್ಯಾಂ
ಬಾರ್ಹದ್ರಥಂ ಮಂಕ್ಷು ನಿರಸ್ಯ ವೀರಃ ।
ರಾಜಾನಮತ್ಯುಜ್ಜ್ವಲರಾಜಸೂಯಂ
ಚಕಾರ ಗೋವಿಂದಸುರೇಂದ್ರಜಾಭ್ಯಾಮ್ ॥ ೩೬ ॥

ಅ :—ವೀರಃ ಮಹಾಗದಂ ಪೃಥಿವ್ಯಾಂ ಚಂಡರಣಂ ಬಾರ್ಹದ್ರಥಂ

Rarest Archiver

ಗೋವಿಂದಸುರೇಂದ್ರಜಾಭ್ಯಾಂ ಮಂಕ್ಷು ನಿರಸ್ಯ ರಾಜಾನಾಂ ಅತ್ಯುಜ್ಜ್ವಲರಾಜ ಸೂಯಂ ಚಕಾರ.

ಅ:—ವೀರಃ—ಪರಾಕ್ರಮಶಾಲಿಗಳಾದ ಭೀಮಸೇನದೇವರು, ಮಹಾ ಗದಂ—ದೊಡ್ಡ ಗದೆಯುಳ್ಳ, ಪೃಥಿವ್ಯಾಂ—ಭೂಮಿಯಲ್ಲಿ, ಚಂಡರಣಂ— ಕಠಿನ ಯುದ್ಧವುಳ್ಳ, ಬಾರ್ಹದ್ರಥಂ—ಬೃಹದ್ರಥರಾಜನ ಮಗನಾದ ಜರಾಸಂಧ ನನ್ನು, ಅಥವಾ ಮಹಾಗದಂ—ದೊಡ್ಡ ಪರ್ವತವನ್ನು ಒಡೆಯುವ, ಬಾರ್ಹ- ದ್ರಥಂ—ದೊಡ್ಡ ರಥವುಳ್ಳ, ಚಂಡರಣಂ—ಕಠಿನವಾದ ಕೀಚಕ ಮೊದಲಾ ದವರ ಯುದ್ಧವನ್ನು, ಗೋವಿಂದ—ಕೃಷ್ಣ, ಸುರೇಂದ್ರಜಾಭ್ಯಾಂ—ಅರ್ಜುನ ಇವರೊಡನೆ, ಮಂಕ್ಷು—ಬೇಗನೆ, ನಿರಸ್ಯ—ಕೊಂದು, ನಿವಾರಿಸಿ, ರಾಜಾನಂ —ಯುಧಿಷ್ಠಿರನನ್ನು, ಅತ್ಯುಜ್ಜ್ವಲ—ಅತ್ಯಂತ ಪ್ರಕಾಶಮಾನವಾದ, ರಾಜ- ಸೂಯಂ—ರಾಜಸೂಯಯಾಗವುಳ್ಳವನನ್ನಾಗಿ. ಚಕಾರ—ಮಾಡಿದರು.

ತಾ:—ಪರಾಕ್ರಮಶಾಲಿಗಳಾದ ಈ ಭೀಮಸೇನದೇವರು ಕೃಷ್ಣಾರ್ಜುನ ನರೊಡನೆ ಭೂಮಿಯಲ್ಲಿ ದೊಡ್ಡ ಗದೆಯನ್ನು ಹಿಡಿದು ಭಯಂಕರ ಯುದ್ಧ ವನ್ನು ಮಾಡುತ್ತಿದ್ದ ಬೃಹದ್ರಥನ ಮಗನಾದ ಜರಾಸಂಧನನ್ನು ಬೇಗನೆ ಕೊಂದರು. ದೊಡ್ಡರಥಗಳಿಂದ ಕೂಡಿದ, ಪರ್ವತಗಳನ್ನೂ ಭೇದಿಸುವ ಕೀಚಕ ಮೊದಲಾದವರನ್ನು ಯುದ್ಧದಲ್ಲಿ ಓಡಿಸಿದರು. ಅನಂತರ ಅಣ್ಣ ಧರ್ಮರಾಜ ನಿಂದ ಶಾಸ್ತ್ರವಿಧಿಯಿಂದ ಶೋಭಿಸುವ ರಾಜಸೂಯ ಯಾಗವನ್ನು ಮಾಡಿ ಸಿದರು.

ವ್ಯಾ.ವಿ: ಮಹತೀ ಗದಾ ಯಸ್ಯ ಸಃ—ಮಹಾಗದಃ, ತಮ್. ಚಂಡಃ ರಣಃ ಯಸ್ಯ ಸಃ—ಚಂಡರಣಃ, ಚಂಡಾನಾಂ ರಣಃ, ತಮ್. ಬೃಹದ್ರಥಸ್ಯ ಅಪತ್ಯಂ ಪುಮಾನ್—ಬಾರ್ಹದ್ರಥಃ, ತಮ್. ಅತ್ಯುಜ್ಜ್ವಲಃ ರಾಜಸೂಯಃ ಯಸ್ಯಸಃ ತಂ, ಸುರಾಣಾಂ ಇಂದ್ರಃ, ಸುರೇಂದ್ರಾತ್ ಜಾಯತೇಇತಿ — ಸುರೇಂದ್ರಜಃ, ಗೋವಿಂದಶ್ಚ ಸುರೇಂದ್ರಜಶ್ಚ—ಗೋವಿಂದಸುರೇಂದ್ರಜೌ, ತಾಭ್ಯಾಮ್. ಚಕಾರ—ಡು ಕೃಞ್ ಕರಣೇ, ಎಂಟನೆ ಗಣ, ಲಿಟ್, ಪರ. ಪ್ರ. ಏ. ಚಕಾರ, ಚಕ್ರತುಃ, ಚಕ್ರುಃ. ಚಕರ್ಥ, ಚಕ್ರಥುಃ, ಚಕ್ರ. ಚಕಾರ ಚಕರ, ಚಕೃವ, ಚಕೃಮ. ಮಂಕ್ಷು—ಅವ್ಯಯ. ದ್ರಾಕ್‌ಮಂಕ್ಷು ಸಪದಿದ್ರುತೇ —ಅಮರ.

Rarest Archiver

ದುಶ್ಶಾಸನೇನಾಕುಲಿತಾನ್ ಪ್ರಿಯಾಯಾಃ
ಸೂಕ್ಷ್ಮಾನರಾಲಾನಸಿತಾಂಶ್ಚ ಕೇಶಾನ್ ।
ಜಿಘಾಂಸಯಾ ವೈರಿಜನಸ್ಯ ತೀಕ್ಷ್ಣಃ
ಸ ಕೃಷ್ಣಸರ್ಪಾನಿವ ಸಂಚಿಕಾಯ ||೩೭||

ಅ :—ಸಃ ದುಶ್ಶಾಸನೇನ ಆಕುಲಿತಾನ್ ಸೂಕ್ಷ್ಮಾನ್ ಅರಾಲಾನ್ ಅಸಿತಾನ್ ಪ್ರಿಯಾಯಾಃ ಕೇಶಾನ್ ವೈರಿಜನಸ್ಯ ಜಿಘಾಂಸಯಾ ತೀಕ್ಷ್ಣಃ ಕೃಷ್ಣಸರ್ಪಾನ್ ಇವ ಸಂಚಿಕಾಯ.

ಅ:—ಸಃ = ಆ ಭೀಮಸೇನದೇವರು, ದುಶ್ಶಾಸನೇನ = ದುಶ್ಶಾಸನನಿಂದ, ಆಕುಲಿತಾನ್ = ಕೆದರಿಸಲ್ಪಟ್ಟ, ಸೂಕ್ಷ್ಮಾನ್ = ಮೃದುವಾದ, ಅರಾಲಾನ್ = ಗುಂಗುರಾಗಿರುವ, ಅಸಿತಾನ್ = ಕಪ್ಪಾದ, ಪ್ರಿಯಾಯಾಃ = ಧರ್ಮಪತ್ನಿಯಾದ ದ್ರೌಪದಿಯ, ಕೇಶಾನ್ = ತಲೆಕೂದಲುಗಳನ್ನು, ವೈರಿಜನಸ್ಯ = ಶತ್ರುಗಳ, ಜಿಘಾಂಸಯಾ = ಕೊಲ್ಲುವ ಇಚ್ಛೆಯಿಂದ, ತೀಕ್ಷ್ಣಃ = ಕ್ರೂರನಾದ ಗರುಡಮಂತ್ರವನ್ನು ತಿಳಿದವನು, ಕೃಷ್ಣಸರ್ಪಾನ್ = ಇವ ಕೃಷ್ಣಸರ್ಪಗಳನ್ನೋಪಾದಿಯಲ್ಲಿ, ಸಂಚಿಕಾಯ = ಒಟ್ಟುಗೂಡಿಸಿದರು.

ತಾ:—ದುಶ್ಶಾಸನನು ಭೀಷ್ಮಾದಿಗಳು ಮಂಡಿಸಿರುವ ಸಭೆಯಲ್ಲಿ ದ್ರೌಪದಿಯ ಮೃದುವೂ, ಗುಂಗುರಾಗಿಯೂ, ಕಪ್ಪಗೂ ಇರುವ ಕೂದಲುಗಳನ್ನು ಎಳೆದು ಕೆದರಿ ಅವಮಾನಗೊಳಿಸಿದನು. ಆಗ ಕುಪಿತರಾದ ಈ ಭೀಮಸೇನದೇವರು ಶತ್ರುಗಳನ್ನು ಕೊಲ್ಲುತ್ತೇನೆಂದು ಪ್ರತಿಜ್ಞೆಮಾಡಿ ಆ ಕೂದಲುಗಳನ್ನು ಸಂಗ್ರಹಿಸಿ ಇಟ್ಟರು. (ದುಶ್ಶಾಸನನು ಸಾಯುವವರೆಗೆ ಹಾಗೆಯೇ ಇರಲೆಂದು ಬಿಟ್ಟರು.) ಅದು ಗರುಡ ಮಂತ್ರವನ್ನು ತಿಳಿದ ಒಬ್ಬನು ತನ್ನ ಮಂತ್ರೌಷಧಗಳ ಬಲದಿಂದ ಪಂಜರದಿಂದ ಓಡಿಸಿದ ಹಾವುಗಳನ್ನು, ಗರುಡ ಮಂತ್ರವನ್ನರಿತ ಮತ್ತೊಬ್ಬನು ಶತ್ರುಗಳನ್ನು ಕೊಲ್ಲಲು ತನ್ನ ಪಂಜರದಲ್ಲಿಟ್ಟುಕೊಂಡಂತಾಯಿತು.

ವ್ಯಾ. ವಿ :—ಹಂತುಮಿಚ್ಛಾ = ಜಿಘಾಂಸಾ, ತಯಾ. ವೈರೀಚಾಸಾ ಜನಶ್ಚ = ವೈರಿಜನಃ. ಕೃಷ್ಣಾಶ್ಚ ತೇ ಸರ್ಪಾಶ್ಚ = ಕೃಷ್ಣಸರ್ಪಾಃ, ತಾನ್. ಸಂಚಿಕಾಯ–ಚಿಞ್ ಚಯನೇ, ಐದನೆ ಗಣ, ಸಕ. ಲಿಟ್, ಪರ. ಪ್ರ. ಏ.

Rarest Archives

ಸಮ್ ಉಪಸರ್ಗ. ಸಂ+ಚಿಕಾಯ, ಚಿಕ್ಯತುಃ, ಚಿಕ್ಯುಃ. ಚಿಕಯಿಥ, ಚಿಕೇಥ, ಚಿಕ್ಯಥುಃ, ಚಿಕ್ಯ. ಚಿಕಾಯ ಚಿಕಯ, ಚಿಕ್ಯಿವ, ಚಿಕ್ಯಿಮ.

ಜಾಜ್ವಲ್ಯಮಾನಸ್ಯ ವನೇ ವನೇಽಲಂ
ದಿಧಕ್ಷತಃ ಪಾರ್ಥಿವಸಾರ್ಥಮುಗ್ರಮ್ ।
ಸತ್ವಾನಿ ಪುಂಸಾಂ ಭಯದಾನಿ ನಾಶಂ
ವೃಕೋದರಾಗ್ನೇರ್ಗು(ರು) ರುತೇಜಸಾಪುಃ ॥೩೮॥

ಅ :—ವನೇ ವನೇ ಅಲಂ ಜಾಜ್ವಲ್ಯಮಾನಸ್ಯ ಉಗ್ರಂ ಪಾರ್ಥಿವ-ಸಾರ್ಥಂ ದಿಧಕ್ಷತಃ ವೃಕೋದರಾಗ್ನೇಃ ಗು(ಉ)ರುತೇಜಸಾ ಪುಂಸಾಂ ಭಯ-ದಾನಿ ಸತ್ವಾನಿ ನಾಶಂ ಆಪುಃ.

ಅ :—ವನೇ ವನೇ=ಎಲ್ಲ ಕಾಡುಗಳಲ್ಲಿಯೂ, ಅಲಂ=ಚೆನ್ನಾಗಿ, ಜಾಜ್ವಲ್ಯಮಾನಸ್ಯ=ಹೆಚ್ಚಾಗಿ ಉರಿಯುತ್ತಿರುವ, ಉಗ್ರಂ=ಕ್ರೂರವಾದ, ಪಾರ್ಥಿವಸಾರ್ಥಂ=ಕ್ರಿರ್ಮಿರ ಮೊದಲಾದ ರಾಜರ ಗುಂಪನ್ನು, ಮರಗಳ ಸಮೂಹವನ್ನು, ದಿಧಕ್ಷತಃ=ಸುಡಲಿಚ್ಛಿಸುವ, ವೃಕೋದರಾಗ್ನೇಃ=ಭೀಮ ಸೇನದೇವರೆಂಬ ಬೆಂಕಿಯ, ಗು(ಉ)ರುತೇಜಸಾ=ಹೆಚ್ಚಾದ ಪರಾಕ್ರಮ ದಿಂದ, ಹೆಚ್ಚು ತೇಜಸ್ಸಿನಿಂದ, ಪುಂಸಾಂ=ಮನುಷ್ಯರಿಗೆ, ಭಯದಾನಿ= ಹೆದರಿಕೆಯನ್ನುಂಟುಮಾಡುವ, ಸತ್ವಾನಿ = ಕಿರ್ಮೀರ ಮೊದಲಾದವರು, ಸಿಂಹ ಮೊದಲಾದ ಪ್ರಾಣಿಗಳು, ನಾಶಂ=ನಾಶವನ್ನು ಆಪುಃ=ಹೊಂದಿ ದರು (ವು).

ತಾ :—ಮುಳ್ಳುಗಳಿಂದ ಪ್ರವೇಶಿಸಲಾಗದ ವನದಲ್ಲಿರುವ ಮರಗಳನ್ನು ಸುಡುತ್ತಾ ಪ್ರತಿಕಾಡುಗಳಲ್ಲಿಯೂ ಉರಿಯುತ್ತಿರುವ ಕಾಡ್ಗಿಚ್ಚು ಮನುಷ್ಯರಿಗೆ ಭಯಂಕರವಾದ ಸಿಂಹ ಮೊದಲಾದ ಹಿಂಸ್ರ ಜಂತುಗಳನ್ನು ಸುಡುವುದು. ಅದ ರಂತೆಯೇ ಪ್ರತಿ ಕಾಡಿನಲ್ಲಿಯೂ ಕ್ರೂರರಾಜರನ್ನು ಕೊಲ್ಲಲಿಚ್ಛಿಸುವ ಭೀಮ ಸೇನ ದೇವರು ವನವಾಸ ಕಾಲದಲ್ಲಿ ತಮ್ಮ ಹೆಚ್ಚಾದ ಸಾಮರ್ಥ್ಯದಿಂದ ಮನುಷ್ಯರಿಗೆ ಭಯವನ್ನುಂಟುಮಾಡುವ ಕಿರ್ಮೀರ ಮೊದಲಾದ ಘಾತಕ ರಾಕ್ಷಸರನ್ನು ಕೊಂದರು.

ವ್ಯಾ.ವಿ. :—ಪುನಃ ಪುನಃ ಅತಿಶಯೇನ ವಾ ಜ್ವಲತೀತಿ=ಜಾಜ್ವಲ್ಯ ಮಾನಃ, ತಸ್ಯ. ದಗ್ಧುಂ ಇಚ್ಛತೀತಿ=ದಿಧಕ್ಷನ್, ತಸ್ಯ. ಪಾರ್ಥಿವಾನಾಂ ಸಾರ್ಥಃ=ಪಾರ್ಥಿವಸಾರ್ಥಃ, ತಮ್. ಭಯಂ ದದತೀತಿ=ಭಯದಾನಿ.

Rarest Archive

ವೃಕೋದರಃ ಏವ ಅಗ್ನಿಃ=ವೃಕೋದರಾಗ್ನಿಃ, ತಸ್ಯ. ಗು(ಉ)ರು ಚ ತತ್ ತೇಜಶ್ಚ=ಗು(ಉ)ರುತೇಜಃ, ತೇನ. ಆಪುಃ-ಆಪ್ಲೃ, ವ್ಯಾಪ್ತೌ, ಐದನೆ ಗಣ, ಸಕ. ಲಿಟ್, ಪರ. ಪ್ರ. ಬ. ಆಪ, ಆಪತುಃ, ಆಪುಃ. ಆಪಿಥ, ಆಪಥುಃ, ಆಪ, ಆಪ ಆಪಿವ, ಆಪಿಮ.

ಭೋಗಾಧಿಕಾಭೋಗವತೋಽರುಣಾಕ್ಷಾ-
ನಿತಸ್ತತಃ ಸಂಚಲತೋ ಧರೇಂದ್ರೇ ।
ಬಹೂನ್ದ್ವಿಜಿಹ್ವಾನ್ ಮಣಿಮತ್ಪುರೋಗಾನ್
ಅಸೌ ಕಟೂನ್ ಕ್ರೋಧವಶಾನ್ ಜಘಾನ ॥ ೩೯ ॥

ಅ:—ಅಸೌ ಭೋಗಾಧಿಕಾಭೋಗವತಃ ಅರುಣಾಕ್ಷಾನ್ ಧರೇಂದ್ರೇ ಇತಸ್ತತಃ ಸಂಚಲತಃ ದ್ವಿಜಿಹ್ವಾನ್ ಕಟೂನ್ ಮಣಿಮತ್ಪುರೋಗಾನ್ ಬಹೂನ್ ಕ್ರೋಧವಶಾನ್ ಜಘಾನ.

ಅ:—ಅಸೌ=ಈ ಭೀಮಸೇನದೇವರು, ಭೋಗಾಧಿಕ=ಇಷ್ಟವಾದ ವಿಷಯ ಸುಖಗಳಿಂದ, ಶರೀರಗಳಿಂದ, ಅಧಿಕರಾದ, ಆಭೋಗವತಃ=ಬಲಾದಿಗಳಿಂದ ತುಂಬಿರುವ, ಅರುಣಾಕ್ಷಾನ್=ಕೆಂಪು ಕಣ್ಣುಗಳುಳ್ಳ, ಧರೇಂದ್ರೇ=ಗಂಧಮಾದನ ಪರ್ವತದಲ್ಲಿ, ಇತಸ್ತತಃ=ಇತ್ತ ಅತ್ತ, ಸಂಚಲತಃ=ಸಂಚರಿಸುವ, ದ್ವಿಜಿಹ್ವಾನ್=ಮಾತ್ಸರ್ಯವುಳ್ಳ, ಎರಡು ನಾಲಿಗೆಗಳುಳ್ಳ, ಕಟೂನ್=ಕಠಿನರಾದ, ಮಣಿಮತ್ಪುರೋಗಾನ್=ಮಣಿಮಂತನೆ (ತಲೆಯಲ್ಲಿ ರತ್ನವುಳ್ಳ ಹಾವುಗಳೆ) ಮೊದಲಾಗುಳ್ಳ, ಬಹೂನ್=ಬಹಳ ಮಂದಿ, ಕ್ರೋಧವಶಾನ್=ಕ್ರೋಧವಶರೆಂಬ ದಾನವರನ್ನು, ಜಘಾನ=ಕೊಂದರು.

ತಾ:—ಕಾಡ್ಗಿಚ್ಚು ಗಂಧಮಾದನ ಪರ್ವತದಲ್ಲಿ ಅತ್ತಿತ್ತ ಸರಿದಾಡುವ ಸರ್ಪಗಳನ್ನು ಸುಟ್ಟು ಬೂದಿ ಮಾಡುವುದು. ಆ ಸರ್ಪಗಳು ದೊಡ್ಡದೇಹವುಳ್ಳವುಗಳು, ಬಲವುಳ್ಳವುಗಳು, ಕೆಂಗಣ್ಣುಗಳುಳ್ಳವುಗಳು, ಎರಡು ನಾಲಿಗೆಯುಳ್ಳವುಗಳು, ಕ್ರೌರ್ಯವುಳ್ಳವುಗಳು, ಕೋಪಗೊಂಡವುಗಳು, ತಲೆಯಲ್ಲಿ ರತ್ನವುಳ್ಳವೂ ಆಗಿರುವುವು. ಆದರಂತೆ ಭೀಮಸೇನದೇವರು ಮಣಿಮಂತನೇ ಮೊದಲಾಗುಳ್ಳ ಅನೇಕ ಮಂದಿ ಕ್ರೋಧವಶರೆಂಬ ದಾನವರನ್ನು ಕೊಂದರು. ಆ ದಾನವರು, ಅಧಿಕ ಸುಖಭೋಗದಲ್ಲಿ ಆಸಕ್ತರು. ಬಲಿಷ್ಠರೂ ಕೆಂಪು ಕಣ್ಣು

Rarest Archiver

ಗಳುಳ್ಳವರೂ, ಗಂಧಮಾದನ ಪರ್ವತದಲ್ಲಿ ಅತ್ತಿತ್ತ ಅಲೆಯುತ್ತಿರುವವರೂ, ಅಸೂಯೆಯುಳ್ಳವರೂ, ಕಠಿಣರೂ ಆಗಿದ್ದರು

ವ್ಯಾ.ವಿ:—ಭೋಗೈಃ ಅಧಿಕಾಃ=ಭೋಗಾಧಿಕಾಃ, ಆಭೋಗಃ ಏಷಾಂ ಅಸ್ತೀತಿ ಆಭೋಗವಂತಃ, ಭೋಗಾಧಿಕಾಶ್ಚತೇ ಆಭೋಗವಂತಶ್ಚ=ಭೋಗಾಧಿಕಾಭೋಗವಂತಃ, ತಾನ್. ಅರುಣಾನಿ ಅಕ್ಷೀಣಿ ಯೇಷಾಂ ತೇ=ಅರುಣಾಕ್ಷಾಃ ತಾನ್. ಧರಾಣಾಂ ಇಂದ್ರಃ=ಧರೇಂದ್ರಃ, ತಸ್ಮಿನ್. ದ್ವೇ ಜಿಹ್ವೇ ಯೇಷಾಂ ತೇ=ದ್ವಿಜಿಹ್ವಾಃ, ತಾನ್. ಮಣಿಮಾನ್ ಪುರೋಗಃ ಯೇಷಾಂ ತೇ=ಮಣಿಮತ್ಪುರೋಗಾಃ, ತಾನ್. ಜಘಾನ—ಹನ ಹಿಂಸಾಗತ್ಯೋಃ, ಎರಡನೆ ಗಣ, ಸಕ. ಲಿಟ್, ಪರ. ಪ್ರ. ಏ. ಜಘಾನ, ಜಘ್ನತುಃ ಜಘ್ನುಃ. ಜಘನಿಥ ಜಘಂಥ, ಜಘ್ನಥುಃ ಜಘ್ನ. ಜಘಾನ ಜಘನ, ಜಘ್ನಿವ, ಜಘ್ನಿಮ.

ಅಥೈಷ ವೇಷಾಂತರಭಸ್ಮಲೀನಃ
ಕ್ರಮೇಣ ವಾಯುಪ್ರಭವಃ ಸುತೇಜಾಃ
ರುದ್ಧಾಖಿಲಾಶಂ ಮುಖರಂ ಪ್ರಚಂಡಂ
ಭಸ್ಮೀಚಕಾರಾಖಿಲಕೀಚಕೌಘಮ್ ॥ ೪೦ ॥

ಅ:—ವಾಯುಪ್ರಭವಃ ಏಷಃ ಅಥ ವೇಷಾಂತರಭಸ್ಮಲೀನಃ ಕ್ರಮೇಣ ಸುತೇಜಾಃ ರುದ್ಧಾಖಿಲಾಶಂ ಮುಖರಂ ಪ್ರಚಂಡಂ ಅಖಿಲಕೀಚಕೌಘಂ ಭಸ್ಮೀಚಕಾರ.

ಅ:—ವಾಯುಪ್ರಭವಃ=ವಾಯುದೇವರ ಮಗನಾದ, ಏಷಃ=ಈ ಭೀಮಸೇನದೇವರು, ಅಥ=ವನವಾಸವು ಮುಗಿದ ತರುವಾಯ, ವೇಷಾಂತರ=ಬೇರೆಯಾದ ಅಡಿಗೆಯವನ ವೇಷವೆಂಬ, ಭಸ್ಮ=ಬೂದಿಯಿಂದ, ಲೀನಃ=ಅಡಗಿದವರಾಗಿ, ಕ್ರಮೇಣ=ಯುದ್ಧದ ರೀತಿಯಿಂದ, ಸುತೇಜಾಃ=ಅತ್ಯಂತ ಪರಾಕ್ರಮವುಳ್ಳವರಾಗಿ, ರುದ್ಧ=ತಡೆಯಲ್ಪಟ್ಟ, ಅಖಿಲ=ಎಲ್ಲರ, ಆಶಂ=ಜಯಾಶೆಯುಳ್ಳ, ಮುಖರಂ=ವಿಚಾರಮಾಡದೆ ಮಾತಾಡುವ, ಪ್ರಚಂಡಂ=ಅತ್ಯಂತ ಕಠಿಣರಾದ, ಅಖಿಲ=ಎಲ್ಲ, ಕೀಚಕೌಘಂ=ಕೀಚಕರ ಸಮೂಹವನ್ನು, ಭಸ್ಮೀಚಕಾರ=ಸುಟ್ಟರು (ಕೊಂದರು).

Rarest Archiver

ತಾ:—ಬೂದಿ ಮುಚ್ಚಿರುವ ಬೆಂಕಿಯು ಗಾಳಿಯಿಂದ ಪ್ರಜ್ವಲಿಸಿ ಎಲ್ಲಾ ದಿಕ್ಕುಗಳಿಗೂ ವ್ಯಾಪಿಸುವುದು. ಗಾಳಿಯಿಂದ ಶಬ್ದಗೈಯ್ಯುವ ಮುಳ್ಳುಗಳಿಂದ ತೀಕ್ಷ್ಣವಾದ ಬಿದಿರಿನ ಮೆಳೆಯನ್ನು ಸುಡುವುದು. ಅದರಂತೆಯೇ ಭೀಮಸೇನದೇವರು ವನವಾಸವು ಮುಗಿದ ತರುವಾಯ ಅಜ್ಞಾತವಾಸದಲ್ಲಿ ವಿರಾಟರಾಜನ ಮನೆಯಲ್ಲಿ ಅಡಿಗೆಯವನ ವೇಷದಲ್ಲಿದ್ದರು. ಅಲ್ಲಿ ಅವರು ದ್ರೌಪದಿಗೆ ತೊಂದರೆಯನ್ನು ಮಾಡಿದವರೂ, ತಮ್ಮನ್ನು ಜಯಿಸಲು ಆಶೆಯುಳ್ಳ ಶತ್ರುಗಳನ್ನು ನಿರಾಶೆಗೊಳಿಸಿದವರೂ, ಮನಬಂದಂತೆ ಮಾತಾಡುವವರೂ, ಕಠಿನರೂ ಆದ ಕೀಚಕರೆಂಬ ವಿರಾಟನ ಭಾವ ಮೈದುನರನ್ನು ಕೊಂದರು.

ವ್ಯಾ. ವಿ:—ಅನ್ಯಃ ವೇಷಃ=ವೇಷಾಂತರಂ, ವೇಷಾಂತರಂ ಏವ ಭಸ್ಮ, ವೇಷಾಂತರಭಸ್ಮನಾ ಲೀನಃ=ವೇಷಾಂತರಭಸ್ಮಲೀನಃ, ವಾಯೋಃ ಪ್ರಭವತೀತಿ=ವಾಯುಪ್ರಭವಃ. ಸುಷ್ಠು ತೇಜಃ ಯಸ್ಯ ಸಃ=ಸುತೇಜಾಃ. ಅಖಿಲಾನಾಂ ಆಶಾಃ ಅಖಿಲಾಶಾಃ, ರುದ್ಧಾಃ ಅಖಿಲಾಶಾಃ ಯೇನ ಸಃ=ರುದ್ಧಾಖಿಲಾಶಃ, ತಮ್. ಅಖಿಲಾಶ್ಚ ತೇ ಕೀಚಕಾಶ್ಚ, ಅಖಿಲಕೀಚಕಾನಾಂ ಓಘಃ=ಅಖಿಲಕೀಚಕೌಘಃ, ತಮ್,

ಸ ಕೃಷ್ಣವರ್ತ್ಮಾ ವಿಜಯೇನ ಯುಕ್ತೋ
ಮುಹುರ್ಮಹಾಹೇತಿಧರೋಽಪ್ರಧೃಷ್ಯಃ ।
ಭೀಷ್ಮದ್ವಿಜಾದ್ಯೈರತಿಭೀಷಣಾಭಂ
ವಿಪಕ್ಷಕಕ್ಷಂ ಕ್ಷಪಯನ್ ವಿರೇಜೇ ॥ ೪೧ ॥

ಅ:—ಕೃಷ್ಣವರ್ತ್ಮಾ ವಿಜಯೇನ ಯುಕ್ತಃ ಮಹಾಹೇತಿಧರಃ ಅಪ್ರಧೃಷ್ಯಃ ಸಃ ಭೀಷ್ಮದ್ವಿಜಾದ್ಯೈಃ ಅತಿಭೀಷಣಾಭಂ ವಿಪಕ್ಷಕಕ್ಷಂ ಮುಹುಃ ಕ್ಷಪಯನ್ ವಿರೇಜೇ

ಅ:—ಕೃಷ್ಣವರ್ತ್ಮಾ=ಕೃಷ್ಣನು ತೋರಿಸಿದ ಮಾರ್ಗವುಳ್ಳ, ತಾನು ಹೋದ ದಾರಿಯು ಕಪ್ಪಾಗಿ ಉಳ್ಳ ಬೆಂಕಿಯು, ವಿಜಯೇನ=ಅರ್ಜುನನಿಂದ, ಅತಿಜಯದಿಂದ, ಯುಕ್ತಃ=ಕೂಡಿದ, ಮಹಾಹೇತಿಧರಃ=ದೊಡ್ಡ ಆಯುಧವನ್ನು ಧರಿಸಿದ, ದೊಡ್ಡಜ್ವಾಲೆಯುಳ್ಳ, ಅಪ್ರಧೃಷ್ಯಃ=ನಾಶಮಾಡಲು ಅಶಕ್ಯರಾದ, ಸಹಿಸಲಾಗದ, ಸಃ=ಆ ಭೀಮಸೇನದೇವರು, ಭೀಷ್ಮ=ಭೀಷ್ಮಾ-

Rarest Archives

ಚಾರ್ಯರು, ದ್ವಿಜ=ಬ್ರಾಹ್ಮಣರಾದ ದ್ರೋಣಾಚಾರ್ಯರು ಇವರೇ. ಆದ್ಯೈಃ= ಮೊದಲಾದವರಿಂದ, ಪಕ್ಷಿ ಮೊದಲಾದವುಗಳಿಂದ, ಅತಿಭೀಷಣ=ಅತ್ಯಂತ ಭಯಂಕರವಾದ, ಆಭಂ=ಕಾಂತಿಯುಳ್ಳ, ವಿಪಕ್ಷ=ಶತ್ರುಗಳೆಂಬ, ಕಕ್ಷಂ= ಕಾಡನ್ನು, ಮುಹುಃ=ಬಹಳವಾಗಿ, ಕ್ಷಪಯನ್=ನಾಶಗೊಳಿಸುತ್ತ, ವಿರೇಜೇ =ಪ್ರಕಾಶಿಸಿದರು.

ತಾ :—ಅತಿ ಜಯಶಾಲಿಯೂ, ದೊಡ್ಡ ಜ್ವಾಲೆಯುಳ್ಳುದೂ, ಸಹಿಸ ಲಾಗದಿರುವುದೂ ಆದ ಬೆಂಕಿಯು ಭಯಂಕರ ಪಕ್ಷಿ ಮೊದಲಾದವುಗಳಿಂದ ಭಯಂಕರವಾದ ಅರಣ್ಯವನ್ನು ಸುಡುವುದು. ಅದರಂತೆ ಕೃಷ್ಣನು ತೋರಿಸಿದ ದಾರಿಯಲ್ಲಿ ನಡೆಯುವವರೂ, ಅರ್ಜುನನಿಂದ ಕೂಡಿದವರೂ, ದೊಡ್ಡ ಆಯುಧ ವನ್ನು ಧರಿಸಿದವರೂ, ಕೊಲ್ಲಲಾಗದವರೂ ಆದ ಆ ಭೀಮಸೇನ ದೇವರು ಭೀಷ್ಮ, ದ್ರೋಣ ಮೊದಲಾದವರ ಬೆಂಬಲದಿಂದ ಭಯಂಕರರಾದ ದುರ್ಯೋಧನ ಮೊದಲಾದವರನ್ನು ನಾಶಗೊಳಿಸುತ್ತ ವಿರಾಜಿಸಿದರು.

ವ್ಯಾ. ವಿ. :—ಕೃಷ್ಣಸ್ಯ (ಕೃಷ್ಣಂ) ವರ್ತ್ಮ ಯಸ್ಯ ಸಃ ಕೃಷ್ಣವರ್ತ್ಮಾ. ಮಹತೀ ಚ ಸಾ ಹೇತಿಶ್ಚ, ಮಹಾಹೇತೇಃ ಧರಃ=ಮಹಾಹೇತಿಧರಃ. ಧರ್ಷ- ಯಿತುಂ ಶಕ್ಯಃ ಧೃಷ್ಯಃ, ನ ಧೃಷ್ಯಃ=ಅಧೃಷ್ಯಃ. ಭೀಷ್ಮಶ್ಚ ದ್ವಿಜಶ್ಚ, ಭೀಷ್ಮ- ದ್ವಿಜೌ ಆದ್ಯೌ ಯೇಷಾಂ ತೇ=ಭೀಷ್ಮದ್ವಿಜಾದ್ಯಾಃ, ತೈಃ ಅತಿಭೀಷಣಾ ಆಭಾ ಯಸ್ಯ ಸಃ=ಅತಿಭೀಷಣಾಭಃ, ತಮ್. ವಿಪಕ್ಷಾ ಏವ ಕಕ್ಷಃ=ವಿಪಕ್ಷಕಕ್ಷಃ, ತಮ್, ವಿರೇಜೇ-ರಾಜೃ ದೀಪ್ತೌ, ಒಂದನೆ ಗಣ, ಅಕ. ಲಿಟ್, ಆತ್ಮ. ಪ್ರ. ಏ, ವಿ. ಉಪಸರ್ಗ ರೇಜೇ, ರೇಜಾತೇ, ರೇಜಿರೇ. ರೇಜಿಷೇ, ರೇಜಾಥೇ, ರೇಜಿಧ್ವೇ. ರೇಜೇ, ರೇಜಿವಹೇ, ರೇಜಿಮಹೇ.

ತರಸ್ವಿನಃ ಪ್ರೋಚ್ಚಲಿತಾನಧೀರಾ-
ನ್ನಿರ್ದಗ್ಧಪಕ್ಷಾನತಿತೀಕ್ಷ್ಣಕೋಪಾನ್
ಸ ಧಾರ್ತರಾಷ್ಟ್ರಾನ್ ಬಹುಹೇತಿಲೀಲೋ
ವಿನಾಶ್ಯ ವಿಶ್ವಾನ್ಪರಯಾ ಶ್ರಿಯಾಭಾತ್ ॥೪೨॥

ಅ :—ಬಹುಹೇತಿಲೀಲಃ ಸಃ ತರಸ್ವಿನಃ ಪ್ರೋಚ್ಚಲಿತಾನ್ ಅಧೀರಾನ್ ನಿರ್ದಗ್ಧಪಕ್ಷಾನ್ ಅತಿತೀಕ್ಷ್ಣಕೋಪಾನ್ ವಿಶ್ವಾನ್ ಧಾರ್ತರಾಷ್ಟ್ರಾನ್ ವಿನಾಶ್ಯ ಪರಯಾ ಶ್ರಿಯಾ ಅಭಾತ್.

Rarest Archiver

ಅ :—ಬಹು=ಬಹಳ, ಹೇತಿ=ಆಯುಧಗಳಿಂದ, ಜ್ವಾಲೆಯಿಂದ, ಲೀಲಃ=ವಿಲಾಸವುಳ್ಳ, ಸಃ=ಆ ಭೀಮಸೇನ ದೇವರು, ತರಸ್ವಿನಃ=ವೇಗ ಅಥವಾ ಬಲವುಳ್ಳ, ಪ್ರೋಚ್ಚಲಿತಾನ್=ಧರ್ಮಭ್ರಷ್ಟರಾದ, ತಮ್ಮ ಗೂಡಿನಿಂದ ಹೊರಟ, ಅಧೀರಾನ್=ಧೈರ್ಯವಿಲ್ಲದ, ನಿರ್ದಗ್ಧಪಕ್ಷಾನ್=ನಾಶಗೊಳಿಸಲ್ಪಟ್ಟ ಸಹಾಯವುಳ್ಳ, ರೆಕ್ಕೆಯುಳ್ಳ, ಅತಿತೀಕ್ಷ್ಣಕೋಪಾನ್ = ಅತ್ಯಂತ ಕಠಿನ ಕೋಪವುಳ್ಳ, ವಿಶ್ವಾನ್=ಎಲ್ಲ, ಧಾರ್ತರಾಷ್ಟ್ರಾನ್=ಕೌರವರನ್ನು, ಕೆಂಪು ಕೊಕ್ಕು ಕಾಲುಗಳುಳ್ಳ ಹಂಸಗಳನ್ನು, ವಿನಾಶ್ಯ=ಕೊಂದು, ಪರಯಾ =ಹೆಚ್ಚಾದ, ಶ್ರಿಯಾ=ರಾಜ್ಯ ಸಂಪತ್ತಿನಿಂದ, ಜಯ ಸಂಪತ್ತಿನಿಂದ, ಕಾಂತಿಯಿಂದ ಅಭಾತ್=ಪ್ರಕಾಶಿಸಿದರು.

ತಾ :—ಅಧಿಕ ಜ್ವಾಲೆಯುಳ್ಳ ಕಾಡ್ಗಿಚ್ಚು ವೇಗವುಳ್ಳವೂ ತಮ್ಮ ಗೂಡಿನಿಂದ ಹೊರಟವೂ, ಬೆಂಕಿಯ ಸ್ಥಳವನ್ನು ದಾಟಿ ಹೋಗಲು ಧೈರ್ಯವಿಲ್ಲದವೂ, ಸುಟ್ಟ ರೆಕ್ಕೆಗಳುಳ್ಳವೂ, ಅತ್ಯಂತ ಕೋಪವುಳ್ಳವೂ ಆದ ಎಲ್ಲ ಹಂಸಗಳನ್ನು ಸುಟ್ಟು ಕಂಗೊಳಿಸುವುದು. ಅದರಂತೆಯೇ ಬಹಳ ಆಯುಧಗಳನ್ನು ಹಿಡಿದ ಈ ಭೀಮಸೇನದೇವರು ಬಲವುಳ್ಳವರೂ, ಧರ್ಮಭ್ರಷ್ಟರೂ, ಧೈರ್ಯವಿಲ್ಲದವರೂ, ನಾಶವಾದ ಸಹಾಯಕರುಳ್ಳವರೂ, ಅತ್ಯಂತ ಕೋಪವುಳ್ಳವರೂ ಆದ ಎಲ್ಲ ಧೃತರಾಷ್ಟ್ರರಾಜನ ಮಕ್ಕಳಾದ ದುರ್ಯೋಧನಾದಿಗಳನ್ನು ಕೊಂದು ಅತ್ಯಂತ ಗೆಲುವಿನಿಂದ ವಿರಾಜಿಸಿದರು.

ವ್ಯಾ. ವಿ ;—ತರಃ ಏಷಾಂ ಅಸ್ತೀತಿ=ತರಸ್ವಿನಃ, ತಾನ್. ನ ಧೀರಾಃ =ಅಧೀರಾಃ, ತಾನ್. ನಿರ್ದಗ್ಧಃ ಪಕ್ಷಃ ಯೇಷಾಂ ತೇ=ನಿರ್ದಗ್ಧಪಕ್ಷಾಃ, ತಾನ್. ಅತ್ಯಂತಂ ತೀಕ್ಷ್ಣಃ, ಅತಿತೀಕ್ಷ್ಣಃ ಕೋಪಃ ಯೇಷಾಂ ತೇ=ಅತಿತೀಕ್ಷ್ಣಕೋಪಾಃ ತಾನ್. ಧೃತರಾಷ್ಟ್ರಸ್ಯ ಅಪತ್ಯಾನಿ ಪುಮಾಂಸಃ=ಧಾರ್ತರಾಷ್ಟ್ರಾಃ, ತಾನ್. ಬಹ್ವಶ್ಚ ತಾಃ ಹೇತಯಶ್ಚ, ಬಹುಹೇತೀನಾಂ ಲೀಲಾ ಯಸ್ಯ ಸಃ=ಬಹುಹೇತಿಲೀಲಃ, ಅಭಾತ್–ಭಾ ದೀಪ್ತೌ, ಎರಡನೆ ಗಣ, ಅಕ. ಲಙ್, ಪರ. ಪ್ರ. ಏ. ಅಭಾತ್, ಅಭಾತಾಂ, ಅಭುಃ ಅಭಾನ್. ಅಭಾಃ, ಅಭಾತಂ, ಅಭಾತ. ಅಭಾಂ, ಅಭಾವ, ಅಭಾಮ.

Rarest Archiver

ಕೃಷ್ಣಾಂಘ್ರಿಪಂಕೇರುಹಭೃಂಗರಾಜಃ
ಕೃಷ್ಣಾಮುಖಾಂಭೋರುಹಹಂಸರಾಜಃ ।
ಪ್ರಜಾಸರೋಜಾವಲಿರಶ್ಮಿರಾಜಃ
ಸಸೋದರೋಽರಾಜತ ವೀರರಾಜಃ ॥ ೪೩॥

ಅ :—ಕೃಷ್ಣಾಂಘ್ರಿಪಂಕೇರುಹಭೃಂಗರಾಜಃ ಕೃಷ್ಣಾಮುಖಾಂಭೋರುಹಹಂಸರಾಜಃ ಪ್ರಜಾಸರೋಜಾವಲಿರಶ್ಮಿರಾಜಃ ವೀರರಾಜಃ ಸಸೋದರಃ ಅರಾಜತ.

ಅ :—ಕೃಷ್ಣ=ಶ್ರೀಕೃಷ್ಣನ, ಅಂಘ್ರಿ=ಪಾದಗಳೆಂಬ, ಪಂಕೇರುಹ=ಕಮಲಗಳಿಗೆ, ಭೃಂಗರಾಜಃ=ಶ್ರೇಷ್ಠ ದುಂಬಿಗಳಾದ, ಕೃಷ್ಣಾ=ದ್ರೌಪದಿಯ, ಮುಖಾಂಭೋರುಹ=ಮುಖವೆಂಬ ತಾವರೆಯ ಹೂವಿಗೆ, ಹಂಸರಾಜಃ=ಶ್ರೇಷ್ಠ ಹಂಸರಾದ, ಪ್ರಜಾ=ಪ್ರಜೆಗಳೆಂಬ, ಸರೋಜಾವಲಿ=ತಾವರೆಹೂವುಗಳ ಸಮೂಹಕ್ಕೆ, ರಶ್ಮಿರಾಜಃ=ಸೂರ್ಯರಾದ, ವೀರರಾಜಃ=ವೀರಶ್ರೇಷ್ಠರಾದ ಭೀಮಸೇನದೇವರು, ಸಸೋದರಃ=ಅಣ್ಣತಮ್ಮಂದಿರಿಂದ ಸಹಿತರಾಗಿ, ಅರಾಜತ=ಪ್ರಕಾಶಿಸಿದರು.

ತಾ :—ಈ ಭೀಮಸೇನದೇವರು ದುಂಬಿಯು ಕಮಲದಲ್ಲಿ ಆಸಕ್ತವಾಗಿರುವಂತೆ ಶ್ರೀಕೃಷ್ಣನ ಪಾದಗಳನ್ನು ಧ್ಯಾನಿಸುತ್ತಿದ್ದರು. ಹಂಸವು ಕಮಲಗಳಲ್ಲಿ ಆಸಕ್ತವಾಗಿರುವಂತೆ ದ್ರೌಪದಿಯ ಲಾಲನೆ ಪೋಷಣೆ ಸಂತೋಷಪಡಿಸುವುದು ಮೊದಲಾದವುಗಳಲ್ಲಿ ನಿರತರಾಗಿದ್ದರು. ಸೂರ್ಯನು ತಾವರೆ ಹೂವನ್ನು ಅರಳಿಸುವಂತೆ ಪ್ರಜೆಗಳನ್ನು ಧರ್ಮದಿಂದ ಕಾಪಾಡಿ ಸಂತೋಷಗೊಳಿಸುತ್ತಿದ್ದರು. ಇಂತಹ ವೀರ ಭೀಮಸೇನ ದೇವರು ರಾಜ್ಯದಲ್ಲಿ, ಅಣ್ಣತಮ್ಮಂದಿರೊಡನೆ ವಿರಾಜಿಸಿದರು.

ವ್ಯಾ.ವಿ :—ಕೃಷ್ಣಸ್ಯ ಅಂಘ್ರೀ, ಕೃಷ್ಣಾಂಘ್ರೀ ಏವ ಪಂಕೇರುಹೇ, ಕಷ್ಣಾಂಘ್ರಿಪಂಕೇರುಹಯೋಃ ಭೃಂಗರಾಜಃ ಕೃಷ್ಣಾಂಘ್ರಿಪಂಕೇರುಹಭೃಂಗರಾಜಃ. ಕೃಷ್ಣಾಯಾಃ ಮುಖಂ, ಕೃಷ್ಣಾಮುಖಂ ಏವ ಅಂಭೋರುಹಂ, ಕೃಷ್ಣಾಮುಖಾಂಭೋರುಹೇ ಹಂಸರಾಜಃ = ಕೃಷ್ಣಾಮುಖಾಂಭೋರುಹಹಂಸರಾಜಃ. ರಶ್ಮೀನಾಂ ರಾಜಾ—ರಶ್ಮಿರಾಜಃ, ಪ್ರಜಾಃ ಏವ ಸರೋಜಾನಿ, ಪ್ರಜಾಸರೋಜಾನಾಂ ಆವಲಿಃ, ಪ್ರಜಾಸರೋಜಾವಲೇಃ ರಶ್ಮಿರಾಜಃ=

Rarest Archiver

ಪ್ರಜಾಸರೋಜಾವಲಿ ರಶ್ಮಿರಾಜಃ, ಸೋದರೇಣ ಸಹಿತಃ = ಸಸೋದರಃ, ವೀರಾಣಾಂ ರಾಜಾ = ವೀರರಾಜಃ—'ರಾಜಾಹಸ್ಸಖಿಭ್ಯಃ ಟಚ್' ಈ ಸೂತ್ರದಿಂದ ರಾಜನ್ ಶಬ್ದಕ್ಕೆ ಟಚ್ ಪ್ರತ್ಯಯ ಬಂದು ಅಕಾರಾಂತವಾಗಿದೆ. ಅರಾಜತ-ರಾಜೃ ದೀಪ್ತೌ, ಒಂದನೆಗಣ, ಅಕ. ಲಙ್, ಆತ್ಮ. ಪ್ರ. ಏ. ಅರಾಜತ, ಅರಾಜೇತಾಂ, ಅರಾಜಂತ. ಅರಾಜಥಾಃ, ಅರಾಜೇಥಾಂ, ಅರಾಜಧ್ವಂ, ಅರಾಜೇ, ಅರಾಜಾವಹಿ, ಅರಾಜಾಮಹಿ.

ಪೌತ್ರೇ ಪವಿತ್ರಾಹ್ವಯಜಾಮಿಪೌತ್ರೇ
ಧರಾಂ ನಿಧಾಯಾಸುರಧೀಷು ತಾಪಮ್
ಕೀರ್ತಿಂ ತ್ರಿಲೋಕ್ಯಾಂ ಹೃದಯೇ ಮುಕುಂದಂ
ಭೇಜೇ ಪದಂ ಸ್ವಂ ಸಹಜೈಃ ಸ ಭೀಮಃ ॥ ೪೪॥

ಅ:—ಸಃ ಭೀಮಃ ಪವಿತ್ರಾಹ್ವಯಜಾಮಿಪೌತ್ರೇ ಪೌತ್ರೇ ಧರಾಂ, ಅಸುರಧೀಷು ತಾಪಂ, ತ್ರಿಲೋಕ್ಯಾಂ ಕೀರ್ತಿಂ, ಹೃದಯೇ ಮುಕುಂದಂ ನಿಧಾಯ ಸಹಜೈಃ (ಸಹ) ಸ್ವಂ ಪದಂ ಭೇಜೇ.

ಅ:—ಸಃ ಭೀಮಃ = ಆ ಭೀಮಸೇನದೇವರು, ಪವಿತ್ರಾಹ್ವಯ = ಪವಿತ್ರ ಎಂದು ಹೆಸರುಳ್ಳ ಶ್ರೀಕೃಷ್ಣನ, ಜಾಮಿ = ಸಹೋದರಿಯಾದ ಸುಭದ್ರೆಯ, ಪೌತ್ರೇ = ಮೊಮ್ಮಗನಾದ, ಪೌತ್ರೇ = ತನ್ನ ಮಗ ಅಭಿಮನ್ಯುವಿನ ಮಗನಾದ ಪರೀಕ್ಷಿದ್ರಾಜನಲ್ಲಿ, ಧರಾಂ = ಭೂಮಿಯನ್ನೂ, ಅಸುರಧೀಷು = ದೈತ್ಯರ ಮನಸ್ಸಿನಲ್ಲಿ, ತಾಪಂ = ಸಂತಾಪವನ್ನೂ, ತ್ರಿಲೋಕ್ಯಾಂ = ಮೂರು ಲೋಕಗಳಲ್ಲಿ, ಕೀರ್ತಿಂ = ಕೀರ್ತಿಯನ್ನೂ, ಹೃದಯೇ = ಮನಸ್ಸಿನಲ್ಲಿ, ಮುಕುಂದಂ = ಶ್ರೀಕೃಷ್ಣನನ್ನೂ, ನಿಧಾಯ = ಇಟ್ಟು, ಸಹಜೈಃ (ಸಹ) = ಸಹೋದರರೊಡನೆ, ಸ್ವಂ = ತಮ್ಮ, ಪದಂ = ಸ್ವರೂಪವನ್ನು ಅಥವಾ, ಲೋಕವನ್ನು, ಭೇಜೇ = ಹೊಂದಿದರು.

ತಾ:—ಆ ಭೀಮಸೇನದೇವರು ಈ ರೀತಿ ರಾಜ್ಯವನ್ನು ಪರಿಪಾಲಿಸಿ ಕೊನೆಗೆ ಆ ರಾಜ್ಯವನ್ನು ಸುಭದ್ರೆಗೂ ತನಗೂ ಮೊಮ್ಮಗನಾದ ಪರೀಕ್ಷಿದ್ರಾಜನಿಗೆ ಒಪ್ಪಿಸಿದರು. ಶ್ರೀಕೃಷ್ಣನನ್ನು ಧ್ಯಾನಿಸುತ್ತ ಅಣ್ಣ ತಮ್ಮಂದಿರೊಡನೆ ತಮ್ಮ ಲೋಕಕ್ಕೆ ತೆರಳಿದರು. ಅವರಿಂದ ದಾನವರು ವ್ಯಥೆಗೊಂಡರು. ಭೀಮಸೇನರ ಕೀರ್ತಿಯು ಮೂರುಲೋಕಗಳಲ್ಲಿ ಹಬ್ಬಿತು.

Rarest Archives

ವ್ಯಾ.ವಿ: — ಪವಿತ್ರಂ ಇತಿ ಆಹ್ವಯಃ ಯಸ್ಯ ಸಃ, ಪವಿತ್ರಾಹ್ವಯಸ್ಯ ಜಾಮಿಃ, ಪವಿತ್ರಾಹ್ವಯಜಾಮೇಃ ಪೌತ್ರಃ = ಪವಿ.... ಪೌತ್ರಃ, ತಸ್ಮಿನ್. ಪವಿತ್ರಾಣಾಂ ಪವಿತ್ರಂ ಯಃ (ವಿಷ್ಣುಸಹಸ್ರನಾಮ), ಅಸುರಾಣಾಂ ಧಿಯಃ = ಅಸುರಧಿಯಃ, ತಾಸು. ತ್ರಯಾಣಾಂ ಲೋಕಾನಾಂ ಸಮಾಹಾರಃ = ತ್ರಿಲೋಕೀ, ತಸ್ಯಾಮ್. ತ್ರಿಲೋಕೀ = 'ಅಕಾರಾಂತೋತ್ತರಪದೋ ದ್ವಿಗುಃ ಸ್ತ್ರಿಯಾಮಿಷ್ಟಃ' ಈ ವಾರ್ತಿಕದಿಂದ ತ್ರಿಲೋಕೀ ಶಬ್ದವು ಸ್ತ್ರೀಲಿಂಗವಾಗಿದೆ. ಭೇಜೇ–ಭಜ ಸೇವಾಯಾಂ, ಒಂದನೆ ಗಣ, ಸಕ. ಲಿಟ್, ಆತ್ಮ. ಪ್ರ. ಏ. ಭೇಜೇ, ಭೇಜಾತೇ, ಭೇಜಿರೇ. ಭೇಜಿಷೇ, ಭೇಜಾಥೇ, ಭೇಜಿಧ್ವೇ. ಭೇಜೇ, ಭೇಜಿವಹೇ, ಭೇಜಿಮಹೇ.

ಇನ್ನು ಮುಂದೆ ಶ್ರೀ ಮುಖ್ಯಪ್ರಾಣದೇವರ ಮೂರನೆ ಅವತಾರದ ಕಥೆಯ ಉಪೋದ್ಘಾತವನ್ನು ಹೇಳುತ್ತಾರೆ.

> ವಿಷ್ಣೋಃ ಪದಾಂತಂ ಭಜತಾನಿಲೇನ
> ಘೋರಪ್ರಘಾತೈರಿತಿ ನಾಶಿತಾಸ್ತೇ ।
> ರಸೋಜ್ಝಿತಾಶ್ಚಂಚಲವೃತ್ತಯೋಽಲಂ
> ಶೋಭಾಂ ನ ಭೇಜುಃ ಸುರವೈರಿಮೇಘಾಃ ॥ ೪೫ ॥

ಅ: — ವಿಷ್ಣೋಃ ಪದಾಂತಂ ಭಜತಾ ಅನಿಲೇನ ಘೋರಪ್ರಘಾತೈಃ ಇತಿ ನಾಶಿತಾಃ ರಸೋಜ್ಝಿತಾಃ ಅಲಂ ಚಂಚಲವೃತ್ತಯಃ ತೇ ಸುರವೈರಿಮೇಘಾಃ ಶೋಭಾಂ ನ ಭೇಜುಃ.

ಅ: — ವಿಷ್ಣೋಃ = ಶ್ರೀಕೃಷ್ಣನ, ಪದಾಂತಂ = ಪಾದದ ಸಮೀಪವನ್ನು, ಆಕಾಶವನ್ನು, ಭಜತಾ = ಸೇವಿಸುತ್ತಿರುವ, ಅನಿಲೇನ = ಭೀಮರೂಪಿಯಾದ ವಾಯುದೇವರಿಂದ, ಗಾಳಿಯಿಂದ, ಘೋರಪ್ರಘಾತೈಃ = ಭಯಂಕರ ಯುದ್ಧಗಳಿಂದ, (ಹೊಡೆತಗಳಿಂದ), ಇತಿ = ಹೀಗೆ, ನಾಶಿತಾಃ = ಕೊಲ್ಲಲ್ಪಟ್ಟ, ಚೂರು ಮಾಡಲ್ಪಟ್ಟ, ರಸೋಜ್ಝಿತಾಃ = ಸಾಮರ್ಥ್ಯದಿಂದ ಬಿಡಲ್ಪಟ್ಟ, ನೀರಿಲ್ಲದ, ಅಲಂ = ಬಹಳವಾಗಿ, ಚಂಚಲವೃತ್ತಯಃ = ಚಂಚಲವಾದ ನಡತೆಯುಳ್ಳ, ಚಂಚಲವಾದ, ತೇ = ಆ, ಸುರವೈರಿ = ದೈತ್ಯರೆಂಬ, ಮೇಘಾಃ = ಮೋಡಗಳು, ಶೋಭಾಂ = ಕಾಂತಿಯನ್ನು, ನ ಭೇಜುಃ = ಹೊಂದಲಿಲ್ಲ.

Rarest Archive

ತಾ :—ಶ್ರೀಕೃಷ್ಣನ ಹತ್ತಿರದಲ್ಲಿಯೇ ಇರುತ್ತಿದ್ದ ಭೀಮರೂಪಿಯಾದ ವಾಯುದೇವರು ಹೀಗೆ ಅನೇಕ ಬಾರಿ ಯುದ್ಧದಲ್ಲಿ ದೈತ್ಯರನ್ನು ಕೊಂದರು. ಅವರೆಲ್ಲ ಶಕ್ತಿಯಿಲ್ಲದೆ ದಿಕ್ಕು ದಿಕ್ಕುಗಳಿಗೆ ಓಡಿಹೋಗಿ ಆಕಾಶದಲ್ಲಿ ಗಾಳಿಯ ಹೊಡೆತದಿಂದ ಚೂರಾಗಿ ನೀರಿಲ್ಲದೆ ಹಗುರವಾಗಿ ತೇಲುತ್ತಿರುವ ಮೋಡಗಳಂತೆ ಕಳೆಗುಂದಿದರು.

ವ್ಯಾ. ವಿ.—ಪದಸ್ಯ ಅಂತಃ=ಪದಾಂತಃ, ತಮ್. ಘೋರಾಶ್ಚ ತೇ ಪ್ರಘಾತಾಶ್ಚ=ಘೋರಪ್ರಘಾತಾಃ, ತೈಃ. ರಸೇನ ಉಜ್ಝಿತಾಃ=ರಸೋಜ್ಝಿತಾಃ. ಚಂಚಲಾ ವೃತ್ತಿಃ ಯೇಷಾಂ ತೇ=ಚಂಚಲವೃತ್ತಯಃ. ಸುರಾಣಾಂ ವೈರಿಣಃ, ಸುರವೈರಿಣ ಏವ ಮೇಘಾಃ=ಸುರವೈರಿಮೇಘಾಃ. ಭೇಜುಃ-ಭಜ ಸೇವಾಯಾಂ, ಲಿಟ್, ಪರ. ಪ್ರ.ಬ. ಬಭಾಜ, ಭೇಜತುಃ, ಭೇಜುಃ ಭೇಜಿಥ, ಭೇಜಥುಃ, ಭೇಜ. ಬಭಾಜ ಬಭಜ, ಭೇಜಿವ, ಭೇಜಿಮ.

ಏತತ್ಪ್ರತೀಪಂ ಕಿಲ ಕರ್ತುಕಾಮಾ
ನಷ್ಟೌಜಸಃ ಸಂಕಟಮೇವಮಾಪ್ಯ ।
ಮುಕುಂದನೈರ್ಗುಣ್ಯಕಥಾಂ ಸ್ವಯೋಗ್ಯಾಂ
ಕಾಲೇ ಕಲಾವಾಕಲಯಂತ ತೇಽಲಮ್ ॥ ೪೬ ॥

ಅ :—ನಷ್ಟೌಜಸಃ ತೇ ಏವಂ ಸಂಕಟಂ ಆಪ್ಯ ಏತತ್ಪ್ರತೀಪಂ ಕರ್ತುಕಾಮಾಃ ಕಿಲ ಕಲೌ ಕಾಲೇ ಸ್ವಯೋಗ್ಯಾಂ ಮುಕುಂದನೈರ್ಗುಣ್ಯಕಥಾಂ ಅಲಂ ಆಕಲಯಂತ.

ಅ :—ನಷ್ಟ=ಹಾಳಾದ, ಓಜಸಃ=ಶಕ್ತಿಯುಳ್ಳ, ತೇ=ಆ ದೈತ್ಯರು, ಏವಂ=ಹೀಗೆ, ಸಂಕಟಂ=(ಭೀಮಸೇನದೇವರಿಂದ) ಕಷ್ಟವನ್ನು, ಆಪ್ಯ=ಹೊಂದಿ, ಏತತ್=(ಈ ಅಪಕಾರಕ್ಕೆ, ಪ್ರತೀಪಂ=ವಿರೋಧವನ್ನು (ಪ್ರತೀಕಾರವನ್ನು), ಕರ್ತುಕಾಮಾಃ ಕಿಲ=ಮಾಡಲು ಇಚ್ಛೆಯುಳ್ಳವರಾಗಿ, ಕಲೌ ಕಾಲೇ=ಕಲಿಯುಗದಲ್ಲಿ (ಹುಟ್ಟಿದವರಾಗಿ) ಸ್ವಯೋಗ್ಯಾಂ=ದೈತ್ಯರಾದ ತಮಗೆ ಉಚಿತವಾದ, ಮುಕುಂದ=ಶ್ರೀವಿಷ್ಣುವಿನ, ನೈರ್ಗುಣ್ಯಕಥಾಂ=ಗುಣವಿಲ್ಲವೆಂಬ ಗ್ರಂಥವನ್ನು, ಅಲಂ=ಚೆನ್ನಾಗಿ, ಆಕಲಯಂತ=ಮಾಡಿದರು.

Rarest Archiver

ತಾ :—ಹೀಗೆ ಮಣಿಮಂತ ಮೊದಲಾದ ದೈತ್ಯರು ಭೀಮಸೇನದೇವರಿಂದ ಹತರಾಗಿ ಶಕ್ತಿಯಿಲ್ಲದವರಾದರು. ಅತಿಕಷ್ಟ ಮತ್ತು ದುಃಖವನ್ನು ಹೊಂದಿ ಸೇಡುತೀರಿಸಿಕೊಳ್ಳಲು ಕಲಿಯುಗದಲ್ಲಿ ಹುಟ್ಟಿದರು. ತಮ್ಮ ಸ್ವಭಾವಕ್ಕೆ ಅನುಗುಣವಾದ ಶ್ರೀವಿಷ್ಣುವು ಗುಣವಿಲ್ಲದವನು ಎಂಬುದನ್ನು ಸಾರುವ ಗ್ರಂಥಗಳನ್ನು ರಚಿಸಿದರು.

ವ್ಯಾ. ವಿ. :—ಏತಸ್ಯ ಪ್ರತೀಪಂ=ಏತತ್ಪ್ರತೀಪಂ, ತತ್. ಕರ್ತುಂ ಕಾಮಃ ಯೇಷಾಂ ತೇ=ಕರ್ತುಕಾಮಾಃ. ನಷ್ಟಂ ಓಜಃ ಯೇಷಾಂ ತೇ=ನಷ್ಟೌಜಸಃ. ವಿಗತಃ ಗುಣಃ ಯಸ್ಮಾತ್ಸಃ, ವಿಗುಣಸ್ಯ ಭಾವಃ ವೈಗುಣ್ಯಂ. ಮುಕುಂದಸ್ಯ ವೈಗುಣ್ಯಂ, ಮುಕುಂದವೈಗುಣ್ಯಸ್ಯ ಕಥಾ=ಮುಕುಂದವೈಗುಣ್ಯಕಥಾ, ತಾಮ್. ಸ್ವೇಷಾಂ ಯೋಗ್ಯಾ=ಸ್ವಯೋಗ್ಯಾ, ತಾಮ್. ಕರ್ತುಕಾಮಾಃ = 'ತುಂಕಾಮಮನಸೋರಪಿ' ಇದರಿಂದ ತುಮುನ್ ಪ್ರತ್ಯಯದ ಅನುಸ್ವಾರವು ಲೋಪವಾಗಿದೆ. ಆಕಲಯಂತ=ಕಲ ಗತೌ ಸಂಖ್ಯಾನೇ ಚ, ಹತ್ತನೆ ಗಣ, ಸಕ. ಲಙ್, ಆತ್ಮ. ಪ್ರ. ಬ. ಆ ಉಪಸರ್ಗ ಆ+ಅಕಲಯತ, ಅಕಲಯೇತಾಂ, ಆಕಲಯಂತ. ಆಕಲಯಥಾಃ ಆಕಲಯೇಥಾಂ, ಆಕಲಯಧ್ವಮ್. ಆಕಲಯೇ, ಆಕಲಯಾವಹಿ, ಆಕಲಯಾಮಹಿ.

ಯೋ ಭೂರಿವೈರೋ ಮಣಿಮಾನ್ ಮೃತಃ
ಪ್ರಾಗ್ವಾಗ್ಮೀ ಬುಭೂಷುಃ ಪರಿತೋಷಿತೇಶಃ ।
ಸ ಸಂಕರಾಖ್ಯೋಽಂಘ್ರಿತಲೇಷು ಜಜ್ಞೇ
ಸ್ಪೃಧಾ ಪರೇಽಪ್ಯಾಸುರಿಹಾಸುರೇಂದ್ರಾಃ ॥ ೪೭ ॥

ಅ :—ಪ್ರಾಕ್ ಯಃ ಮಣಿಮಾನ್ ಮೃತಃ ಸಃ ಭೂರಿವೈರಃ ವಾಗ್ಮೀ ಬುಭೂಷುಃ ಪರಿತೋಷಿತೇಶಃ ಅಂಘ್ರಿತಲೇಷು ಸಂಕರಾಖ್ಯಃ ಜಜ್ಞೇ. ಅಪರೇ ಅಸುರೇಂದ್ರಾಃ ಅಪಿ ಸ್ಪೃಧಾ ಇಹ ಆಸುಃ.

ಅ :—ಪ್ರಾಕ್=ಹಿಂದೆ, ಯಃ=ಯಾವ, ಮಣಿಮಾನ್=ಮಣಿಮಂತದೈತ್ಯನು, ಮೃತಃ = ಭೀಮಸೇನದೇವರಿಂದ ಸತ್ತನೋ; ಸಃ=ಆ ದೈತ್ಯನು ಭೂರಿವೈರಃ=ಹೆಚ್ಚಾದ ದ್ವೇಷವುಳ್ಳವನಾಗಿ, ವಾಗ್ಮೀ=ವಾಚಾ

Rarest Archiver

ಲನು, ಬುಭೂಷುಃ = ಆಗಲಿಚ್ಛೆಯುಳ್ಳವನಾಗಿ, ಪರಿತೋಷಿತ = ಸಂತೋಷ ಗೊಳಿಸಲ್ಪಟ್ಟ, ಈಶಃ (ಸನ್) = ಮಹಾದೇವನುಳ್ಳವನಾಗಿ, ಅಂಘ್ರಿತಲೇಷು = ಕಾಲಡಿಯೆಂಬ ಗ್ರಾಮದಲ್ಲಿ, ಸಂಕರಾಖ್ಯಃ = 'ಸಂಕರ' ಎಂದು ಹೆಸರುಳ್ಳವ ನಾಗಿ, ಜಜ್ಞೇ = ಹುಟ್ಟಿದನು. ಅಪರೇ = ಇತರ, ಅಸುರೇಂದ್ರಾಃ ಅಪಿ = ದೈತ್ಯಶ್ರೇಷ್ಠರೂ, ಸ್ಪೃಧಾ = ಸ್ಪರ್ಧೆಯಿಂದ, ಇಹ = ಈ ಭೂಮಿಯಲ್ಲಿ, ಆಸುಃ = ಹುಟ್ಟಿದರು.

ತಾ :—ಹಿಂದೆ ದ್ವಾಪರಯುಗದಲ್ಲಿ ಭೀಮಸೇನದೇವರು ಸೌಗಂಧಿಕಾ ಪುಷ್ಪವನ್ನು ತರುವಾಗ ಮಣಿಮಂತನೆಂಬ ದೈತ್ಯನನ್ನು ಕೊಂದಿದ್ದರು. ಆದರಿಂದ ಆ ದೈತ್ಯನು ಭೀಮಸೇನದೇವರಲ್ಲಿ ಬಹಳ ದ್ವೇಷವುಳ್ಳವನಾದನು. ತಾನು ವಾಚಾಲನಾಗಬೇಕೆಂದು ಮಹೇಶ್ವರನನ್ನು ಕುರಿತು ತಪಸ್ಸನ್ನು ಮಾಡಿ ದನು. ಶಿವನು ಸಂತುಷ್ಟನಾಗಿ ಹಾಗೆಯೇ ವರವನ್ನಿತ್ತನು. ತರುವಾಯ ಕಾಲಡಿಯೆಂಬ ಗ್ರಾಮದಲ್ಲಿ ಹುಟ್ಟಿ ಸಂಕರನೆಂಬ ಹೆಸರಿನಿಂದ ಪ್ರಸಿದ್ಧಿ ಗೊಂಡನು. ಇತರ ಅಸುರರೂ ವಾಯುದೇವರ ಮೇಲಿನ ಸ್ಪರ್ಧೆಯಿಂದ ಈ ಭೂಮಿಯಲ್ಲಿ ಹಾಗೆಯೇ ಹುಟ್ಟಿದರು.

ವ್ಯಾ. ವಿ. :—ಭೂರಿ ವೈರಂ ಯಸ್ಯ ಸಃ = ಭೂರಿವೈರಃ. ಪರಿತೋಷಿತಃ ಈಶಃ ಯೇನ ಸಃ = ಪರಿತೋಷಿತೇಶಃ. ಸಂಕರಃ ಇತಿ ಆಖ್ಯಾ ಯಸ್ಯ ಸಃ = ಸಂಕರಾಖ್ಯಃ. ಅಸುರಾಣಾಂ ಇಂದ್ರಾಃ = ಅಸುರೇಂದ್ರಾಃ. ಆಸುಃ = ಅಸ ಗತಿದೀಪ್ತ್ಯಾದಾನೇಷು, ಒಂದನೆ ಗಣ, ಅಕ. ಲಿಟ್, ಪರ. ಪ್ರ. ಏ. ಆಸ, ಆಸತುಃ, ಆಸುಃ. ಆಸಿಥ, ಆಸಥುಃ ಆಸ, ಆಸ ಆಸಿವ, ಆಸಿಮ.

ಸಾನ್ನಾಯ್ಯಮವ್ಯಕ್ತಹೃದಾಖುಭುಗ್ವಾ
ಶ್ವಾ ವಾ ಪುರೋಡಾಶಮಸಾರಕಾಮಃ ।
ಮಣಿಸ್ರಜಂ ವಾ ಪ್ಲವಗೋಽವ್ಯವಸ್ಥೋ
ಜಗ್ರಾಹ ವೇದಾದಿಕಮೇಷ ಪಾಪಃ ॥ ೪೮ ॥

ಅ :—ಅವ್ಯಕ್ತಹೃತ್ ಆಖುಭುಕ್ ಸಾನ್ನಾಯ್ಯಂ ವಾ ಅಸಾರಕಾಮಃ ಶ್ವಾ ಪುರೋಡಾಶಂ ವಾ, ಅವ್ಯವಸ್ಥಃ ಪ್ಲವಗಃ ಮಣಿಸ್ರಜಂ ವಾ ಪಾಪಃ ಏಷಃ ವೇದಾದಿಕಂ ಜಗ್ರಾಹ.

Rarest Archiver

ಅ :—ಅವ್ಯಕ್ತಹೃತ್=ಪ್ರಕಟಿಸದ ತನ್ನ ಅಭಿಪ್ರಾಯವುಳ್ಳ, ಆಖುಭುಕ್=ಬೆಕ್ಕು, ಸಾನ್ನಾಯ್ಯಂ ವಾ=ಯಜ್ಞದ ಹವಿಸ್ಸನ್ನು ಎಂಬಂತೆ, ಅಸಾರಕಾಮಃ=ಅಶುದ್ಧ ವಸ್ತುವಾದ ಮಲವನ್ನು ಅಪೇಕ್ಷಿಸುವ, ಶ್ವಾ=ನಾಯಿಯು, ಪುರೋಡಾಶಂ ವಾ=ಹೋಮದ ಚರುವನ್ನು ಎಂಬಂತೆ, ಅವ್ಯವಸ್ಥಃ=ಅತ್ಯಂತ ಚಂಚಲವಾದ, ಪ್ಲವಗಃ=ಕಪಿಯು, ಮಣಿಸ್ರಜಂ ವಾ=ರತ್ನದ ಮಾಲೆಯನ್ನು ಎಂಬಂತೆ, ಪಾಪಃ=ಪಾಪಿಷ್ಠನಾದ, ಏಷಃ=ಈ ಸಂಕರನು, ವೇದಾದಿಕಂ=ವೇದ ಮೊದಲಾದುದನ್ನು, ಜಗ್ರಾಹ=ತೆಗೆದುಕೊಂಡನು.

ತಾ :—ಯಜ್ಞಕ್ಕೆ ಆವಶ್ಯಕವಾದ ಹವಿಸ್ಸಿನರೂಪವಾದ ಹಾಲನ್ನು ಬೆಕ್ಕು ಕುಡಿಯಲು ಅಪೇಕ್ಷಿಸುವುದಾದರೂ ಆ ಆಸೆಯನ್ನು ತೋರಿಸದೆ ಕಣ್ಣು ಮುಚ್ಚಿಕೊಂಡೇ ಇದ್ದು ಸಮಯ ಒದಗಿದಾಗ ಆ ಹಾಲನ್ನು ಕುಡಿಯುವುದು. ಅಮೇಧ್ಯವನ್ನು ತಿನ್ನಲು ಬಯಸುವ ನಾಯಿಯು ಒಮ್ಮೊಮ್ಮೆ ಕದ್ದು ಯಜ್ಞದ ಚರುವನ್ನು ತಿನ್ನುವುದು. ಅತ್ಯಂತ ಚಂಚಲಮನಸ್ಸುಳ್ಳ ಕೋತಿಯು ರತ್ನ ಮಾಲೆಯ ಸ್ವರೂಪವನ್ನು ಅರಿಯದಿದ್ದರೂ ಅದನ್ನು ತೆಗೆದುಕೊಳ್ಳುವುದು. ಹಾಗೆಯೇ ಈ ಸಂಕರನು ಬ್ರಹ್ಮನು ಯಾವ ವೇದವಾಕ್ಯದಿಂದಲೂ ಹೇಳಲು ಅಸಾಧ್ಯನಾದುದರಿಂದ ಅವನನ್ನು ಹೇಳಲು ಯತ್ನಿಸುವ ವೇದವು ಪ್ರಮಾಣವಲ್ಲ. ಜೀವ ಮತ್ತು ಬ್ರಹ್ಮರಿಗೆ ಭೇದವಿಲ್ಲ. ಬ್ರಹ್ಮನು ಗುಣವಿಲ್ಲದವನು. ಅವನೇ ಜೀವರೂಪವನ್ನು ಪಡೆದು ಸಂಸಾರಿಯಾಗುವನು. ಪ್ರಪಂಚವೆಲ್ಲ ಸುಳ್ಳು. ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿದನು. ಸಂಸಾರದ ಬಂಧನ, ಸಂಸಾರದ ಬಿಡುಗಡೆ ಮೊದಲಾದ ವ್ಯವಸ್ಥೆಯನ್ನು ಸಮರ್ಥನೆ ಮಾಡಲು ಅಶಕ್ತನಾಗಿದ್ದರೂ ವೇದಾದಿಗಳನ್ನು ಅಭ್ಯಾಸಮಾಡಿದನು. ಆದರೆ ಬ್ರಹ್ಮನು ನಿರ್ವಿಶೇಷನಾದ್ದರಿಂದ ಅವನೇ ಇಲ್ಲವೆಂಬ ತನ್ನ ಅಭಿಪ್ರಾಯವನ್ನು ಪ್ರಕಟಿಸಲಿಲ್ಲ.

ವ್ಯಾ. ವಿ. :—ಅವ್ಯಕ್ತಂ ಹೃತ್ ಯಸ್ಯ ಸಃ=ಅವ್ಯಕ್ತಹೃತ್. ಆಖೂನ್ ಭುಂಕ್ತೇ ಇತಿ=ಆಖುಭುಕ್. ಅಸಾರೇ ಕಾಮಃ ಯಸ್ಯ ಸಃ=ಅಸಾರಕಾಮಃ. ಮಣೇಃ ಸ್ರಕ್=ಮಣಿಸ್ರಕ್, ತಾಮ್. ನ ವಿದ್ಯತೇ ವ್ಯವಸ್ಥಾ ಯಸ್ಯ ಸಃ=ಅವ್ಯವಸ್ಥಃ. ವೇದಃ ಆದಿಃ ಯಸ್ಯ ತತ್. ಜಗ್ರಾಹ–

Rarest Archiver

ಗ್ರಹ ಉಪಾದಾನೆ, ಒಂಭತ್ತನೇ ಗಣ, ಸಕ. ಲಿಟ್, ಪರ. ಪ್ರ. ಏ. ಜಗ್ರಾಹ, ಜಗೃಹತುಃ, ಜಗೃಹುಃ. ಜಗ್ರಹಿಥ, ಜಗೃಹಥುಃ, ಜಗೃಹ. ಜಗ್ರಾಹ ಜಗ್ರಹ, ಜಗೃಹಿವ ಜಗೃಹಿಮ. ಉಪಮಾಲಂಕಾರ.

ಜನೋ ನಮೇನ್ನಾಪರಥೇತಿ ಮತ್ವಾ
ಶಠಶ್ಚತುರ್ಥಾಶ್ರಮಮೇಷ ಭೇಜೇ ।
ಪದ್ಮಾಕರಂ ವಾ ಕಲುಷೀ (ಷಂ) ಚಿಕೀರ್ಷುಃ
ಸುದುರ್ದಮೋ ದುಷ್ಟಗಜೋ ವಿಶುದ್ಧಮ್ ॥ ೪೯ ॥

ಅ :—ಶಠಃ ಏಷಃ ಅಪರಥಾ ಜನಃ ನ ನಮೇತ್ ಇತಿ ಮತ್ವಾ ಸುದು-ರ್ದಮಃ ದುಷ್ಟಗಜಃ ವಿಶುದ್ಧಂ ಕಲುಷೀ (ಷಂ) ಚಿಕೀರ್ಷುಃ ಸನ್ ಪದ್ಮಾಕರಂ ವಾ ಚತುರ್ಥಾಶ್ರಮಂ ಭೇಜೇ.

ಅ :—ಶಠಃ=ಗುಟ್ಟಾದ ದ್ವೇಷವುಳ್ಳ, ಏಷಃ=ಈ ಸಂಕರನು, ಅಪರಥಾ=ಸಂನ್ಯಾಸಾಶ್ರಮವನ್ನು ಸ್ವೀಕರಿಸದಿದ್ದರೆ, ಜನಃ=ಪ್ರಪಂಚದ ಜನರು, ನ ನಮೇತ್=ನಮಸ್ಕಾರ ಮಾಡಲಾರರು (ವಿಧೇಯರಾಗರು). ಇತಿ=ಹೀಗೆಂದು, ಮತ್ವಾ = ತಿಳಿದು, ಸುದುರ್ದಮಃ=ಪಳಗಿಸಲಾಗದ, ದುಷ್ಟಗಜಃ=ಕೆಟ್ಟ ಆನೆಯು, ವಿಶುದ್ಧಂ=ತಿಳಿಯಾದುದನ್ನು, ಕಲುಷೀ (ಷಂ) ಚಿಕೀರ್ಷುಃ ಸನ್=ಕದಡಲು ಇಚ್ಛೆಯುಳ್ಳದ್ದಾಗಿ, ಪದ್ಮಾಕರಂ ವಾ =ತಾವರೆಕೊಳವನ್ನು ಎಂಬಂತೆ, ಚತುರ್ಥಾಶ್ರಮಂ=ನಾಲ್ಕನೆ ಆಶ್ರಮವಾದ ಸಂನ್ಯಾಸವನ್ನು, ಭೇಜೇ=ತೆಗೆದುಕೊಂಡನು.

ತಾ :—ಮಾವಟಿಗನಿಂದ ಯಾವ ರೀತಿಯಿಂದಲೂ ಪಳಗಿಸಲಾಗದ ಕೆಟ್ಟ ಆನೆಯು, ತಿಳಿಯಾದ ನೀರುಳ್ಳ ತಾವರೆಕೊಳದ ನೀರನ್ನು ಕದಡಿ ತಾವರೆ ಗಳನ್ನು ಹಾಳು ಮಾಡಲಿಚ್ಛಿಸಿ ಅದಕ್ಕೆ ಇಳಿಯುವುದು. ಅದರಂತೆ ವೇದ ಮೊದಲಾದವುಗಳಲ್ಲಿಯೂ, ಅವುಗಳಲ್ಲಿ ವರ್ಣಿತನಾದ ಬ್ರಹ್ಮನಲ್ಲಿಯೂ ಗುಟ್ಟಾದ ದ್ವೇಷವುಳ್ಳ ಈ ಸಂಕರನು ತಾನು ಸಂನ್ಯಾಸಾಶ್ರಮವನ್ನು ತೆಗೆದು ಕೊಳ್ಳದಿದ್ದರೆ ಜನರು ತನಗೆ ನಮಸ್ಕಾರ ಮಾಡಲಾರರು. ತನ್ನ ಮಾತನ್ನು ಕೇಳಲಾರರು. ಎಂದು ಆಲೋಚಿಸಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನು.

ವ್ಯಾ. ವಿ. :—ಚತುರ್ಣಾಂ ಪೂರಣಃ, ಚತುರ್ಥಶ್ಚಾಸೌ ಆಶ್ರಮಶ್ಚ= ಚತುರ್ಥಾಶ್ರಮಃ, ತಮ್. ಪದ್ಮಾನಾಂ ಆಕರಃ=ಪದ್ಮಾಕರಃ, ತಮ್.

Rarest Archiver

ಅಕಲುಷಂ ಕಲುಷಂ ಸಂಪದ್ಯಮಾನಂ ಕರ್ತುಮಿಚ್ಛುಃ = ಕಲುಷೀಚಿಕೀರ್ಷುಃ. ಸುಷ್ಠು ದುರ್ದಮಃ = ಸುದುರ್ದಮಃ ದುಷ್ಟಶ್ಚಾಸೌಗಜಶ್ಚ = ದುಷ್ಟಗಜಃ.

ಅವೈದಿಕಂ ಮಾಧ್ಯಮಿಕಂ ನಿರಸ್ತಂ
ನಿರೀಕ್ಷ್ಯ ತತ್ಪಕ್ಷಸುಪಕ್ಷಪಾತೀ ।
ತಮೇವ ಪಕ್ಷಂ ಪ್ರತಿಪಾದುಕೋಽಸೌ
ನ್ಯರೂರುಪನ್ಮಾರ್ಗಮಿಹಾನುರೂಪಮ್ ॥ ೫೦ ॥

ಅ :—ಅಸೌ ಅವೈದಿಕಂ ಮಾಧ್ಯಮಿಕಂ ನಿರಸ್ತಂ ನಿರೀಕ್ಷ್ಯ ತತ್ಪಕ್ಷಸು-ಪಕ್ಷಪಾತೀ ತಂ ಏವ ಪಕ್ಷಂ ಪ್ರತಿಪಾದುಕಃ ಇಹ ಅನುರೂಪಂ ಮಾರ್ಗಂ ನ್ಯರೂರುಪತ್.

ಅ :—ಅಸೌ = ಈ ಸಂಕರನು, ಅವೈದಿಕಂ = ವೇದ ವಿರುದ್ಧವಾದ ಅರ್ಥವನ್ನು ಬೋಧಿಸುವ, ಮಾಧ್ಯಮಿಕಂ = ಮಾಧ್ಯಮಿಕರೆಂಬ ಬೌದ್ಧರ ಸಂಬಂಧಿಯಾದ ಸಿದ್ಧಾಂತವನ್ನು, ನಿರಸ್ತಂ = ನಿರಾಕರಿಸಲ್ಪಟ್ಟಿದ್ದನಾಗಿ, ನಿರೀಕ್ಷ್ಯ = ನೋಡಿ, ತತ್ಪಕ್ಷ = ಆ ಸಿದ್ಧಾಂತದಲ್ಲಿ, ಸುಪಕ್ಷಪಾತೀ = ಹೆಚ್ಚು ಪ್ರೀತಿಯುಳ್ಳವನಾಗಿ, ತಂ ಏವ = ಅದೇ, ಪಕ್ಷಂ = ಸಿದ್ಧಾಂತವನ್ನು, ಪ್ರತಿ-ಪಾದುಕಃ = ಪ್ರತಿಪಾದನೆ ಮಾಡುವವನಾಗಿ, ಇಹ = ಈ ಸಿದ್ಧಾಂತವನ್ನು ಸಾಧಿಸುವ ವಿಷಯದಲ್ಲಿ, ಅನುರೂಪಂ = ಉಚಿತವಾದ. ಮಾರ್ಗಂ = ಕಾರಣ ವಾದ ಗ್ರಂಥವನ್ನು, ನ್ಯರೂರುಪತ್ = ನಿರೂಪಣೆ ಮಾಡಿದನು.

ತಾ :—ವೈದಿಕರು ವೇದಕ್ಕೆ ವಿರುದ್ಧವಾದ ವಿಷಯವನ್ನು ತಿಳಿಸುವ ಬೌದ್ಧ ಮತವನ್ನು ಖಂಡಿಸಿದರು. ಈ ಸಂಕರನು ಅದನ್ನು ನೋಡಿ ಆ ಬೌದ್ಧಸಿದ್ಧಾಂತದಲ್ಲಿ ಪ್ರೀತಿಯುಳ್ಳವನೂ, ಆ ಸಿದ್ಧಾಂತವನ್ನೇ ಪ್ರತಿಪಾದನೆ ಮಾಡುವವನೂ ಆಗಿ ತಾನು ವೇದಾಂತಿಯೆಂದು ಪ್ರಕಟಿಸುತ್ತಲೇ ಆ ಬೌದ್ಧ ಮತವನ್ನು ಸಮರ್ಥಿಸುವ ಗ್ರಂಥವನ್ನು ರಚಿಸಿದನು.

ವ್ಯಾ. ವಿ. :—ವೇದಸ್ಯ ಅಯಂ, ವೈದಿಕಃ ನ ಭವತೀತಿ = ಅವೈದಿಕಃ, ತಮ್. ಮಾಧ್ಯಮಿಕಾನಾಂ ಅಯಂ = ಮಾಧ್ಯಮಿಕಃ, ತಮ್. ತಸ್ಯ ಪಕ್ಷಃ = ತತ್ಪಕ್ಷಃ, ತಮ್. ಸುಪಕ್ಷಪಾತಃ ಅಸ್ಯಾಸ್ತೀತಿ = ಸುಪಕ್ಷಪಾತೀ. ನ್ಯರೂರುಪತ್ = ರೂಪ ರೂಪಕ್ರಿಯಾಯಾಂ, ಹತ್ತನೆ ಗಣ, ಸಕ. ಲುಙ್, ಪರ. ಪ್ರ. ಏ. ನಿ ಉಪಸರ್ಗ. ನ್ಯರೂರುಪತ್, ನ್ಯರೂರುಪತಾಂ, ನ್ಯರೂರುಪನ್.

Rarest Archiver

ನ್ಯರೂರುಪಃ, ನ್ಯರೂರುಪತಿಃ, ನ್ಯರೂರುಪತ. ನ್ಯರೂರುಪಂ ನ್ಯರೂರುಪಾವ, ನ್ಯರೂರುಪಾವು.

ಅಸತ್ಪದೇಽಸನ್ಸದಸದ್ವಿವಿಕ್ತಾಂ
ಮಾಯಾಖ್ಯಯಾ ಸಂವೃತಿಮಭ್ಯಧತ್ತ ।
ಬ್ರಹ್ಮಾಪ್ಯಖಂಡಂ ಬತ ಶೂನ್ಯಸಿದ್ಧ್ಯೈ
ಪ್ರಚ್ಛನ್ನಬೌದ್ಧೋಽಯಮತಃ ಪ್ರಸಿದ್ಧಃ ॥ ೫೧ ॥

ಅ:—ಅಸನ್ ಅಸತ್ಪದೇ ಸದಸದ್ವಿವಿಕ್ತಾಂ, ಸಂವೃತಿಂ ಮಾಯಾಖ್ಯಯಾ, ಶೂನ್ಯಸಿದ್ಧ್ಯೈ ಬ್ರಹ್ಮ ಅಖಂಡಂ ಅಪಿ ಅಭ್ಯಧತ್ತ ಬತ. ಅತಃ ಅಯಂ ಪ್ರಚ್ಛನ್ನಬೌದ್ಧಃ ಪ್ರಸಿದ್ಧಃ.

ಅ:—ಅಸನ್=ದುಷ್ಟನಾದ ಈ ಸಂಕರನು, ಅಸತ್ಪದೇ=ಅಸತ್ತಿನ ಸ್ಥಾನದಲ್ಲಿ (ಜಗತ್ತು ಇಲ್ಲ ಎಂದು ಹೇಳುವ ಸ್ಥಾನದಲ್ಲಿ) ಸದಸದ್ವಿವಿಕ್ತಾಂ= ಇರುವ ಮತ್ತು ಇಲ್ಲದಿರುವುದಕ್ಕಿಂತ ವಿಲಕ್ಷಣವಾದುದನ್ನಾಗಿ, ಸಂವೃತಿಂ= ಬೌದ್ಧರು ಹೇಳುವ ಅವಿದ್ಯೆಯನ್ನು, ಮಾಯಾಖ್ಯಯಾ=ಮಾಯೆ ಎಂಬ ಹೆಸರಿನಿಂದ, ಶೂನ್ಯಸಿದ್ಧ್ಯೈ=ಬೌದ್ಧರಂತೆ ಶೂನ್ಯತ್ವದ ಸಿದ್ಧಿಗಾಗಿ, ಬ್ರಹ್ಮ =ಬ್ರಹ್ಮನನ್ನು, (ಗುಣಪೂರ್ಣನಾದ ಪರಮಾತ್ಮನನ್ನು) ಅಖಂಡಂ=ಧರ್ಮ ವಿಲ್ಲದವನನ್ನಾಗಿ, ಅಭ್ಯಧತ್ತ=ಹೇಳಿದನು. ಬತ=ಅಯ್ಯೋ! ಅತಃ=ಈ ಕಾರಣದಿಂದ, ಅಯಂ=ಈ ಸಂಕರನು, ಪ್ರಚ್ಛನ್ನಬೌದ್ಧಃ=ಬೇರೆ ವೇಷದ ಬೌದ್ಧ ಎಂದು, ಪ್ರಸಿದ್ಧಃ=ಪ್ರಖ್ಯಾತನಾದನು.

ತಾ:—ಬೌದ್ಧರು ಪ್ರಪಂಚವು ಇಲ್ಲ. ಅದು ಅಸತ್ ಎಂದರು. ಪ್ರಪಂಚವು ತೋರುವುದಕ್ಕೆ ಕಾರಣವಾದುದು ಸಂವೃತಿ ಎಂದೂ ಯಾವ ಧರ್ಮವೂ ಇಲ್ಲದ ಶೂನ್ಯವೇ ತತ್ತ್ವವೆಂದೂ ಹೇಳಿದರು. ಈಸಂಕರನೂ ಅದೇ ರೀತಿಯಲ್ಲಿ ಅಭಿಪ್ರಾಯವುಳ್ಳವನಾದರೂ ಜನರು 'ಇವನು ಅವೈದಿಕ' ಎಂದಾರೆಂಬ ಭಯದಿಂದ ಪ್ರಪಂಚವಿಲ್ಲವೆನ್ನುವುದಕ್ಕೆ ಬದಲಾಗಿ ಪ್ರಪಂಚವು ಇರುವುದೂ ಅಲ್ಲ ಇಲ್ಲದಿರುವುದೂ ಅಲ್ಲ. ಇದಕ್ಕೆ ವಿಲಕ್ಷಣವಾದುದು ಎಂದೂ ಬೌದ್ಧರು ಹೇಳುವ ಸಂವೃತಿ ಎಂಬ ಅವಿದ್ಯೆಯನ್ನು ಮಾಯೆಯೆಂದೂ ಹೇಳಿದನು. ಬ್ರಹ್ಮನಲ್ಲಿ ಗುಣಾದಿಗಳಿಲ್ಲದಿರುವುದರಿಂದ ಅವನು ಅಖಂಡ ಎಂದು ಹೇಳಿ ಬ್ರಹ್ಮನು ಶೂನ್ಯ ಎಂದೇ ಸಾಧಿಸಿದನು. ಹೀಗೆ ಶೂನ್ಯತ್ವ ಸಿದ್ಧಿಗಾಗಿ

Rarest Archiver

ಬ್ರಹ್ಮನು ಅಖಂಡ (ಗುಣವಿಲ್ಲದವನು) ಎಂದು ಸಾರಿದನು. ಇದರಿಂದ ಸಜ್ಜನರ ಸಭೆಯಲ್ಲಿ ಈ ಶಂಕರನು ಬೇರೆ ವೇಷದಿಂದ ತನ್ನ ಸ್ವರೂಪವನ್ನು ಮುಚ್ಚಿಕೊಂಡ ಬೌದ್ಧನೆಂದು ಪ್ರಸಿದ್ಧನಾದನು.

ವಾ. ವಿ:—ಅಸತಃ ಪದಂ = ಅಸತ್ಪದಂ, ತಸ್ಮಿನ್. ಸನ್ ನ ಭವತೀತಿ = ಅಸನ್. ಸಚ್ಚ ಅಸಚ್ಚ = ಸದಸತೀ, ಸದಸದ್ಭ್ಯಾಂ ವಿವಿಕ್ತಂ = ಸದಸದ್ವಿವಿಕ್ತಂ. ಮಾಯಾ ಇತಿ ಆಖ್ಯಾ ಯಸ್ಯಾಃ ಸಾ = ಮಾಯಾಖ್ಯಾ, ತಯಾ. ನ ವಿದ್ಯತೇ ಖಂಡಃ ಯಸ್ಯ ತತ್ = ಅಖಂಡವತ್. ಶೂನ್ಯಸ್ಯ ಸಿದ್ಧಿಃ = ಶೂನ್ಯಸಿದ್ಧಿಃ, ತಸ್ಯೈ. ಪ್ರಚ್ಛನ್ನಶ್ಚಾಸೌ ಬೌದ್ಧಶ್ಚ = ಪ್ರಚ್ಛನ್ನಬೌದ್ಧಃ. ಅಭ್ಯಧತ್ತ = ಡು ಧಾಞ್ ಧಾರಣಪೋಷಣಯೋಃ, ಲಙ್, ಆತ್ಮ. ಪ್ರ. ಏ. ಅಭಿ ಉಪಸರ್ಗ. ಅಭಿ+ಅಧತ್ತ, ಅದಧಾತಾಂ, ಅದಧತ. ಅಧತ್ಥಾಃ, ಅದಧಾಥಾಂ, ಅದಧ್ವಮ್. ಅದಧಿ, ಅದಧ್ವಹಿ, ಅದಧ್ಮಹಿ.

ಯದ್ಬ್ರಹ್ಮಸೂತ್ರೋತ್ಕರಭಾಸ್ಕರಂ ಚ
ಪ್ರಕಾಶಯಂತಂ ಸಕಲಂ ಸ್ವಗೋಭಿಃ ।
ಅಚೂಚರದ್ವೇದಸಮೂಹವಾಹಂ
ತತೋ ಮಹಾತಸ್ಕರಮೇನಮಾಹುಃ ॥ ೫೨ ॥

ಅ:—ಯತ್ ಸ್ವಗೋಭಿಃ ಸಕಲಂ ಪ್ರಕಾಶಯಂತಂ ವೇದಸಮೂಹವಾಹಂ ಬ್ರಹ್ಮಸೂತ್ರೋತ್ಕರಭಾಸ್ಕರಂ ಚ ಅಚೂಚುರತ್, ತತಃ ಏನಂ ಮಹಾತಸ್ಕರಂ ಆಹುಃ.

ಅ:—ಯತ್ = ಯಾವ ಕಾರಣದಿಂದ (ಶಂಕರನು) ಸ್ವಗೋಭಿಃ = ತನ್ನ ಮಾತುಗಳಿಂದ, ಕಿರಣಗಳಿಂದ, ಸಕಲಂ = ಜೀವೇಶ್ವರಸ್ವರೂಪ ಮೊದಲಾದವುಗಳನ್ನು, ಎಲ್ಲ ಪ್ರಪಂಚವನ್ನು, ಪ್ರಕಾಶಯಂತಂ = ಪ್ರಕಟಿಸುವ, ಪ್ರಕಾಶಗೊಳಿಸುವ, ವೇದಸಮೂಹ = ವೇದಗಳ ಸಮೂಹವನ್ನು, ವಾಹಂ = ಪ್ರಕಾಶಗೊಳಿಸುವ, ವೇದಸಮೂಹ = ವೇದಗಳ ಸಮೂಹವನ್ನು, ವಾಹಂ = ಪ್ರಮಾಣೀಕರಿಸುವ ಮೂಲಕ ಹೊತ್ತಿರುವ, ಸಮಸ್ತವೇದಗಳೇ ವಾಹನವಾಗುಳ್ಳ, ಬ್ರಹ್ಮಸೂತ್ರ = ವೇದಾರ್ಥಗಳನ್ನು ನಿರ್ಣಯಿಸುವ ಸೂತ್ರಗಳ, ಉತ್ಕರ = ಸಮೂಹವೆಂಬ, ಭಾಸ್ಕರಂ ಚ = ಸೂರ್ಯನನ್ನೂ, ಅಚೂಚುರತ್ = ಕದ್ದನೋ, ತತಃ = ಆದ್ದರಿಂದ, ಏನಂ = ಈ ಶಂಕರನನ್ನು, ಮಹಾತಸ್ಕರಂ = ದೊಡ್ಡಕಳ್ಳನನ್ನಾಗಿ, ಆಹುಃ = ಹೇಳುತ್ತಾರೆ.

Rarest Archiver

ತಾ :—ವೇದವ್ಯಾಸರು ವೇದಗಳ ಅರ್ಥವನ್ನು ನಿರ್ಣಯಿಸುವುದಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದರು. ಈ ಬ್ರಹ್ಮಸೂತ್ರಗಳ ಸಮೂಹವು ತನ್ನ ವಾಕ್ಯಗಳಿಂದ ಜೀವೇಶ್ವರಸ್ವರೂಪ ಮೊದಲಾದವುಗಳನ್ನು ಪ್ರಕಟಿಸುವ ಮೂಲಿಕ ಕಿರಣಗಳಿಂದ ಪ್ರಪಂಚವನ್ನು ಪ್ರಕಾಶಗೊಳಿಸುವ ವೇದಸಮೂಹಗಳೆ ವಾಹನವಾಗುಳ್ಳ ಸೂರ್ಯನಂತೆ ಕಂಗೊಳಿಸುತ್ತಿದೆ. ಈ ಸಂಕರನು ಆ ಸೂತ್ರಗಳನ್ನು ಕದ್ದನು. ಸೂತ್ರಗಳಿಗೆ ಅಪಾರ್ಥ ಮಾಡಿದನು. ಅದರಿಂದ ಇವನನ್ನು ದೊಡ್ಡಕಳ್ಳನೆನ್ನುವರು.

ವ್ಯಾ.ವಿ. :—ಬ್ರಹ್ಮಣಃ ಸೂತ್ರಾಣಿ, ಬ್ರಹ್ಮಸೂತ್ರಾಣಾಂ ಉತ್ಕರಃ, ಬ್ರಹ್ಮಸೂತ್ರೋತ್ಕರಃ ಏವ ಭಾಸ್ಕರಃ = ಬ್ರಹ್ಮಸೂತ್ರೋತ್ಕರಭಾಸ್ಕರಃ, ತಮ್. ಸ್ವಸ್ಯಗಾವಃ = ಸ್ವಗಾವಃ, ತಾಭಿಃ. ವೇದಾನಾಂ ಸಮೂಹಃ, ವೇದ-ಸಮೂಹಃ ಏವ ವಾಹಃ ಯಸ್ಯ ಸಃ = ವೇದಸಮೂಹವಾಹಃ ತಮ್. ಮಹಾಂಶ್ಚಾಸೌ ತಸ್ಕರಶ್ಚ = ಮಹಾತಸ್ಕರಃ, ತಮ್. ಅಚೂಚುರತ್–ಚುರಸ್ತೇಯೇ, ಹತ್ತನೆ ಗಣ, ಸಕ. ಲುಙ್ ಪರ. ಪ್ರ. ಏ. ಅಚೂಚುರತ್, ಅಚೂಚುರತಾಂ, ಅಚೂಚುರನ್. ಅಚೂಚುರಃ, ಅಚೂಚುರತಂ, ಅಚೂ-ಚುರತ. ಅಚೂಚುರಂ, ಅಚೂಚುರಾವ, ಅಚೂಚುರಾಮ

ಸ್ವಸೂತ್ರಜಾತಸ್ಯ ವಿರುದ್ಧಭಾಷೀ
ತದ್ಭಾಷ್ಯಕಾರೋಽಹಮಿತಿ ಬ್ರುವನ್ಯಃ ।
ತಂ ತತ್ಕ್ಷಣಾದ್ಯೋ ನ ದಿಧಕ್ಷತಿ ಸ್ಮ
ಸ ವ್ಯಾಸರೂಪೋ ಭಗವಾನ್ ಕ್ಷಮಾಬ್ಧಿಃ ॥ ೫೩ ॥

ಅ :—ಯಃ ಸ್ವಸೂತ್ರಜಾತಸ್ಯ ವಿರುದ್ಧಭಾಷೀ ಅಹಂ ತದ್ಭಾಷ್ಯಕಾರಃ ಇತಿ ಬ್ರುವನ್ (ವರ್ತತೇ). ತಂ ಯಃ ವ್ಯಾಸರೂಪಃ ಭಗವಾನ್ ತತ್ಕ್ಷಣಾತ್ ನ ದಿಧಕ್ಷತಿ ಸ್ಮ, ಸಃ ಕ್ಷಮಾಬ್ಧಿಃ.

ಅ :—ಯಃ = ಯಾವ ಸಂಕರನು, ಸ್ವಸೂತ್ರಜಾತಸ್ಯ = ತನ್ನ ಸೂತ್ರಗಳಾದ ಬ್ರಹ್ಮಸೂತ್ರಗಳ ಸಮೂಹಕ್ಕೆ, ವಿರುದ್ಧಭಾಷೀ = ವ್ಯತ್ಯಾಸವಾಗಿ ಅರ್ಥ ಹೇಳುತ್ತ, ಅಹಂ = ನಾನು, ತದ್ಭಾಷ್ಯಕಾರಃ = ಆ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಮಾಡುವವನು, ಇತಿ = ಹೀಗೆಂದು, ಬ್ರುವನ್

Rarest Archiver

(ವರ್ತತೇ)—ಹೇಳುತ್ತ ಇದ್ದಾನೋ, ತಂ — ಆ ಸಂಕರನನ್ನು, ಯಃ— ಯಾವ, ವ್ಯಾಸರೂಪಃ—ವ್ಯಾಸರ ರೂಪವುಳ್ಳ, ಭಗವಾನ್—ಷಡ್ಗುಣೈಶ್ವರ್ಯ ವುಳ್ಳ ನಾರಾಯಣನು, ತತ್ ಕ್ಷಣಾತ್ —ಆ ಕ್ಷಣದಲ್ಲಿಯೇ, ನ ದಿಧಕ್ಷತಿ ಸ್ಮ —ಸುಡಲು ಇಚ್ಛಿಸಲಿಲ್ಲವೋ, ಸಃ — ಆ ನಾರಾಯಣನು, ಕ್ಷಮಾಬ್ಧಿಃ— ಸಹನೆಯ ಸಮುದ್ರನು.

ತಾ :—ಆ ಸಂಕರನು ವ್ಯಾಸರ ಬ್ರಹ್ಮಸೂತ್ರಗಳಿಗೆ ವಿರುದ್ಧವಾದ, ಪ್ರಪಂಚ ಸುಳ್ಳು ಎಂಬಿವೇ ಮೊದಲಾದ ಅರ್ಥವನ್ನು ಹೇಳುತ್ತ ಅವುಗಳಿಗೆ ನಾನು ಭಾಷ್ಯಕಾರನು ಎಂದು ಸಾರುತ್ತಿದ್ದನು. ಹೀಗಿದ್ದರೂ ಕ್ಷಮೆಗೆ ಸಮುದ್ರ ದಂತೆ ಇರುವ ವ್ಯಾಸರೂಪೀ ನಾರಾಯಣನು ಅವನನ್ನು ಕೂಡಲೇ ಸುಡ ಲಿಚ್ಛಿಸಲಿಲ್ಲ.

ವ್ಯಾ.ವಿ. :—ಸ್ವಸ್ಯ ಸೂತ್ರಾಣಿ, ಸ್ವಸೂತ್ರಾಣಾಂ ಜಾತಂ — ಸ್ವಸೂತ್ರಜಾತಮ್, ತಸ್ಯ. ವಿರುದ್ಧಂ ಭಾಷತೇ ಇತಿ—ವಿರುದ್ಧಭಾಷೀ. ಭಾಷ್ಯಂ ಕರೋತೀತಿ—ಭಾಷ್ಯಕಾರಃ, ತೇಷಾಂ ಭಾಷ್ಯಕಾರಃ—ತದ್ಭಾಷ್ಯ- ಕಾರಃ. ವ್ಯಾಸಃ ಇತಿ ರೂಪಂ ಯಸ್ಯ ಸಃ—ವ್ಯಾಸರೂಪಃ. ಭಗಃ ಅಸ್ಯಾಸ್ತೀತಿ —ಭಗವಾನ್. ಕ್ಷಮಾಯಾಃ ಅಬ್ಧಿಃ — ಕ್ಷಮಾಬ್ಧಿಃ. ದಿಧಕ್ಷತಿ-ದಗ್ಧುಂ ಇಚ್ಛತಿ, ದಹ ಭಸ್ಮೀಕರಣೇ, ಒಂದನೆ ಗಣ, ಸಕ. ಸನ್ನಂತ, ಲಟ್, ಪರ. ದಿಧಕ್ಷತಿ, ದಿಧಕ್ಷತಃ, ದಿಧಕ್ಷಂತಿ. ದಿಧಕ್ಷಸಿ, ದಿಧಕ್ಷಥಃ, ದಿಧಕ್ಷಥ. ದಿಧಕ್ಷಾಮಿ, ದಿಧಕ್ಷಾವಃ ದಿಧಕ್ಷಾಮಃ.

*ನಿಗಮಸನ್ಮಣಿದೀಪಗಣೋಽಭವ-
ತ್ತದುರುವಾಗ್ಗಣಪಂಕನಿಗೂಢಭಾಃ ।
ಅವಿದುಷಾಮಿತಿ ಸಂಕರತಾಕರಃ
ಸ ಕಿಲ ಸಂಕರ ಇತ್ಯಭಿಶುಶ್ರುವೇ ॥ ೩೪ ॥

ಅ :—ನಿಗಮಸನ್ಮಣಿದೀಪಗಣಃ ತದುರುವಾಗ್ಗಣಪಂಕನಿಗೂಢಭಾಃ ಅಭವತ್, ಇತಿ ಅವಿದುಷಾಂ ಸಂಕರತಾಕರಃ ಸಃ ಸಂಕರಃ ಇತಿ ಅಭಿಶುಶ್ರುವೇ.

ಅ :—ನಿಗಮ—ವೇದಗಳೆಂಬ, ಸನ್ಮಣಿ—ಉತ್ತಮ ರತ್ನಗಳ, ದೀಪ

---

* 'ದ್ರುತವಿಲಂಬಿತಮಾಹ ನಭೌ ಭರೌ' ಎಂಬ ಲಕ್ಷಣದಂತೆ ಈ ಪದ್ಯವು ದ್ರುತವಿಲಂಬಿತವೃತ್ತದಲ್ಲಿದೆ.

Rarest Archives

—ದೀಪಗಳ, ಗಣಃ—ಸಮೂಹವು, ತೇ—ಆ ಸಂಕರನ, ಉರು—ಹೆಚ್ಚಾದ, ವಾಗ್ಗಣ — ವ್ಯಾಖ್ಯಾನರೂಪವಾದ ಮಾತುಗಳ ಸಮೂಹವೆಂಬ, ಪಂಕ— ಕೆಸರಿನಿಂದ, ನಿಗೂಢ—ಅಡಗಿದ, ಭಾಃ—ಕಾಂತಿಯುಳ್ಳದು, ಅಭವತ್— ಆಯಿತು ಇತಿ—ಈ ಕಾರಣದಿಂದ, ಅವಿದುಷಾಂ—ವೇದಾರ್ಥವನ್ನರಿಯದ ಮನುಷ್ಯರಿಗೆ, ಸಂಕರತಾಕರಃ—ಸಾಂಕರ್ಯವನ್ನುಂಟುಮಾಡುವ, (ಭೇದಗಳಿಲ್ಲ ವೆಂಬ ಜ್ಞಾನವನ್ನುಂಟುಮಾಡುವ) ಸಃ—ಅವನು, ಸಂಕರಃ—ಇತಿ ಸಂಕರ ಎಂದು, ಅಭಿಶುಶ್ರುವೇ ಕಿಲ — ಕೇಳಲ್ಪಟ್ಟನು. (ವಿದ್ವಾಂಸರ ಸಭೆಯಲ್ಲಿ ಪ್ರಸಿದ್ಧನಾದನು).

ತಾ :—ರತ್ನದೀಪದಂತೆ ಭಗವಂತನ ಸ್ವರೂಪ ಮೊದಲಾದುದನ್ನು ಚೆನ್ನಾಗಿ ತಿಳಿಸುವ ವೇದವು ಆ ಸಂಕರನ ದುಷ್ಟ ವ್ಯಾಖ್ಯಾನವೆಂಬ ಕೆಸರಿನಿಂದ ಕಳೆಗುಂದಿತು. ಹೀಗೆ ವೇದಾರ್ಥವನ್ನರಿಯದ ಮೂಢ ಮಾನವರಿಗೆ ಯಾವ ಭೇದವೂ ಇಲ್ಲವೆಂಬ ಜ್ಞಾನವನ್ನುಂಟುಮಾಡುವುದರಿಂದ ಅವನು ವಿದ್ವಾಂಸರ ಸಭೆಯಲ್ಲಿ ಸಂಕರ ಎಂದು ಪ್ರಸಿದ್ಧಿಗೊಂಡನು.

ವ್ಯಾ. ವಿ. :—ಸಂತಶ್ಚ ತೇ ಮಣಯಶ್ಚ, ನಿಗಮಾಃ ಏವ ಸನ್ಮಣಯಃ, ನಿಗಮಸನ್ಮಣಯಃ ಏವ ದೀಪಾಃ, ನಿಗ....ದೀಪಾನಾಂ ಗಣಃ—ನಿಗ....ದೀಪ- ಗಣಃ. ಉರವಶ್ಚ ತಾಃ ವಾಚಶ್ಚ, ತಸ್ಯ ಉರುವಾಚಃ, ತದುರುವಾಚಾಂ ಗಣಃ, ತದು...ಗಣಃ ಏವ ಪಂಕಃ, ತದು....ಪಂಕೇನ ನಿಗೂಢಾ, ತದು.... ನಿಗೂಢಾ ಭಾಃ ಯಸ್ಯ ಸಃ—ತದುರು....ಭಾಃ. ವಿದ್ವಾಂಸಃ ನ ಭವಂತೀತಿ— ಅವಿದ್ವಾಂಸಃ, ತೇಷಾಮ್. ಸಂಕರಸ್ಯ ಭಾವಃ—ಸಂಕರತಾ, ಕರೋತಿ ಇತಿ ಕರಃ, ಸಂಕರತಾಯಾಃ ಕರಃ—ಸಂಕರತಾಕರಃ. ಅಭಿಶುಶ್ರುವೇ-ಶ್ರು ಶ್ರವಣೇ, ಒಂದನೆ ಗಣ. ಸಕ. ಕರ್ಮಣಿ, ಲಿಟ್, ಆತ್ಮ. ಪ್ರ. ಏ. ಅಭಿ ಉಪಸರ್ಗ. ಅಭಿ+ಶುಶ್ರುವೇ, ಶುಶ್ರುವಾತೇ, ಶುಶ್ರುವಿರೇ. ಶುಶ್ರುಷೇ, ಶುಶ್ರುವಾಥೇ, ಶುಶ್ರುಢ್ವೇ. ಶುಶ್ರುವೇ, ಶುಶ್ರುವಹೇ, ಶುಶ್ರುಮಹೇ.

*ವಿಶ್ವಂ ಮಿಥ್ಯಾ ವಿಭುರಗುಣವಾನಾತ್ಮನಾಂ ನಾಸ್ತಿ ಭೇದೋ
ದೈತ್ಯಾ ಇತ್ಥಂ ವ್ಯದಧತ ಗಿರಾಂ ದಿಕ್ಷು ಭೂಯಃ ಪ್ರಸಿದ್ಧಿಮ್ ।

* 'ಮಂದಾಕ್ರಾಂತಾ ಜಲಧಿಷಡಗೈರ್ಮ್ಭೌ ನತೌ ತಾದ್ಗುರೂ ಚೇತ್' ಎಂಬ ಲಕ್ಷಣದಂತೆ ಇಲ್ಲಿ ಮಂದಾಕ್ರಾಂತಾ ವೃತ್ತವಿದೆ.

Rarest Archiver

**ಆನಂದಾದ್ಯೈರ್ಗುರುಗುಣಗಣೈಃ ಪೂರಿತೋ ವಾಸುದೇವೋ**
**ಮಂದಂ ಮಂದಂ ಮನಸಿ ಚ ಸತಾಂ ಹಂತ ನೂನಂ ತಿರೋಽಭೂತ್**
**॥ ೫೫ ॥**

**ಇತಿ ಶ್ರೀಮತ್ಕವಿಕುಲತಿಲಕಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯಸುತ-**
**ನಾರಾಯಣಪಂಡಿತಾಚಾರ್ಯವಿರಚಿತೇ ಶ್ರೀಮತ್ಸುಮಧ್ವ**
**ವಿಜಯೇ ಮಹಾಕಾವ್ಯೇ ಆನಂದಾಂಕೇ**
**ಪ್ರಥಮಃ ಸರ್ಗಃ**

ಅ :—ದೈತ್ಯಾಃ ವಿಶ್ವಂ ಮಿಥ್ಯಾ, ವಿಭುಃ ಅಗುಣವಾನ್, ಆತ್ಮನಾಂ ಭೇದಃ ನಾಸ್ತಿ, ಇತ್ಥಂ ದಿಕ್ಷು ಗಿರಾಂ ಭೂಯಃ ಪ್ರಸಿದ್ಧಿಂ ವ್ಯದಧತ. ಆನಂದಾದ್ಯೈಃ ಗುರುಗುಣಗಣೈಃ ಪೂರಿತಃ ವಾಸುದೇವಃ ಸತಾಂ ಮನಸಿ ಚ ಮಂದಂ ಮಂದಂ ತಿರೋಽಭೂತ್. ನೂನಂ, ಹಂತ.

ಅ :—ದೈತ್ಯಾಃ=ಮಣಿಮಂತ ಮೊದಲಾದ ದೈತ್ಯರು, ವಿಶ್ವಂ=ಪ್ರಪಂಚವು, ಮಿಥ್ಯಾ=ಸುಳ್ಳು. (ಇರುವುದೂ ಅಲ್ಲ. ಇಲ್ಲದಿರುವುದೂ ಅಲ್ಲ. ಇದಕ್ಕಿಂತ ವಿಲಕ್ಷಣವಾದುದು). ವಿಭುಃ=ಎಲ್ಲೆಡೆಯಲ್ಲಿ ವ್ಯಾಪ್ತನಾದ ವಿಷ್ಣುವು, ಅಗುಣವಾನ್=ಗುಣಗಳಿಲ್ಲದವನು ಅಥವಾ ದೋಷವುಳ್ಳವನು. ಆತ್ಮನಾಂ=ಚೇತನಗಳಿಗೆ, ಭೇದಃ=ಭೇದವು, ನಾಸ್ತಿ=ಇಲ್ಲ. ಇತ್ಥಂ=ಹೀಗೆ, ದಿಕ್ಷು=ಅನೇಕ ದಿಕ್ಕುಗಳಲ್ಲಿ (ದೇಶಗಳಲ್ಲಿ), ಗಿರಾಂ=ಮಾತುಗಳ, ಭೂಯಃ=ಬಹಳವಾಗಿ, ಪ್ರಸಿದ್ಧಿಂ=ಪ್ರಖ್ಯಾತಿಯನ್ನು, ವ್ಯದಧತ ಮಾಡಿದರು. ಆನಂದಾದ್ಯೈಃ=ಆನಂದ ಮೊದಲಾಗುಳ್ಳ, ಗುರುಗುಣಗಣೈಃ =ಉತ್ತಮ ಗುಣಗಳ ಸಮೂಹಗಳಿಂದ, ಪೂರಿತಃ=ತುಂಬಿರುವ, ವಾಸುದೇವಃ=ಶ್ರೀಮನ್ನಾರಾಯಣನು, ಸತಾಂ = ಸಜ್ಜನರ, ಮನಸಿ ಚ= ಮನಸ್ಸಿನಲ್ಲಿಯೂ, ಮಂದಂ ಮಂದಂ=ಮೆಲ್ಲಮೆಲ್ಲನೆ, ತಿರೋಽಭೂತ್= ಅಡಗಿಹೋದನು. ನೂನಂ=ನಿಶ್ಚಯ. ಹಂತ=ಅಯ್ಯೊ!

ತಾ :—ಮಣಿಮಂತ ಮೊದಲಾದ ದೈತ್ಯರು, 'ಪ್ರಪಂಚವು ಸುಳ್ಳು ಎಂದರೆ ಇರುವುದೂ ಅಲ್ಲ. ಇಲ್ಲದಿರುವುದೂ ಅಲ್ಲ. ಇವೆರಡಕ್ಕಿಂತ ವಿಲಕ್ಷಣವಾದುದು. ಎಲ್ಲ ಕಡೆಯಲ್ಲಿ ವ್ಯಾಪ್ತನಾದ ಶ್ರೀಮಹಾವಿಷ್ಣುವು ಗುಣವಿಲ್ಲದವನು. ಅಥವಾ ಪರಮಾತ್ಮನೇ ಜೀವನಾಗಿರುವುದರಿಂದ ದೋಷವುಳ್ಳವನು.

Rarest Archiver

ಆತ್ಮಗಳಿಗೆ ಪರಸ್ಪರ ಭೇದವಿಲ್ಲ.' ಈ ರೀತಿ ಎಲ್ಲ ದೇಶಗಳಲ್ಲಿಯೂ ಪ್ರಚಾರ ಮಾಡಿದರು. ಇದರಿಂದ ಭ್ರಾಂತಿಗೊಂಡ ಸಜ್ಜನರೂ ಮೆಲ್ಲಮೆಲ್ಲನೆ ಆನಂದಾದಿ ಗುಣಗಳ ಸಮೂಹಗಳಿಂದ ಪೂರ್ಣನಾದ ಶ್ರೀವಿಷ್ಣುವು ಇಲ್ಲವೆಂದೇ ತಿಳಿದರು.

ವ್ಯಾ. ವಿ. :—ಗುಣಃ ಅಸ್ಯಾಸ್ತೀತಿ=ಗುಣವಾನ್, ಗುಣವಾನ್ ನ ಭವತೀತಿ=ಅಗುಣವಾನ್. ಆನಂದಃ ಆದ್ಯಃ ಯೇಷಾಂ ತೇ=ಆನಂದಾದ್ಯಾಃ. ತೈಃ. ಗುರವಶ್ಚ ತೇ ಗುಣಾಶ್ಚ, ಗುರುಗುಣಾನಾಂ ಗಣಾಃ ಗುರುಗುಣ-ಗಣಾಃ, ತೈಃ. ಅಸ್ತಿ—ಅಸ್ ಭುವಿ, ಎರಡನೆ ಗಣ, ಅಕ. ಲಟ್, ಪರ. ಪ್ರ. ಏ. ಅಸ್ತಿ, ಸ್ತಃ, ಸಂತಿ. ಅಸಿ, ಸ್ಥಃ, ಸ್ಥ. ಅಸ್ಮಿ, ಸ್ವಃ, ಸ್ಮಃ ಅಭೂತ್—ಭೂ ಸತ್ತಾಯಾಂ. ಒಂದನೆ ಗಣ ಅಭೂತ್, ಅಭೂತಾಂ, ಅಭೂವನ್, ಅಭೂಃ, ಅಭೂತಂ, ಅಭೂತ. ಅಭೂವಂ, ಅಭೂವ, ಅಭೂಮ.

ವಿಶೇಷ ವಿಷಯ :—ಈ ಕಾವ್ಯದಲ್ಲಿ ಶ್ರೀಆನಂದತೀರ್ಥರನ್ನು ವರ್ಣಿಸುವುದರಿಂದ ಸರ್ಗದ ಕೊನೆಯ ಪದ್ಯದಲ್ಲಿ ಆನಂದವೆಂಬ ಪದವನ್ನು ಕವಿವರ್ಯರು ಅಂಕಿತವಾಗಿಟ್ಟಿದ್ದಾರೆ.

ಹೀಗೆ ಶ್ರೀಕವಿಕುಲ ತಿಲಕ ಶ್ರೀಮನ್ನಾರಾಯಣ ಪಂಡಿತಾಚಾರ್ಯ
ರಚಿತವಾದ ಶ್ರೀಸುಮಧ್ವವಿಜಯ ಮಹಾಕಾವ್ಯದ
ಪ್ರಥಮ ಸರ್ಗದ ಅನುವಾದವು ಮುಗಿಯಿತು.

—o—

Rarest Archiver

## ದ್ವಿತೀಯ ಸರ್ಗದ ಕಥಾಸಾರ

ಕಲಿಕಾಲದ ಪ್ರಾಬಲ್ಯದಿಂದ ಪ್ರಪಂಚದಲ್ಲಿ ಸುಜ್ಞಾನವು ನಷ್ಟವಾಯಿತು. ಸಂಕರಾದಿಗಳ ಬ್ರಹ್ಮಸೂತ್ರಗಳ ದುರ್ಭಾಷ್ಯಗಳಿಂದ ಜನರು ಮೂಢರಾದರು. ಅವರು ಧರ್ಮದ ದಾರಿಯನ್ನು ತೊರೆಯುತ್ತಿರಲು ಬ್ರಹ್ಮಾದಿದೇವತೆಗಳು ವಿಷ್ಣುವನ್ನು ಮರೆಹೊಕ್ಕರು. ಆಗ ಮಹಾವಿಷ್ಣುವು ವಾಯುದೇವರನ್ನು ಕರೆದು 'ಭೂಲೋಕದಲ್ಲಿ ನನ್ನ ಭಕ್ತರು ವೇದಾಂತಗಳ ಸರಿಯಾದ ಅರ್ಥವನ್ನು ತಿಳಿಯದೆ ಕಷ್ಟ ಪಡುತ್ತಿದ್ದಾರೆ. ನೀನು ಮಧ್ವರೂಪದಿಂದ ಭೂಮಿಯಲ್ಲಿ ಅವತರಿಸಿ ಅವರನ್ನು ಸಂತೋಷಗೊಳಿಸು' ಎಂದನು. ವಾಯುದೇವರು ಆ ವಿಷ್ಣುವಿನ ಅಪ್ಪಣೆಯಂತೆ ಭೂಲೋಕದಲ್ಲಿ ಅವತಾರ ಮಾಡಲಿಚ್ಛಿಸಿದರು.

ಒಂದು ದಿನ ಉಡುಪಿಯಲ್ಲಿ ಮಕರ ಸಂಕ್ರಾಂತಿ ಉತ್ಸವವು ನಡೆಯುತ್ತಿದ್ದಿತು. ಆಗ ಅನಂತಾಸನದೇವರು ಓರ್ವ ದಡ್ಡ ಮನುಷ್ಯನಲ್ಲಿ ಆವೇಶಗೊಂಡು ದೇವಾಲಯದ ಮುಂದಿರುವ ಧ್ವಜದ ಮೇಲೆ ಏರಿ ಕುಣಿಯಲಾರಂಭಿಸಿದನು. ತೋಳನ್ನು ಎತ್ತಿಕೊಂಡು 'ಭೂಮಿಯಲ್ಲಿ ಸ್ವಲ್ಪ ದಿವಸಗಳಲ್ಲಿಯೇ ಸಕಲ ಸಜ್ಜನರಿಗೆ ಉಪಕಾರ ಮಾಡಲು ಒಬ್ಬ ಮಹಾತ್ಮನು ಅವತರಿಸುವನು' ಎಂದನು. ಆಗ ಭಾರತದೇಶದ ಒಂದು ಗ್ರಾಮವಾದ ಉಡುಪಿಯ ಹತ್ತಿರ ಪಾಜಕವೆಂಬ ಕ್ಷೇತ್ರದಲ್ಲಿ ಮಧ್ಯಗೇಹವಂಶದಲ್ಲಿ ಜನಿಸಿದ ಒಬ್ಬ ಬ್ರಾಹ್ಮಣೋತ್ತಮರಿದ್ದರು. ಅವರು ವೇದಾಧ್ಯಯನವನ್ನು ಮುಗಿಸಿ ಒಬ್ಬ ಬ್ರಾಹ್ಮಣ ಶ್ರೇಷ್ಠನ ಉತ್ತಮ ಕನ್ಯೆಯನ್ನು ವಿವಾಹವಾದರು. ಭಟ್ಟ ಎಂದು ಪ್ರಸಿದ್ಧರಾದ ಅವರು ಆ ಸತಿಯೊಡನೆ ಸಂಸಾರಮಾಡಿಕೊಂಡಿರುತ್ತ ತಮ್ಮ ಕುಲದೇವತೆಯಾದ ಅನಂತಪದ್ಮನಾಭನಲ್ಲಿ ಭಕ್ತಿ ಮಾಡುತ್ತಿದ್ದರು. ಭಾಗವತಾದಿ ಪುರಾಣಗಳನ್ನು ಪ್ರವಚನ ಮಾಡುತ್ತ ಜನರನ್ನು ಸಂತೋಷಗೊಳಿಸುತ್ತಿದ್ದರು. ಆಗ ಅನೇಕ ಜನರು ಭಗವಂತನು ನಿರ್ಗುಣನೆಂದು ವಾದಿಸುತ್ತಿರಲು ಅವರು ಆ ವಿಷಯದಲ್ಲಿ ಸಂಶಯಗೊಂಡು ಚಿಂತಾಕ್ರಾಂತರಾದರು. ಆದ್ದರಿಂದ ಅವರು ಒಬ್ಬ ಸರ್ವಜ್ಞನಾದ ಪುತ್ರನನ್ನು ಪಡೆಯಬೇಕೆಂದು ಇಚ್ಛಿಸಿದರು. ತಾನು ಅಂತಹ ಮಗನನ್ನು ಹೇಗೆ ಪಡೆದೇನು ? ಎಂದಾಲೋಚಿಸಿ ಹಿಂದಿನ ಕರ್ಮವು

Rarest Archive

ಪರಾಶರಾದಿಗಳಂತೆ ಉತ್ತಮ ಮಗನನ್ನು ಪಡೆಯಲು ಪತ್ನಿಯೊಡನೆ ಅತ್ಯಂತ ನಿಯಮದಿಂದ ಹನ್ನೆರಡು ವರ್ಷಕಾಲ ಅನಂತಾಸನನನ್ನು ಸೇವಿಸಿದರು.

ಹೀಗೆ ಭಗವಂತನ ಸೇವೆಯಿಂದ ಪರಿಶುದ್ಧರಾದ ಆ ಮಧ್ಯಗೇಹಭಟ್ಟರ ಸತಿಯು ಗರ್ಭಿಣಿಯಾಗಿ ಶುಕ್ಲಪಕ್ಷದ ಚಂದ್ರನಂತೆ ಸುಂದರವಾದ ಶಿಶುವನ್ನು ಹಡೆದರು. ಆಗ ವಾಯುದೇವರು ಒಂದಂಶದಿಂದ ಭೂಮಿಗಿಳಿದು ಉಡುಪಿಯಲ್ಲಿರುವ ಅನಂತಾಸನ ದೇವರನ್ನು ವಂದಿಸಿ ಮಧ್ಯಗೇಹಭಟ್ಟರ ಮನೆಗೆ ಹೋದರು. ಅಲ್ಲಿ ಶಿಶುವಿನ ಶರೀರದಲ್ಲಿರುವ ಜೀವನನ್ನು ಹೊರಗೆ ಹೊರಡಿಸಿ ತಾವು ಒಳಗೆ ಹೊಕ್ಕು ಶಿಶುವಿನಂತಾದರು. ಆಗ ದೇವತೆಗಳು ನಗಾರಿಗಳನ್ನು ಬಾರಿಸಿದರು. ಆ ಧ್ವನಿಯನ್ನು ಮನುಷ್ಯರೂ ಕುತೂಹಲದಿಂದ ಕೇಳಿದರು. ತಂದೆ ಮಧ್ಯಗೇಹಭಟ್ಟರು ಶ್ರೀಅನಂತಾಸನನನ್ನು ಸೇವಿಸಿ ಮನೆಗೆ ಹೋಗುತ್ತ ಹತ್ತಿರದಲ್ಲಿ ಮಗನ ಜನನವನ್ನು ಸೂಚಿಸುವ ನಗಾರಿಯ ಧ್ವನಿಯನ್ನು ಕೇಳಿ ಆನಂದಗೊಂಡರು. ಮನೆಯನ್ನು ಸೇರಿ ಮಗುವಿನ ಚಂದ್ರನಂತಿರುವ ಮುಖವನ್ನು ಕಂಡು ಸಂತೋಷಪಟ್ಟರು. ಅಂತಹ ಸುಪುತ್ರನನ್ನು ಕರುಣಿಸಿದ ಶ್ರೀಮನ್ನಾರಾಯಣನ ದಯೆಯನ್ನು ಹೊಗಳಿದರು. ಸದ್ಗುಣಭರಿತನಾದ ಮಗನಿಗೆ ಜಾತಕರ್ಮಾದಿಗಳನ್ನು ಮಾಡಿ 'ವಾಸುದೇವ' ಎಂಬ ಹೆಸರನ್ನಿಟ್ಟರು. ಜ್ಞಾನಪ್ರಸಾರಕ್ಕಾಗಿ ಅವತರಿಸಿದ ವಾಸುದೇವಭಕ್ತರಾದ ಆ ಮುಖ್ಯಪ್ರಾಣದೇವರಿಗೆ ಆ ಹೆಸರು ಉಚಿತವಾದುದೆಂದು ದೇವತೆಗಳೂ ಒಪ್ಪಿದರು. ಶಿಶುವಾದ ಆ ವಾಸುದೇವನಿಗೆ ಹಾಲನ್ನು ಕುಡಿಯಲು ಮೂಡಿಲ್ಲಾಯರೆಂಬೊಬ್ಬರು ಒಂದು ಹಸುವನ್ನು ದಾನವಾಗಿತ್ತರು. ಆ ಪುಣ್ಯದಿಂದ ಅವರು ತಮ್ಮ ಮಗನಿಗೆ ಮಗನಾಗಿ ಜನಿಸಿ ಮುಂದೆ ಶ್ರೀಮಧ್ವಾಚಾರ್ಯರೆಂದು ಪ್ರಸಿದ್ಧಿಗೊಂಡ ಆ ವಾಸುದೇವನಿಂದ ಮೋಕ್ಷಸಾಧಕ ಬ್ರಹ್ಮಜ್ಞಾನವನ್ನು ಪಡೆದರು.

ಒಂದಾನೊಂದು ದಿನ ಆ ಮಧ್ಯಗೇಹಭಟ್ಟರು ನಿರ್ಭಯನಾಗಿ ಚಂದ್ರನಂತೆ ರಾರಾಜಿಸುವ ಮಗನನ್ನು ಅನಂತಪದ್ಮನಾಭನಿಗೆ ಕಾಣಿಕೆಯಾಗಿ ಒಪ್ಪಿಸಿದರು. ಅನಂತರ ಆ ಸ್ವಾಮಿಯನ್ನು ವಂದಿಸಿ ಶಿಶುವನ್ನು ಎತ್ತಿಕೊಂಡು ಶಿಷ್ಯರೊಡನೆ ಅರ್ಧರಾತ್ರಿ ವೇಳೆ ತಮ್ಮ ಮನೆಗೆ ಹೊರಟರು. ಆಗ ಘೋರಾರಣ್ಯದ ದಾರಿಯಲ್ಲಿರುವ ಒಂದು ಭೂತವು ಅವರಲ್ಲೊಬ್ಬನನ್ನು ಹಿಡಿಸಿತು. ಅವನು ರಕ್ತವನ್ನು ಕಾರಿಕೊಂಡನು. ಭೂತವು ಶಿಶುವನ್ನು

Rarest Archives

ಪೀಡಿಸಲಿಲ್ಲ. ಆಗ ಆ ಭೂತವು ಆ ಮನುಷ್ಯನಲ್ಲಿ ಆವೇಶಗೊಂಡು ಈ ಶಿಶುವು ಇಲ್ಲಿ ಇಲ್ಲದಿದ್ದರೆ ನಮ್ಮ ಆಟದ ಸಮಯದಲ್ಲಿ ಬಂದಿರುವ ನಿಮ್ಮೆಲ್ಲರನ್ನೂ ನಾನು ಕೊಲ್ಲಲು ಶಕ್ತನಾಗುತ್ತಿದ್ದೆನು ಎಂದಿತು.

ಒಂದಾನೊಂದು ದಿನ ತಾಯಿಯು ಮಗುವಿಗೆ ಎದೆ ಹಾಲನ್ನು ಕೊಟ್ಟು ಅದರ ರಕ್ಷಣೆಯನ್ನು ತನ್ನ ಮಗಳಿಗೆ ವಹಿಸಿ ತಾನು ಮನೆಯಿಂದ ಯಾವುದೋ ಕೆಲಸಕ್ಕಾಗಿ ಹೊರಗೆ ಹೋದರು. ಅವರು ಬಹಳ ಹೊತ್ತು ಮನೆಗೆ ಬಾರದಿರಲು ಮಗುವು ಬಿಕ್ಕಿ ಬಿಕ್ಕಿ ಅಳಲಾರಂಭಿಸಿತು. ಹುಡುಗಿಯು ಬಹುಬಗೆಯಿಂದ ಆ ಮಗುವನ್ನು ಸಮಾಧಾನ ಮಾಡಿದಳು. ಆದರೂ ಮಗುವು ಅಳುವುದನ್ನು ನಿಲ್ಲಿಸಲಿಲ್ಲ. ಆಗ ಆ ಹುಡುಗಿಯು ಮಗುವನ್ನು ಎತ್ತಿಕೊಂಡು ತಾಯಿಯ ದಾರಿಯನ್ನು ಎದುರು ನೋಡಿದಳು. ಸಮಾಧಾನ ಮಾಡಲು ಉಪಾಯವನ್ನರಿಯಲಿಲ್ಲ. ಮಾತೆಯು ಉಷ್ಣರೋಗದ ಭಯದಿಂದ ಹಾಲನ್ನೂ ತಣ್ಣಗೆಮಾಡಿ ಕುಡಿಸುತ್ತಿದ್ದ ಆ ಮಗುವಿಗೆ ಹುಡುಗಿಯು ಎತ್ತಿಗೆ ಬೇಯಿಸಿದ ಹುರುಳಿ ಕಾಳುಗಳನ್ನು ತಿನ್ನಿಸಿದಳು. ಇಷ್ಟರಲ್ಲಿ ತಾಯಿಯು ಮಗುವು ಸ್ತನ್ಯಕ್ಕಾಗಿ ಅಳುತ್ತಿರಬಹುದೆಂದು ಕಾತುರದಿಂದ ಮನೆಗೆ ಮರಳಿದರು. ಬೇರೆ ಕೆಲಸದಲ್ಲಿ ಆಸಕ್ತರಾದ ತಮ್ಮನ್ನು ನಿಂದಿಸಿಕೊಂಡರು. ಹೊಟ್ಟೆ ತುಂಬಿ ನಗುತ್ತಿರುವ ಮಗುವನ್ನು ಕಂಡರು. ಮಗಳಿಂದ ನಡೆದ ಸಮಾಚಾರವನ್ನು ತಿಳಿದುಕೊಂಡು ಸಿಟ್ಟಿನಿಂದ ಅವಳನ್ನು ಬಹುವಾಗಿ ಬೈದರು. ಮನಸ್ಸಿನಲ್ಲಿ ಪಶ್ಚಾತ್ತಾಪಗೊಂಡರು. ಅನಂತರ ಹುರುಳಿಕಾಳನ್ನು ತಿಂದರೂ ಮಗುವು ಆರೋಗ್ಯವಾಗಿರುವುದನ್ನು ಕಂಡು ಆಶ್ಚರ್ಯಗೊಂಡರು. ಎಲ್ಲರೂ ಆ ಮಗುವನ್ನು ನೋಡಲು ಆಶೆಯುಳ್ಳವರಾದರು. ಅವನು ಕ್ರಮವಾಗಿ ತೊದಲು ನುಡಿಯಿಂದ ಮಾತಾಡಲಾರಂಭಿಸಿದನು. ಸಾಮಾನ್ಯ ಮಕ್ಕಳಂತೆ ಕ್ರಮವಾಗಿ ಅಂಬೆಗಾಲಿಟ್ಟು ಅನಂತರ ನಿಂತುಕೊಂಡು ನಡೆಯಲಾರಂಭಿಸಿದನು.

ಒಂದಾನೊಂದು ದಿನ ಬೆಳಗ್ಗೆ ಆ ಮಗುವು ಕಾಡಿಗೆ ಮೇಯುವುದಕ್ಕೆ ಹೋಗುತ್ತಿರುವ ತಮ್ಮ ಮನೆಯ ಎತ್ತಿನ ಬಾಲವನ್ನು ಹಿಡಿದುಕೊಂಡು ಯಾರೂ ಕಾಣದಿರುವಾಗ ತಾನೂ ಕಾಡಿಗೆ ಹೋದನು. ತಂದೆ ತಾಯಿಗಳು ಮನೆಯಲ್ಲಿ ಮಗುವನ್ನು ಕಾಣದೆ ಹುಡುಕಾಡಿದರು. ಎಲ್ಲಿಯೂ ಕಾಣದೆ ಇದ್ದಾಗ ಸ್ವೇಚ್ಛೆಯಿಂದ ಓಡಾಡುವ ತಮ್ಮ ಮಗುವು ಎಲ್ಲಿಯಾದರೂ ಬೇರೆ

Rarest Archiver

ಯವರ ಮನೆಯಲ್ಲಿ ಆಟ ಆಡುತ್ತಿರುವನೊ? ಅಥವಾ ಬಾವಿಯಲ್ಲಿ ಬಿದ್ದನೋ? ಎಂದು ಆಲೋಚಿಸಿ ಮರುಗಿದರು. ಸಾಯಂಕಾಲ ಮಗುವು ಎತ್ತಿನ ಬಾಲವನ್ನು ಹಿಡಿದುಕೊಂಡೇ ಮನೆಗೆ ಬಂದುದನ್ನು ಕಂಡರು. ಬಾಲಕನು ಸಿಕ್ಕಿರುವುದು ಅನಂತಾಸನನ ಅನುಗ್ರಹವೆಂದೇ ತಿಳಿದರು.

ಒಂದು ದಿನ ಮಧ್ಯಗೇಹಭಟ್ಟರಿಗೆ ಎತ್ತನ್ನು ಮಾರಿದ ಒಬ್ಬ ಧನಿಕನು ಬಂದು ಹಣವನ್ನು ಕೊಡಿರಿ ಎಂದು ಕೂತಿದ್ದನು. ಆಗ ಆಟವನ್ನು ಆಡಿಬಂದ ಬಾಲಕನು ತಂದೆಯನ್ನು ಊಟಕ್ಕೆ ಕರೆದನು. ಆಗ ತಂದೆಯು ಇವನಿಗೆ ಹಣವನ್ನು ಕೊಡದೆ ನಾನು ಊಟಮಾಡಲು ಸಾಧ್ಯವಿಲ್ಲ ಎಂದನು. ಕೂಡಲೆ ಬಾಲಕನು ತಾನು ಆಟವಾಡುತ್ತಿದ್ದ ಹುಣಿಸೆ ಬೀಜಗಳನ್ನು ತಂದು ತಂದೆಯು ಕೊಡಬೇಕಾದ ಹಣದ ಬದಲಾಗಿ ಅವುಗಳನ್ನು ಸಾಹುಕಾರನಿಗೆ ಕೊಟ್ಟನು. ಅವನು ಅದನ್ನು ಸಂತೋಷದಿಂದ ತೆಗೆದುಕೊಂಡನು. ಇನ್ನೊಂದು ದಿನ ಮಧ್ಯಗೇಹಭಟ್ಟರು ಆ ಧನಿಕನಿಗೆ ತಾವು ಎತ್ತಿಗಾಗಿ ಕೊಡಬೇಕಾದ ಹಣವನ್ನು ಕೊಡಲು ಹೋದರು. ಆದರೆ ಆ ಧನಿಕನು ನಿಮ್ಮ ಮಗನಿಂದ ನನಗೆ ಹಣ ಸಂದಿದೆ ಎಂದನು. ಹೀಗೆ ನಾನಾವಿಧ ಬಾಲಕ್ರೀಡೆಗಳನ್ನು ಮಾಡುತ್ತಿರುವ ಮುಖ್ಯಪ್ರಾಣದೇವರ ಅಂಶನಾದ ಆ ವಾಸುದೇವನನ್ನು ನೋಡಿ ಜನರು ಆನಂದಗೊಂಡರು.

---

ಶ್ರೀಗುರುಭ್ಯೋ ನಮಃ

## ದ್ವಿತೀಯಸರ್ಗ

*ವಿಜ್ಞಾನಭಾನುಮತಿ ಕಾಲಬಲೇನ ಲೀನೇ
ದುರ್ಭಾಷ್ಯಸಂತಮಸಸಂತತಿತೋ ಜನೇಽಂಧೇ ।
ಮಾರ್ಗಾತ್ಸತಾಂ ಸ್ಖಲತಿ ಖಿನ್ನಹೃದೋ ಮುಕುಂದಂ
ದೇವಾಶ್ಚತುರ್ಮುಖಮುಖಾಃ ಶರಣಂ ಪ್ರಜಗ್ಮುಃ ॥ ೧ ॥

ಅ :—ವಿಜ್ಞಾನಭಾನುಮತಿ ಕಾಲಬಲೇನ ಲೀನೇ ದುರ್ಭಾಷ್ಯ ಸಂತಮಸಸಂತತಿತಃ ಅಂಧೇ ಜನೇ ಸತಾಂ ಮಾರ್ಗಾತ್ ಸ್ಖಲತಿ ಸತಿ ಖಿನ್ನಹೃದಃ ಚತುರ್ಮುಖಮುಖಾಃ ದೇವಾಃ ಮುಕುಂದಂ ಶರಣಂ ಪ್ರಜಗ್ಮುಃ.

ಅ :—ವಿಜ್ಞಾನ=ಉತ್ತಮ (ತತ್ವ) ಜ್ಞಾನವೆಂಬ, ಭಾನುಮತಿ=ಸೂರ್ಯನು, ಕಾಲಬಲೇನ = ಕಲಿಕಾಲದ ಶಕ್ತಿಯಿಂದ, ಲೀನೇ = ಅಡಗಿ ಹೋಗಲು (ಮುಳುಗಲು), ದುರ್ಭಾಷ್ಯ=ಕೆಟ್ಟ ಭಾಷ್ಯಗಳೆಂಬ, ಸಂತಮಸ=ಕತ್ತಲೆಗಳ, ಸಂತತಿತಃ=ಸಮೂಹದಿಂದ, ಅಂಧೇ=ಮೂಢರಾದ, ಜನೇ=ತತ್ವಜ್ಞಾನಕ್ಕೆ ಯೋಗ್ಯರಾದ ಜನರು, ಸತಾಂ=ಸಜ್ಜನರ, ಮಾರ್ಗಾತ್=ಸಂಪ್ರದಾಯದ ದಾರಿಯಿಂದ, ಸ್ಖಲತಿ=(ಎಡವುತ್ತಿರಲು) ತಪ್ಪುತ್ತಿರಲು, ಖಿನ್ನಹೃದಃ=ವ್ಯಥೆಗೊಂಡ ಮನಸ್ಸುಳ್ಳ, ಚತುರ್ಮುಖಮುಖಾಃ=ಬ್ರಹ್ಮ ಮೊದಲಾಗುಳ್ಳ, ದೇವಾಃ=ದೇವತೆಗಳು, ಮುಕುಂದಂ=ಶ್ರೀವಿಷ್ಣುವನ್ನು, ಶರಣಂ=ರಕ್ಷಕನನ್ನಾಗಿ, ಪ್ರಜಗ್ಮುಃ=ಹೊಂದಿದರು.

ತಾ :—ಕಲಿಕಾಲದ ಮಾಹಾತ್ಮ್ಯೆಯಿಂದ ಸೂರ್ಯನು ಮುಳುಗುವಂತೆ ಉತ್ಕೃಷ್ಟ ಜ್ಞಾನವು ಮರೆಯಾಯಿತು. ಸಂಕರ ಮೊದಲಾದವರು ಮಾಡಿದ ಇಪ್ಪತ್ತೊಂದು ಬ್ರಹ್ಮಸೂತ್ರಭಾಷ್ಯಗಳಿಂದ ಕತ್ತಲೆಯಿಂದ ಕಣ್ಣು ಕುರುಡಾಗುವಂತೆ ಜನರ ಜ್ಞಾನವು ಮಂಕಾಯಿತು. ಅವರು ಸಜ್ಜನರು ಆಚರಿಸಿದ ಧರ್ಮದ

---

* 'ಉಕ್ತಾ ವಸಂತತಿಲಕಾ ತಭಜಾಜಗೌ ಗಃ' ಈ ಲಕ್ಷಣದಂತೆ ಈ ಸರ್ಗದ ೫೦ನೆ ಪದ್ಯದ ವರೆಗೆ ವಸಂತತಿಲಕಾವೃತ್ತವಿದೆ.

Rarest Archiver

ದಾರಿಯನ್ನು ಬಿಟ್ಟರು. ಇದರಿಂದ ಬ್ರಹ್ಮ ಮೊದಲಾದ ದೇವತೆಗಳು ವ್ಯಥೆಗೊಂಡರು. ಅವರು ಶ್ರೀಮನ್ನಾರಾಯಣನನ್ನು ಮರೆಹೊಕ್ಕರು.

ವ್ಯಾ.ವಿ. :—ಭಾನುಃ ಅಸ್ಯಾಸ್ತೀತಿ = ಭಾನುಮಾನ್. ವಿಜ್ಞಾನಂ ಏವ ಭಾನುಮಾನ್=ವಿಜ್ಞಾನಭಾನುಮಾನ್, ತಸ್ಮಿನ್. ಕಾಲಸ್ಯ ಬಲಂ=ಕಾಲಬಲಂ, ತೇನ. ದುಷ್ಟಾನಿ ಚ ತಾನಿ ಭಾಷ್ಯಾಣಿ ಚ, ದುರ್ಭಾಷ್ಯಾಣ್ಯೇವ ಸಂತಮಸಾನಿ, ದುರ್ಭಾಷ್ಯಸಂತಮಸಾನಾಂ ಸಂತತಿಃ=ದುರ್ಭಾಷ್ಯಸಂತಮಸ-ಸಂತತಿಃ, ತಸ್ಯಾಃ=ದುರ್ಭಾಷ್ಯ-ಸಂತತಿತಃ. ಖಿನ್ನಂ ಹೃತ್ ಯೇಷಾಂ ತೇ=ಖಿನ್ನಹೃದಃ. ಚತುರ್ಮುಖಃ ಮುಖಂ ಯೇಷಾಂ ತೇ=ಚತುರ್ಮುಖ-ಮುಖಾಃ. ಪ್ರಜಗ್ಮುಃ-ಗಮ್ಲೃಗತೌ, ಒಂದನೆ ಗಣ, ಸಕ. ಲಿಟ್. ಪರ. ಪ್ರ. ಬ. ಪ್ರ ಉಪಸರ್ಗ. ಜಗಾಮ, ಜಗ್ಮತುಃ, ಜಗ್ಮುಃ. ಜಗಮಿಥ ಜಗಂಥ, ಜಗ್ಮಥುಃ ಜಗ್ಮ, ಜಗಾಮ ಜಗಮ, ಜಗ್ಮಿವ, ಜಗ್ಮಿಮ.

> ನಾಥಃ ಕಲೌ ತ್ರಿಯುಗಹೂತಿರನುದ್ಬುಭೂಷು-
> ರ್ಬ್ರಹ್ಮಾಣಮಪ್ಯನವತಾರಮನಾದಿದಿಕ್ಷುಃ ।
> ಸರ್ವಜ್ಞಮನ್ಯಮನವೇಕ್ಷ್ಯ ಸಕಾರ್ಯವೀರ್ಯಂ
> ಸ್ಮೇರಾನನೋ ಭುವನಜೀವನಮಾಬಭಾಷೇ ॥ ೨ ॥

ಅ :—ತ್ರಿಯುಗಹೂತಿಃ ಕಲೌ ಅನುದ್ಬುಭೂಷುಃ ಅನವತಾರಂ ಬ್ರಹ್ಮಾಣಂ ಅಪಿ ಅನಾದಿದಿಕ್ಷುಃ ನಾಥಃ ಸಕಾರ್ಯವೀರ್ಯಂ ಸರ್ವಜ್ಞಂ ಅನ್ಯಂ ಅನವೇಕ್ಷ್ಯ ಭುವನಜೀವನಂ ಸ್ಮೇರಾನನಃ ಆಬಭಾಷೇ.

ಅ :—ತ್ರಿಯುಗ=ಮೂರು ಯುಗಗಳಲ್ಲಿ ಮಾತ್ರ ಅವತಾರವುಳ್ಳವನಾದ್ದರಿಂದ ತ್ರಿಯುಗ ಎಂದು, ಹೂತಿಃ=ಹೆಸರುಳ್ಳ, ಕಲೌ=ಕಲಿಯುಗದಲ್ಲಿ, ಅನುದ್ಬುಭೂಷುಃ=ಅವತಾರ ಮಾಡಲು ಇಚ್ಛೆಯಿಲ್ಲದ, ಅನವತಾರಂ=ಭೂಮಿಯಲ್ಲಿ ಅವತಾರವಿಲ್ಲದ, ಬ್ರಹ್ಮಾಣಂ ಅಪಿ=ಚತುರ್ಮುಖನನ್ನೂ, ಅನಾದಿದಿಕ್ಷುಃ=ಅಪ್ಪಣೆ ಮಾಡಲಿಚ್ಛೆಯಿಲ್ಲದ, ನಾಥಃ=ಸ್ವಾಮಿಯಾದ ಆ ನಾರಾಯಣನು, ಸಕಾರ್ಯವೀರ್ಯಂ=ಕೆಲಸವನ್ನು ಸಾಧಿಸುವ ಶಕ್ತಿಯಿಂದ ಕೂಡಿದ, ಸರ್ವಜ್ಞಂ=ಎಲ್ಲವನ್ನೂ ತಿಳಿದ, ಅನ್ಯಂ=ಬೇರೆಯವನನ್ನು

ಅನವೇಕ್ಷ್ಯ=ನೋಡದೆ, ಭುವನಜೀವನಂ=ಲೋಕದ ಪ್ರಾಣಿಗಳಿಗೆ ಜೀವನ ಸ್ವರೂಪರಾದ ವಾಯುದೇವರನ್ನು ಕುರಿತು, ಸ್ಮೇರಾನನಃ= ಮುಗುಳ್ನಗೆಯುಳ್ಳವನಾಗಿ, ಆಬಭಾಷೇ=ಅಪ್ಪಣೆ ಮಾಡಿದನು.

ತಾ :—ಶ್ರೀಮನ್ನಾರಾಯಣನು ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ಮಾತ್ರ ಅವತಾರ ಮಾಡತಕ್ಕವನು. ಆದ್ದರಿಂದ ಅವನು ಕಲಿಯುಗದಲ್ಲಿ ಅವತಾರ ಮಾಡಲಿಚ್ಛಿಸಲಿಲ್ಲ. ಬ್ರಹ್ಮನು ಭೂಮಿಯಲ್ಲಿ ಯಾವಾಗಲೂ ಅವತಾರ ಮಾಡದವನಾದ್ದರಿಂದ ಅವನನ್ನೂ ಅವತಾರ ಮಾಡುವಂತೆ ಆ ನಾರಾಯಣನು ಅಪ್ಪಣೆ ಮಾಡಲಿಚ್ಛಿಸಲಿಲ್ಲ. ಸರ್ವವನ್ನರಿತವನೂ, ಕಾರ್ಯವನ್ನು ಸಾಧಿಸುವ ಶಕ್ತಿಯುಳ್ಳವನೂ ಆದ ಬೇರೆ ಯಾವನೂ ಅವನಿಗೆ ತೋರಲಿಲ್ಲ. ಆದ್ದರಿಂದ ಅವನು ಮುಖ್ಯಪ್ರಾಣದೇವರಿಗೆ ಮುಗುಳ್ನಗೆಯಿಂದ ಹೀಗೆ ಅಪ್ಪಣೆ ಮಾಡಿದನು.

ವ್ಯಾ. ವಿ:—ತ್ರೀಣಿ ಯುಗಾನಿ ಯಸ್ಯ ಸಃ, ತ್ರಿಯುಗಃ ಇತಿ ಹೂತಿಃ ಯಸ್ಯ ಸಃ=ತ್ರಿಯುಗಹೂತಿಃ. ಉದ್ಭವಿತುಂ ಇಚ್ಛುಃ, ಉದ್ಬುಭೂಷುಃ ನ ಭವತೀತಿ=ಅನುದ್ಬುಭೂಷುಃ ನ ವಿದ್ಯತೇ ಅವತಾರಃ ಯಸ್ಯ ಸಃ=ಅನವತಾರಃ, ತಮ್. ಆದೇಷ್ಟುಂ ಇಚ್ಛುಃ, ಆದಿದಿಕ್ಷುಃ ನ ಭವತೀತಿ=ಅನಾದಿದಿಕ್ಷುಃ. ಸರ್ವಂ ಜಾನಾತೀತಿ=ಸರ್ವಜ್ಞಃ, ತಮ್. ಕಾರ್ಯಸ್ಯ ವೀರ್ಯಂ, ಕಾರ್ಯವೀರ್ಯೇಣ ಸಹಿತಃ=ಸಕಾರ್ಯವೀರ್ಯಃ ತಮ್. ಸ್ಮೇರಂ ಆನನಂ ಯಸ್ಯ ಸಃ =ಸ್ಮೇರಾನನಃ. ಭುವನಸ್ಯ ಜೀವನಃ=ಭುವನಜೀವನಃ, ತಮ್. ಆಬಭಾಷೇ –ಭಾಷ ವ್ಯಕ್ತಾಯಾಂ ವಾಚಿ, ಒಂದನೆ ಗಣ, ಸಕ. ಲಿಟ್, ಆತ್ಮ. ಪ್ರ.ಏ. ಆ ಉಪಸರ್ಗ. ಬಭಾಷೇ, ಬಭಾಷಾತೇ, ಬಭಾಷಿರೇ. ಬಭಾಷಿಷೇ. ಬಭಾಷಾಥೇ, ಬಭಾಷಿಧ್ವೇ ಬಭಾಷಿಢ್ವೇ. ಬಭಾಷೇ, ಬಭಾಷಿವಹೇ, ಬಭಾಷಿಮಹೇ.

ವಿಶೇಷ ವಿಷಯ :—ನಾರಾಯಣನು ಕಲಿಯುಗದಲ್ಲಿ ಬುದ್ಧಾವತಾರ ಮಾಡಿದ್ದರೂ ಆ ಅವತಾರವು ದೈತ್ಯಮೋಹಕವಾಗಿರುವುದರಿಂದಲೂ, ತತ್ತ್ವಬೋಧಕಾವತಾರವೇ ಇಲ್ಲಿ ಅವತಾರವೆನಿಸಿಕೊಳ್ಳುವುದರಿಂದಲೂ, ಆ ಅವತಾರಗಳು ಕೃತ, ತ್ರೇತಾ, ದ್ವಾಪರಗಳಲ್ಲಿ ಮಾತ್ರ ಆಗಿರುವುದರಿಂದಲೂ ಅವನು ತ್ರಿಯುಗನೆಂದು ಹೆಸರನ್ನು ಪಡೆದಿರುವನು.

Rarest Archiver

ವೇದಾಂತಮಾರ್ಗಪರಿಮಾರ್ಗಣದೀನದೂನಾ
ದೈವೀಃ ಪ್ರಜಾ ವಿಶರಣಾಃ ಕರುಣಾಪದಂ ನಃ ।
ಆನಂದಯೇಃ ಸುಮುಖ ಭೂಷಿತಭೂಮಿಭಾಗೋ
ರೂಪಾಂತರೇಣ ಮಮ ಸದ್ಗುಣನಿರ್ಣಯೇನ || ೩ ||

ಅ :—ಸುಮುಖ ! ಮಮ ಸದ್ಗುಣನಿರ್ಣಯೇನ ರೂಪಾಂತರೇಣ ಭೂಷಿತಭೂಮಿಭಾಗಃ ವೇದಾಂತಮಾರ್ಗಪರಿಮಾರ್ಗಣದೀನದೂನಾಃ ವಿಶರ-ಣಾಃ ನಃ ಕರುಣಾಪದಂ ದೈವೀಃ ಪ್ರಜಾಃ ಆನಂದಯೇಃ.

ಅ :—ಸುಮುಖ=ಮಂಗಳಕರವಾದ ಮುಖವುಳ್ಳ ವಾಯುವೆ ! ನೀನು, ಮಮ=ನನ್ನ, ಸದ್ಗುಣನಿರ್ಣಯೇನ=ದೋಷವಿಲ್ಲದ ಗುಣಗಳನ್ನು ನಿಶ್ಚಯಿಸುವ, ರೂಪಾಂತರೇಣ=ಬೇರೆಯಾದ ಮಧ್ವರೂಪದಿಂದ, ಭೂಷಿತ =ಅಲಂಕರಿಸಲ್ಪಟ್ಟ, ಭೂಮಿಭಾಗಃ=ಭೂಮಿಯ ಪ್ರದೇಶವುಳ್ಳವನಾಗಿ, ವೇದಾಂತ=ಉಪನಿಷತ್ತೇ ಮೊದಲಾದುವುಗಳ, ಮಾರ್ಗ=ಬ್ರಹ್ಮಸೂತ್ರ ರೂಪವಾದ ದಾರಿಯ, ಪರಿಮಾರ್ಗಣ=ವಿಚಾರದಿಂದ, ದೀನ=ಶೂನ್ಯರಾದ, ದೂನಾಃ=(ಆದ್ದರಿಂದಲೇ) ದುಃಖಗೊಂಡ (ಅಥವಾ ಉಪನಿಷತ್ತುಗಳ ಅರ್ಥ ವನ್ನು ಬೋಧಿಸುವುದರಿಂದ ದಾರಿಯಂತಿರುವ ಬ್ರಹ್ಮಸೂತ್ರಗಳ ಅರ್ಥ ವಿಚಾರ ಮಾಡಿ ಅದು ಸರಿಯಾಗಿ ತಿಳಿಯದೆ ಇರುವುದರಿಂದ ದೈನ್ಯಗೊಂಡ ಮತ್ತು ದುಃಖಿತರಾದ), ವಿಶರಣಾಃ=ರಕ್ಷಣೆ ಮಾಡುವವರಿಲ್ಲದ, ನಃ=ನಮ್ಮ, ಕರುಣಾಪದಂ=ದಯೆಗೆ ಆಶ್ರಯರಾದ, ದೈವೀಃ=ಕ್ರೀಡಾದಿ ಗುಣವಿಶಿಷ್ಟ ನಾದ ನನ್ನ ಸಂಬಂಧಿಗಳಾದ, ಪ್ರಜಾಃ=ಪ್ರಜೆಗಳನ್ನು, ಆನಂದಯೇಃ= ಸಂತೋಷಗೊಳಿಸು.

ತಾ :—ಎಲೈ ಮುಖ್ಯಪ್ರಾಣನೆ ! ನೀನು ನನ್ನ ಗುಣಗಳನ್ನು ನಿರ್ಣಯಿಸುವ ಮಧ್ವ ಎಂಬ ರೂಪದಿಂದ ಭೂಲೋಕದಲ್ಲಿ ಅವತರಿಸು. ನನ್ನ ಭಕ್ತರು ಉಪನಿಷತ್ತು ಮೊದಲಾದುವುಗಳ ಅರ್ಥವನ್ನು ತಿಳಿಯಲು ಶ್ರೀವೇದ ವ್ಯಾಸರು ರಚಿಸಿರುವ ಬ್ರಹ್ಮಸೂತ್ರದ ಅರ್ಥವನ್ನರಿಯದೆ ದುಃಖಗೊಂಡಿದ್ದಾರೆ. ಅವರು ದಯೆ ಮಾಡಲು ಸಮರ್ಥರು. ಅವರಿಗೆ ಬೇರೆ ರಕ್ಷಕರಿಲ್ಲ. ಆದ್ದರಿಂದ ನನ್ನ ಆ ಭಕ್ತರನ್ನು ಸರಿಯಾದ ಸೂತ್ರಾರ್ಥವನ್ನು ವಿವರಿಸಿ ಸಂತೋಷಪಡಿಸು.

ವ್ಯಾ. ವಿ.—ವೇದಾನ್ತಾನಾಂ ಮಾರ್ಗಃ, ವೇದಾನ್ತಮಾರ್ಗಸ್ಯ ಪರಿ

Rarest Archiver

ಮಾರ್ಗಣಂ, ವೇದಾ....ಮಾರ್ಗಣೇನ ದೀನಾಃ, ವೇದಾ....ದೀನಾಶ್ಚ ತಾಃ ದೂನಾಶ್ಚ=ವೇದಾನ್ತಮಾರ್ಗಪರಿಮಾರ್ಗಣದೀನದೂನಾಃ. ದೇವಸ್ಯ ಇಮಾಃ =ದೈವ್ಯಃ, ತಾಃ, ವಿಗತಂ ಶರಣಂ ಯಾಸಾಂ ತಾಃ=ವಿಶರಣಾ. ಕರುಣಾಯಾಃ ಪದಂ=ಕರುಣಾಪದಂ. ಶೋಭನಂ ಮುಖಂ ಯಸ್ಯ ಸಃ=ಸುಮುಖಃ, ತಸ್ಯ ಸಂಬುದ್ಧಿಃ, ಭೂಮೇಃ ಭಾಗಃ, ಭೂಷಿತಃ ಭೂಮಿಭಾಗಃ ಯೇನ ಸಃ= ಭೂಷಿತ ಭೂಮಿಭಾಗಃ, ಅನ್ಯತ್ ರೂಪಂ=ರೂಪಾಂತರಂ, ತೇನ. ಸಂತಶ್ಚ ತೇ ಗುಣಾಶ್ಚ, ಸದ್ಗುಣಾನಾಂ ನಿರ್ಣಯಃ ಯಸ್ಮಾತ್ ತತ್=ಸದ್ಗುಣ ನಿರ್ಣಯಂ, ತೇನ. ಆನಂದಯೇಃ-ಟು ನದಿ ಸಮೃದ್ಧೌ, ಣಿಜಂತ, ಸಕ. ವಿಧಿಲಿಙ್, ಪರ. ಮ. ಏ. ಆ ಉಪಸರ್ಗ. ಆ+ನಂದಯೇತ್, ನಂದಯೇತಾಂ, ನಂದಯೇಯುಃ. ನಂದಯೇಃ, ನಂದಯೇತಂ, ನಂದಯೇತ. ನಂದಯೇಯಂ, ನಂದಯೇವ, ನಂದಯೇಮ.

ಆದೇಶಮೌಲಿಮಣಿಮುಜ್ಜ್ವಲವರ್ಣಮೇನಂ
ಬದ್ಧಾಂಜಲಿರ್ಮರುದನರ್ಘ್ಯ (ರ್ಘ) ಮಧತ್ತ ಮೂರ್ಧ್ನಾ।
ಹಾರಾವಲೀಮಿವ ಹೃದಾ ವಿಬುಧೇಂದ್ರಯಾಚ್ಞಾಂ
ಬಿಭ್ರನ್ನಿಜಾನನುಜಿಘೃಕ್ಷುರವಾತಿತೀರ್ಷತ್ ॥ ೪ ॥

ಅ:—ಮರುತ್ ಉಜ್ವಲವರ್ಣಂ ಅನರ್ಘ್ಯಂ ಏನಂ ಆದೇಶಮೌಲಿಮಣಿಂ ಬದ್ಧಾಂಜಲಿಃ ಮೂರ್ಧ್ನಾ ಅಧತ್ತ. ಹೃದಾ ವಿಬುಧೇಂದ್ರಯಾಚ್ಞಾಂ ಹಾರಾವಲೀಂ ಇವ ಬಿಭ್ರತ್ ನಿಜಾನ್ ಅನುಜಿಘೃಕ್ಷುಃ ಅವಾತಿತೀರ್ಷತ್.

ಅ :—ಮರುತ್=ವಾಯುದೇವರು, ಉಜ್ವಲ=ಮಂಗಳಕರವಾದ. ಪ್ರಕಾಶಮಾನವಾದ, ವರ್ಣಂ = ಅಕ್ಷರವುಳ್ಳ, ಬಣ್ಣವುಳ್ಳ, ಅನರ್ಘ್ಯಂ= ಅಮೂಲ್ಯವಾದ, ಉತ್ತಮವಾದ, ಏನಂ=ಈ, ಆದೇಶ=ಅಪ್ಪಣೆಯೆಂಬ, ಮೌಲಿಮಣಿಂ=ಕಿರೀಟರತ್ನವನ್ನು, ಬದ್ಧಾಂಜಲಿಃ=ಕೈಮುಗಿದುಕೊಂಡವರಾಗಿ, ಮೂರ್ಧ್ನಾ=ತಲೆಯಿಂದ, ಅಧತ್ತ=ಧರಿಸಿದರು. ಹೃದಾ=ಮನಸ್ಸಿನಿಂದ, ಎದೆಯಿಂದ, ವಿಬುಧೇಂದ್ರಯಾಚ್ಞಾಂ=ದೇವೋತ್ತಮರ ಪ್ರಾರ್ಥನೆಯನ್ನು, ಹಾರಾವಲೀಂ ಇವ=ಹಾರಗಳ ಸಮೂಹದಂತೆ, ಬಿಭ್ರತ್=ಧರಿಸಿದವರಾಗಿ, ನಿಜಾನ್=ತಮ್ಮ ಭಕ್ತರನ್ನು, ಅನುಜಿಘೃಕ್ಷುಃ = ಅನುಗ್ರಹ ಮಾಡಲಿಚ್ಛೆಯುಳ್ಳವರಾಗಿ, ಅವಾತಿತೀರ್ಷತ್ = ಅವತಾರ ಮಾಡಲು ಅಪೇಕ್ಷಿಸಿದರು.

Rarest Archiver

ತಾ :—ಈ ರೀತಿ ವಾಯುದೇವರು ಶ್ರೀಮನ್ನಾರಾಯಣನ ಮಂಗಳಕರ ವಾದ ಅಕ್ಷರವುಳ್ಳ ಉತ್ತಮವಾದ ಅಪ್ಪಣೆಯನ್ನು ಕೈಮುಗಿದುಕೊಂಡು ಶಿರಸಾ ವಹಿಸಿದರು. ಅದು ಸೇವಕನು ಸ್ವಾಮಿಯು ಕೊಟ್ಟ ಪ್ರಕಾಶಿಸುವ ಬಣ್ಣವುಳ್ಳ ಅಮೂಲ್ಯ ಕಿರೀಟರತ್ನವನ್ನು ತಲೆಯಿಂದ ಧರಿಸಿದಂತಾಯಿತು. ಅವರು ಮನಸ್ಸಿನಿಂದ ಹಾರಗಳ ಸಾಲಿನಂತೆ ದೇವತೆಗಳ ಪ್ರಾರ್ಥನೆಯನ್ನು ಚಿಂತಿಸುತ್ತ ಭಕ್ತರಿಗೆ ಅನುಗ್ರಹ ಮಾಡಲು ಭೂಲೋಕದಲ್ಲಿ ಅವತರಿಸಲಿಚ್ಛಿಸಿದರು.

ವ್ಯಾ.ವಿ. :—ಆದೇಶಃ ಏವ ಮೌಲಿಮಣಿಃ=ಆದೇಶಮೌಲಿಮಣಿಃ, ತಮ್. ಉಜ್ವಲಾಃ ವರ್ಣಾ ಯಸ್ಮಿನ್ ಸಃ=ಉಜ್ವಲವರ್ಣಃ, ತಮ್. ಬದ್ಧಃ ಅಂಜಲಿಃ ಯೇನ ಸಃ=ಬದ್ಧಾಂಜಲಿಃ. ನ ವಿದ್ಯತೇ ಅರ್ಘಃ ಯಸ್ಯ ಸಃ=ಅನರ್ಘಃ, ತಮ್. ಹಾರಾಣಾಂ ಆವಲೀ=ಹಾರಾವಲೀ, ತಾಮ್. ವಿಬುಧೇಂದ್ರಾಣಾಂ ಯಾಚ್ಞಾ=ವಿಬುಧೇಂದ್ರಯಾಚ್ಞಾ, ತಾಮ್. ಅನುಗ್ರಹೀತುಂ ಇಚ್ಛುಃ=ಅನುಜಿಘೃಕ್ಷುಃ. ಅವಾತಿತೀರ್ಷತ್-ತೄ ಪ್ಲವನತರಣಯೋಃ, ಒಂದನೆ ಗಣ, ಸಕ. ಸನ್ನಂತ, ಲಙ್, ಪರ. ಪ್ರ. ಏ. ಅವ ಉಪಸರ್ಗ. ಅವ+ಅತಿತೀರ್ಷತ್, ಅತಿತೀರ್ಷತಾಂ, ಅತಿತೀರ್ಷನ್. ಅತಿತೀರ್ಷಃ, ಅತಿತೀರ್ಷತಂ, ಅತಿತೀರ್ಷತ. ಅತಿತೀರ್ಷಂ, ಅತಿತೀರ್ಷಾವ, ಅತಿತೀರ್ಷಾಮ.

ಅವತಾರಿಕಾ:—ವಾಯುದೇವರು ಭಗವಂತನ ಅಪ್ಪಣೆಯಂತೆ ಉಡುಪಿಯಲ್ಲಿರುವ ಅನಂತಪದ್ಮನಾಭದೇವರ ಭಕ್ತರೂ, ಅಲ್ಲಿಯೇ ಪುರಾಣವನ್ನು ಹೇಳುವವರೂ ಆದ ನಡುಮನೆ ಭಟ್ಟರ ಧರ್ಮಪತ್ನಿಯಲ್ಲಿ ಅವತರಿಸಿದರು. ಎಂಬುದನ್ನು ಹೇಳುವುದಕ್ಕಾಗಿ ಅಲ್ಲಿಯ ಜನರು ಆಗ ತತ್ತ್ವಜ್ಞಾನದ ಅರಿವಿಲ್ಲದೆ ವ್ಯಥೆಗೊಳ್ಳುತ್ತಿದ್ದರೆಂಬುದನ್ನು ಈ ಪದ್ಯದಿಂದ ತಿಳಿಸುತ್ತಾರೆ—

ಕಾಲಃ ಸ ಏವ ಸಮವರ್ತತ ನಾನು ಯಾವ-
ಚ್ಚಿಂತಾಕುಲಂ ವಿವಿಧಸಾಧುಕುಲಂ ಬಭೂವ
ವೇದಾಂತಸಂತತಕೃತಾಂತರಸಂ ನ ವಿದ್ಮಃ
ಶ್ರೇಯೋ ಲಭೇಮಹಿ ಕಥಂ ನು ವಯಂ ಬತೇತಿ ॥ ೫ ॥

ಅ:—ಯಾವತ್ ಏವ ಸಃ ಕಾಲಃ ಸಮವರ್ತತ ನಾನು; ವಿವಿಧಸಾಧು-

Rarest Archiver

ಕುಲಂ ವೇದಾಂತಸಂತತಕೃತಾಂತರಸಂ ವಯಂ ನ ವಿದ್ಮಃ. ಶ್ರೇಯಃ ಕಥಂ ನು ಲಭೇಮಹಿ ಬತ ಇತಿ ಚಿಂತಾಕುಲಂ ಬಭೂವ.

ಅ :—ಯಾವತ್ ಏವ = ಯಾವಾಗಲೇ, ಸಃ ಕಾಲಃ = ಬ್ರಹ್ಮಾದಿಗಳು ಪ್ರಾರ್ಥಿಸಿದ ಆ ಸಮಯವು, ಸಮವರ್ತತನಾಮ = ಉಂಟಾಯಿತೊ,(ಆಗಲೇ) ವಿವಿಧ = ನಾನಾ ಬಗೆಯಾದ, ಸಾಧು = ಸಜ್ಜನರ, ಕುಲಂ = ಸಮೂಹವು, ವೇದಾಂತ = ಬ್ರಹ್ಮಮೀಮಾಂಸಾಶಾಸ್ತ್ರದ, ಸಂತತ = ಒಳ್ಳೆ ಸಂಪ್ರದಾಯ ದಿಂದ ಬಂದ, ಕೃತಾಂತ = ಸಿದ್ಧಾಂತದ, ರಸಂ = ರಹಸ್ಯವನ್ನು ವಯಂ = ನಾವು. ನ ವಿದ್ಮಃ = ತಿಳಿಯುವುದಿಲ್ಲ. ಶ್ರೇಯಃ = ಮೋಕ್ಷರೂಪವಾದ ಶ್ರೇಯಸ್ಸನ್ನು, ಕಥಂ ನು = ಹೇಗೆ, ಲಭೇಮಹಿ = ಹೊಂದಿಯೇವು ? ಬತ ಕಷ್ಟ. ಇತಿ = ಹೀಗೆಂದು, ಚಿಂತಾಕುಲಂ = ಚಿಂತೆಯಿಂದ ವ್ಯಥೆಗೊಂಡದು, ಬಭೂವ = ಆಯಿತು.

ತಾ:—ಬ್ರಹ್ಮಾದಿ ದೇವತೆಗಳು ಶ್ರೀವಿಷ್ಣುವನ್ನು ಪ್ರಾರ್ಥಿಸಿದ ಸಮಯ ದಲ್ಲಿಯೇ ಸಜ್ಜನರು 'ನಮಗೆ ಸಂಪ್ರದಾಯದಿಂದ ಬಂದ ವೇದಾಂತಶಾಸ್ತ್ರ ಸಿದ್ಧಾಂತದ ರಹಸ್ಯವು ಗೊತ್ತಿಲ್ಲ. ನಾವು ಹೇಗೆ ಮೋಕ್ಷವನ್ನು ಪಡೆದೇವು' ಎಂದು ವ್ಯಥೆಗೊಳ್ಳುತ್ತಿದ್ದರು.

ವ್ಯಾ.ವಿ. :—ಚಿಂತಯಾ ಆಕುಲಂ = ಚಿಂತಾಕುಲಮ್. ವಿವಿಧಾಶ್ಚ ತೇ ಸಾಧವಶ್ಚ, ವಿವಿಧಸಾಧೂನಾಂ ಕುಲಂ = ವಿವಿಧಸಾಧುಕುಲಂ. ಕೃತಾಂ- ತಸ್ಯ ರಸಃ = ಕೃತಾಂತರಸಃ, ಸಂತತಶ್ಚಾಸೌ ಕೃತಾಂತರಸಶ್ಚ, ವೇದಾನಾಂ ಅಂತಃ ಯಸ್ಮಾತ್ತತ್, ವೇದಾನ್ತಸ್ಯ ಸಂತತಕೃತಾಂತರಸಃ = ವೇದಾನ್ತಸಂತತ- ಕೃತಾಂತರಸಃ, ತಂ. ವಿದ್ಮಃ = ವಿದ ಜ್ಞಾನೇ, ಎರಡನೆ ಗಣ, ಸಕ. ಲಟ್. ಪರ ಉ. ಬ. ವೇತ್ತಿ, ವಿತ್ತಃ, ವಿದಂತಿ. ವೇತ್ಸಿ, ವಿತ್ಥಃ, ವಿತ್ಥ. ವೇದ್ಮಿ, ವಿದ್ವಃ, ವಿದ್ಮಃ, ಲಭೇಮಹಿ–ಡು ಲಭಷ್ ಪ್ರಾಪ್ತೌ, ಒಂದನೆ ಗಣ, ಸಕ. ವಿಧಿಲಿಜ್, ಆತ್ಮ. ಉ. ಬ. ಲಭೇತ, ಲಭೇಯಾತಾಂ, ಲಭೇರನ್. ಲಭೇಥಾಃ, ಲಭೇಯಾಥಾಂ, ಲಭೇಧ್ವಮ್. ಲಭೇಯ, ವಭೇವಹಿ, ಲಭೇಮಹಿ.

ತತ್ಪ್ರೀತಯೇ ರಜತಪೀಠಪುರಾಧಿವಾಸೀ
ದೇವೋ ವಿವೇಶ ಪುರುಷಂ ಶುಭಸೂಚನಾಯ ।

Rarest Archiver

ಪ್ರಾಪ್ತೇ ಮಹಾಯ ಮಹಿತಾಯ ಮಹಾಜನೌಘೇ
ಕೋಲಾಹಲೇನ ಸಕುತೂಹಲಿನಿ ಪ್ರವೃತ್ತೇ || ೬ ||

ಅ :—ರಜತಪೀಠಪುರಾಧಿವಾಸೀ ದೇವಃ ತತ್ಪ್ರೀತಯೇ ಶುಭಸೂಚನಾಯ ಪುರುಷಂ ಮಹಿತಾಯ ಮಹಾಯ ಕೋಲಾಹಲೇನ ಪ್ರಾಪ್ತೇ ಮಹಾಜನೌಘೇ ಸಕುತೂಹಲಿನಿ ಪ್ರವೃತ್ತೇ ವಿವೇಶ.

ಅ :—ರಜತಪೀಠಪುರ=ಉಡುಪಿಯಲ್ಲಿ, ಅಧಿವಾಸೀ = ವಾಸಮಾಡಿಕೊಂಡಿರುವ, ದೇವಃ=ಅನಂತಾಸನದೇವರು, ತತ್ಪ್ರೀತಯೇ=ಚಿಂತಾಕ್ರಾಂತರಾದ ಆ ಸಜ್ಜನರ ಸಂತೋಷಕ್ಕಾಗಿ, ಶುಭಸೂಚನಾಯ=ಮುಖ್ಯಪ್ರಾಣದೇವರ ಅವತಾರರೂಪವಾದ ಮಂಗಳವನ್ನು ಸೂಚಿಸುವುದಕ್ಕಾಗಿ, ಪುರುಷಂ =ಒಬ್ಬ ಮನುಷ್ಯನನ್ನು, ಮಹಿತಾಯ=ಪೂಜ್ಯವಾದ, ಮಹಾಯ= ಮಕರಸಂಕ್ರಾಂತಿ ಉತ್ಸವಕ್ಕಾಗಿ, ಕೋಲಾಹಲೇನ = ಸಂಭ್ರಮದಿಂದ, ಪ್ರಾಪ್ತೇ=ಬಂದ, ಮಹಾಜನೌಘೇ=ದೊಡ್ಡ ಜನರ ಗುಂಪು, ಸಕುತೂಹಲಿನಿ =ಕುತೂಹಲವುಳ್ಳ ಜನರ ಗುಂಪಿನಿಂದ ಕೂಡಿದ ಉಡುಪಿಯಲ್ಲಿ, ಪ್ರವೃತ್ತೇ (ಸತಿ) ಇರಲು, ವಿವೇಶ=ಹೊಕ್ಕನು.

ತಾ :—ಹೀಗಿರಲು ಒಂದಾನೊಂದು ದಿನ ಉಡುಪಿಯಲ್ಲಿ ಮಕರ ಸಂಕ್ರಾಂತಿ ಉತ್ಸವವು ನಡೆಯಿತು. ಅದಕ್ಕೆ ದೊಡ್ಡ ಜನರ ಗುಂಪು ಸೇರಿದ್ದಿತು. ಆಗ ಅಲ್ಲಿರುವ ಅನಂತಪದ್ಮನಾಭದೇವರು ಚಿಂತಾಕ್ರಾಂತರಾದ ಸಂತರ ಸಂತೋಷಕ್ಕಾಗಿ, ಶ್ರೀಮುಖ್ಯಪ್ರಾಣದೇವರು ಅಲ್ಲಿ ಅವತಾರ ಮಾಡುವುದನ್ನು ತಿಳಿಸಲು ಒಬ್ಬ ದಡ್ಡ ಮನುಷ್ಯನಲ್ಲಿ ಆವೇಶಗೊಂಡರು.

ವ್ಯಾ. ವಿ. :—ತಸ್ಯ ಪ್ರೀತಿಃ=ತತ್ಪ್ರೀತಿಃ, ತಸ್ಯೈ. ರಜತಸ್ಯ ಪೀಠಂ, ರಜತಪೀಠಂ ಚ ತತ್ ಪುರಂ ಚ, ರಜತಪೀಠಪುರಂ ಅಧಿವಸತೀತಿ=ರಜತಪೀಠಪುರಾಧಿವಾಸೀ. ಶುಭಸ್ಯ ಸೂಚನಂ = ಶುಭಸೂಚನಂ, ತಸ್ಮೈ. ಜನಾನಾಂ ಓಘಃ=ಜನೌಘಃ, ಮಹಾಂಶ್ಚಾಸೌ ಜನೌಘಶ್ಚ=ಮಹಾ-ಜನೌಘಃ, ತಸ್ಮಿನ್, ಕುತೂಹಲಂ ಅಸ್ಯಾಸ್ತೀತಿ=ಕುತೂಹಲಿ, ಕುತೂ-ಹಲಿನಾ ಸಹ ವರ್ತತ ಇತಿ = ಸಕುತೂಹಲಿ, ತಸ್ಮಿನ್. ವಿವೇಶ=ವಿಶ

Rarest Archiver

ಪ್ರವೇಶನೇ. ಆರನೇ ಗಣ, ಸಕ. ಲಿಟ್, ಪರ. ಪ್ರ. ಏ. ವಿವೇಶ. ವಿವಿಶತುಃ, ವಿವಿಶುಃ. ವಿವೇಶಿಥ, ವಿವಿಶಥುಃ, ವಿವಿಶ, ವಿವೇಶ, ವಿವಿಶಿವ, ವಿವಿಶಿಮ.

ಆವಿಷ್ಟವಾನಕುಶಲಂ ಪುರುಷಂ ಪ್ರಕೃತ್ಯಾ
ಪ್ರತ್ಯಾಯಯನ್ನಿಜಜನಾನ್ನಿತರಾಮನೃತ್ಯತ್ ।
ಉತ್ತುಂಗಕೇತುಶಿಖರೇ ಸ ಕೃತಾಂಗಹಾರೋ
ರಂಗಾಂತರೇ ನಟ ಇವಾಖಿಲವಿಸ್ಮಯಾತ್ಮಾ ॥ ೭ ॥

ಅ :—ಪ್ರಕೃತ್ಯಾ ಅಕುಶಲಂ ಪುರುಷಂ ಆವಿಷ್ಟವಾನ್ ಅಖಿಲವಿಸ್ಮಯಾತ್ಮಾ ಸಃ ಇಹ ನಿಜಜನಾನ್ ಪ್ರತ್ಯಾಯಯನ್ ಉತ್ತುಂಗಕೇತುಶಿಖರೇ ಕೃತಾಂಗಹಾರಃ ರಂಗಾಂತರೇ ನಟ ಇವ ಅನೃತ್ಯತ್.

ಅ :—ಪ್ರಕೃತ್ಯಾ = ಸ್ವಭಾವದಿಂದ, ಅಕುಶಲಂ = ಚತುರನಲ್ಲದ, ಪುರುಷಂ = ಮನುಷ್ಯನನ್ನು, ಆವಿಷ್ಟವಾನ್ = ಆವೇಶಗೊಂಡಿರುವ, ಅಖಿಲ = ಎಲ್ಲರಿಗೂ, ವಿಸ್ಮಯಾತ್ಮಾ = ಆಶ್ಚರ್ಯವನ್ನುಂಟು ಮಾಡುವ ಸ್ವಭಾವವುಳ್ಳ, ಸಃ = ಆ ಅನಂತಾಸನದೇವರು, ಇಹ = ಈ ಉಡುಪಿಯಲ್ಲಿ, ನಿಜಜನಾನ್ = ತನ್ನ ಭಕ್ತರನ್ನು, ಪ್ರತ್ಯಾಯಯನ್ = ನಂಬಿಸುತ್ತ, ಉತ್ತುಂಗ = ಎತ್ತರವಾದ, ಕೇತು = ಧ್ವಜಸ್ತಂಭದ, ಶಿಖರೇ = ತುದಿಯಲ್ಲಿ, ಕೃತಾಂಗಹಾರಃ = ಮಾಡಲ್ಪಟ್ಟ ಅವಯವಗಳ ಚಲನೆಯುಳ್ಳವನಾಗಿ, ರಂಗಾಂತರೇ = ರಂಗಸ್ಥಳದ ನಡುವೆ, ನಟಃ ಇವ = ಕುಣಿಯುವವನಂತೆ, ಅನೃತ್ಯತ್ = ಕುಣಿದನು.

ತಾ :—ಆ ಅನಂತಾಸನದೇವರು ಸ್ವಭಾವದಿಂದಲೇ ದಡ್ಡನಾದ ಮನುಷ್ಯನಲ್ಲಿ ಈ ರೀತಿ ಆವೇಶಗೊಂಡರು. ಆಗ ಆ ದಡ್ಡನು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತಿದ್ದನು. ದೇವರು ತನ್ನ ಭಕ್ತರನ್ನು ನಂಬಿಸುತ್ತ ಎತ್ತರವಾದ ಧ್ವಜಸ್ತಂಭದ ತುದಿಯಲ್ಲಿ ರಂಗಸ್ಥಳದಲ್ಲಿ ನಟನು ಕುಣಿಯುವಂತೆ ಹಾವಭಾವನಗಳನ್ನು ಪ್ರಕಟಿಸುತ್ತ ಆ ದಡ್ಡನಲ್ಲಿ ಆವಿಷ್ಟರಾಗಿ ಕುಣಿದರು.

ವ್ಯಾ. ವಿ. :—ನ ಕುಶಲಃ = ಅಕುಶಲಃ, ತಮ್, ನಿಜಾಶ್ಚ ತೇ ಜನಾಶ್ಚ = ನಿಜಜನಾಃ, ತಾನ್. ಉತ್ತುಂಗಶ್ಚಾಸೌ ಕೇತುಶ್ಚ, ಉತ್ತುಂಗಕೇತೋಃ ಶಿಖರಂ = ಉತ್ತುಂಗಕೇತುಶಿಖರಂ, ತಸ್ಮಿನ್. ಕೃತಃ ಅಂಗಹಾರಃ ಯೇನ ಸಃ

Rarest Archiver

=ಕೃತಾಂಗಹಾರಃ ರಂಗಸ್ಯ ಅಂತರಂ=ರಂಗಾಂತರಂ ತಸ್ಮಿನ್. ಅಖಿಲಾನಾಂ ವಿಸ್ಮಯಃ ಯೇನ ಸಃ, ಅಖಿಲವಿಸ್ಮಯಃ ಆತ್ಮಾ ಯಸ್ಯ ಸಃ = ಅಖಿಲ-ವಿಸ್ಮಯಾತ್ಮಾ. ಅನೃತ್ಯತ್—ನೃತೀ ಗಾತ್ರವಿಕ್ಷೇಪೇ, ನಾಲ್ಕನೆ ಗಣ, ಅಕ. ಲಙ್, ಪರ. ಪ್ರ. ಏ. ಅನೃತ್ಯತ್, ಅನೃತ್ಯತಾಂ, ಅನೃತ್ಯನ್. ಅನೃತ್ಯಃ, ಅನೃತ್ಯತಂ, ಅನೃತ್ಯತ. ಅನೃತ್ಯಂ, ಅನೃತ್ಯಾವ, ಅನೃತ್ಯಾಮ.

ಆಭಾಷ್ಯ ಸೋಽತ್ರ ಜನತಾಂ ಶಪಥಾನುವಿದ್ಧ-
ಮುಚ್ಚೈರಿದಂ ವಚನಮುದ್ಧೃತದೋರ್ಬಭಾಷೇ |
ಉತ್ಪತ್ಸ್ಯತೇ ಜಗತಿ ವಿಶ್ವಜನೀನವೃತ್ತಿ-
ರ್ವಿಶ್ವಜ್ಞ ಏವ ಭಗವಾನಚಿರಾದಿಹೇತಿ || ೮ ||

ಅ :—ಸಃ ಅತ್ರ ಜನತಾಂ ಆಭಾಷ್ಯ ಉದ್ಧೃತದೋಃ ಶಪಥಾನುವಿದ್ಧಂ ಉಚ್ಚೈಃ 'ಇಹ ಜಗತಿ ವಿಶ್ವಜನೀನವೃತ್ತಿಃ ವಿಶ್ವಜ್ಞಃ ಭಗವಾನ್ ಅಚಿರಾತ್ ಏವ ಉತ್ಪತ್ಸ್ಯತೇ' ಇತಿ ಇದಂ ವಚನಂ ಬಭಾಷೆ.

ಅ :—ಸಃ=ಆ ಅನಂತಾಸನನು, ಅತ್ರ=ಈ ಉಡುಪಿಯಲ್ಲಿ, ಜನತಾಂ =ಜನರ ಸಮೂಹವನ್ನು, ಆಭಾಷ್ಯ=ಕೇಳಿ ಎಂದು ಕರೆದು, ಉದ್ಧೃತದೋಃ =ತೋಳನ್ನು ಎತ್ತಿಕೊಂಡವನಾಗಿ, ಶಪಥಾನುವಿದ್ಧಂ=ಆಣೆಯಿಂದ ಸಹಿತ ವಾಗಿ, ಉಚ್ಚೈಃ=ಘಟ್ಟಿಯಾಗಿ, ಇಹ ಜಗತಿ=ಈ ಪ್ರಪಂಚದಲ್ಲಿ, ವಿಶ್ವಜನೀ-ನವೃತೀಃ=ಸಮಸ್ತ ಜನರಿಗೆ ಹಿತವಾದ ನಡತೆಯುಳ್ಳ, ವಿಶ್ವಜ್ಞಃ=ಸರ್ವಜ್ಞ ರಾದ, ಭಗವಾನ್=ಷಡ್ಗುಣೈಶ್ವರ್ಯಗಳುಳ್ಳ ಒಬ್ಬರು, ಅಚಿರಾತ್ ಏವ= ಜಾಗ್ರತೆಯಾಗಿಯೇ, ಉತ್ಪತ್ಸ್ಯತೇ=ಹುಟ್ಟುವರು, ಇತಿ=ಹೀಗೆಂಬ, ಇದಂ =ಈ, ವಚನಂ=ಮಾತನ್ನು, ಬಭಾಷೇ=ಹೇಳಿದನು.

ತಾ :—ಆ ಅನಂತಾಸನನು ಅಲ್ಲಿಯ ಜನರನ್ನೆಲ್ಲ ಸಂಬೋಧಿಸಿ ಕೈಯನ್ನು ಎತ್ತಿಕೊಂಡು ಘಟ್ಟಿಯಾಗಿ 'ಜನರೆ! ಸದ್ಯದಲ್ಲಿಯೇ ಈ ಪ್ರಪಂಚ ದಲ್ಲಿ ಸಕಲ ಸಜ್ಜನರಿಗೂ ಹಿತವನ್ನುಂಟುಮಾಡುವ ಸರ್ವಜ್ಞನಾದ ಒಬ್ಬ ಮಹಾತ್ಮನು ಬೇಗನೆ ಅವತರಿಸುವನು' ಎಂದು ಆಣೆಯಿಟ್ಟು ಹೇಳಿದನು.

ವ್ಯಾ. ವಿ. :—ಜನಾನಾಂ ಸಮೂಹಃ=ಜನತಾ, ತಾಪ್. ಶಪಥೇನ

Rarest Archiver

ಅನುವಿದ್ಧಂ ಯಥಾ ಭವತಿ ತಥಾ=ಶಪಥಾನುವಿದ್ಧಮ್. ಉದ್ಧೃತೌ ದೋಷೌ ಯಸ್ಯ ಸಃ=ಉದ್ಧೃತದೋಃ. ವಿಶ್ವಶ್ಚಾಸೌ ಜನಶ್ಚ, ವಿಶ್ವಜನಸ್ಯ ಹಿತಾ, ವಿಶ್ವಜನೀನಾ ವೃತ್ತಿಃ ಯಸ್ಯ ಸಃ=ವಿಶ್ವಜನೀನವೃತ್ತಿಃ. ವಿಶ್ವಂ ಜಾನಾತೀತಿ=ವಿಶ್ವಜ್ಞಃ. ಉತ್ಪತ್ಸ್ಯತೇ=ಪದ ಗತೌ, ನಾಲ್ಕನೆ ಗಣ, ಅಕ. ಲೃಟ್, ಆತ್ಮ ಪ್ರ. ಏ. ಉತ್ ಉಪಸರ್ಗ. ಉತ್+ಪತ್ಸ್ಯತೇ, ಪತ್ಸ್ಯೇತೇ, ಪತ್ಸ್ಯಂತೇ, ಪತ್ಸ್ಯಸೇ ಪತ್ಸ್ಯೇಥೇ, ಪತ್ಸ್ಯಧ್ವೇ. ಪತ್ಸ್ಯೇ, ಪತ್ಸ್ಯಾವಹೇ, ಪತ್ಸ್ಯಾಮಹೇ.

ಸದ್ವೀಪವಾರಿನಿಧಿಸಪ್ತಕಭೂತಧಾತ್ರ್ಯಾ
ಮಧ್ಯೇಽಪಿ ಕರ್ಮಭುವಿ ಭಾರತನಾಮಖಂಡೇ ।
ಕಾಲೇ ಕಲೌ ಸುವಿಮಲಾನ್ವಯಲಬ್ಧಜನ್ಮಾ
ಸನ್ಮಧ್ಯಗೇಹಕುಲಮೌಲಿಮಣಿರ್ದ್ವಿಜೋಽಭೂತ್ ॥ ೯ ॥

ಅ :—ಕಲೌ ಕಾಲೇ ಸದ್ವೀಪವಾರಿನಿಧಿಸಪ್ತಕಭೂತಧಾತ್ರ್ಯಾಃ ಮಧ್ಯೇ ಅಪಿ ಕರ್ಮಭುವಿ ಭಾರತನಾಮಖಂಡೇ ಸುವಿಮಲಾನ್ವಯಲಬ್ಧಜನ್ಮಾ ಸನ್ಮಧ್ಯಗೇಹಕುಲಮೌಲಿಮಣಿಃ ದ್ವಿಜಃ ಅಭೂತ್.

ಅ :—ಕಲೌ ಕಾಲೇ=ಕಲಿಯುಗದಲ್ಲಿ, ಸದ್ವೀಪವಾರಿನಿಧಿಸಪ್ತಕ=ದ್ವೀಪ ಮತ್ತು ಸಮುದ್ರ ಇವುಗಳ ಏಳರಿಂದ ಕೂಡಿದ, ಭೂತಧಾತ್ರ್ಯಾಃ=ಭೂಮಿಯ, ಮಧ್ಯೇಅಪಿ=ಮಧ್ಯವಾದ ಜಂಬುದ್ವೀಪದಲ್ಲಿಯೂ, ಕರ್ಮಭುವಿ =ಸ್ವರ್ಗಾದಿಗಳನ್ನು ಪಡೆಯಲು ಯೋಗ್ಯ ಕರ್ಮಗಳನ್ನು ಮಾಡಲರ್ಹವಾದ ಭೂಮಿಯಲ್ಲಿ, ಭಾರತನಾಮಖಂಡೇ=ಭಾರತವೆಂಬ ಖಂಡದಲ್ಲಿ, ಸುವಿಮಲಾನ್ವಯ = ಒಳ್ಳೆ ಶುದ್ಧವಾದ ವಂಶದಲ್ಲಿ, ಲಬ್ಧಜನ್ಮಾ = ಹೊಂದಲ್ಪಟ್ಟ ಹುಟ್ಟುಳ್ಳ, ಸನ್ಮಧ್ಯಗೇಹಕುಲ=ನಡುಮನೆಯೆಂಬ ವಂಶಕ್ಕೆ, ಮೌಲಿಮಣಿಃ =ಶಿರೋರತ್ನದಂತಿರುವ, ದ್ವಿಜಃ=ಬ್ರಾಹ್ಮಣರು, ಅಭೂತ್=ಇದ್ದರು.

ತಾ :—ಏಳು ದ್ವೀಪಗಳಿಂದಲೂ, ಏಳು ಸಮುದ್ರಗಳಿಂದಲೂ ಕೂಡಿದ ಭೂಮಿಯ ನಡುವೆ ಜಂಬೂದ್ವೀಪದಲ್ಲಿ, ಕರ್ಮಮಾಡಲು ಯೋಗ್ಯವಾದ ಭರತ ಖಂಡವೆಂಬುದಿದೆ. ಕಲಿಯುಗದಲ್ಲಿ ಅದರಲ್ಲಿ ಮಧ್ಯಗೇಹ (ನಡುಮನೆ) ಎಂಬ ಪವಿತ್ರವಾದ ಒಂದು ವಂಶವು ಇದೆ. ಅದರಲ್ಲಿ ಒಬ್ಬ ಶ್ರೇಷ್ಠ ಬ್ರಾಹ್ಮಣರಿದ್ದರು.

Rarest Archive

ವ್ಯಾ. ವಿ. :—ವಾರೀಣಿ ನಿಧೀಯಂತೇ ಏಷ್ವಿತಿ, ದ್ವೀಪಾಶ್ಚ ವಾರಿನಿಧಯಶ್ಚ, ದ್ವೀಪವಾರಿನಿಧೀನಾಂ ಸಪ್ತಕಂ, ದ್ವೀಪ....ಸಪ್ತಕೇನ ಸಹಿತಾ, ಸದ್ವೀಪ....ಸಪ್ತಕಾ ಚ ಸಾ ಭೂತಧಾತ್ರೀ ಚ=ಸದ್ವೀಪ....ಧಾತ್ರೀ, ತಸ್ಯಾಃ ಕರ್ಮಣಃ ಭೂಃ=ಕರ್ಮಭೂಃ, ತಸ್ಯಾಂ. ಭಾರತಂ ಇತಿ ನಾಮ ಯಸ್ಯ ಸಃ, ಭಾರತನಾಮಾ ಚಾಸೌ ಖಂಡಶ್ಚ=ಭಾರತನಾಮಖಂಡಃ, ತಸ್ಮಿನ್. ಸುಷ್ಠು ವಿಮಲಃ, ಸುವಿಮಲಶ್ಚಾಸೌ ಅನ್ವಯಶ್ಚ, ಸುವಿಮಲಾನ್ವಯೇ ಲಬ್ಧಂ, ಸುವಿ....ಲಬ್ಧಂ ಜನ್ಮ ಯೇನ ಸಃ=ಸುವಿಮಲಾನ್ವಯಲಬ್ಧಜನ್ಮಾ. ಮಧ್ಯಗೇಹಂ ಇತಿ ಕುಲಂ, ಸಚ್ಚ ತತ್ ಮಧ್ಯಗೇಹಕುಲಂ ಚ, ಸನ್ಮ....ಕುಲೇ ಮೌಲಿಮಣಿಃ =ಸನ್ಮಧ್ಯಗೇಹಕುಲಮೌಲಿಮಣಿಃ.

ವೇದಾದ್ರಿಸದ್ರಜತಪೀಠಪುರೇಶ್ವರಾಭ್ಯಾಂ
ಗ್ರಾಮೋ ವಿಭೂಷಿತತರಃ ಶಿವರೂಪ್ಯನಾಮಾ ।
ಹೇಮಾದ್ರಿರಾಜವಿಭುರಾಜದಿಲಾವೃತಾಭ -
ಸ್ತಸ್ಯಾಭವದ್ಗುರುಗುಣಃ ಖಲು ಮೂಲಭೂಮಿಃ ॥ ೧೦ ॥

ಅ :—ವೇದಾದ್ರಿಸದ್ರಜತಪೀಠಪುರೇಶ್ವರಾಭ್ಯಾಂ ವಿಭೂಷಿತತರಃ ಗುರುಗುಣಃ ಶಿವರೂಪ್ಯನಾಮಾ ಹೇಮಾದ್ರಿರಾಜವಿಭುರಾಜದಿಲಾವೃತಾಭಃ ಗ್ರಾಮಃ ತಸ್ಯ ಮೂಲಭೂಮಿಃ ಅಭವತ್ ಖಲು.

ಅ :—ವೇದಾದ್ರಿ=ವೇದಾಚಲ ಎಂಬ ಬೆಟ್ಟವು, ರಜತಪೀಠಪುರೇಶ್ವರಾಭ್ಯಾಂ=ಉಡುಪಿಗೆ ಸ್ವಾಮಿಯಾದ ಅನಂತೇಶ್ವರ ಇವರಿಂದ, ವಿಭೂಷಿತತರಃ=ಹೆಚ್ಚಾಗಿ ಅಲಂಕಾರಗೊಂಡ, ಗುರುಗುಣಃ=ಅತಿಶಯ ಗುಣವುಳ್ಳ, ಶಿವರೂಪ್ಯನಾಮಾ=ಶಿವಬೆಳ್ಳಿಯೆಂದು ಹೆಸರುಳ್ಳ, ಹೇಮಾದ್ರಿರಾಜ=ಮೇರುಪರ್ವತ, ವಿಭು=ಶಂಕರ ಇವರಿಂದ, ರಾಜತ್=ಪ್ರಕಾಶಮಾನವಾದ, ಇಲಾವೃತಾಭಃ=ಇಲಾವೃತ ಖಂಡದಂತೆ ಕಾಂತಿಯುಳ್ಳ, ಗ್ರಾಮಃ=ಹಳ್ಳಿಯು, ತಸ್ಯ=ಆ ಬ್ರಾಹ್ಮಣರಿಗೆ, ಮೂಲಭೂಮಿಃ=ಜನ್ಮಭೂಮಿಯು, ಅಭವತ್ ಖಲು=ಆಗಿತ್ತು.

ತಾ :—ಅಲ್ಲಿಯೇ ವೇದಾದ್ರಿ ಮತ್ತು ಅನಂತೇಶ್ವರದೇವರಿಂದ ಅಲಂಕಾರಗೊಂಡ ಶಿವಬೆಳ್ಳಿ (ಶಿವಳ್ಳಿ) ಎಂಬ ಒಂದು ಗ್ರಾಮವಿದ್ದಿತು. ಅದು

Rarest Archiver

ಮೇರುಪರ್ವತ ಮತ್ತು ಶಂಕರರಿಂದ ಅಲಂಕಾರಗೊಂಡ ಇಲಾವೃತಖಂಡದಂತೆ ಕಾಣುತ್ತಿದ್ದಿತು. ವೇದಶಾಸ್ತ್ರಾಭಿಜ್ಞರಾದ ಸಜ್ಜನರು ವಾಸ ಮಾಡಿಕೊಂಡಿರುವುದರಿಂದ ಅತಿಶಯ ಗುಣಗಳುಳ್ಳ ಆ ಗ್ರಾಮದಲ್ಲಿ ಆ ಬ್ರಾಹ್ಮಣರು ಹುಟ್ಟಿದರು.

ವ್ಯಾ ವಿ. :—ವೇದ ಇತಿ ಅದ್ರಿಃ = ವೇದಾದ್ರಿಃ, ಸಂಶ್ಚಾಸೌ ರಜತಪೀಠಪುರೇಶ್ವರಶ್ಚ, ವೇದಾದ್ರಿಶ್ಚ ಸದ್ರಜತಪೀಠಪುರೇಶ್ವರಶ್ಚ = ವೇದಾದ್ರಿಸದ್ರಜತಪೀಠಪುರೇಶ್ವರೌ, ತಾಭ್ಯಾಮ್. ಅತಿಶಯೇನ ವಿಭೂಷಿತಃ = ವಿಭೂಷಿತತರಃ. ಶಿವರೂಪ್ಯಮಿತಿ ನಾಮ ಯಸ್ಯ ಸಃ = ಶಿವರೂಪ್ಯನಾಮಾ, ಹೇಮ್ನಃ ಅದ್ರಿರಾಜಃ = ಹೇಮಾದ್ರಿರಾಜಶ್ಚ ವಿಭುಶ್ಚ, ಹೇಮಾದ್ರಿರಾಜವಿಭುಭ್ಯಾಂ ರಾಜನ್, ಹೇಮಾ....ರಾಜನ್ ಚಾಸೌ ಇಲಾವೃತಶ್ಚ, ಹೇಮಾ....ವೃತಸ್ಯ ಆಭೇವ ಆಭಾ ಯಸ್ಯ ಸಃ = ಹೇಮಾದ್ರಿರಾಜವಿಭುರಾಜದಿಲಾವೃತಾಭಃ. ಗುರವಃ ಗುಣಾಃ ಯಸ್ಯ ಸಃ = ಗುರುಗುಣಃ. ಮೂಲಭೂತಾ ಚ ಸಾ ಭೂಮಿಶ್ಚ = ಮೂಲಭೂಮಿಃ.

ರಾಮಾಧಿವೇಶಿತಹರಿಸ್ವಸೃಮೌಲಿಮಾಲಾ-
ರಾಜದ್ವಿಮಾನಗಿರಿಶೋಭಿತಮಧ್ಯವಾಸ ।
ಕ್ಷೇತ್ರಂ ಸ ಪಾಜಕಪದಂ ತ್ರಿಕುಲೈಕಕೇತುಃ
ಕಂ ಯುದ್ದಧಾತಿ ಸತತಂ ಖಲು ವಿಶ್ವಪಾಜಾತ್ ॥ ೧೧ ॥

ಅ:—ತ್ರಿಕುಲೈಕಕೇತುಃ ಸಃ ರಾಮಾಧಿವೇಶಿತಹರಿಸ್ವಸೃಮೌಲಿಮಾಲಾರಾಜದ್ವಿಮಾನಗಿರಿಶೋಭಿತಂ ಯತ್ ಕ್ಷೇತ್ರಂ, ವಿಶ್ವಪಾಜಾತ್ ಸತತಂ ಕಂ ದಧಾತಿ ಖಲು (ತತ್) ಪಾಜಕಪದಂ ಅಧ್ಯವಾಸ.

ಅ :—ತ್ರಿಕುಲ = ವಡಿಪ್ಪೆ, ಪಾರ್ಪದಾನೆ, ಕಬೆಕೊಡೆ ಎಂಬ ಮೂರು ವಂಶಕ್ಕೆ, ಏಕಕೇತುಃ = ಮುಖ್ಯ ಧ್ವಜದಂತಿರುವ, ಸಃ = ಆ ಬ್ರಾಹ್ಮಣರು, ರಾಮ = ಪರಶುರಾಮನಿಂದ, ಅಧಿವೇಶಿತ = ಪ್ರತಿಷ್ಠೆ ಮಾಡಲ್ಪಟ್ಟ, ಹರಿಸ್ವಸೃ = ಕೃಷ್ಣನ ತಂಗಿ ದುರ್ಗಾದೇವಿಯೆಂಬ, ಮೌಲಿಮಾಲಾ = ತಲೆಯ ಮಾಲೆಯಿಂದ, ರಾಜತ್ = ಪ್ರಕಾಶಿಸುವ, ವಿಮಾನಗಿರಿ = ವಿಮಾನಾಕಾರದ (ವಿಮಾನವೆಂಬ) ಬೆಟ್ಟದಿಂದ, ಶೋಭಿತಂ = ಅಲಂಕಾರಗೊಂಡ, ಯತ್ = ಯಾವ, ಕ್ಷೇತ್ರಂ = ಕ್ಷೇತ್ರವು, ವಿಶ್ವಪಾ = ಸಕಲವನ್ನೂ ಕಾಪಾಡುವ,

Rarest Archiver

ಅಜಾತ್ = ಹುಟ್ಟಿಲ್ಲದ ಪರಶುರಾಮನಿಂದ, (ವಿಷ್ಣುವಿನಿಂದ) ಸತತಂ = ಯಾವಾಗಲೂ, ಕಂ = ನೀರನ್ನು, ದಧಾತಿ ಖಲು = ಧರಿಸಿದೆಯೊ (ತತ್) ಪಾಜಕಪದಂ = ಆ ಪಾಜಕವೆಂಬ ಕ್ಷೇತ್ರದಲ್ಲಿ, ಅಧ್ಯವಾಸ = ವಾಸಮಾಡಿದರು.

ತಾ:—ಆ ಶಿವಬೆಳ್ಳಿಗ್ರಾಮದ ಆಗ್ನೇಯದಲ್ಲಿ ಪಾಜಕವೆಂಬ ಕ್ಷೇತ್ರವಿದೆ. ಅದರ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ಪರಶುರಾಮನು ಕೊಡಲಿ, ಬಿಲ್ಲು, ಬಾಣ, ಗದೆಗಳಿಂದ ಕಲ್ಲಿನ ಭೂಮಿಯನ್ನು ಸೀಳಿ ನಾಲ್ಕು ತೀರ್ಥಗಳನ್ನು ನಿರ್ಮಿಸಿರುವನು. ಅಲ್ಲದೆ ಆ ಕ್ಷೇತ್ರದ ಮೇಲ್ಗಡೆ ವಿಮಾನದಂತಿರುವ ಬೆಟ್ಟದಲ್ಲಿ ಪರಶುರಾಮನು ಶ್ರೀಕೃಷ್ಣನ ತಂಗಿಯಾದ ದುರ್ಗಾದೇವಿಯನ್ನು ಪ್ರತಿಷ್ಠೆ ಮಾಡಿರುವನು. ಈ ವಿಮಾನಗಿರಿಯಿಂದ ಆ ಕ್ಷೇತ್ರವು ಅತಿಶಯವಾಗಿ ಕಂಗೊಳಿಸುತ್ತಿದೆ. ಅಂತಹ ಆ ಪಾಜಕಕ್ಷೇತ್ರದಲ್ಲಿ, ವಡಿಪ್ಪೆ, ಪಾರ್ಪದಾನೆ, ಕಬೆಕೊಡಿ ಎಂಬ ಮೂರು ವಂಶಗಳಲ್ಲಿ ಶ್ರೇಷ್ಠರಾದ ಆ ಬ್ರಾಹ್ಮಣರು ವಾಸಮಾಡಿಕೊಂಡಿದ್ದರು.

ವ್ಯಾ. ವಿ:—ರಾಮೇಣ ಅಧಿವೇಶಿತಾ, ರಾಮಾಧಿವೇಶಿತಾ ಚ ಸಾ ಹರಿಸ್ವಸಾ ಚ, ರಾಮಾ....ಸ್ವಸ್ರೈವ ಮೌಲಿಮಾಲಾ, ವಿಮಾನ ಇತಿ ಗಿರಿಃ ವಿಮಾನಗಿರಿಃ, ರಾಮಾ....ಮಾಲಯಾ ರಾಜನ್, ರಾಮಾ....ರಾಜನ್ ಚಾಸೌ ವಿಮಾನಗಿರಿಶ್ಚ, ರಾಮಾ....ಗಿರಿಣಾ ಶೋಭಿತಂ = ರಾಮಾಧಿವೇಶಿತಹರಿಸ್ವಸೃ-ಮೌಲಿಮಾಲಾರಾಜದ್ವಿಮಾನಗಿರಿಶೋಭಿತಂ, ತತ್. ಪಾಜಕಂ ಇತಿ ಪದಂ ಯಸ್ಯ ತತ್ = ಪಾಜಕಪದಂ, ತತ್. ತ್ರಯಾಣಾಂ ಕುಲಾನಾಂ ಸಮಾಹಾರಃ, ತ್ರಿಕುಲಸ್ಯ ಏಕಕೇತುಃ = ತ್ರಿಕುಲೈಕಕೇತುಃ. ವಿಶ್ವಂ ಪಾತೀತಿ, ವಿಶ್ವಪಾಶ್ಚಾಸೌ ಅಜಶ್ಚ = ವಿಶ್ವಪಾಜಃ, ತಸ್ಮಾತ್. ಕ್ಷೇತ್ರಂ ಅಧ್ಯವಾಸ 'ಉಪಾನ್ವಧ್ಯಾಙ್ವಸಃ' ಈ ಸೂತ್ರದಿಂದ ಅಧಿಪೂರ್ವಕ ವಸ ಧಾತುವಿನ ಯೋಗವಿರುವುದರಿಂದ ಕ್ಷೇತ್ರ ಶಬ್ದವು ದ್ವಿತೀಯಾವಿಭಕ್ತ್ಯಂತವಾಗಿದೆ. ಅಧ್ಯವಾಸ–ವಸ ನಿವಾಸೇ, ಒಂದನೆ ಗಣ, ಅಕ. ಲಿಟ್. ಪರ. ಪ್ರ. ಏ. ಅಧಿ ಉಪಸರ್ಗ. ಅಧಿ + ಉವಾಸ, ಊಷತುಃ, ಊಷುಃ. ಉವಸಿಥ ಉವಸ್ಥ, ಊಷಥುಃ, ಊಷ. ಉವಾಸ ಉವಸ, ಊಷಿವ, ಊಷಿಮ, ದಧಾತಿ–ಡುಧಾಞ್ ಧಾರಣ-ಪೋಷಣಯೋಃ, ಮೂರನೆ ಗಣ, ಸಕ, ಲಿಟ್, ಪರ. ಪ್ರ. ಏ. ದಧಾತಿ, ಧತ್ತಃ, ದಧತಿ. ದಧಾಸಿ, ಧತ್ಥಃ, ಧತ್ಥ. ದಧಾಮಿ, ದಧ್ವಃ, ದಧ್ಮಃ.

Rarest Archiver

ಅರ್ಥಂ ಕಮಪ್ಯನವಮಂ ಪುರುಷಾರ್ಥಹೇತುಂ
ಪುಂಸಾಂ ಪ್ರದಾತುಮುಚಿತಾಮುಚಿತಸ್ವರೂಪಾಮ್ ।
ಕನ್ಯಾಂ ಸುವರ್ಣಲಸಿತಾಮಿವ ವೇದವಿದ್ಯಾಂ
ಜಗ್ರಾಹ ವಿಪ್ರವೃಷಭಪ್ರತಿಪಾದಿತಾಂ ಸಃ ॥ ೧೨ ॥

ಅ:—ಸಃ ಪುರುಷಾರ್ಥಹೇತುಂ ಅನವಮಂ ಕಂ ಅಪಿ ಅರ್ಥಂ ಪುಂಸಾಂ ಪ್ರದಾತುಂ ಉಚಿತಾಂ ಉಚಿತಸ್ವರೂಪಾಂ ಸುವರ್ಣಲಸಿತಾಂ ವಿಪ್ರವೃಷಭ-ಪ್ರತಿಪಾದಿತಾಂ ಕನ್ಯಾಂ ವೇದವಿದ್ಯಾಂ ಇವ ಜಗ್ರಾಹ.

ಅ :—ಸಃ = ಆ ಬ್ರಾಹ್ಮಣರು, ಪುರುಷಾರ್ಥ = ಜ್ಞಾನೈಶ್ವರ್ಯಾದಿ ಮೋಕ್ಷಾದಿ ಪುರುಷಾರ್ಥಗಳಿಗೆ, ಹೇತುಂ = ಕಾರಣವಾದ, ಅನವಮಂ = ಉತ್ತಮವಾದ, ಕಂ ಅಪಿ = ಯಾವುದೊ ಒಂದು, ಅರ್ಥಂ = ಮಧ್ವಾಚಾರ್ಯ ರೆಂಬ ವಸ್ತುವನ್ನು, ಪರಬ್ರಹ್ಮವೆಂಬ ವಸ್ತುವನ್ನು, ಪುಂಸಾಂ = ಸಜ್ಜನರಿಗೆ, ಪ್ರದಾತುಂ = ಕೊಡುವುದಕ್ಕೆ, ಉಚಿತಾಂ = ಯೋಗ್ಯಳಾದ, ಬ್ರಾಹ್ಮಣರಿಗೆ ಓದಲು ಯೋಗ್ಯವಾದ, ಉಚಿತಸ್ವರೂಪಾಂ = ಯೋಗ್ಯವಾದ ಆಕೃತಿಯುಳ್ಳ, ಸುವರ್ಣಲಸಿತಾಂ = ಚಿನ್ನದ ಒಡವೆಗಳಿಂದ ಪ್ರಕಾಶಗೊಂಡ, ಒಳ್ಳೆ ಅಕ್ಷರ ಗಳಿಂದ ಪ್ರಕಾಶಗೊಂಡ, ವಿಪ್ರವೃಷಭಪ್ರತಿಪಾದಿತಾಂ = ಬ್ರಾಹ್ಮಣೋತ್ತಮ ನಿಂದ ಕೊಡಲ್ಪಟ್ಟ, ಬ್ರಾಹ್ಮಣಶ್ರೇಷ್ಠನಾದ ಉಪಾಧ್ಯಾಯನಿಂದ ಉಪದೇಶ ಮಾಡಲ್ಪಟ್ಟ, ಕನ್ಯಾಂ = ಹುಡುಗಿಯನ್ನು, ವೇದವಿದ್ಯಾಂ ಇವ = ವೇದವಿದ್ಯೆ ನ್ನೆಂಬಂತೆ, ಜಗ್ರಾಹ = ಮದುವೆಯಾದರು. ಸ್ವೀಕರಿಸಿದರು.

ತಾ :—ಆ ಬ್ರಾಹ್ಮಣರು ಸಜ್ಜನರಿಗೆ ಮೋಕ್ಷವೆಂಬ ಪುರುಷಾರ್ಥ ವನ್ನೀಯುವ ಪರಬ್ರಹ್ಮನೆಂಬ ವಸ್ತುವನ್ನು ಪ್ರತಿಪಾದಿಸುವುದೂ, ಬ್ರಾಹ್ಮಣ ರಿಗೆ ಓದಲು ಯೋಗ್ಯವಾಗಿರುವುದೂ, ಒಳ್ಳೆ ಅಕ್ಷರಗಳುಳ್ಳುದೂ, ಬ್ರಾಹ್ಮಣ ಶ್ರೇಷ್ಠನಾದ ಗುರುವಿನಿಂದ ಉಪದೇಶಮಾಡಲ್ಪಟ್ಟುದೂ ಆದ ವೇದವಿದ್ಯೆ ಯನ್ನು ಅಧ್ಯಯನಮಾಡಿದರು. ಅನಂತರ ಹಾಗೆಯೇ ಸಜ್ಜನರಿಗೆ ಜ್ಞಾನೈಶ್ವ-ರ್ಯಾದಿಪುರುಷಾರ್ಥಗಳನ್ನೀಯುವ ಮಧ್ವಾಚಾರ್ಯರೆಂಬ ಉತ್ತಮ ವಸ್ತು ವನ್ನು ಪ್ರಸವಿಸಲು ಯೋಗ್ಯಳೂ, ಕುಲ, ವಯಸ್ಸು, ರೂಪ ನಡತೆಗಳಿಂದ ತನಗೆ ಮದುವೆಯಾಗಲು ಯೋಗ್ಯಳೂ, ಚಿನ್ನದ ಒಡವೆಗಳಿಂದ

Rarest Archiver

ಅಲಂಕಾರಗೊಂಡವಳೂ, ಬ್ರಾಹ್ಮಣೋತ್ತಮನಿಂದ ಕೊಡಲ್ಪಟ್ಟವಳೂ ಆದ ಒಬ್ಬ ಕನ್ಯೆಯನ್ನು ಮದುವೆಯಾದರು.

ವ್ಯಾ. ವಿ :—ಪುರುಷಾರ್ಥಾನಾಂ ಹೇತುಃ=ಪುರುಷಾರ್ಥಹೇತುಃ, ತಮ್. ಉಚಿತಂ ಸ್ವರೂಪಂ ಯಸ್ಯಾಸ್ಸಾ=ಉಚಿತಸ್ವರೂಪಾ, ತಾಮ್. ಸುವರ್ಣೇನ ಲಸಿತಾ=ಸುವರ್ಣಲಸಿತಾ, ತಾಮ್. ವೇದಸ್ಯ ವಿದ್ಯಾ=ವೇದ ವಿದ್ಯಾ, ತಾಮ್. ವಿಪ್ರೇಷು ವೃಷಭಃ, ವಿಪ್ರವೃಷಭೇಣ ಪ್ರತಿಪಾದಿತಾ= ವಿಪ್ರವೃಷಭಪ್ರತಿಪಾದಿತಾ, ತಾಮ್. ಜಗ್ರಾಹ-ಗ್ರಹ ಉಪಾದಾನೇ (೧ನೆ ಸರ್ಗ ೪೮ನೇ ಪದ್ಯವನ್ನು ನೋಡಿ) ಉಪಮಾಲಂಕಾರ.

ರೇಮೇಽಚ್ಛಯೋಪನಿಷದೇವ ಮಹಾವಿವೇಕೋ
ಭಕ್ತ್ಯೇವ ಶುದ್ಧಕರಣಃ ಪರಮಾಶ್ರಿತಾಽಲಮ್ ।
ಮಿಥ್ಯಾಭಿಮಾನರಹಿತಃ ಪರಯೇವ ಮುಕ್ತ್ಯಾ
ಸ್ವಾನಂದಸಂತತಿಕೃತಾ ಸ ತಯಾ ದ್ವಿಜೇಂದ್ರಃ ॥ ೧೩ ॥

ಅ :—ಸಃ ದ್ವಿಜೇಂದ್ರಃ ತಯಾ, ಮಹಾವಿವೇಕಃ ಅಚ್ಛಯಾ ಉಪನಿಷದಾ ಇವ, ಶುದ್ಧಕರಣಃ ಪರಮಾಶ್ರಿತಾ ಭಕ್ತ್ಯಾ ಇವ, ಮಿಥ್ಯಾಭಿಮಾನರಹಿತಃ ಸ್ವಾನಂದಸಂತತಿಕೃತಾ ಪರಯಾ ಮುಕ್ತ್ಯಾ ಇವ ರೇಮೇ.

ಅ :—ಸಃ ದ್ವಿಜೇಂದ್ರಃ=ಆ ಬ್ರಾಹ್ಮಣೋತ್ತಮರು, ತಯಾ=ಆ ಹೆಂಡತಿಯಿಂದ, ಮಹಾವಿವೇಕಃ=ನಿತ್ಯಾನಿತ್ಯ ವಸ್ತುಗಳ ಜ್ಞಾನವುಳ್ಳವನು, ಅಚ್ಛಯಾ=ದೋಷವಿಲ್ಲದ, ಉಪನಿಷದಾ ಇವ=ಉಪನಿಷತ್ತಿನಿಂದಲೋ ಪಾದಿಯಲ್ಲಿ, ಶುದ್ಧಕರಣಃ=ಪರಿಶುದ್ಧವಾದ ಮನಸ್ಸುಳ್ಳವನು, ಅಲಂ=ಅತಿ ಶಯವಾಗಿ, ಪರಮಾಶ್ರಿತಾ=ಶ್ರೀವಿಷ್ಣುವನ್ನು ಆಶ್ರಯಿಸಿದ, ಭಕ್ತ್ಯಾ ಇವ =ಭಕ್ತಿಯಿಂದಲೋಪಾದಿಯಲ್ಲಿ, ಮಿಥ್ಯಾಭಿಮಾನರಹಿತಃ=ಸುಳ್ಳು ಅಭಿ ಮಾನವಿಲ್ಲದ ತತ್ವಜ್ಞಾನಿಯು, ಸ್ವಾನಂದಸಂತತಿಕೃತಾ=ಸ್ವರೂಪಾನಂದ ಸಮೂಹವನ್ನುಂಟುಮಾಡುವ, ಆನಂದತೀರ್ಥರೆಂಬ ಮಗನನ್ನು ಪ್ರಸವಿಸುವ, ಪರಯಾ=ಉತ್ತಮವಾದ, ಮುಕ್ತ್ಯಾ ಇವ=ಮುಕ್ತಿಯಿಂದಲೋಪಾದಿ ಯಲ್ಲಿ, ರೇಮೇ=ವಿನೋದಗೊಂಡರು.

ತಾ:—ಆ ಬ್ರಾಹ್ಮಣರು ವಿವೇಕಿಗಳು, ಶುದ್ಧ ಮನಸ್ಸುಳ್ಳವರು, ಸುಳ್ಳು ಅಭಿಮಾನವಿಲ್ಲದವರು. ಅವರು, ಶುದ್ಧಳೂ ವಿಷ್ಣುಭಕ್ತಳೂ ಆನಂದತೀರ್ಥ

Rarest Archiver

ರೆಂಬ ಪುತ್ರನನ್ನು ಪ್ರಸವಿಸುವವಳೂ ಆದ ಆ ಹೆಂಡತಿಯೊಡನೆ ಸಂಸಾರಸುಖವನ್ನು ಅನುಭವಿಸುತ್ತಿದ್ದರು. ಅದು ನಿತ್ಯಾನಿತ್ಯ ವಸ್ತುಗಳ ಜ್ಞಾನವುಳ್ಳವನು ದೋಷವಿಲ್ಲದ ಉಪನಿಷತ್ತಿನಿಂದ ವಿನೋದಗೊಳ್ಳುವಂತೆಯೂ ಶುದ್ಧಾಂತರಂಗನು ಹರಿವಿಷಯವಾದ ಭಕ್ತಿಯಿಂದ ಎಂಬಂತೆಯೂ, ತತ್ವಜ್ಞಾನಿಯು ಸ್ವರೂಪಾನಂದವನ್ನುಂಟುಮಾಡುವ ಮುಕ್ತಿಯಿಂದ ವಿನೋದಗೊಳ್ಳುವಂತೆಯೂ ಆಯಿತು.

ವ್ಯಾ. ವಿ. :—ಮಹಾನ್ ವಿವೇಕಃ ಯಸ್ಯ ಸಃ=ಮಹಾವಿವೇಕಃ. ಶುದ್ಧಂ ಕರಣಂ ಯಸ್ಯ ಸಃ=ಶುದ್ಧಕರಣಃ. ಪರಮಂ ಶ್ರಯತಃ ಇತಿ=ಪರಮಶ್ರಿತ್, ತಯಾ. ಮಿಥ್ಯಾಭೂತಶ್ಚಾಸೌ ಅಭಿಮಾನಶ್ಚ, ಮಿಥ್ಯಾಭಿಮಾನೇನ ರಹಿತಃ = ಮಿಥ್ಯಾಭಿಮಾನರಹಿತಃ, ಸ್ವಾನಂದಸ್ಯ ಸಂತತಿಃ, ಸ್ವಾನಂದಸಂತತಿಃ, ಸ್ವಾನಂದಸಂತತಿಂ ಕರೋತೀತಿ = ಸ್ವಾನಂದಸಂತತಿಕೃತ್, ತಯಾ. ದ್ವಿಜಾನಾಂ ಇಂದ್ರಃ=ದ್ವಿಜೇಂದ್ರಃ.

ತಸ್ಯ ಪ್ರಭೋಶ್ಚರಣಯೋಃ ಕುಲದೇವತಾಯಾಃ
ಭಕ್ತಿಂ ಬಬಂಧ ನಿಜಧರ್ಮರತಃ ಸ ಧೀರಃ ।
ವಿಜ್ಞಾತಭಾರತಪುರಾಣಮಹಾರಹಸ್ಯಂ
ಯಂ ಭಟ್ಟ ಇತ್ಯಭಿವದಂತಿ ಜನಾ ವಿನೀತಮ್ ॥ ೧೪ ॥

ಅ :—ಜನಾಃ ವಿಜ್ಞಾತಭಾರತಪುರಾಣಮಹಾರಹಸ್ಯಂ ವಿನೀತಂ ಯಂ ಭಟ್ಟ ಇತಿ ಅಭಿವದಂತಿ, ನಿಜಧರ್ಮರತಃ ಧೀರಃ ಸಃ ಕುಲದೇವತಾಯಾಃ ತಸ್ಯ ಪ್ರಭೋಃ ಚರಣಯೋಃ ಭಕ್ತಿಂ ಬಬಂಧ.

ಅ :—ಜನಾಃ=ಜನರು, ವಿಜ್ಞಾತ = ತಿಳಿಯಲ್ಪಟ್ಟ, ಭಾರತ=ಮಹಾಭಾರತ, ಪುರಾಣ=ಭಾಗವತಾದಿ ಪುರಾಣಗಳು ಇವುಗಳ, ಮಹಾರಹಸ್ಯಂ=ಅತ್ಯಂತಗೂಢವಾದ ಅರ್ಥವುಳ್ಳ, ವಿನೀತಂ=ಜಿತೇಂದ್ರಿಯರಾದ, (ವಿಧೇಯರಾದ) ಯಂ=ಯಾವ ಬ್ರಾಹ್ಮಣರನ್ನು, ಭಟ್ಟಃ ಇತಿ=ಭಟ್ಟ ಎಂದು, ಅಭಿವದಂತಿ=ಹೇಳುತ್ತಾರೋ ; ನಿಜಧರ್ಮ=ತಮ್ಮ ವರ್ಣಾಶ್ರಮ ಧರ್ಮಗಳಲ್ಲಿ, ರತಃ=ಆಸಕ್ತರಾದ, ಧೀರಃ=ಸ್ಥಿರವಾದ ಬುದ್ಧಿಯುಳ್ಳ, ಸಃ=ಆ ಬ್ರಾಹ್ಮಣರು, ಕುಲದೇವತಾಯಾಃ=ವಂಶದ ದೇವತೆಯಾದ, ತಸ್ಯ=ಆ, ಪ್ರಭೋಃ=ಸ್ವಾಮಿಯಾದ ಅನಂತಪದ್ಮನಾಭನ, ಚರಣಯೋಃ = ಪಾದಗಳಲ್ಲಿ, ಭಕ್ತಿಂ=ಭಕ್ತಿಯನ್ನು, ಬಬಂಧ=ಮಾಡಿದರು.

Rarest Archiver

ತಾ:—ಆ ಬ್ರಾಹ್ಮಣರು ಸ್ಥಿರಬುದ್ಧಿಯುಳ್ಳವರೂ, ತಮ್ಮ ಧರ್ಮದಲ್ಲಿ ಆಸಕ್ತರೂ ಆಗಿ ತಮ್ಮ ಕುಲದೇವತೆಯಾದ ಅನಂತಾಸನನಲ್ಲಿ ಭಕ್ತಿ ಮಾಡಿದರು. ಅವರು ಭಾರತ, ಭಾಗವತಾದಿಪುರಾಣಗಳ ಗೂಢಾರ್ಥಗಳನ್ನು ಅರಿತಿದ್ದರು. ಜಿತೇಂದ್ರಿಯ (ವಿಧೇಯ) ರಾದ ಅವರನ್ನು ಜನರು ಭಟ್ಟರೆಂದು ಕರೆಯುತ್ತಿದ್ದರು.

ವ್ಯಾ. ವಿ:—ಕುಲಸ್ಯ ದೇವತಾ = ಕುಲದೇವತಾ, ತಸ್ಯಾಃ. ನಿಜಶ್ಚಾಸೌ ಧರ್ಮಶ್ಚ, ನಿಜಧರ್ಮೇ ರತಃ = ನಿಜಧರ್ಮರತಃ. ಭಾರತಂ ಚ ಪುರಾಣಾನಿ ಚ, ಭಾರತಪುರಾಣಾನಾಂ ಮಹಾರಹಸ್ಯಂ, ವಿಜ್ಞಾತಂ ಭಾರತಪುರಾಣಮಹಾರಹಸ್ಯ ಯೇನ ಸಃ = ವಿಜ್ಞಾತಭಾರತಪುರಾಣಮಹಾರಹಸ್ಯಃ, ತಮ್. ಅಭಿವದಂತಿ—ವದ ವ್ಯಕ್ತಾಯಾಂ ವಾಚಿ, ಒಂದನೆ ಗಣ, ಸಕ. ಲಟ್. ಪರ. ಪ್ರ. ಬ. ಅಭಿ ಉಪಸರ್ಗ. ಅಭಿ + ವದತಿ, ವದತಃ, ವದಂತಿ. ವದಸಿ, ವದಥಃ, ವದಥ. ವದಾಮಿ, ವದಾವಃ, ವದಾಮಃ.

ಗೋವಿಂದಸುಂದರಕಥಾಸುಧಯಾ ಸ ನೃಣಾ-
ಮಾನಂದಯನ್ನ ಕಿಲ ಕೇವಲಮಿಂದ್ರಿಯಾಣಿ ।
ಕಿಂ ತು ಪ್ರಭೋಃ ರಜತಪೀಠಪುರೇ ಪದಾಬ್ಜಂ
ಶ್ರೀವಲ್ಲಭಸ್ಯ ಭಜತಾಮಪಿ ದೈವತಾನಾಮ್ ॥೧೫॥

ಅ :—ಸಃ ಗೋವಿಂದಸುಂದರಕಥಾಸುಧಯಾ ಕೇವಲಂ ನೃಣಾಂ ಇಂದ್ರಿಯಾಣಿ ನ ಆನಂದಯತ್, ಕಿಂ ತು ರಜತಪೀಠಪುರೇ ಪ್ರಭೋಃ ಶ್ರೀವಲ್ಲಭಸ್ಯ ಪದಾಬ್ಜಂ ಭಜತಾಂ ದೈವತಾನಾಂ ಇಂದ್ರಿಯಾಣಿ ಅಪಿ ಆನಂದಯತ್ ಕಿಲ.

ಅ :—ಸಃ = ನಡುಮನೆಭಟ್ಟರು, ಗೋವಿಂದ = ಶ್ರೀವಿಷ್ಣುವಿನ, ಸುಂದರ = ಮನೋಹರವಾದ, ಕಥಾ = ಚರಿತ್ರೆಯೆಂಬ, ಸುಧಯಾ = ಅಮೃತದಿಂದ, ಕೇವಲಂ = ಮುಖ್ಯವಾಗಿ, ನೃಣಾಂ = ಮನುಷ್ಯರ, ಇಂದ್ರಿಯಾಣಿ = ಕಿವಿ ಮೊದಲಾದ ಇಂದ್ರಿಯಗಳನ್ನು, ನ ಆನಂದಯತ್ = ಸಂತೋಷಗೊಳಿಸಲಿಲ್ಲ. ಕಿಂತು = ಮತ್ತು, ರಜತಪೀಠಪುರೇ = ಉಡುಪಿಯಲ್ಲಿರುವ, ಪ್ರಭೋಃ = ಸ್ವಾಮಿಯಾದ, ಶ್ರೀವಲ್ಲಭಸ್ಯ = ಲಕ್ಷ್ಮೀಪತಿಯಾದ ಅನಂತಾಸನನ, ಪದಾಬ್ಜಂ = ಕಮಲದಂತಿರುವ ಪಾದವನ್ನು, ಭಜತಾಂ = ಸೇವಿಸುತ್ತಿರುವ,

Rarest Archiver

ದೈವತಾನಾಂ=ದೇವತೆಗಳ, ಇಂದ್ರಿಯಾಣಿ ಅಪಿ ಆನಂದಯುತ್=ಇಂದ್ರಿಯ ಗಳನ್ನೂ ಸಂತೋಷಗೊಳಿಸಿದರು.

ತಾ:—ಆ ನಡುಮನೆಭಟ್ಟರು ಭಾಗವತಾದಿ ಪುರಾಣಗಳನ್ನು ಹೇಳುತ್ತ ಅಮೃತದಂತಿರುವ ಶ್ರೀಮನ್ನಾರಾಯಣನ ಮನೋಹರಕಥೆಯಿಂದ ಭಕ್ತಜನರ ಕಿವಿ ಮೊದಲಾದ ಇಂದ್ರಿಯಗಳನ್ನು ಆನಂದಗೊಳಿಸಿದರು. ಅಷ್ಟೇ ಅಲ್ಲದೆ ರಜತಪೀಠವೆಂದು ಪ್ರಸಿದ್ಧವಾದ ಆ ಉಡುಪಿಯಲ್ಲಿರುವ ಶ್ರೀಮದನಂತಪದ್ಮ ನಾಭದೇವರನ್ನು ಸೇವಿಸುತ್ತಿರುವ ದೇವತೆಗಳ ಇಂದ್ರಿಯಗಳನ್ನೂ ಆನಂದ ಗೊಳಿಸಿದರು.

ವ್ಯಾ. ವಿ.—ಗೋವಿಂದಸ್ಯ ಸುಂದರಕಥಾ, ಗೋವಿಂದಸುಂದರಕಥೈವ ಸುಧಾ=ಗೋವಿಂದಸುಂದರಕಥಾಸುಧಾ, ತಯಾ. ಪದಂ ಅಬ್ಜಂ ಇವ= ಪದಾಬ್ಜಮ್, ತತ್. ಶ್ರಿಯಃ ವಲ್ಲಭಃ,=ಶ್ರೀವಲ್ಲಭಃ ತಸ್ಯ. ಆನಂದಯತ್ —ಟು ನದಿ ಸಮೃದ್ಧೌ ಒಂದನೆ ಗಣ, ಸಕ. ಣಿಜನ್ತ. ಲಙ್. ಪರ. ಪ್ರ. ಏ. ಆ ಉಪಸರ್ಗ.ಆನಂದಯತ್, ಆನಂದಯತಾಂ, ಆನಂದಯನ್. ಆನಂದಯಃ, ಆನಂದಯತಂ, ಆನಂದಯತ. ಆನಂದಯಂ, ಆನಂದಯಾವ, ಆನಂದ-ಯಾಮ.

ಇತ್ಥಂ ಹರೇರ್ಗುಣಕಥಾಸುಧಯಾ ಸುತೃಪ್ತೋ
ನೈರ್ಗುಣ್ಯವಾದಿಷು ಜನೇಷ್ವಪಿ ಸಾಗ್ರಹೇಷು ।
ತತ್ತ್ವೇ ಸ ಕಾಲಚಲಧೀರತಿಸಂಶಯಾಲು-
ರ್ಧೀಮಾನ್ ಧಿಯಾ ಶ್ರವಣಶೋಧಿತಯಾ ಪ್ರದಧ್ಯೌ ॥ ೧೬ ॥

ಅ;—ಸಃ ಇತ್ಥಂ ಹರೇಃ ಗುಣಕಥಾಸುಧಯಾ ಸುತೃಪ್ತಃ ನೈರ್ಗುಣ್ಯ-ವಾದಿಷು ಜನೇಷು ಅಪಿ ಸಾಗ್ರಹೇಷು ತತ್ತ್ವೇ ಕಾಲಚಲಧೀಃ ಅತಿಸಂಶ-ಯಾಲುಃ ಧೀಮಾನ್ ಶ್ರವಣಶೋಧಿತಯಾ ಧಿಯಾ ಪ್ರದಧ್ಯೌ.

ಅ:—ಸಃ=ಆ ನಡುಮನೆಭಟ್ಟರು, ಇತ್ಥಂ=ಈ ರೀತಿಯಾಗಿ, ಹರೇಃ =ಶ್ರೀಮನ್ನಾರಾಯಣನ, ಗುಣಕಥಾಸುಧಯಾ=ಗುಣಗಳನ್ನು ಹೇಳುವು ದೆಂಬ ಅಮೃತದಿಂದ, ಸುತೃಪ್ತಃ=ಅತ್ಯಂತ ತೃಪ್ತಿಗೊಂಡವರಾಗಿ, ನೈರ್ಗುಣ್ಯ-ವಾದಿಷು=ಬ್ರಹ್ಮನು ಗುಣವಿಲ್ಲದವನು ಎಂದು ಹೇಳುವ, ಜನೇಷು ಅಪಿ= ಮಾಯಾವಾದಿಗಳು ಕೂಡ, ಸಾಗ್ರಹೇಷು=ಹಠದಿಂದ ಕೂಡಿರಲು, ತತ್ತ್ವೇ ಜೀವಪರಮಾತ್ಮರ ನಿಜಸ್ಥಿತಿಯ ವಿಷಯದಲ್ಲಿ, ಕಾಲ=ಕಲಿಕಾಲದ ಬಲದಿಂದ,

Rarest Archive

ಚಲಧೀಃ = ಚಂಚಲ ಮನಸ್ಸುಳ್ಳವರಾಗಿ, ಅತಿಸಂಶಯಾಲುಃ = ಅತ್ಯಂತ ಸಂಶಯಗೊಂಡವರಾಗಿ, ಧೀಮಾನ್ = ವಿವೇಕವುಳ್ಳವರಾಗಿ, ಶ್ರವಣಶೋಧಿತಯಾ = ಭಾರತಾದಿ ಶಾಸ್ತ್ರಗಳನ್ನು ಕೇಳುವುದರಿಂದ ಶುದ್ಧವಾದ, ಧಿಯಾ = ಬುದ್ಧಿಯಿಂದ, ಪ್ರದಧ್ಯೌ = ಈ ವಿಷಯದಲ್ಲಿ ನಾನು ಏನು ಮಾಡಲಿ ಎಂದು ಆಲೋಚಿಸಿದರು.

ತಾ:—ಆ ನಡುಮನೆ ಬ್ರಾಹ್ಮಣರು ಈ ರೀತಿ ಶ್ರೀಮನ್ನಾರಾಯಣನ ಚರಿತ್ರೆಯಿಂದ ತೃಪ್ತಿಗೊಂಡರು. ಆದರೆ ಆಗ ಬ್ರಹ್ಮನಿಗೆ ಗುಣವಿಲ್ಲವೆಂದು ಹೇಳುವ ಅದ್ವೈತಿಗಳು ಬ್ರಹ್ಮನು ಹೇಗೆ ಗುಣವುಳ್ಳವನಾದಾನು. ಅದು ಸರಿಯಲ್ಲವೆಂದು ಆಗ್ರಹಮಾಡತೊಡಗಿದರು. ಇದರಿಂದಲೂ, ಕಲಿಕಾಲದ ಮಾಹಾತ್ಮ್ಯೆಯಿಂದಲೂ ಅವರ ಮನಸ್ಸು ಬ್ರಹ್ಮನು ಗುಣವುಳ್ಳವನೊ ಅಥವಾ ಗುಣವಿಲ್ಲದವನೋ ಎಂದು ಸಂಶಯಗೊಂಡಿತು. ಆದರೆ ವಿವೇಕಿಗಳಾದ ಅವರು ಪುರಾಣಾದಿಶ್ರವಣದಿಂದ ಶುದ್ಧವಾದ ಮನಸ್ಸಿನಿಂದ ನಾನು ಈಗ ಏನನ್ನು ಮಾಡಲಿ ಎಂದು ಚಿಂತಿಸತೊಡಗಿದರು.

ವ್ಯಾ.ವಿ:—ಗುಣಾನಾಂ ಕಥಾ, ಗುಣಕಥೈವ ಸುಧಾ = ಗುಣಕಥಾಸುಧಾ, ತಯಾ. ನಿರ್ಗತಾಃ ಗುಣಾಃ ಯಸ್ಮಾತ್ ಸಃ = ನಿರ್ಗುಣಃ, ನಿರ್ಗುಣಸ್ಯ ಭಾವಃ, ನೈರ್ಗುಣ್ಯಂ ವದನ್ತೀತಿ = ನೈರ್ಗುಣ್ಯವಾದಿನಃ, ತೇಷು. ಆಗ್ರಹೇಣ ಸಹ ವರ್ತಂತ ಇತಿ = ಸಾಗ್ರಹಾಃ, ತೇಷು. ಕಾಲೇನ ಚಲಾ, ಕಾಲಚಲಾ ಧೀಃ ಯಸ್ಯ ಸಃ = ಕಾಲಚಲಧೀಃ. ಶ್ರವಣೇನ ಶೋಧಿತಾ = ಶ್ರವಣಶೋಧಿತಾ, ತಯಾ. ಪ್ರದಧ್ಯೌ-ಧ್ಯೈ ಚಿಂತಾಯಾಂ, ಒಂದನೆ ಗಣ, ಸಕ. ಲಿಟ್. ಪರ. ಪ್ರ. ಏ. ಪ್ರ. ಉಪಸರ್ಗ. ಪ್ರ+ದಧ್ಯೌ, ದಧ್ಯತುಃ, ದಧ್ಯುಃ. ದಧ್ಯಿಥ ದಧ್ಯಾಥ, ದಧ್ಯಥುಃ, ದಧ್ಯ. ದಧ್ಯೌ, ದಧ್ಯಿವ ದಧ್ಯಿಮ.

ತ್ರಾತಾ ಯ ಏವ ನರಕಾತ್ಸ ಹಿ ಪುತ್ರನಾಮಾ
ಮುಖ್ಯಾವನಂ ನ ಸುಲಭಂ ಪುರುಷಾದಪೂರ್ಣಾತ್ ।
ತಸ್ಮಾತ್ಸಮಸ್ತವಿದಪತ್ಯಮವದ್ಯಹೀನಂ
ವಿದ್ಯಾಕರಾಕೃತಿ ಲಭೇಮಹಿ ಕೈರುಪಾಯೈಃ ॥ ೧೭ ॥

ಅ :—ಯಃ ಏವ ನರಕಾತ್ ತ್ರಾತಾ ಸ ಹಿ ಪುತ್ರನಾಮಾ. ಅಪೂ-

ರ್ಣಾತ್ ಪುರುಷಾತ್ ಮುಖ್ಯಾವನಂ ನ ಸುಲಭಮ್. ತಸ್ಮಾತ್ ಸಮಸ್ತವಿತ್ ಅವದ್ಯಹೀನಂ ವಿದ್ಯಾಕರಾಕೃತಿ ಅಪತ್ಯಂ ಕೈಃ ಉಪಾಯೈಃ ಲಭೇಮಹಿ.

ಅ :—ಯಃ ಏವ = ಯಾವನು, ನರಕಾತ್ = ನರಕದಿಂದ, ತ್ರಾತಾ = ಕಾಪಾಡುವವನೊ, ಸ ಹಿ = ಅವನೇ, ಪುತ್ರನಾಮಾ = ಪುತ್ರನೆಂದು ಹೆಸರು ಉಳ್ಳವನು. ಅಪೂರ್ಣಾತ್ = ಸರ್ವಜ್ಞತ್ವಾದಿ ಗುಣಗಳಿಂದ ಪೂರ್ಣನಲ್ಲದ, ಪುರುಷಾತ್ = ಮನುಷ್ಯನಿಂದ, ಮುಖ್ಯಾವನಂ = ಸರಿಯಾದ ರಕ್ಷಣೆಯು, ನ ಸುಲಭಂ = ಸುಲಭವಾಗಿ ದೊರಕತಕ್ಕದ್ದಲ್ಲ. ತಸ್ಮಾತ್ = ಆದ್ದರಿಂದ, ಸಮಸ್ತವಿತ್ = ಎಲ್ಲವನ್ನೂ ತಿಳಿದ, ಅವದ್ಯಹೀನಂ = ದೋಷವಿಲ್ಲದ, ವಿದ್ಯಾಕರಾಕೃತಿ = ವಿದ್ಯೆಗಳ ಸಮೂಹದ ಆಕೃತಿಯುಳ್ಳ, ಅಥವಾ ವಿದ್ಯೆಗಳ ಉತ್ಪತ್ತಿ ಸ್ಥಾನವಾದ ಸ್ವರೂಪವುಳ್ಳ, ಅಪತ್ಯಂ = ಮಗನನ್ನು, ಕೈಃ = ಯಾವ, ಉಪಾಯೈಃ = ಸಾಧನಗಳಿಂದ, ಲಭೇಮಹಿ = ಹೊಂದಿಯೇವು.

ತಾ :—ತಂದೆತಾಯಿಗಳನ್ನು ನರಕಕ್ಕೆ ಹೋಗದಂತೆ ಕಾಪಾಡುವವನೇ ಮಗನೆನಿಸಿಕೊಳ್ಳುವನು. ಸರ್ವಜ್ಞನಲ್ಲದ ಮಗನು ಸರಿಯಾಗಿ ಪೊರೆಯಲಾರನು. ಆದ್ದರಿಂದ ವಿದ್ಯೆಗಳಿಗೆ ಗಣಿಯಂತಿರುವ ಮಗನನ್ನು ಹೇಗೆ ಪಡೆದೇವು.

ವ್ಯಾ. ವಿ. :—ಪುತ್ರಃ ಇತಿ ನಾಮ ಯಸ್ಯ ಸಃ = ಪುತ್ರನಾಮಾ, ಸುಖೇನ ಲಭ್ಯತ ಇತಿ = ಸುಲಭಮ್. ಸಮಸ್ತಂ ವೇತ್ತೀತಿ = ಸಮಸ್ತವಿತ್, ತತ್. ಅವದ್ಯೇನ ಹೀನಂ = ಅವದ್ಯಹೀನಮ್, ತತ್. ವಿದ್ಯಾನಾಂ ಆಕರಾ, ವಿದ್ಯಾಕರಾ ಆಕೃತಿಃ ಯಸ್ಯ ತತ್ = ವಿದ್ಯಾಕರಾಕೃತಿ, ತತ್. ಲಭೇಮಹಿ-ಡುಲಭಷ್ ಪ್ರಾಪ್ತೌ, ಒಂದನೆ ಗಣ, ಸಕ. ವಿಧಿಲಿಙ್, ಉ.ಏ. ಲಭೇತ, ಲಭೇಯಾತಾಂ, ಲಭೇರನ್, ಲಭೇಥಾಃ, ಲಭೇಯಾಥಾಂ, ಲಭೇಧ್ವಮ್. ಲಭೇಯ, ಲಭೇವಹಿ, ಲಭೇಮಹಿ.

ಪೂರ್ವೇऽಪಿ ಕರ್ದಮಪರಾಶರಪಾಂಡುಮುಖ್ಯಾ
ಯತ್ಸೇವಯಾ ಗುಣಗಣಾಢ್ಯಮಪತ್ಯಮಾಪುಃ ।
ತಂ ಪೂರ್ಣಸದ್ಗುಣತನುಂ ಕರುಣಾಮೃತಾಬ್ಧಿಂ
ನಾರಾಯಣಂ ಕುಲಪತಿಂ ಶರಣಂ ವ್ರಜೇಮ ॥ ೧೮ ॥

ಅ:—ಪೂರ್ವೇ ಕರ್ದಮಪರಾಶರಪಾಂಡುಮುಖ್ಯಾಃ ಅಪಿ ಯತ್ಸೇ-

Rarest Archiver

ಸೇವಯಾ ಗುಣಗಣಾಢ್ಯಂ ಅಪತ್ಯಂ ಆಪುಃ, ಪೂರ್ಣಸದ್ಗುಣತನುಂ ಕರುಣಾ-ಮೃತಾಬ್ಧಿಂ ಕುಲಪತಿಂ ತಂ ನಾರಾಯಣಂ ಶರಣಂ ವ್ರಜೇಮ.

ಅ :—ಪೂರ್ವೇ = ಹಿಂದಿನ ಕಾಲದವರಾದ, ಕರ್ದಮ = ಕರ್ದಮ ರೆಂಬ ಪ್ರಜಾಪತಿಗಳು, ಪರಾಶರ = ಪರಾಶರರೆಂಬ ಮುನಿಗಳು, ಪಾಂಡು = ಪಾಂಡುರಾಜನು ಇವರೇ, ಮುಖ್ಯಾಃ ಅಪಿ = ಪ್ರಧಾನರಾಗುಳ್ಳವರೂ, ಯತ್ = ಯಾವ ನಾರಾಯಣನ, ಸೇವಯಾ = ಸೇವೆಯಿಂದ, ಗುಣ = ಗುಣಗಳ, ಗಣ = ಸಮೂಹದಿಂದ, ಆಢ್ಯಂ = ಸಮೃದ್ಧಿಗೊಂಡ, ಅಪತ್ಯಂ = ಮಗನನ್ನು, ಆಪುಃ = ಹೊಂದಿರುವರೋ, ಪೂರ್ಣ = ಪೂರ್ತಿಯಾದ, ಸದ್ಗುಣ = ದೋಷ ವಿಲ್ಲದ ಗುಣಗಳೇ, ತನುಂ = ಶರೀರವಾಗುಳ್ಳ, ಕರುಣಾ = ದಯೆಯೆಂಬ, ಅಮೃತ = ಅಮೃತಕ್ಕೆ, ಅಬ್ಧಿಂ = ಸಮುದ್ರನಾದ, ಕುಲಪತಿಂ = ನಮ್ಮ ವಂಶಕ್ಕೆ ಸ್ವಾಮಿಯಾದ, ತಂ = ಆ, ನಾರಾಯಣಂ = ಶ್ರೀಮಹಾವಿಷ್ಣುವನ್ನು, ಶರಣಂ = ರಕ್ಷಕನನ್ನಾಗಿ, ವ್ರಜೇಮ = ಹೊಂದೋಣ.

ತಾ :—ಹಿಂದೆ ಇದ್ದ ಕರ್ದಮ ಮೊದಲಾದವರು ನಾರಾಯಣನ ಸೇವೆ ಯಿಂದಲೇ ಗುಣಶಾಲಿಗಳಾದ ಮಕ್ಕಳನ್ನು ಪಡೆದಿರುವರು. ಎಂದರೆ ಕರ್ದಮರು ಕಪಿಲ ಮುನಿಯನ್ನೂ, ಪರಾಶರರು ವ್ಯಾಸಮುನಿಯನ್ನೂ, ಪಾಂಡುರಾಜನು ಧರ್ಮರಾಜ, ಭೀಮ, ಅರ್ಜುನ ಮೊದಲಾದ ಮಕ್ಕಳನ್ನೂ ಪಡೆದಿದ್ದಾರೆ. ಹಾಗೆಯೇ ನಾವೂ ಈಗ ಸದ್ಗುಣಪೂರ್ಣನೂ, ದಯಾಳುವೂ, ನಮ್ಮ ವಂಶದ ದೇವತೆಯೂ ಆದ ನಾರಾಯಣನನ್ನು ಮೊರೆಹೋಗೋಣ.

ವ್ಯಾ.ವಿ :—ಕರ್ದಮಶ್ಚ ಪರಾಶರಶ್ಚ ಪಾಂಡುಶ್ಚ, ಕರ್ದಮಪರಾಶರ-ಪಾಂಡವಃ ಮುಖ್ಯಾಃ ಯೇಷಾಂ ತೇ = ಕರ್ದಮಪರಾಶರಪಾಂಡುಮುಖ್ಯಾಃ. ಯಸ್ಯ ಸೇವಾ = ಯತ್ಸೇವಾ, ತಯಾ. ಗುಣಾನಾಂ ಗಣಾಃ, ಗುಣಗಣೈಃ ಆಢ್ಯಂ = ಗುಣಗಣಾಢ್ಯಂ, ತತ್. ಸಂತಶ್ಚ ತೇ ಗುಣಾಶ್ಚ, ಪೂರ್ಣಾಶ್ಚ ತೇ ಸದ್ಗುಣಾಶ್ಚ, ಪೂರ್ಣಸದ್ಗುಣಾಃ ತನುಃ ಯಸ್ಯ ಸಃ = ಪೂರ್ಣಸದ್ಗುಣತನುಃ, ತಮ್. ಕರುಣೈವ ಅಮೃತಂ, ಕರುಣಾಮೃತಸ್ಯ ಅಬ್ಧಿಃ = ಕರುಣಾಮೃ-ತಾಬ್ಧಿಃ, ತಮ್. ಕುಲಸ್ಯ ಪತಿಃ = ಕುಲಪತಿಃ, ತಮ್. ವ್ರಜೇಮ-ವ್ರಜ ಗತೌ, ಒಂದನೆ ಗಣ, ಸಕ. ವಿಧಿಲಿಜ್, ಪರ. ಉ. ಬ. ವ್ರಜೇತ್, ವ್ರಜೇತಾಂ,

Rarest Archiver

ವ್ರಜೇಯುಃ, ವ್ರಜೇಃ, ವ್ರಜೇತಂ, ವ್ರಜೇತ. ವ್ರಜೇಯಂ, ವ್ರಜೇವ, ವ್ರಜೇಮ.

ಇತ್ಥಂ ವಿಚಿಂತ್ಯ ಸ ವಿಚಿಂತ್ಯಮನನ್ಯಬಂಧುಃ
ಪ್ರೇಷ್ಠಪ್ರದಂ ರಜತಪೀಠಪುರಾಧಿವಾಸಮ್ ।
ಭಕ್ತ್ಯಾ ಭವಾಬ್ಧಿಭಯಭಂಗದಯಾ ಶುಭಾತ್ಮಾ
ಭೇಜೇ ಭುಜಙ್ಗಶಯನಂ ದ್ವಿಷಡಬ್ದಕಾಲಮ್ ॥ ೧೯ ॥

ಅ :—ಅನನ್ಯಬಂಧುಃ ಶುಭಾತ್ಮಾ ಸಃ ಇತ್ಥಂ ವಿಚಿಂತ್ಯ ವಿಚಿಂತ್ಯಂ ಪ್ರೇಷ್ಠಪ್ರದಂ ರಜತಪೀಠಪುರಾಧಿವಾಸಂ ಭುಜಂಗಶಯನಂ ಭವಾಬ್ಧಿಭಯ-ಭಂಗದಯಾ ಭಕ್ತ್ಯಾ ದ್ವಿಷಡಬ್ದಕಾಲಂ ಭೇಜೇ.

ಅ :—ಅನನ್ಯಬಂಧುಃ = ಭಗವಂತನಿಗಿಂತ ಬೇರೆ ಬಂಧುಗಳಿಲ್ಲದ ಶುಭಾತ್ಮಾ = ನಿರ್ಮಲ ಮನಸ್ಸುಳ್ಳ, ಸಃ = ಆ ಮಧ್ಯಗೇಹಭಟ್ಟರು, ಇತ್ಥಂ ಈ ರೀತಿ, ವಿಚಿಂತ್ಯ = ಆಲೋಚಿಸಿ, ವಿಚಿಂತ್ಯಂ = ಧ್ಯಾನಿಸಲು ಯೋಗ್ಯನಾದ, ಪ್ರೇಷ್ಠಪ್ರದಂ = ಅತ್ಯಂತ ಇಷ್ಟವಾದುದನ್ನು ಕೊಡುವ, ರಜತಪೀಠಪುರ = ಉಡುಪಿಯೇ, ಅಧಿವಾಸಂ = ವಾಸಸ್ಥಳವಾಗಿರುವ, ಭುಜಂಗಶಯನಂ = ಅನಂತಾಸನ ದೇವರನ್ನು, ಭವಾಬ್ಧಿ = ಸಂಸಾರವೆಂಬ ಸಮುದ್ರದಿಂದುಂಟಾದ, ಭಯ = ಹೆದರಿಕೆಯು, ಭಂಗದಯಾ = ನಾಶವನ್ನುಂಟುಮಾಡುವ, ಭಕ್ತ್ಯಾ = ಭಕ್ತಿಯಿಂದ, ದ್ವಿಷಡಬ್ದಕಾಲಂ = ಹನ್ನೆರಡು ವರ್ಷಕಾಲ, ಭೇಜೇ = ಸೇವಿಸಿದರು.

ತಾ : ಆ ನಡುಮನೆ ಬ್ರಾಹ್ಮಣರಿಗೆ ಶ್ರೀಮನ್ನಾರಾಯಣನನ್ನು ಬಿಟ್ಟು ಬೇರೆ ಉತ್ತಮ ಬಂಧುಗಳಿರಲಿಲ್ಲ. ಹೀಗೆ ಶುದ್ಧಚಿತ್ತರಾದ ಆ ನಡುಮನೆ ಬ್ರಾಹ್ಮಣರು ಹಿಂದೆ ಹೇಳಿದಂತೆ ಆಲೋಚಿಸಿದರು. ಅನಂತರ ಧ್ಯಾನಿಸಲು ಯೋಗ್ಯನೂ, ಭಕ್ತರಿಗೆ ಅತ್ಯಂತ ಇಷ್ಟವಾದುದನ್ನು ಕೊಡುವವನೂ, ಉಡುಪಿಯಲ್ಲಿ ವಾಸಿಸುವವನೂ, ಶೇಷನ ಮೇಲೆ ಮಲಗಿರುವವನೂ ಆದ, ಶ್ರೀ ಅನಂತಾಸನ ದೇವರನ್ನು ಸಂಸಾರಬಂಧವನ್ನು ನಾಶಗೊಳಿಸುವ ಭಕ್ತಿಯಿಂದ ಹನ್ನೆರಡು ವರ್ಷ ಕಾಲ ಸೇವಿಸಿದರು.

ವ್ಯಾ.ವಿ. :—ವಿಶೇಷೇಣ ಚಿಂತಯಿತುಂ ಯೋಗ್ಯಃ = ವಿಚಿಂತ್ಯಃ, ತಮ್. ಅನ್ಯಶ್ಚಾಸೌ ಬಂಧುಶ್ಚ, ನ ವಿದ್ಯತೇ ಅನ್ಯಬಂಧುಃ ಯಸ್ಯ ಸಃ =

Rarest Archiver

ಅನನ್ಯಬಂಧುಃ. ಅತಿಶಯೇನ ಪ್ರಿಯಂ, ಪ್ರೇಷ್ಠಂ ಪ್ರದದಾತೀತಿ=ಪ್ರೇಷ್ಠಪ್ರದಃ, ತಮ್. ರಜತಪೀಠಪುರೇ ಅಧಿವಾಸಃ ಯಸ್ಯ ಸಃ=ರಜತಪೀಠಪುರಾಧಿವಾಸಃ, ತಮ್. ಭವಃ ಏವ ಅಬ್ಧಿಃ, ಭವಾಬ್ಧೇಃ ಭಯಂ, ಭವಾಬ್ಧಿಭಯಸ್ಯ ಭಂಗಃ. ಭವಾ....ಭಂಗಂ ದದಾತೀತಿ=ಭವಾ..ಭಂಗದಾ, ತಯಾ. ಶುಭಃ ಆತ್ಮಾ ಯಸ್ಯ ಸಃ=ಶುಭಾತ್ಮಾ. ಭುಜಂಗಃ ಶಯನಂ ಯಸ್ಯಸಃ=ಭುಜಂಗಶಯನಃ, ತಮ್. ದ್ವಿಷಟ್ ಅಬ್ದಾಃ ಯಸ್ಯ ಸಃ, ದ್ವಿಷಡಬ್ದಶ್ಚಾಸೌ ಕಾಲಶ್ಚ=ದ್ವಿಷಡಬ್ದಕಾಲಃ, ತಮ್. ಭೇಜೇ–ಭಜ ಸೇವಾಯಾಂ, ಒಂದನೆ ಗಣ, ಸಕ. ಲಿಟ್, ಆತ್ಮ. ಪ್ರ. ಏ. ಭೇಜೇ, ಭೇಜಾತೇ, ಭೇಜಿರೇ. ಭೇಜಿಷೇ. ಭೇಜಾಥೇ, ಭೇಜಿಧ್ವೇ ಭೇಜಿಢ್ವೇ. ಭೇಜೇ, ಭೇಜಿವಹೇ, ಭೇಜಿಮಹೇ.

ಪತ್ನ್ಯಾ ಸಮಂ ಭಗವತಃ ಸ ಭಜನ್ ಪದಾಬ್ಜಂ
ಭೋಗಾನ್ ಲಘೂನಪಿ ಪುನರ್ಲಘಯಾಂಚಕಾರ ।
ದಾಂತಂ ಸ್ವಯಂ ಚ ಹೃದಯಂ ದಮಯಾಂಚಕಾರ
ಸ್ವಚ್ಛಂ ಚ ದೇಹಮಧಿಕಂ ವಿಮಲೀಚಕಾರ ॥ ೨೦ ॥

ಅ :—ಪತ್ನ್ಯಾ ಸಮಂ ಭಗವತಃ ಪದಾಬ್ಜಂ ಭಜನ್ ಸಃ ಲಘೂನ್ ಭೋಗಾನ್ ಅಪಿ ಪುನಃ ಲಘಯಾಂಚಕಾರ. ಸ್ವಯಂ ಚ ದಾಂತಂ ಹೃದಯಂ ದಮಯಾಂಚಕಾರ. ಸ್ವಚ್ಛಂ ದೇಹಂ ಚ ಅಧಿಕಂ ವಿಮಲೀಚಕಾರ.

ಅ :—ಪತ್ನ್ಯಾ ಸಮಂ=ಹೆಂಡತಿಯೊಡನೆ, ಭಗವತಃ=ಶ್ರೀಅನಂತಾಸನನ, ಪದಾಬ್ಜಂ=ಕಮಲದಂತಿರುವ ಪಾದವನ್ನು, ಭಜನ್=ಸೇವಿಸುತ್ತಿರುವ, ಸಃ=ಆ ಬ್ರಾಹ್ಮಣರು, ಲಘೂನ್=ಸ್ವಲ್ಪವಾದ, ಭೋಗಾನ್ ಅಪಿ=ವಿಷಯ ಸುಖಾನುಭವಗಳನ್ನೂ, ಪುನಃ=ತಿರುಗಿಯೂ, ಲಘಯಾಂಚಕಾರ=ಕಡಿಮೆ ಮಾಡಿದರು. ಸ್ವಯಂ ಚ=ತಾನಾಗಿಯೇ, ದಾಂತಂ=ತಡೆಯಲ್ಪಟ್ಟ ಇಂದ್ರಿಯಗಳುಳ್ಳ, ಹೃದಯಂ=ಮನಸ್ಸನ್ನು, ದಮಯಾಂಚಕಾರ=ತಡೆದರು. ಸ್ವಚ್ಛಂ=ನಿರ್ಮಲವಾದ, ದೇಹಂ ಚ=ಶರೀರವನ್ನು, ಅಧಿಕಂ=ಹೆಚ್ಚಾಗಿ, ವಿಮಲೀಚಕಾರ=ಶೌಚಾದಿಗಳಿಂದ ಶುದ್ಧಗೊಳಿಸಿದರು.

ತಾ :—ಆ ಬ್ರಾಹ್ಮಣರು ಅನಂತಾಸನದೇವರನ್ನು ಹೆಂಡತಿಯೊಡನೆ ಸೇವಿಸುತ್ತಿದ್ದರು. ಆಗ ಅವರು ಮೊದಲೇ ಕಡಿಮೆಮಾಡಿಕೊಂಡ ವಿಷಯ

Rarest Archiver

ಸುಖಾನುಭವಗಳನ್ನು ಮತ್ತೂ ಕಡಿಮೆಮಾಡಿದರು. ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸನ್ನು ತಡೆಹಿಡಿದರು. ಮೊದಲೇ ಶುದ್ಧವಾದ ಶರೀರವನ್ನು ಶೌಚಾಚಮನಾದಿಗಳಿಂದ ಮತ್ತಷ್ಟು ಶುದ್ಧಿಗೊಳಿಸಿದರು.

ವ್ಯಾ. ವಿ. :—ಪದಂ ಅಬ್ಜಂ ಇವ=ಪದಾಬ್ಜಂ, ತತ್. ಲಘು-ಯಾಂಚಕಾರ–೮೬ನೇ ಪುಟದ ವ್ಯಾ. ವಿ. ನೋಡಿ.

ತೀವ್ರೈಃ ಪಯೋವ್ರತಮುಖ್ಯೈಃ ವಿವಿಧೈಃ ವ್ರತಾಗ್ರ್ಯೈಃ
ಜಾಯಾಪತೀ ಗುಣಗಣಾರ್ಣವಪುತ್ರಕಾಮೌ ।
ಸಂಪೂರ್ಣಪೂರುಷಮತೋಷಯತಾಂ ನಿತಾಂತಂ
ದೇವೇರಿತಾವಿವ ಪುರಾದಿತಿಕಶ್ಯಪೌ ತೌ ॥ ೨೧ ॥

ಅ :—ಗುಣಗಣಾರ್ಣವಪುತ್ರಕಾಮೌ ದೇವೇರಿತೌ ತೌ ಜಾಯಾಪತೀ ತೀವ್ರೈಃ ಪಯೋವ್ರತಮುಖ್ಯೈಃ ವಿವಿಧೈಃ ವ್ರತಾಗ್ರ್ಯೈಃ ಸಂಪೂರ್ಣಪೂರುಷಂ ಪುರಾ ದೇವೇರಿತೌ ಅದಿತಿಕಶ್ಯಪೌ ಇವ ನಿತಾಂತಂ ಅತೋಷಯತಾಮ್.

ಅ :—ಗುಣ=ತತ್ತ್ವಜ್ಞಾನಾದಿ ಗುಣಗಳ, ಗಣ=ಸಮೂಹಗಳಿಗೆ, ಅರ್ಣವ = ಸಮುದ್ರನಾದ, ಪುತ್ರಕಾಮೌ = ಮಗನನ್ನು ಅಪೇಕ್ಷಿಸುವ, ದೇವೇರಿತೌ=ಅಂತರ್ಯಾಮಿಯಾದ ಶ್ರೀನಾರಾಯಣನಿಂದ ಪ್ರೇರಿಸಲ್ಪಟ್ಟ, ತೌ =ಆ, ಜಾಯಾಪತೀ=ದಂಪತಿಗಳು, ತೀವ್ರೈಃ=ಕಠಿನವಾದ, ಪಯೋವ್ರತ-ಮುಖ್ಯೈಃ=ಕ್ಷೀರವ್ರತವೇ ಮುಖ್ಯವಾಗುಳ್ಳ, ವಿವಿಧೈಃ=ನಾನಾಪ್ರಕಾರವಾದ, ವ್ರತಾಗ್ರ್ಯೈಃ=ಶ್ರೇಷ್ಠವಾದ ವ್ರತಗಳಿಂದ, ಸಂಪೂರ್ಣಪೂರುಷಂ=ಗುಣಗಳಿಂದ ಪೂರ್ಣನಾದ ಶ್ರೀನಾರಾಯಣನನ್ನು, ಪುರಾ = ಹಿಂದೆ, ದೇವೇರಿತೌ =ಬ್ರಹ್ಮನಿಂದ ತಪಸ್ಸನ್ನು ಮಾಡಿ ಎಂದು ಪ್ರೇರಿಸಲ್ಪಟ್ಟ, ಅದಿತಿಕಶ್ಯಪೌ ಇವ =ಅದಿತಿ ಮತ್ತು ಕಶ್ಯಪರಂತೆ, ನಿತಾಂತಂ=ಬಹಳವಾಗಿ, ಅತೋಷಯ-ತಾಮ್ =ಸಂತೋಷಗೊಳಿಸಿದರು.

ತಾ :—ಹಿಂದೆ ಬ್ರಹ್ಮನು ಅದಿತಿಕಶ್ಯಪರನ್ನು ಕುರಿತು ವಾಮನನು ನಿಮಗೆ ಮಗನಾಗಿ ಜನಿಸಲು ನೀವು ತಪಸ್ಸನ್ನು ಮಾಡಿರಿ ಎಂದು ಪ್ರೇರಿಸಿದನು. ಅದರಂತೆ ಅವರು ಕಠಿನ ವ್ರತಗಳಿಂದ ತಪಸ್ಸನ್ನು ಮಾಡಿ ವಾಮನನು ತಮ್ಮಲ್ಲಿ ಅವತಾರ ಮಾಡುವಂತೆ ಮಾಡಿದರು. ಅದರಂತೆ ಈ ನಡುಮನೆ ಬ್ರಾಹ್ಮಣ

Rarest Archiver

ದಂಪತಿಗಳು ಶ್ರೀಮನ್ನಾರಾಯಣನ ಪ್ರೇರಣೆಯಂತೆ ಅತ್ಯಧಿಕ ಗುಣಗಳುಳ್ಳ ಮಗನನ್ನು ಪಡೆಯಲಿಚ್ಛಿಸಿ ಕ್ಷೀರವ್ರತ ಮೊದಲಾದ ವ್ರತಗಳಿಂದ ಶ್ರೀ ನಾರಾಯಣನನ್ನು ಅತ್ಯಂತವಾಗಿ ಸಂತೋಷಗೊಳಿಸಿದರು.

ವ್ಯಾ. ವಿ. :—ಪಯೋವ್ರತಂ ಮುಖಂ ಯೇಷಾಂ ತಾನಿ=ಪಯೋವ್ರತಮುಖಾನಿ, ತೈಃ. ವ್ರತೇಷು ಅಗ್ರ್ಯಾಣಿ=ವ್ರತಾಗ್ರ್ಯಾಣಿ, ತೈಃ. ಜಾಯಾ ಚ ಪತಿಶ್ಚ=ಜಾಯಾಪತೀ. ಗುಣಾನಾಂ ಗಣಾಃ, ಗುಣಗಣೈಃ ಅರ್ಣವ ಇವ, ಗುಣಗಣಾರ್ಣವಶ್ಚಾಸೌ ಪುತ್ರಶ್ಚ, ಗುಣಗಣಾರ್ಣವಪುತ್ರೇ ಕಾಮಃ ಯಯೋಃ ತೌ=ಗುಣ....ಕಾಮೌ. ಸಂಪೂರ್ಣಶ್ಚಾಸೌ ಪೂರುಷಶ್ಚ=ಸಂಪೂರ್ಣಪೂರುಷಃ, ತಮ್. ದೇವೇನ ಈರಿತೌ=ದೇವೇರಿತೌ. ಅದಿತಿಶ್ಚ ಕಶ್ಯಪಶ್ಚ=ಅದಿತಿಕಶ್ಯಪೌ. ಅತೋಷಯತಾಂ–ತುಷ ಪ್ರೀತೌ (ತುಷ್ಟೌ), ನಾಲ್ಕನೆ ಗಣ, ಣಿಜಂತ, ಲಙ್, ಪರ. ಪ್ರ. ಪು. ದ್ವಿ. ಅತೋಷಯತ್, ಅತೋಷಯತಾಂ, ಅತೋಷಯನ್. ಅತೋಷಯಃ, ಅತೋಷಯತಂ, ಅತೋಷಯತ. ಅತೋಷಯಂ, ಅತೋಷಯಾವ, ಅತೋಷಯಾಮ.

ನಾಥಸ್ಯ ಭೂರಿಕರುಣಾಸುಧಯಾಭಿಷಿಕ್ತೌ  
ಶ್ರೀಶ್ರೀಧರಪ್ರತತಿಶಾರಶರೀರಯಷ್ಟೀ ।  
ಭೂರಿವ್ರತಪ್ರಭವದಿವ್ಯಸುಕಾಂತಿಮಂತೌ  
ತೌ ದೇಹಶುದ್ಧಿಮತಿಮಾತ್ರಮಥಾಲಭೇತಾಮ್ ॥ ೨೨ ॥

ಅ :—ನಾಥಸ್ಯ ಭೂರಿಕರುಣಾಸುಧಯಾ ಅಭಿಷಿಕ್ತೌ ಶ್ರೀಶ್ರೀಧರ ಪ್ರತತಿಶಾರಶರೀರಯಷ್ಟೀ ಭೂರಿವ್ರತಪ್ರಭವದಿವ್ಯಸುಕಾಂತಿಮಂತೌ ತೌ ಅಥ ದೇಹಶುದ್ಧಿಂ ಅತಿಮಾತ್ರಂ ಅಲಭೇತಾಮ್.

ಅ :—ನಾಥಸ್ಯ=ಶ್ರೀನಾರಾಯಣನ, ಭೂರಿ=ಹೆಚ್ಚಾದ, ಕರುಣಾಸುಧಯಾ=ದಯೆಯೆಂಬ ಅಮೃತದಿಂದ, ಅಭಿಷಿಕ್ತೌ=ಅಭಿಷೇಕ ಮಾಡಲ್ಪಟ್ಟ, ಶ್ರೀ=ಲಕ್ಷ್ಮೀದೇವಿಯು, ಶ್ರೀಧರ=ಶ್ರೀನಾರಾಯಣನು ಇವರ, ಪ್ರತತಿ=ವ್ಯಾಪ್ತಿಯಿಂದ, ಶಾರ=ಮಿಶ್ರವಾದ, ಶರೀರಯಷ್ಟೀ=ಕೋಲಿನಂತಿರುವ ದೇಹವುಳ್ಳ, ಭೂರಿ=ಹೆಚ್ಚಾದ, ವ್ರತ=ನಿಯಮದಿಂದ, ಪ್ರಭವ=ಉಂಟಾದ, ದಿವ್ಯ=ದೇವತಾನುಗ್ರಹ ಸಂಬಂಧವಾದ, ಸುಕಾಂತಿಮಂತೌ

Rarest Archiver

=ಒಳ್ಳೆ ಕಾಂತಿಯುಳ್ಳ, ತೌ=ಆ ದಂಪತಿಗಳು, ಅಥ=ಅನಂತರ, ದೇಹಶುದ್ಧಿಂ=ಶರೀರದ ಶುದ್ಧಿಯನ್ನು, ಅತಿಮಾತ್ರಂ=ಬಹಳವಾಗಿ, ಅಲಭೇತಾಂ =ಹೊಂದಿದರು.

ತಾ :—ಆಗ ಆ ದಂಪತಿಗಳು ಶ್ರೀಮನ್ನಾರಾಯಣನ ಅತಿಶಯ ದಯೆಗೆ ವಿಷಯರಾದರು. ಲಕ್ಷ್ಮೀನಾರಾಯಣರ ಸನ್ನಿಧಾನವುಳ್ಳ ದೇಹವುಳ್ಳವರಾದರು. ಹೆಚ್ಚಾಗಿ ಮಾಡಿದ ವ್ರತದಿಂದ ದಿವ್ಯಕಾಂತಿಯಿಂದ ಕಂಗೊಳಿಸಿದರು. ಹೀಗೆ ಅವರು ಅತ್ಯಂತವಾಗಿ ದೇಹದ ಶುದ್ಧಿಯನ್ನು ಪಡೆದರು.

ವ್ಯಾ.ವಿ :—ಭೂರಿಶ್ಚ ಸಾ ಕರುಣಾ ಚ, ಭೂರಿಕರುಣೈವ ಸುಧಾ=ಭೂರಿಕರುಣಾಸುಧಾ, ತಯಾ. ಶ್ರೀಶ್ಚ ಶ್ರೀಧರಶ್ಚ, ಶ್ರೀಶ್ರೀಧರಯೋಃ ಪ್ರತತಿಃ, ಶ್ರೀಶ್ರೀಧರಪ್ರತತ್ಯಾ ಶಾರೇ, ಶ್ರೀ....ಶಾರೇ ಚ ತೇ ಶರೀರೇ ಚ, ಶ್ರೀ....ಶರೀರೇ ಯಷ್ಟೀ ಇವ ಯಯೋಸ್ತೌ=ಶ್ರೀಶ್ರೀಧರಪ್ರತತಿಶಾರಶರಶರೀರಯಷ್ಟೀ. ಭೂರಿ ಚ ತತ್ ವ್ರತಂ ಚ, ಭೂರಿವ್ರತಾತ್ ಪ್ರಭವಃ ಯಸ್ಯಾಸ್ಸಾ=ಭೂರಿವ್ರತಪ್ರಭವಾ, ದಿವ್ಯಾ ಚ ಸಾ ಸುಕಾಂತಿಶ್ಚ, ಭೂರಿವ್ರತಪ್ರಭವಾ ಚ ಸಾ ದಿವ್ಯಸುಕಾಂತಿಶ್ಚ, ಭೂರಿ....ಕಾಂತಿಃ ಅನಯೋಃ ಅಸ್ತೀತಿ = ಭೂರಿವ್ರತಪ್ರಭವದಿವ್ಯಸುಕಾಂತಿಮಂತೌ. ದೇಹಸ್ಯ ಶುದ್ಧಿಃ=ದೇಹಶುದ್ಧಿಃ, ತಾಮ್. ಅಲಭೇತಾಮ್-ಲಭ್ ಧಾತು ಆತ್ಮ, ಲಙ್, ಪ್ರ. ದ್ವಿವಚನ. ಅಲಭತ, ಅಲಭೇತಾಂ, ಅಲಭಂತ. ಅಲಭಥಾಃ, ಅಲಭೇಥಾಂ, ಅಲಭಧ್ವಮ್. ಅಲಭೇ, ಅಲಭಾವಹಿ, ಅಲಭಾಮಹಿ.

ಕಾಂತಾದ್ಧೃತೌ ಸಮುಚಿತೇಽಥ ಬಭಾರ ಗರ್ಭಂ
ಸಾ ಭೂಸುರೇಂದ್ರದುಹಿ (ದಯಿ)ತಾ ಜಗತಾಂ ಸುಖಾಯ ।
ಅಚ್ಛಾಂಬರೇವ ರಜನೀ ಪರಿಪೂರಿತಾಶಾ
ಭಾವಿನ್ಯಪಾಸ್ತತಮಸಂ ವಿಧುಮಾದ್ಯಪಕ್ಷಾತ್ ॥ ೨೩ ॥

ಅ :—ಅಥ ಅಚ್ಛಾಂಬರಾ ಪರಿಪೂರಿತಾಶಾ ಭಾವಿನೀ ಸಾ ಭೂಸುರೇಂದ್ರದುಹಿ(ದಯಿ)ತಾ ಜಗತಾಂ ಸುಖಾಯ ಆದ್ಯಪಕ್ಷಾತ್ ಕಾಂತಾತ್ ಸಮುಚಿತೇ ಋತೌ ಅಪಾಸ್ತತಮಸಂ ಗರ್ಭಂ ರಜನೀ ವಿಧುಂ ಇವ ಬಭಾರ.

ಅ :—ಅಥ=ದೇಹವು ಶುದ್ಧವಾದ ಮೇಲೆ, ಅಚ್ಛಾಂಬರಾ=ನಿರ್ಮಲವಾದ ಬಟ್ಟೆಯುಳ್ಳ, ಪರಿಪೂರಿತಾಶಾ = ಪೂರ್ತಿಗೊಳಿಸಲ್ಪಟ್ಟ ಅಪೇಕ್ಷೆ

Rarest Archiver

ಯುಳ್ಳವಳು, ಭಾವಿನೀ—ಆಗುವ, ಸಾ — ಆ, ಭೂಸುರೇಂದ್ರದುಹಿತಾ (ದಯಿತಾ)—ದ್ವಿಜೋತ್ತಮನ ಮಗಳು, (ಹೆಂಡತಿಯು) ಜಗತಾಂ—ಲೋಕ ಗಳ, ಸುಖಾಯ—ಸೌಖ್ಯಕ್ಕಾಗಿ, ಆದ್ಯಪಕ್ಷಾತ್—ವಿಷ್ಣುವಿನಲ್ಲಿ ಪ್ರೀತಿ ಯುಳ್ಳ, ಕಾಂತಾತ್—ಪತಿಯಿಂದ, ಸಮುಚಿತೇ—ಯೋಗ್ಯವಾದ, ಋತೌ —ಋತುಕಾಲದಲ್ಲಿ, ಅಪಾಸ್ತತಮಸಂ—ಹೋಗಲ್ಪಟ್ಟ ಅಜ್ಞಾನವುಳ್ಳ, ಪರಿ- ಪೂರಿತಾಶಾ—ಬೆಳದಿಂಗಳಿಂದ ತುಂಬಿದ ದಿಕ್ಕುಗಳುಳ್ಳದ್ದಾಗಿ, ಭಾವಿನೀ— ಆಗುವ, ರಜನೀ—ರಾತ್ರಿಯು, ಸಮುಚಿತೇ—ಚಂದ್ರನುಬೆಳಗಲು ಯೋಗ್ಯ ವಾದ, ಋತೌ—ಶರದೃತುವಿನಲ್ಲಿ, ಕಾಂತಾತ್—ಮನೋಹರವಾದ, ಆದ್ಯ- ಪಕ್ಷಾತ್ — ಶುಕ್ಲಪಕ್ಷದಿಂದ, ಅಪಾಸ್ತತಮಸಂ—ನಿವಾರಿಸಲ್ಪಟ್ಟ ಕತ್ತಲೆ ಯುಳ್ಳ, ವಿಧುಂ ಇವ—ಚಂದ್ರನಂತೆ, ಬಭಾರ—ಧರಿಸಿದಳು.

ತಾ :—ಶರದೃತುವಿನ ರಾತ್ರಿಯಲ್ಲಿ ಚಂದ್ರನು ಅತ್ಯಂತ ಪ್ರಕಾಶಮಾನ ನಾಗಿರುವನು. ಆಕಾಶವು ಸ್ವಚ್ಛವಾಗಿರುವುದು. ಬೆಳದಿಂಗಳು ದಿಕ್ಕುಗಳಲ್ಲಿ ವ್ಯಾಪಿಸಿರುವುದು. ಅಂತಹ ಶುಕ್ಲಪಕ್ಷದ ರಾತ್ರಿಯು ಚಂದ್ರನನ್ನು ಹೊಂದಿರು ವಂತೆ, ದೇಹಶುದ್ಧಿಯನ್ನು ಪಡೆದಮೇಲೆ ಸ್ವಚ್ಛವಾದ ಬಟ್ಟೆಯುಳ್ಳವಳೂ, ಸಂಪೂರ್ಣವಾದ ಅಭೀಷ್ಟವುಳ್ಳವಳಾಗುವವಳೂ ಆದ ಬ್ರಾಹ್ಮಣೋತ್ತಮನ ಮಗಳಾದ ನಡುಮನೆ ಬ್ರಾಹ್ಮಣರ ಸತಿಯು ಜಗತ್ತಿಗೆ ಸೌಖ್ಯವನ್ನುಂಟು ಮಾಡಲು ಋತುಕಾಲದಲ್ಲಿ, ಅಜ್ಞಾನವನ್ನು ನಿವಾರಿಸುವ ಗರ್ಭವನ್ನು ಧರಿಸಿದಳು. ಎಂದರೆ ಗರ್ಭಿಣಿಯಾದಳು.

ವ್ಯಾ. ವಿ :—ಭೂಸುರಾಣಾಂ ಇಂದ್ರಃ, ಭೂಸುರೇಂದ್ರಸ್ಯ ದುಹಿತಾ— ಭೂಸುರೇಂದ್ರದುಹಿತಾ. ಅಚ್ಛಂ ಅಂಬರಂ ಯಸ್ಯಾಃಸಾ—ಅಚ್ಛಾಂಬರಾ. ಪರಿ ಪೂರಿತಾ ಆಶಾ ಯಸ್ಯಾಃಸಾ—ಪರಿಪೂರಿತಾಶಾ, ಅಪಾಸ್ತಂ ತಮಃ ಯಸ್ಯ ಸಃ —ಅಪಾಸ್ತತಮಾಃ, ತಮ್. ಆದ್ಯೇ ಪಕ್ಷಃ ಯಸ್ಯ ಸಃ—ಆದ್ಯಪಕ್ಷಃ. (ಆದ್ಯ- ಶ್ಚಾಸೌ ಪಕ್ಷಶ್ಚ)ತಸ್ಮಾತ್. ಬಭಾರ-ಡುಭೃಞ್ ಧಾರಣಪೋಷಣಯೋಃ, ಮೂರನೆ ಗಣ, ಸಕ. ಲಿಟ್. ಪರ. ಪ್ರ. ಏ. ಬಭಾರ, ಬಭ್ರತುಃ, ಬಭ್ರುಃ. ಬಭರ್ಥ, ಬಭ್ರಥುಃ, ಬಭ್ರ. ಬಭಾರ, ಬಭರ ಬಭೃವ, ಬಭೃಮ. ಉಪಮಾಲಂಕಾರ,

ವಿಶೇಷ ವಿಷಯ :—ಹೆಂಗಸು ರಜಸ್ವಲೆಯಾದ ದಿನದಿಂದ ಆರಂಭಿಸಿ

Rarest Archiver

ಹದಿನಾರು ದಿನಗಳು ಋತುಕಾಲವೆನ್ನಿಸಿಕೊಳ್ಳುವುವು. ಇವುಗಳಲ್ಲಿ ಮೊದಲಿನ ಮೂರು ರಾತ್ರಿಗಳಲ್ಲಿ ಅವಳು ಅಶುದ್ಧಳಾಗಿ ಅಸ್ಪೃಶ್ಯಳಾಗಿರುವುದರಿಂದ ಆಗ ಪತಿಯ ಸಂಗಕ್ಕೆ ಅನರ್ಹಳು. ಉಳಿದ ದಿನಗಳು ಉತ್ತಮವಾಗಿರುವುವು. ಇವುಗಳಲ್ಲಿಯೂ ಅಮಾವಾಸ್ಯೆ, ಸಂಕ್ರಾಂತಿ ಮೊದಲಾದ ದಿನಗಳು ತ್ಯಾಜ್ಯಗಳು.

ತಂ ಪೂರ್ವಪಕ್ಷಸಿತಬಿಂಬಮಿವ ಪ್ರವೃದ್ಧಂ
ಯಾವದ್ದ್ವಿಜೇಂದ್ರವನಿತಾ ಸುಷುವೇಽತ್ರ ತಾವತ್ ।
ಅಂಶೇನ ವಾಯುರವತೀರ್ಯ ಸ ರೂಪ್ಯಪೀಠೇ
ವಿಷ್ಣುಂ ಪ್ರಣಮ್ಯ ಭವನಂ ಪ್ರಯಯೌ ತದೀಯಮ್ ॥೨೪॥

ಅ :—ದ್ವಿಜೇಂದ್ರವನಿತಾ ಪೂರ್ವಪಕ್ಷಸಿತಬಿಂಬಂ ಇವ ಪ್ರವೃದ್ಧಂ ತಂ ಯಾವತ್ ಅತ್ರ ಸುಷುವೇ ತಾವತ್, ಸಃ ವಾಯುಃ ಅಂಶೇನ ಅವತೀರ್ಯ ರೂಪ್ಯಪೀಠೇ ವಿಷ್ಣುಂ ಪ್ರಣಮ್ಯ ತದೀಯಂ ಭವನಂ ಪ್ರಯಯೌ.

ಅ :—ದ್ವಿಜೇಂದ್ರವನಿತಾ=ಮಧ್ಯಗೇಹಭಟ್ಟರ ಮಡದಿಯು, ಪೂರ್ವಪಕ್ಷ=ಶುಕ್ಲಪಕ್ಷದ, ಸಿತಬಿಂಬಂ ಇವ=ಚಂದ್ರಮಂಡಲದಂತೆ, ಪ್ರವೃದ್ಧಂ=ಬೆಳೆದ, ತಂ=ಆ ಗರ್ಭವನ್ನು, ಯಾವತ್=ಎಷ್ಟರಲ್ಲಿ. ಅತ್ರ=ಈ ಭೂಮಿಯಲ್ಲಿ, ಸುಷುವೇ=ಹಡೆದರೊ; ತಾವತ್=ಅಷ್ಟರಲ್ಲಿ, ಸಃ=ಆ, ವಾಯುಃ=ಮುಖ್ಯಪ್ರಾಣದೇವರು, ಅಂಶೇನ=ಒಂದು ಅಂಶದಿಂದ (ಭಾಗದಿಂದ) ಅವತೀರ್ಯ=ಭೂಮಿಗೆ ಇಳಿದು, ರೂಪ್ಯಪೀಠೇ=ಉಡುಪಿಯಲ್ಲಿರುವ, ವಿಷ್ಣುಂ=ಶ್ರೀಮನ್ನಾರಾಯಣನನ್ನು, ಪ್ರಣಮ್ಯ=ವಂದಿಸಿ, ತದೀಯಂ=ಆ ಮಧ್ಯಗೇಹಭಟ್ಟರ, ಭವನಂ=ಮನೆಗೆ, ಪ್ರಯಯೌ=ಹೋದರು.

ತಾ :—ಆ ಮಧ್ಯಗೇಹಭಟ್ಟರ ಧರ್ಮಪತ್ನಿಯರು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಗೊಂಡ ಆ ಗರ್ಭವನ್ನು ಒಂಭತ್ತು ತಿಂಗಳ ತರುವಾಯ ಹಡೆದರು. ಕೂಡಲೆ ಹಿಂದೆ ವಿಷ್ಣುವಿನಿಂದ ಆಜ್ಞೆ ಮಾಡಲ್ಪಟ್ಟ ಮುಖ್ಯ ಪ್ರಾಣದೇವರು ಒಂದಂಶದಿಂದ ಭೂಮಿಗೆ ಬಂದು ಉಡುಪಿಯಲ್ಲಿರುವ ಅನಂತಾಸನನ್ನು ವಂದಿಸಿ ಆ ಮಧ್ಯಗೇಹಭಟ್ಟರ ಮನೆಗೆ ಹೋದರು.

ವ್ಯಾ. ವಿ :—ಪೂರ್ವಶ್ಚಾಸೌ ಪಕ್ಷಶ್ಚ, ಪೂರ್ವಪಕ್ಷೇ ಸಿತಂ, ಪೂರ್ವ-

Rarest Archive

ಪಕ್ಷಸಿತಂ ಚ ತತ್ ಬಿಂಬಂ ಚ=ಪೂರ್ವಪಕ್ಷಸಿತಬಿಂಬಮ್. ದ್ವಿಜೇಂದ್ರಸ್ಯ ವನಿತಾ=ದ್ವಿಜೇಂದ್ರವನಿತಾ. ಸುಷುವೇ–ಷೂಙ್ ಪ್ರಾಣಿಗರ್ಭವಿಮೋಚನೇ ಧಾತು, ಲಿಟ್, ಸುಷುವೇ, ಸುಷುವಾತೇ, ಸುಷುವಿರೇ. ಸುಷುವಿಷೇ, ಸುಷುವಾಥೇ, ಸುಷುವಿಢ್ವೇ (ಧ್ವೇ). ಸುಷುವೇ, ಸುಷುವಿವಹೇ, ಸುಷುವಿಮಹೇ. ಪ್ರಯಯೌ–ಯಾ ಪ್ರಾಪಣೇ, ಲಿಟ್, ಪ್ರ ಉಪಸರ್ಗ. ಪ್ರ+ ಯಯೌ, ಯಯತುಃ, ಯಯುಃ. ಯಯಿಥ ಯಯಾಥ, ಯಯಥುಃ, ಯಯ. ಯಯೌ, ಯಯಿವ, ಯಯಿಮ.

ಸಂಪೂರ್ಣಲಕ್ಷಣಚಣಂ ನವರಾಜಮಾನ-
ದ್ವಾರಾಂತರಂ ಪರಮಸುಂದರಮಂದಿರಂ ತತ್ ।
ರಾಜೇವ ಸತ್ಪುರವರಂ ಭುವನಾಧಿರಾಜೋ
ನಿಷ್ಕಾಸಯನ್ ಪರಮಸೌ ಭಗವಾನ್ ವಿವೇಶ ॥ ೨೫ ॥

ಅ:—ಭುವನಾಧಿರಾಜಃ ಭಗವಾನ್ ಅಸೌ ರಾಜಾ ಇವ ಸಂಪೂರ್ಣಲಕ್ಷಣಚಣಂ ನವರಾಜಮಾನದ್ವಾರಾಂತರಂ ಪರಮಸುಂದರಮಂದಿರಂ ತತ್ ಸತ್ಪುರವರಂ ಪರಂ ನಿಷ್ಕಾಸಯನ್ ವಿವೇಶ.

ಅ:—ಭುವನ=ಲೋಕಗಳಿಗೆ, ಅಧಿರಾಜಃ=ಒಡೆಯರಾದ, ಭಗವಾನ್=ಆರು ಗುಣಗಳಿಂದ ಕೂಡಿ ಪೂಜ್ಯರಾದ, ಅಸೌ=ಈ ವಾಯುದೇವರು, ರಾಜಾ ಇವ=ರಾಜನಂತೆ, ಸಂಪೂರ್ಣ=ಪೂರ್ತಿಯಾದ, ಲಕ್ಷಣಚಣಂ=ಮೂವತ್ತೆರಡು ಲಕ್ಷಣಗಳಿಂದ ಪ್ರಸಿದ್ಧವಾದ, ಪೂರ್ತಿಯಾದ ಪಟ್ಟಣದ ಲಕ್ಷಣಗಳಿಂದ ಪ್ರಸಿದ್ಧವಾದ, ನವ=ಒಂಭತ್ತು, ರಾಜಮಾನ=ಪ್ರಕಾಶಿಸುವ, ದ್ವಾರಾಂತರಂ=ವಿಶೇಷ ಬಾಗಿಲುಗಳುಳ್ಳ, ಹೊಸದಾದ ಪ್ರಕಾಶಿಸುವ ಉತ್ತಮ ಬಾಗಿಲುಗಳುಳ್ಳ, ಪರಮ=ಉತ್ತಮನಾದ ಶ್ರೀವಿಷ್ಣುವಿನ, ಸುಂದರ=ಮನೋಹರವಾದ, ಮಂದಿರಂ=ಮನೆಯಾದ, ಅತ್ಯಂತ ಚೆನ್ನಾಗಿರುವ ಮನೆಗಳುಳ್ಳ, ತತ್=ಆ, ಸತ್ಪುರವರಂ=ದೋಷವಿಲ್ಲದ ಶ್ರೇಷ್ಠವಾದ ಶರೀರವನ್ನು, ದೋಷವಿಲ್ಲದ ಪಟ್ಟಣವನ್ನು, ಪರಂ=ಬೇರೆ ಜೀವನನ್ನು, ಶತ್ರುವನ್ನು, ನಿಷ್ಕಾಸಯನ್=ಹೊರಡಿಸುವವರಾಗಿ, ವಿವೇಶ=ಹೊಕ್ಕರು.

ತಾ:—ಲೋಕಗಳಿಗೆ ಒಡೆಯರಾದ ಈ ವಾಯುದೇವರು ಆ ಮಧ್ಯ

Rarest Archiver

ಗೇಹಭಟ್ಟರಮನೆಯಲ್ಲಿ ಅವರ ಪತ್ನಿಯ ಹೊಟ್ಟೆಯಲ್ಲಿ ಒಂಬತ್ತು ತಿಂಗಳ ಕಾಲ ವಾಸವಾಗಿದ್ದ ಜೀವವನ್ನು ಹೊರಡಿಸಿದರು. ಮತ್ತು ಎಲ್ಲ ಲಕ್ಷಣಗಳಿಂದ ಕೂಡಿರುವ ನವದ್ವಾರದ ಶ್ರೇಷ್ಠವಾದ ಮನೆಯಾದ ಶರೀರವನ್ನು ಹೊಕ್ಕರು. ಅದು ಒಬ್ಬ ವೀರನಾದ ರಾಜನು ಶತ್ರುವನ್ನು ಓಡಿಸಿ ಅವನ ಉತ್ತಮ ಲಕ್ಷಣಗಳಿಂದ ಕೂಡಿದುದೂ, ಸುಣ್ಣಮೊದಲಾದವುಗಳನ್ನು ಬಳಿಯುವುದರಿಂದ ಹೊಸದಾಗಿ ಪ್ರಕಾಶಿಸುವ ಬಾಗಿಲುಗಳುಳ್ಳದ್ದೂ, ಸುಂದರವಾದ ಮನೆಗಳುಳ್ಳದ್ದೂ ಆದ ಆ ಶತ್ರುವಿನ ಪಟ್ಟಣವನ್ನು ಹೊಕ್ಕಂತಾಯಿತು.

ವ್ಯಾ. ವಿ. :—ಸಂಪೂರ್ಣಾನಿ ಚ ತಾನಿ ಲಕ್ಷಣಾನಿ ಚ. ಸಂಪೂರ್ಣಲಕ್ಷಣೈಃ ವಿತ್ತಂ (ಪ್ರಸಿದ್ಧಂ)=ಸಂಪೂರ್ಣಲಕ್ಷಣಚಣಂ, ತತ್. ರಾಜಮಾನಾನಿ ಚ ತಾನಿ ದ್ವಾರಾಂತರಾಣಿ ಚ, ನವ ರಾಜಮಾನದ್ವಾರಾಂತರಾಣಿ ಯಸ್ಮಿನ್ ತತ್=ನವರಾಜಮಾನದ್ವಾರಾಂತರಂ, ತತ್. ಸುಂದರಂ ಚ ತತ್ ಮಂದಿರಂ ಚ. ಪರಮಂ ಚ ತತ್ ಸುಂದರಮಂದಿರಂ ಚ=ಪರಮಸುಂದರಮಂದಿರಂ, ತತ್, ಸಚ್ಚ ತತ್ ಪುರವರಂ ಚ=ಸತ್ಪುರವರಂ, ತತ್. ಭುವನಾನಾಂ ಅಧಿರಾಜಃ=ಭುವನಾಧಿರಾಜಃ. ಉಪಮಾಲಂಕಾರ.

ಸಂತುಷ್ಯತಾಂ ಸಕಲಸನ್ನಿಕರ್ಷೈರಸದ್ಭಿಃ
ಖಿದ್ಯೇತ ವಾಯುರಯಮಾವಿರಭೂತ್ಪೃಥಿವ್ಯಾಮ್ ।
ಆಖ್ಯಾನಿತೀವ ಸುರದುಂದುಭಿಮಂದ್ರನಾದಃ
ಪ್ರಾಶ್ರಾವಿ ಕೌತುಕವಶೈರಿಹ ಮಾನವೈಶ್ಚ ॥ ೨೬ ॥

ಅ :—ಇಹ ಕೌತುಕವಶೈಃ ಮಾನವೈಃ ಚ (ಯಸ್ಮಾತ್) ಅಯಂ ವಾಯುಃ ಪೃಥಿವ್ಯಾಂ ಆವಿರಭೂತ್ (ತಸ್ಮಾತ್) ಸಕಲಸನ್ನಿಕರ್ಷೈಃ ಸಂತುಷ್ಯತಾಂ. ಅಸದ್ಭಿಃ ಖಿದ್ಯೇತ ಇತಿ ಆಖ್ಯಾನ್ ಇವ ಸುರದುಂದುಭಿಮಂದ್ರನಾದಃ ಪ್ರಾಶ್ರಾವಿ.

ಅ :—ಇಹ=ಈ ಭೂಮಿಯಲ್ಲಿ, ಕೌತುಕವಶೈಃ = ಕುತೂಹಲಕ್ಕೆ ಅಧೀನರಾದ, ಮಾನವೈಶ್ಚ = ಮನುಷ್ಯರಿಂದಲೂ (ಯಸ್ಮಾತ್ = ಯಾವ ಕಾರಣದಿಂದ), ಅಯಂ=ಈ, ವಾಯುಃ=ವಾಯುದೇವರು, ಪೃಥಿವ್ಯಾಂ=ಭೂಮಿಯಲ್ಲಿ, ಆವಿರಭೂತ್ = ಅವತಾರ ಮಾಡಿದರೊ (ತಸ್ಮಾತ್ = ಆ

Rarest Archiver

ಕಾರಣದಿಂದ), ಸಕಲ = ಎಲ್ಲ, ಸನ್ನಿಕರ್ಶೈಃ = ಸಜ್ಜನರ ಸಮೂಹಗಳಿಂದ, ಸಂತುಷ್ಯತಾಂ = ಸಂತೋಷಗೊಳ್ಳೋಣವಾಗಲಿ. ಅಸದ್ಭಿಃ = ದುಷ್ಟರಿಂದ, ಖಿದ್ಯೇತ = ವ್ಯಥೆಗೊಳ್ಳೋಣವಾಗಬೇಕು. ಇತಿ = ಹೀಗೆಂದು, ಆಖ್ಯಾನ್ ಇವ = ಹೇಳುವುದೋ ಎಂಬಂತಿರುವ, ಸುರದುಂದುಭಿ = ದೇವತೆಗಳ ನಗಾರಿಗಳ, ಮಂದ್ರನಾದಃ = ಗಂಭೀರವಾದ ಧ್ವನಿಯು, ಪ್ರಾಶ್ರಾವಿ = ಕೇಳಲ್ಪಟ್ಟಿತು.

ತಾ:—ಈ ಮುಖ್ಯಪ್ರಾಣದೇವರು ಭೂಮಿಯಲ್ಲಿ ಅವತಾರ ಮಾಡಿದ ಕೂಡಲೆ ದೇವತೆಗಳ ನಗಾರಿಗಳು ಮೊಳಗಿದವು. ಅದನ್ನು ಮನುಷ್ಯರೂ ಸಂಭ್ರಮದಿಂದ ಕೇಳಿದರು. ಆಗ ಆ ನಗಾರಿ ಧ್ವನಿಯು ಈ ವಾಯುದೇವರ ಅವತಾರದಿಂದ ಸಜ್ಜನರು ಸಂತೋಷಗೊಳ್ಳಲಿ. ದುರ್ಜನರು ವ್ಯಥೆಗೊಳ್ಳಲಿ ಎಂದು ಹೇಳುತ್ತಿದೆಯೋ ಎಂಬಂತಿತ್ತು.

ವ್ಯಾ.ವಿ. :—ಸತಾಂ ನಿಕರಾಃ = ಸನ್ನಿಕರಾಃ, ತೈಃ. ಸುರಾಣಾಂ ದುಂದುಭಯಃ, ಮಂದ್ರಶ್ಚಾಸೌ ನಾದಶ್ಚ, ಸುರದುಂದುಭೀನಾಂ ಮಂದ್ರ-ನಾದಃ = ಸುರದುಂದುಭಿಮಂದ್ರನಾದಃ. ಕೌತುಕಸ್ಯ ವಶಾಃ = ಕೌತುಕವಶಾಃ, ತೈಃ. ಖಿದ್ಯೇತ-ಖಿದ ದೈನ್ಯೇ, ನಾಲ್ಕನೆ ಗಣ, ಅಕ. ವಿಧಿಲಿಙ್, ಆತ್ಮ, ಪ್ರ. ಏ. ಭಾವೇ ಪ್ರಯೋಗ. ಇದಕ್ಕೆ ಉಳಿದ ರೂಪಗಳಿಲ್ಲ. ಸಂ+ತುಷ್ಯತಾಂ ತುಷ ತುಷ್ಟೌ ನಾಲ್ಕನೆ ಗಣ, ಅಕ. ವಿಧಿಲಿಙ್, ಆತ್ಮ, ಪ್ರ.ಏ. ಭಾವೇ. ಉತ್ಪ್ರೇಕ್ಷಾಲಂಕಾರ.

ನಾಥಂ ನಿಷೇವ್ಯ ಭವನಾನತಿದೂರಮಾಪ್ತಃ
ಪ್ರಾಜ್ಞೋ ಮಹಪ್ರಕೃತದುಂದುಭಿನಾದಪೂರ್ವಾತ್ |
ಪುತ್ರೋದ್ಭವಶ್ರವಣತೋ ಮಹದಾಪ್ಯ ಸೌಖ್ಯಂ
ಜ್ಞಾನಂ ಪರೋಕ್ಷಪದಮಪ್ಯಮತೇಷ್ಟಹೇತುಮ್ || ೨೭ ||

ಅ :—ನಾಥಂ ನಿಷೇವ್ಯ ಭವನಾನತಿದೂರಂ ಆಪ್ತಃ ಪ್ರಾಜ್ಞಃ ಮಹ-ಪ್ರಕೃತದುಂದುಭಿನಾದಪೂರ್ವಾತ್ ಪುತ್ರೋದ್ಭವಶ್ರವಣತಃ ಮಹತ್ ಸೌಖ್ಯಂ ಆಪ್ಯ ಪರೋಕ್ಷಪದಂ ಜ್ಞಾನಂ ಅಪಿ ಇಷ್ಟಹೇತುಂ ಅಮತ.

ಅ :—ನಾಥಂ = ತನ್ನ ವಂಶದ ಸ್ವಾಮಿಯಾದ ಶ್ರೀಹರಿಯನ್ನು, ನಿಷೇವ್ಯ = ಸೇವಿಸಿ, ಭವನ = ತನ್ನ ಮನೆಯು, ಅನತಿದೂರಂ = ಸಮೀಪ

Rarest Archiver

ಪ್ರದೇಶವನ್ನು, ಆಪ್ತಃ=ಹೊಂದಿದ, ಪ್ರಾಜ್ಞಃ=ಜ್ಞಾನಿಗಳಾದ ಆ ಮಧ್ಯಗೇಹಭಟ್ಟರು, ಮಹ = ಉತ್ಸವಕ್ಕಾಗಿ, ಪ್ರಕೃತ = ಆರಂಭಿಸಲ್ಪಟ್ಟ, ದುಂದುಭಿನಾದ = ನಗಾರಿಯ ಶಬ್ದವೇ, ಪೂರ್ವಾತ್=ಮೊದಲಾಗುಳ್ಳ, ಪುತ್ರೋದ್ಭವ = ಮಗನ ಹುಟ್ಟುವಿಕೆಯ, ಶ್ರವಣತಃ=ಕೇಳುವುದರಿಂದ, ಮಹತ್=ಹೆಚ್ಚಾದ, ಸೌಖ್ಯಂ=ಸುಖವನ್ನು, ಆಪ್ಯ=ಹೊಂದಿ, ಪರೋಕ್ಷಪದಂ=ಕಣ್ಣಿಗೆ ಕಾಣದ ವಸ್ತುವೆ ವಿಷಯವಾಗುಳ್ಳ, ಜ್ಞಾನಂ ಅಪಿ=ಜ್ಞಾನವನ್ನೂ, ಇಷ್ಟಹೇತುಂ=ಅಭೀಷ್ಟಕ್ಕೆ ಕಾರಣವನ್ನಾಗಿ, ಅಮತ=ತಿಳಿದರು.

ತಾ:—ಆ ಮಧ್ಯಗೇಹಭಟ್ಟರು ಮನೆಯಲ್ಲಿ ಮಗನು ಜನಿಸಿದ ಸಮಯದಲ್ಲಿ ಉಡುಪಿಯಲ್ಲಿನ ಅನಂತಾಸನದೇವರನ್ನು ಸೇವಿಸುತ್ತಿದ್ದರು. ಅವರು ಹಾಗೆ ಸೇವಿಸಿ ತಮ್ಮ ಮನೆಗೆ ಹೋಗುತ್ತಿರುವಾಗ ಮನೆಯ ಹತ್ತಿರದಲ್ಲಿ ಶಿಶುವಿನ ಜನನೋತ್ಸವಕ್ಕಾಗಿ ಕೆಲವು ಜನರು ಬಾರಿಸಿದ ನಗಾರಿಯ ಶಬ್ದವನ್ನು ಕೇಳಿದರು. ಅದರಿಂದ ಅವರು ಮಗನು ಹುಟ್ಟಿರುವನೆಂದರಿತು ಬಹಳ ಆನಂದಗೊಂಡರು. ಇದರಿಂದ ಅವರು ಇಷ್ಟವಸ್ತುವನ್ನು ಪ್ರತ್ಯಕ್ಷವಾಗಿ ನೋಡುವುದು ಮಾತ್ರ ಸುಖಕ್ಕೆ ಕಾರಣವಲ್ಲ. ಕಾಣದಿದ್ದರೂ ಅದರ ವಿಷಯವನ್ನು ತಿಳಿಯುವುದರಿಂದಲೂ ಆನಂದವಾಗುವುದೆಂದು ತಿಳಿದರು.

ವ್ಯಾ.ವಿ. :—ಅತಿದೂರಂ ನ ಭವತೀತಿ=ಅನತಿದೂರಂ, ಭವನಾತ್ ಅನತಿದೂರಂ=ಭವನಾನತಿದೂರಮ್. ಮಹಾಯ ಪ್ರಕೃತಃ, ದುಂದುಭೇಃ ನಾದಃ, ಮಹಪ್ರಕೃತಶ್ಚಾಸೌ ದುಂದುಭಿನಾದಶ್ಚ, ಮಹಪ್ರಕೃತದುಂದುಭಿನಾದಃ ಪೂರ್ವಃ ಯಸ್ಯ ತತ್ = ಮಹಪ್ರಕೃತದುಂದುಭಿನಾದಪೂರ್ವಂ, ತಸ್ಮಾತ್. ಪುತ್ರಸ್ಯ ಉದ್ಭವಃ, ಪುತ್ರೋದ್ಭವಸ್ಯ ಶ್ರವಣಂ=ಪುತ್ರೋದ್ಭವಶ್ರವಣಮ್, ತಸ್ಮಾತ್=ಪುತ್ರೋದ್ಭವಶ್ರವಣತಃ. ಪರೋಕ್ಷಃ ಪದಂ ಯಸ್ಯ ತತ್=ಪರೋಕ್ಷಪದಮ್, ತತ್. ಇಷ್ಟಸ್ಯ ಹೇತುಃ=ಇಷ್ಟಹೇತುಃ, ತಮ್. ಅಮತ, ಮನು ಅವಬೋಧನೇ, ಎಂಟನೆ ಗಣ, ಲುಙ್, ಆತ್ಮ. ಪ್ರ.ಏ. ಅಮತ, ಅಮನಿಷ್ಟ, ಅಮನಿಷಾತಾಂ, ಅಮನಿಷತ. ಅಮಥಾಃ, ಅಮನಿಷ್ಠಾಃ ಅಮನಿಷಾಥಾಂ, ಅಮನಿಧ್ವಂ, ಅಮನಿಢ್ವಂ. ಅಮನಿಷಿ, ಅಮನಿಷ್ವಹಿ, ಅಮನಿಷ್ಮಹಿ.

Rarest Archiver

ಆವಿಶ್ಯ ವೇಶ್ಮ ನಿಜನಂದನಮಿಂದುವಕ್ತ್ರಂ
ಭೂಯೋಽಭಿನಂದ್ಯ ಸ ಮುಕುಂದದಯಾಂ ಪ್ರವಂದ್ಯ ।
ಜಾತಸ್ಯ ತಸ್ಯ ಗುಣಜಾತವಹಸ್ಯ ಜಾತ-
ಕರ್ಮಾದಿಕರ್ಮನಿವಹಂ ವಿದಧೇ ಸುಕರ್ಮಾ ॥ ೨೮ ॥

ಅ :—ಸುಕರ್ಮಾ ಸಃ ವೇಶ್ಮ ಆವಿಶ್ಯ ಇಂದುವಕ್ತ್ರಂ ನಿಜನಂದನಂ ಭೂಯಃ ಅಭಿ ಂದ್ಯ ಮುಕುಂದದಯಾಂ ಪ್ರವಂದ್ಯ ಜಾತಸ್ಯ ಗುಣಜಾತವಹಸ್ಯ ತಸ್ಯ ಜಾತಕರ್ಮಾದಿಕರ್ಮನಿವಹಂ ವಿದಧೇ.

ಅ :—ಸುಕರ್ಮಾ = ಒಳ್ಳೆ ಕಾರ್ಯವುಳ್ಳ, ಸಃ = ಆ ಮಧ್ಯಗೇಹಭಟ್ಟರು, ವೇಶ್ಮ = ತಮ್ಮ ಮನೆಯನ್ನು, ಆವಿಶ್ಯ = ಹೊಕ್ಕು, ಇಂದುವಕ್ತ್ರಂ = ಚಂದ್ರನಂತೆ ಮುಖವುಳ್ಳ, ನಿಜನಂದನಂ = ತಮ್ಮ ಮಗನನ್ನು, ಭೂಯಃ = ಬಹಳವಾಗಿ, ಅಭಿನಂದ್ಯ = ಸಂತೋಷದಿಂದ ಹೊಗಳಿ, ಮುಕುಂದದಯಾಂ = ಶ್ರೀಮನ್ನಾರಾಯಣನ ಕೃಪೆಯನ್ನು, ಪ್ರವಂದ್ಯ = ಸ್ತುತಿಸಿ, ಜಾತಸ್ಯ = ಹುಟ್ಟಿರುವ, ಗುಣಜಾತವಹಸ್ಯ = ಗುಣಗಳ ಸಮೂಹವನ್ನು ಹೊಂದಿರುವ, ತಸ್ಯ = ಆ ಮಗನಿಗೆ, ಜಾತಕರ್ಮ = ಜಾತಕರ್ಮವೇ, ಆದಿ = ಮೊದಲಾಗುಳ್ಳ, ಕರ್ಮನಿವಹಂ = ಸಂಸ್ಕಾರಗಳ ಸಮೂಹವನ್ನು, ವಿದಧೇ = ನೆರವೇರಿಸಿದರು.

ತಾ :—ಆ ಶ್ರೋತ್ರಿಯರಾದ ಮಧ್ಯಗೇಹಭಟ್ಟರು ತಮ್ಮ ಮನೆಗೆ ಹೋಗಿ ಚಂದ್ರನಂತೆ ಮುಖವುಳ್ಳ ಮಗನನ್ನು ಕಂಡು ಅತ್ಯಾನಂದಗೊಂಡರು. ಹಾಗೆಯೇ ಇಂತಹ ಪುತ್ರನನ್ನು ಕೊಟ್ಟ ಶ್ರೀಅನಂತಾಸನನ ದಯೆಯನ್ನು ಹೊಗಳಿದರು. ಅಂತೆಯೇ ಆ ಗುಣಶಾಲಿಯಾದ ಶಿಶುವಿಗೆ ಜಾತಕರ್ಮ ನಾಮಕರಣಗಳನ್ನು ಮಾಡಿದರು.

ವ್ಯಾ. ವಿ:—ನಿಜಶ್ಚಾಸೌ ನಂದನಶ್ಚ = ನಿಜನಂದನಃ, ತಮ್, ಇಂದುರಿವ ವಕ್ತ್ರಂ ಯಸ್ಯ ಸಃ = ಇಂದುವಕ್ತ್ರಃ, ತಮ್. ಮುಕುಂದಸ್ಯ ದಯಾ = ಮುಕುಂದದಯಾ, ತಾಮ್. ಗುಣಾನಾಂ ಜಾತಂ ವಹತೀತಿ = ಗುಣಜಾತವಹಃ, ತಸ್ಯ. ಜಾತಸ್ಯ ಕರ್ಮ, ಜಾತಕರ್ಮ ಆದಿ ಯೇಷಾಂ ತಾನಿ, ಜಾತಕರ್ಮಾದೀನಿ ಚ ತಾನಿ ಕರ್ಮಾಣಿ ಚ, ಜಾತ....ಕರ್ಮಣಾಂ ನಿವಹಃ = ಜಾತಕರ್ಮಾದಿಕರ್ಮನಿವಹಃ ತಮ್. ಶೋಭನಾನಿ ಕರ್ಮಾಣಿ ಯಸ್ಯ ಸಃ = ಸುಕರ್ಮಾ.

Rarest Archiver

ವಿದಧೇ=ಡು ಧಾಞ್ ಧಾರಣಪೋಷಣಯೋಃ, ಮೂರನೆ ಗಣ, ಲಿಟ್. ಆತ್ಮ, ಪ್ರ. ಏ. ವಿ. ಉಪಸರ್ಗ. ವಿ+ದಧೇ, ದಧಾತೇ ದಧಿರೇ. ದಧಿಷೇ, ದಧಾಥೇ, ದಧಿಧ್ವೇ ದಧಿಢ್ವೇ. ದಧೇ, ದಧಿವಹೇ, ದಧಿಮಹೇ.

ಜ್ಞಾನಾರ್ಥಮೇವ ಯದಭೂದಸುದೇವ ಏಷಃ
ಯದ್ವಾಸುದೇವಪದಭಕ್ತಿರತಃ ಸದಾಸೌ ।
ತದ್ವಾಸುದೇವಪದಮನ್ವವದನ್ಸುರೇಂದ್ರಾ-
ಸ್ತಾತೇನ ಯನ್ನಿಗದಿತಂ ಸುತನಾಮಕರ್ತ್ರಾ ॥ ೨೯ ॥

ಅ :—ಯತ್ ಏಷಃ ಅಸುದೇವಃ ಜ್ಞಾನಾರ್ಥಂ ಏವ ಅಭೂತ್, ಯತ್ ಅಸೌ ಸದಾ ವಾಸುದೇವಪದಭಕ್ತಿರತಃ (ತತ್) ಸುತನಾಮಕರ್ತ್ರಾ ತಾತೇನ ನಿಗದಿತಂ ಯತ್ ವಾಸುದೇವಪದಂ ತತ್ ಸುರೇಂದ್ರಾಃ ಅನ್ವವದನ್.

ಅ :—ಯತ್=ಯಾವ ಕಾರಣದಿಂದ, ಏಷಃ=ಈ, ಅಸುದೇವಃ= ಪ್ರಾಣದೇವರು, ಜ್ಞಾನಾರ್ಥಂ ಏವ=ಭಕ್ತರಿಗೆ ಜ್ಞಾನವನ್ನುಂಟುಮಾಡುವುದಕ್ಕಾಗಿಯೇ, ಅಭೂತ್=ಅವತಾರ ಮಾಡಿದರೊ, ಯತ್=ಯಾವ ಕಾರಣದಿಂದ, ಅಸೌ=ಇವರು, ಸದಾ=ಯಾವಾಗಲೂ, ವಾಸುದೇವಪದಭಕ್ತಿರತಃ =ಶ್ರೀನಾರಾಯಣನ ಪಾದಗಳ ಭಕ್ತಿಯಲ್ಲಿ ಆಸಕ್ತರಾಗಿರುವರೊ ; (ತತ್= ಆದ್ದರಿಂದ) ಸುತನಾಮಕರ್ತ್ರಾ=ಮಗನಿಗೆ ನಾಮಕರಣ ಮಾಡಿದ, ತಾತೇನ =ತಂದೆಯಿಂದ, ನಿಗದಿತಂ=ಹೇಳಲ್ಪಟ್ಟ, ಯತ್=ಯಾವ, ವಾಸುದೇವ-ಪದಂ = 'ವಾಸುದೇವ' ಎಂಬ ಶಬ್ದವೋ, ತತ್ = ಆ ನಾಮವನ್ನು, ಸುರೇಂದ್ರಾಃ = ದೇವೋತ್ತಮರು, ಅನ್ವವದನ್ = ಅನುಸರಿಸಿ ಹೇಳಿದರು (ಅನುಮೋದಿಸಿದರು). ವಾರ್ಥಂ ಜ್ಞಾನಾರ್ಥಂ ಅಸುದೇವಃ, ವಾಸುದೇವಸ್ಯ ಅಯಂ. ವಾಸುದೇವಃ

ತಾ :—ಈ ವಾಸುದೇವರು ಭಕ್ತರಿಗೆ ಜ್ಞಾನೋಪದೇಶ ಮಾಡುವುದಕ್ಕಾಗಿ ಅವತಾರ ಮಾಡಿರುವರು. ಮತ್ತು ಯಾವಾಗಲೂ ಶ್ರೀವಾಸುದೇವನಲ್ಲಿ ಭಕ್ತಿಯುಳ್ಳವರಾಗಿರುವರು. ಆದ್ದರಿಂದ ತಂದೆಯು ಇಟ್ಟ 'ವಾಸುದೇವ' ಎಂಬ ಹೆಸರನ್ನು ದೇವತೆಗಳು ಸರಿಯೆಂದು ಒಪ್ಪಿದರು.

ವ್ಯಾ.ವಿ. :—ಜ್ಞಾನಾಯ=ಜ್ಞಾನಾರ್ಥಮ್. ಅಸೂನಾಂ ದೇವಃ= ಅಸುದೇವಃ. ವಾಸುದೇವಸ್ಯ ಪದೇ, ವಾಸುದೇವಪದಯೋಃ ಭಕ್ತಿಃ, ವಾಸು....

Rarest Archiver

ಭಕ್ತ್ಯಾ ರತಃ = ವಾಸು .... ರತಃ. ಸುರಾಣಾಂ ಇಂದ್ರಾಃ = ಸುರೇಂದ್ರಾಃ ಸುತಸ್ಯ ನಾಮ, ಸುತನಾಮ್ನಃ ಕರ್ತಾ = ಸುತನಾಮಕರ್ತಾ, ತೇನ. ಅನ್ವವದನ್-ವದ ವ್ಯಕ್ತಾಯಾಂವಾಚಿ ಧಾತು, ಲಙ್, ಅನು ಉಪಸರ್ಗ. ಅನು+ಅವದತ್, ಅಭವತ್ ಎನ್ನುವಂತೆ ರೂಪಗಳು.

ಪಾತುಂ ಪಯಾಂಸಿ ಶಿಶವೇ ಕಿಲ ಗೋಪ್ರದೋಽಸ್ಮೈ
ಪೂರ್ವಾಲಯಃ ಸ್ವಸುತಸೂನುತಯಾ ಪ್ರಜಾತಃ ।
ನಿರ್ವಾಣಹೇತುಮಲಭಿಷ್ಟ ಪರಾತ್ಮವಿದ್ಯಾಂ
ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್ ॥ ೩೦ ॥

ಅ :—ಪಯಾಂಸಿ ಪಾತುಂ ಅಸ್ಮೈ ಶಿಶವೇ ಗೋಪ್ರದಃ ಪೂರ್ವಾ-ಲಯಃ ಸ್ವಸುತಸೂನುತಯಾ ಪ್ರಜಾತಃ ನಿರ್ವಾಣಹೇತುಂ ಪರಾತ್ಮವಿದ್ಯಾಂ ಅಲಭಿಷ್ಟ ಕಿಲ. ದಾನಂ ಪಾತ್ರಗುಣಾನುಕೂಲ್ಯಾತ್ ಫಲತಿ. ಧ್ರುವಮ್.

ಅ :—ಪಯಾಂಸಿ = ಹಾಲನ್ನು, ಪಾತುಂ = ಕುಡಿಯುವುದಕ್ಕಾಗಿ, ಅಸ್ಮೈ = ಈ, ಶಿಶವೇ = ಮಗುವಾದ ವಾಸುದೇವನಿಗೆ, ಗೋಪ್ರದಃ = ಹಸುವನ್ನು ಕೊಟ್ಟ, ಪೂರ್ವಾಲಯಃ = ಮೂಡು ಮನೆಯ ಬ್ರಾಹ್ಮಣನು (ಮೂಡಿ-ಲ್ಲಾಯನು) ಸ್ವಸುತ = ತನ್ನ ಮಗನ, ಸೂನುತಯಾ = ಮಗನರೂಪದಿಂದ, ಪ್ರಜಾತಃ = ಹುಟ್ಟಿದವನಾಗಿ, ನಿರ್ವಾಣಹೇತುಂ = ಮೋಕ್ಷಕ್ಕೆ ಕಾರಣವಾದ, ಪರಾತ್ಮವಿದ್ಯಾಂ = ಪರಮಾತ್ಮಜ್ಞಾನವನ್ನು, ಅಲಭಿಷ್ಟ ಕಿಲ = ಹೊಂದಿದ ನಷ್ಟೆ. ದಾನಂ = ದಾನವು, ಪಾತ್ರಗುಣ = ದಾನ ತೆಗೆದುಕೊಳ್ಳುವವನ ಗುಣ ಗಳ, ಅನುಕೂಲ್ಯಾತ್ = ಅನುಕೂಲತೆಯಿಂದ, ಫಲತಿ = ಫಲಿಸುತ್ತದೆ. ಧ್ರುವಂ = ನಿಶ್ಚಯ.

ತಾ :—ಆ ವಾಸುದೇವನೆಂಬ ಶಿಶುವಿಗೆ ಹಾಲನ್ನು ಕುಡಿಯುವುದಕ್ಕಾಗಿ ಮೂಡುಮನೆಯುವ (ಮೂಡಿಲ್ಲಾಯ) ನೆಂಬೊಬ್ಬ ಬ್ರಾಹ್ಮಣನು ಹಸುವನ್ನು ದಾನವಾಗಿ ಕೊಟ್ಟನು. ಅವನು ಆ ಪುಣ್ಯಪ್ರಭಾವದಿಂದ ಅನಂತರ ತನ್ನ ಮಗ ನಿಗೆ ಮಗನಾಗಿ ಜನಿಸಿ ಶ್ರೀಮಧ್ವಾಚಾರ್ಯರಿಂದ ಮೋಕ್ಷವನ್ನೀಯುವ ವೇದಾಂತ ಜ್ಞಾನವನ್ನು ಪಡೆದನು. ಪ್ರಪಂಚದಲ್ಲಿ ಸತ್ಪಾತ್ರನಲ್ಲಿ ದಾನಮಾಡಿದರೆ ಅದರ ಫಲವು ಸತ್ಪಾತ್ರನ ಯೋಗ್ಯತೆಗನುಸಾರವಾಗಿ ನಿಶ್ಚಯವಾಗಿಯೂ ಲಭಿಸುವುದು.

Rarest Archiver

ವ್ಯಾ. ವಿ.—ಗಾಂ ಪ್ರದದಾತೀತಿ=ಗೋಪ್ರದಃ. ಪೂರ್ವಃ ಆಲಯಃ ಯಸ್ಯ ಸಃ=ಪೂರ್ವಾಲಯಃ. ಸ್ವಸ್ಯ ಸುತಃ, ಸ್ವಸುತಸ್ಯ ಸೂನುತಾ=ಸ್ವಸುತಸೂನುತಾ, ತಯಾ. ನಿರ್ವಾಣಸ್ಯ ಹೇತುಃ, ನಿರ್ವಾಣಹೇತುಃ, ತಂ. ಪರಾತ್ಮನಃ ವಿದ್ಯಾ=ಪರಾತ್ಮವಿದ್ಯಾ, ತಾಮ್. ಪಾತ್ರಗುಣಸ್ಯ ಅನುಕೂಲ್ಯಮ್=ಪಾತ್ರಗುಣಾನುಕೂಲ್ಯಮ್, ತಸ್ಮಾತ್. ಅಲಭಿಷ್ಟ—ಲಭಧಾತು, ಲುಙ್, ಅಲಭಿಷ್ಟ, ಅಲಭಿಷಾತಾಂ, ಅಲಭಿಷತ. ಅಲಭಿಷ್ಠಾಃ, ಅಲಭಿಷಾಥಾಂ, ಅಲಭಿಧ್ವಂ ಅಲಭಿಢ್ವಂ. ಅಲಭಿಷಿ, ಅಲಭಿಷ್ವಹಿ, ಅಲಭಿಷ್ಮಹಿ, ಫಲತಿ—ಫಲ ನಿಷ್ಪತ್ತೌ ಒಂದನೆ ಗಣ, ಅಕ ಲಟ್, ಪರ. ಪ್ರ. ಏ. ಫಲತಿ, ಫಲತಃ, ಫಲಂತಿ, ಫಲಸಿ, ಫಲಥಃ, ಫಲಥ. ಫಲಾಮಿ, ಫಲಾವಃ, ಫಲಾಮಃ, ಅರ್ಥಾಂತರನ್ಯಾಸಾಲಂಕಾರ.

ಅತ್ರಸ್ತಮೇವ ಸತತಂ ಪರಿಫುಲ್ಲಚಕ್ಷುಃ
ಕಾಂತ್ಯಾ ವಿಡಂಬಿತನವೇಂದು ಜಗತ್ಯನರ್ಘ್ಯಮ್ ।
ತತ್ಪುತ್ರರತ್ನಮುಪಗೃಹ್ಯ ಕದಾಚಿದಾಪ್ತಃ
ಸ್ವಸ್ವಾಮಿನೇ ಬುಧ ಉಪಾಯನಮಾರ್ಪಯತ್ಸಃ ॥ ೩೧ ॥

ಅ :—ಬುಧಃ ಸಃ ಸತತಂ ಅತ್ರಸ್ತಂ ಏವ ಪರಿಫುಲ್ಲಚಕ್ಷುಃ ಕಾಂತ್ಯಾ ವಿಡಂಬಿತನವೇಂದು ಜಗತಿ ಅನರ್ಘ್ಯಂ ಪುತ್ರರತ್ನಂ ಉಪಗೃಹ್ಯ ಕದಾಚಿತ್ ಆಪ್ತಃ ಸ್ವಸ್ವಾಮಿನೇ ತತ್ ಉಪಾಯನಂ ಆರ್ಪಯತ್.

ಅ :—ಬುಧಃ=ಜ್ಞಾನಿಗಳಾದ, ಸಃ=ಆ ಮಧ್ಯಗೇಹಭಟ್ಟರು, ಸತತಂ=ಯಾವಾಗಲೂ, ಅತ್ರಸ್ತಂ ಏವ=ಹೆದರದಿರುವ, ದೋಷವಿಲ್ಲದ, ಪರಿಫುಲ್ಲಚಕ್ಷುಃ=ಅರಳಿದ ಕಣ್ಣುಗಳುಳ್ಳ, ಸರಿಯಾದ ತೂತುಳ್ಳ, ಕಾಂತ್ಯಾ=ಹೊಳಪಿನಿಂದ, ವಿಡಂಬಿತನವೇಂದು=ಶುಕ್ಲಪಕ್ಷದ ಚಂದ್ರನನ್ನು ಹೋಲುವ, ಜಗತಿ=ಪ್ರಪಂಚದಲ್ಲಿ, ಅನರ್ಘ್ಯಂ=ಎಣೆಯಿಲ್ಲದ, ಪುತ್ರರತ್ನಂ=ರತ್ನದಂತಿರುವ ಮಗನನ್ನು, ಉಪಗೃಹ್ಯ=ತೆಗೆದುಕೊಂಡು (ಎತ್ತಿಕೊಂಡು), ಕದಾಚಿತ್=ಒಂದಾನೊಂದು ದಿನ, ಆಪ್ತಃ=ಅನಂತಾಸನದೇವರನ್ನು ಹೊಂದಿದವರಾಗಿ, ಸ್ವಸ್ವಾಮಿನೇ=ತನ್ನ ಸ್ವಾಮಿಯಾದ ಆ ಅನಂತಾಸನನಿಗೆ, ತತ್=ಆ ಮಗನನ್ನು, ಉಪಾಯನಂ=ಕಾಣಿಕೆಯಾಗಿ, ಆರ್ಪಯತ್=ಸಮರ್ಪಿಸಿದರು.

Rarest Archiver

ತಾ :—ಆ ವಾಸುದೇವನು ಯಾವಾಗಲೂ ಭಯವಿಲ್ಲದವನಾಗಿದ್ದನು. ಅವನ ಕಣ್ಣುಗಳು ಅರಳಿಕೊಂಡಿದ್ದುವು. ಅವನು ಚಂದ್ರನಂತೆ ಹೊಳೆಯುತ್ತ ಪ್ರಪಂಚದಲ್ಲಿ ಎಣೆಯಿಲ್ಲದವನಾಗಿದ್ದನು. ಜ್ಞಾನಿಗಳಾದ ಮಧ್ಯಗೇಹಭಟ್ಟರು ಒಂದಾನೊಂದು ದಿನ, ದೋಷವಿಲ್ಲದ ಸರಿಯಾದ ರಂಧ್ರವುಳ್ಳ ಅಮೂಲ್ಯ ರತ್ನದಂತೆ ಕಂಗೊಳಿಸುವ ಆ ವಾಸುದೇವನನ್ನು ಉಡುಪಿಗೆ ಎತ್ತಿಕೊಂಡು ಹೋದರು. ಅಲ್ಲಿ ತನ್ನ ಸ್ವಾಮಿಯಾದ ಅನಂತಾಸನನಿಗೆ ಆ ಶಿಶುವನ್ನು ಕಾಣಿಕೆಯಾಗಿ ಒಪ್ಪಿಸಿದರು.

ವ್ಯಾ. ವಿ. :—ನ ತ್ರಸ್ತಂ=ಅತ್ರಸ್ತಂ, ತತ್. ಪರಿಫುಲ್ಲೇ ಚಕ್ಷುಷೀ ಯಸ್ಯ ತತ್=ಪರಿಫುಲ್ಲಚಕ್ಷುಃ. ನವಶ್ಚಾಸೌ ಇಂದುಶ್ಚ. ವಿಡಂಬಿತಃ ನವೇಂದುಃ ಯೇನ ತತ್=ವಿಡಂಬಿತನವೇಂದು, ತತ್=ಅರ್ಘಮರ್ಹತಿ ಇತಿ ಅರ್ಘ್ಯಂ ನ ಅರ್ಘ್ಯಂ ಅನರ್ಘ್ಯಂ (ನ ವಿದ್ಯತೇ ಅರ್ಘಃ ಯಸ್ಯ ತತ್ ಅನರ್ಘಮ್), ಸ್ವಸ್ಯ ಸ್ವಾಮೀ=ಸ್ವಸ್ವಾಮೀ, ತಸ್ಮೈ. ಆರ್ಪಯತ್—ಋ, ಗತಿ ಪ್ರಾಪಣಯೋಃ, ಒಂದನೆ ಗಣ, ಸಕ. ಣಿಜನ್ತ, ಲಙ್, ಪರ. ಪ್ರ. ಏ. ಆರ್ಪಯತ್, ಆರ್ಪಯತಾಂ, ಆರ್ಪಯನ್. ಆರ್ಪಯಃ, ಆರ್ಪಯತಂ, ಆರ್ಪಯತ. ಆರ್ಪಯಂ, ಆರ್ಪಯಾವ, ಆರ್ಪಯಾಮ.

ನತ್ವಾ ಹರಿಂ ರಜತಪೀಠಪುರಾ (ಲಯಂ ತಂ) ಧಿವಾಸಂ
ಬಾಲಸ್ಯ ಸಂಪದಮನಾಪದಮರ್ಥಯಿತ್ವಾ ।
ಸಾಕಂ ಸುತೇನ ಪರಿವಾರಜನಾನ್ವಿತೋಽಸೌ
ಪ್ರಾಯಾನ್ನಿಶೀಥಸಮಯೇ ನಿಜಮೇವ ಧಾಮ ॥ ೩೨ ॥

ಅ :—ಅಸೌ ರಜತಪೀಠಪುರಾಧಿವಾಸಂ ಹರಿಂ ನತ್ವಾ ಬಾಲಸ್ಯ ಅನಾಪದಂ ಸಂಪದಂ ಅರ್ಥಯಿತ್ವಾ ಸುತೇನ ಸಾಕಂ ಪರಿವಾರಜನಾನ್ವಿತಃ ನಿಶೀಥಸಮಯೇ ಏವ ನಿಜಂ ಧಾಮ ಪ್ರಾಯಾತ್.

ಅ :—ಅಸೌ=ಈ ಮಧ್ಯಗೇಹಭಟ್ಟರು, ರಜತಪೀಠಪುರಾಧಿವಾಸಂ=ಉಡುಪಿಯಲ್ಲಿ ವಾಸವುಳ್ಳ, ಹರಿಂ=ಅನಂತಪದ್ಮನಾಭನನ್ನು, ನತ್ವಾ=ನಮಸ್ಕಾರಮಾಡಿ, ಬಾಲಸ್ಯ=ಶಿಶುವಿಗೆ, ಅನಾಪದಂ=ಅನಿಷ್ಟವಿಲ್ಲದ, ಸಂಪದಂ=ಶ್ರೇಯಸ್ಸನ್ನು, ಅರ್ಥಯಿತ್ವಾ=ಪ್ರಾರ್ಥಿಸಿ, ಸುತೇನ ಸಾಕಂ=ಮಗನೊಡನೆ, ಪರಿವಾರಜನಾನ್ವಿತಃ=ಶಿಷ್ಯ(ಜೊತೆಯವ)ರಿಂದ ಕೂಡಿದವರಾಗಿ

Rarest Archiver

ನಿಶೀಥಸಮಯೇ ಏವ=ಅರ್ಧರಾತ್ರಿಯ ವೇಳೆಯಲ್ಲಿಯೇ, ನಿಜಂ=ತಮ್ಮ, ಧಾಮ=ಮನೆಗೆ, ಪ್ರಾಯಾತ್=ಹೋದರು.

ತಾ :—ಆ ಮಧ್ಯಗೇಹಭಟ್ಟರು ಆ ಅನಂತಪದ್ಮನಾಭನಿಗೆ ವಂದಿಸಿ ಶಿಶುವಿಗೆ ಕೇಡಿಲ್ಲದೆ ಶ್ರೀಯಸ್ಸಾಗಲಿ ಎಂದು ಬೇಡಿಕೊಂಡರು. ಆ ಶಿಶುವನ್ನು ಎತ್ತಿಕೊಂಡು ಶಿಷ್ಯರೊಡನೆ ಅರ್ಧರಾತ್ರಿ ಸಮಯದಲ್ಲಿಯೇ ಪಾಜಕ ಕ್ಷೇತ್ರ ದಲ್ಲಿರುವ ತಮ್ಮ ಮನೆಗೆ ಹೋದರು.

ವ್ಯಾ.ವಿ. :—ರಜತಪೀಠಪುರಂ ಅಧಿವಾಸಃ ಯಸ್ಯ ಸಃ=ರಜತಪೀಠ-ಪುರಾಧಿವಾಸಃ, ತಮ್. ನ ವಿದ್ಯತೇ ಆಪತ್ ಯಸ್ಯಾಸ್ಸಾ=ಅನಾಪತ್, ತಾಮ್. ಪರಿವಾರಜನೇನ ಅನ್ವಿತಃ = ಪರಿವಾರಜನಾನ್ವಿತಃ. ನಿಶೀಥಸ್ಯ ಸಮಯಃ=ನಿಶೀಥಸಮಯಃ, ತಸ್ಮಿನ್. ಪ್ರಾಯಾತ್-ಯಾ ಧಾತು, ಲಙ್, ಪರ. ಪ್ರ.ಏ. ಪ್ರ. ಉಪಸರ್ಗ, ಪ್ರ+ಅಯಾತ್, ಅಯಾತಾಂ, ಅಯುಃ ಅಯಾನ್. ಅಯಾಃ, ಅಯಾತಂ, ಅಯಾತ. ಅಯಾಂ, ಅಯಾವ ಅಯಾಮ.

ದೋಷೇಯುಷಾಂ ಸಮಮನೇನ ವನೇಽತಿಭೀಮೇ
ತತ್ಕ್ರೀಡಿತಗ್ರಹ ಇಹೈಕತಮಂ ತುತೋದ ।
ಉದ್ವಾಂತರಕ್ತಮವಲೋಕ್ಯ ತಮಭ್ಯಧಾಯಿ
ಕೇನಾಪ್ಯಹೋ ನ ಶಿಶುತಃ ಕಥಮೇಷ ಇತ್ಥಮ್ ॥ ೩೩ ॥

ಅ:—ಅನೇನ ಸಮಂ ದೋಷಾ ಅತಿಭೀಮೇ ವನೇ ಈಯುಷಾಂ ಇಹ ತತ್ಕ್ರೀಡಿತಗ್ರಹಃ ಏಕತಮಂ ತುತೋದ. ಕೇನ ಅಪಿ ಉದ್ವಾಂತರಕ್ತಂ ತಂ ಅವಲೋಕ್ಯ ಏಷಃ ಕಥಂ ಶಿಶುತಃ ನ. ಅಹೋ. ಇತ್ಥಂ ಅಭ್ಯಧಾಯಿ.

ಅ :—ಅನೇನ ಸಮಂ=ಈ ಶಿಶುವಿನೊಡನೆ, ದೋಷಾ=ರಾತ್ರಿಯಲ್ಲಿ, ಅತಿಭೀಮೇ=ಅತ್ಯಂತ ಭಯಂಕರವಾದ, ವನೇ=ಕಾಡಿನಲ್ಲಿ, ಈಯುಷಾಂ(ಸತಾಂ)=ಹೋಗುತ್ತಿರುವಾಗ, ತತ್ಕ್ರೀಡಿತಗ್ರಹಃ=ಆ ಕಾಡಿನಲ್ಲಿ ಆಡುವ ಭೂತವು, ಇಹ=ಇವರ ನಡುವೆ, ಏಕತಮಂ=ಒಬ್ಬ ಮನುಷ್ಯನನ್ನು, ತುತೋದ=ಪೀಡಿಸಿತು. ಕೇನ ಅಪಿ=ಯಾವನೊ ಒಬ್ಬನಿಂದ, ಉದ್ವಾಂತರಕ್ತಂ=ರಕ್ತವನ್ನು ಕಾರಿದ, ತಂ=ಅವನನ್ನು, ಅವಲೋಕ್ಯ=ನೋಡಿ, ಏಷಃ=ಈ ಭೂತವು, ಕಥಂ=ಹೇಗೆ, ಶಿಶುತಃ=ಶಿಶುವನ್ನು

Rarest Archiver

ಪೀಡಿಸತಕ್ಕದ್ದು, ನ (ಅಭವತ್)=ಆಗಲಿಲ್ಲ. ಅಹೋ=ಆಶ್ಚರ್ಯ. ಇತ್ಥಂ=ಹೀಗೆ, ಅಭ್ಯಧಾಯಿ=ಹೇಳಲ್ಪಟ್ಟಿತು.

ತಾ:—ಆ ಮಧ್ಯಗೇಹಭಟ್ಟರು ಶಿಶುವನ್ನು ಎತ್ತಿಕೊಂಡು ಶಿಷ್ಯರೊಡನೆ ಭಯಂಕರ ಕಾಡಿನಲ್ಲಿ ಹೋಗುತ್ತಿದ್ದರು. ಆಗ ಆ ಕಾಡಿನಲ್ಲಿ ಆಡುತ್ತಿರುವ ಒಂದು ಭೂತವು ಅವರಲ್ಲೊಬ್ಬನನ್ನು ಪೀಡಿಸಿತು. ಅವನು ರಕ್ತಕಾರಿಕೊಂಡನು. ಆಗ ಒಬ್ಬನು ಅವನನ್ನು ನೋಡಿ ಈ ಭೂತವು ಈ ಮಗುವನ್ನು ಪೀಡಿಸಲಿಲ್ಲವಲ್ಲ. ಇದು ಹೇಗೆ? ಎಂದನು.

ವ್ಯಾ.ವಿ. :—ತಸ್ಮಿನ್ ಕ್ರೀಡಿತಃ, ತತ್ಕ್ರೀಡಿತಶ್ಚಾಸೌ ಗ್ರಹಶ್ಚ=ತತ್ಕ್ರೀಡಿತಗ್ರಹಃ. ಉದ್ವಾಂತಂ ರಕ್ತಂ ಯೇನ ಸಃ=ಉದ್ವಾಂತರಕ್ತಃ. ತವ್. ಶಿಶೋಃ ತುತ್=ಶಿಶುತುತ್. ಅನೇನ ಸಮಂ='ಸಹಯುಕ್ತೇಽಪ್ರಧಾನೆ' ಈ ಸೂತ್ರದಿಂದ ಸಹಾರ್ಥಕಸಮಶಬ್ದದ ಯೋಗವಿರುವ ಕಾರಣ ತೃತೀಯಾವಿಭಕ್ತಿ ಬಂದಿದೆ. ತುತೋದ-ತುದ ವ್ಯಥನೇ, ಆರನೆ ಗಣ, ಸಕ. ಲಿಟ್, ಪರ. ಪ್ರ.ಏ. ತುತೋದ, ತುತುದತುಃ, ತುತುದುಃ ತುತೋದಿಥ, ತುತುದಥುಃ, ತುತುದ. ತುತೋದ, ತುತುದಿವ, ತುತುದಿಮ.

ಆವಿಶ್ಯ ಪೂರುಷಮುವಾಚ ಮಹಾಗ್ರಹೋಽಸಾ-
ವಸ್ಮದ್ವಿಹಾರಸಮಯೋಪಗತಾನ್ಸಮಸ್ತಾನ್ ।
ಯಚ್ಛಕ್ತಿಗುಪ್ತಿರಹಿತಾನಲಮಸ್ಮಿ ಹಂತುಂ
ಲೋಕೇಶ್ವರಃ ಸ ಬತ ಬಾಲತಮಃ ಕಿಲೇತಿ ॥ ೩೪ ॥

ಅ :—ಅಸೌ ಮಹಾಗ್ರಹಃ ಪೂರುಷಂ ಆವಿಶ್ಯ 'ಅಸ್ಮದ್ವಿಹಾರಸಮಯೋಪಗತಾನ್ ಯಚ್ಛಕ್ತಿಗುಪ್ತಿರಹಿತಾನ್ ಸಮಸ್ತಾನ್ ಹಂತುಂ ಅಲಂ ಅಸ್ಮಿ. ಸಃ ಲೋಕೇಶ್ವರಃ ಬಾಲತಮಃ ಕಿಲ ಬತ' ಇತಿ ಉವಾಚ.

ಅ :—ಅಸೌ=ಈ, ಮಹಾಗ್ರಹಃ=ದೊಡ್ಡಭೂತವು, ಪೂರುಷಂ=ರಕ್ತವನ್ನು ಕಾರುತ್ತಿರುವ ಮನುಷ್ಯನನ್ನು, ಆವಿಶ್ಯ = ಆವೇಶಗೊಂಡು, ಅಸ್ಮತ್=ನಮ್ಮ, ವಿಹಾರ=ಆಟದ, ಸಮಯ=ಕಾಲದಲ್ಲಿ, ಉಪಗತಾನ್=ಸಮೀಪಿಸಿರುವ, ಯತ್ = ಯಾವ ಮುಖ್ಯಪ್ರಾಣದೇವರ, ಶಕ್ತಿ=ಸಾಮರ್ಥ್ಯದ, ಗುಪ್ತಿ = ರಕ್ಷಣೆಯಿಂದ, ರಹಿತಾನ್ = ಹೀನರಾದ, ಸಮಸ್ತಾನ್=ಎಲ್ಲರನ್ನೂ, ಹಂತುಂ=ಕೊಲ್ಲುವುದಕ್ಕೆ, ಅಲಂ=ಸಮರ್ಥನು,

Rarest Archiver

ಅಸ್ಮಿ=ಆಗಿದ್ದೇನೆ. ಸಃ=ಆ, ಲೋಕೇಶ್ವರಃ=ಪ್ರಪಂಚದ ಒಡೆಯರಾದ ವಾಯುದೇವರು, ಬಾಲತಮಃ ಕಿಲ=ಸಣ್ಣ ಶಿಶುವಷ್ಟೆ? ಅಥವಾ ಸಃ ಬಾಲತಮಃ=ಆ ಸಣ್ಣ ಮಗುವು, ಲೋಕೇಶ್ವರಃ ಕಿಲ=ಪ್ರಪಂಚದ ಒಡೆಯರಾದ ವಾಯುದೇವರಷ್ಟೆ. ಬತ = ಆಶ್ಚರ್ಯ, ಇತಿ = ಹೀಗೆಂದು, ಉವಾಚ= ಹೇಳಿತು.

ತಾ :—ಆ ದೊಡ್ಡ ಭೂತವು ರಕ್ಷಿಸುತ್ತಿರುವ ಮನುಷ್ಯನಲ್ಲಿ ಆವೇಶಗೊಂಡಿತು. ನಮ್ಮ ಆಟದ ಸಮಯವಾದ ಈ ಅರ್ಧರಾತ್ರಿಯಲ್ಲಿ ಇಲ್ಲಿಗೆ ಬಂದಿರುವ ಈ ಮುಖ್ಯಪ್ರಾಣದೇವರ ರಕ್ಷಣೆಯಿಲ್ಲದ ಎಲ್ಲರನ್ನು ಕೊಲ್ಲಲು ನಾನು ಸಮರ್ಥನಾಗಿದ್ದೇನೆ. ಅವರು ನಿಮ್ಮನ್ನೆಲ್ಲ ಕಾಪಾಡುತ್ತಿರುವುದರಿಂದ ನಾನು ಏನನ್ನೂ ಮಾಡಲಾರದವನಾಗಿದ್ದೇನೆ. ಅವರು ಪ್ರಪಂಚದ ಒಡೆಯರು. ಅವರನ್ನು ಅರಿಯದ ಈ ಮನುಷ್ಯನು ಅವರನ್ನು ಸಣ್ಣ ಶಿಶುವೆಂದು ಹೇಳುತ್ತಾನೆ. ಇದು ಆಶ್ಚರ್ಯಕರವಾಗಿದೆ ಎಂದಿತು.

ವ್ಯಾ.ವಿ. :—ಮಹಾಂಶ್ಚಾಸೌ ಗ್ರಹಶ್ಚ=ಮಹಾಗ್ರಹಃ. ಅಸ್ಮಾಕಂ ವಿಹಾರಃ, ಅಸ್ಮದ್ವಿಹಾರಸ್ಯ ಸಮಯಃ, ಅಸ್ಮದ್ವಿಹಾರಸಮಯೇ ಉಪಗತಾಃ ಅಸ್ಮದ್ವಿಹಾರಸಮಯೋಪಗತಾಃ, ತಾನ್. ಯಸ್ಯ ಶಕ್ತಿಃ, ಯಚ್ಛಕ್ತೇಃ ಗುಪ್ತಿಃ=ಯಚ್ಛಕ್ತಿಗುಪ್ತಿಃ, ಯಚ್ಛಕ್ತಿಗುಪ್ತ್ಯಾ ರಹಿತಾಃ=ಯಚ್ಛಕ್ತಿಗುಪ್ತಿರಹಿತಾಃ, ತಾನ್. ಲೋಕಾನಾಂ ಈಶ್ವರಃ=ಲೋಕೇಶ್ವರಃ. ಅತಿಶಯೇನ ಬಾಲಃ=ಬಾಲತಮಃ. ಉವಾಚ–ಬ್ರೂಞ್ ವ್ಯಕ್ತಾಯಾಂ ವಾಚಿ, ಎರಡನೆ ಗಣ, ಸಕ. ಲಿಟ್, ಪರ. ಪ್ರ. ಏ. ಉವಾಚ, ಊಚತುಃ, ಊಚುಃ. ಉವಚಿಥ ಉವಕ್ಥ, ಊಚಥುಃ, ಊಚ. ಉವಾಚ ಉವಚ, ಊಚಿವ, ಊಚಿಮ. ಅಸ್ಮಿ–ಅಸ ಭುವಿ, ಎರಡನೆ ಗಣ, ಅಕ, ಲಟ್, ಪರ. ಉ. ಏ. ಅಸ್ತಿ, ಸ್ತಃ, ಸಂತಿ. ಅಸಿ, ಸ್ಥಃ, ಸ್ಥ. ಅಸ್ಮಿ, ಸ್ವಃ, ಸ್ಮಃ.

ಸ್ತನ್ಯೇನ ಬಾಲಮನುತೋಷ್ಯ ಮುಹುಃ ಸ್ವಧಾಮ್ನೋ
ಮಾತಾ ಕದಾಚನ ಯಯೌ ವಿರಹಾಸಹಾಪಿ ।
ವಿಶ್ವಸ್ಯ ವಿಶ್ವಪರಿಪಾಲಕಪಾಲನಾಯ
ಕನ್ಯಾಂ ನಿಜಾಮನುಗುಣಾಂ ಕಿಲ ಭೀರುರೇಷಾ ॥ ೩೫ ॥

Rarest Archiver

ಅ :—ಭೀರುಃ ಏಷಾ ಮಾತಾ ಕದಾಚನ ಬಾಲಂ ಸ್ತನ್ಯೇನ ಮುಹುಃ ಅನುತೋಷ್ಯ ವಿರಹಾಸಹಾ ಅಪಿ ವಿಶ್ವಪರಿಪಾಲಕಪಾಲನಾಯ ಅನುಗುಣಾಂ ನಿಜಾಂ ಕನ್ಯಾಂ ವಿಶ್ವಸ್ಯ ಸ್ವಧಾಮ್ನಃ ಯಯೌ ಕಿಲ.

ಅ :—ಭೀರುಃ = ಭಯಶೀಲರಾದ, ಏಷಾ = ಈ, ಮಾತಾ = ತಾಯಿಯು, ಕದಾಚನ = ಒಂದಾನೊಂದು ದಿನ, ಬಾಲಂ = ಮಗುವನ್ನು, ಸ್ತನ್ಯೇನ = ಎದೆಹಾಲಿನಿಂದ, ಮುಹುಃ = ಬಹಳವಾಗಿ, ಅನುತೋಷ್ಯ = ಸಂತೋಷಗೊಳಿಸಿ, ವಿರಹ = ಮಗುವಿನ ಅಗಲಿಕೆಯನ್ನು, ಅಸಹಾ ಅಪಿ = ಸಹಿಸದೆ ಇದ್ದವರಾದರೂ, ವಿಶ್ವಪರಿಪಾಲಕ = ಜಗತ್ತನ್ನು ಕಾಪಾಡುವ ತನ್ನ ಮಗುವನ್ನು, ಪಾಲನಾಯ = ಕಾಪಾಡುವುದಕ್ಕೆ, ಅನುಗುಣಾಂ = ಅನುಕೂಲ ಳಾದ, ನಿಜಾಂ = ತನ್ನ, ಕನ್ಯಾಂ = ಹುಡುಗಿಯನ್ನು, ವಿಶ್ವಸ್ಯ = ಕಾಪಾಡು ವುದರಲ್ಲಿ ನಂಬಿಕೆ ಇಟ್ಟು, ಸ್ವಧಾಮ್ನಃ = ತನ್ನ ಮನೆಯಿಂದ, ಯಯೌ ಕಿಲ = ಹೊರಟುಹೋದರಷ್ಟೆ !

ತಾ :—ಒಂದಾನೊಂದು ದಿನ ಭಯಶೀಲರೂ, ಮಗನ ಅಗಲಿಕೆಯನ್ನು ಸಹಿಸದವರೂ ಆದ ತಾಯಿಯು ಯಾವುದೋ ಒಂದು ಕೆಲಸಕ್ಕಾಗಿ ಮನೆಯಿಂದ ಹೊರಗೆ ಹೋಗಬೇಕಾಯಿತು. ಆಗ ಅವರು ಮಗುವನ್ನು ಎದೆಹಾಲಿನಿಂದ ತೃಪ್ತಿಗೊಳಿಸಿದರು ಆ ಜಗತ್ಪಾಲಕನಾದ ಶಿಶುರೂಪಿಯಾದ ಮುಖ್ಯಪ್ರಾಣ ದೇವರನ್ನು ರಕ್ಷಿಸಲು, ಅನುಕೂಲಳಾದ ತನ್ನ ಮಗಳನ್ನು ನೇಮಿಸಿ ಮನೆಯಿಂದ ಹೊರಗೆ ಹೊರಟುಹೋದರಂತೆ !

ವ್ಯಾ.ವಿ :—ಸ್ವಸ್ಯ ಧಾಮ = ಸ್ವಧಾಮ, ತಸ್ಮಾತ್. ವಿರಹಂ ನ ಸಹತೇ ಇತಿ = ವಿರಹಾಸಹಾ. ವಿಶ್ವಸ್ಯ ಪರಿಪಾಲಕಃ, ವಿಶ್ವಪರಿಪಾಲಕಸ್ಯ ಪಾಲನಂ = ವಿಶ್ವಪರಿಪಾಲಕಪಾಲನಂ ತಸ್ಮೈ.

ಸಾ ಬಾಲಕಂ ಪ್ರರುದಿತಂ ಪರಿಸಾಂತ್ವಯಂತೀ
ಮುಗ್ಧಾಕ್ಷರೇಣ ವಚಸಾನುನಿನಾಯ ಮುಗ್ಧಾ ।
ಮಾ ತಾತ ತಾತ ಸುಮುಖೇತಿ ಪುನಃ ಪ್ರರೋದೀ-
ರ್ಮಾತಾ ತನೋತಿ ರುಚಿತಂ ತ್ವರಿತಂ ತವೇತಿ ॥ ೩೬ ॥

ಅ :—ಮುಗ್ಧಾ ಸಾ ಪ್ರರುದಿತಂ ಬಾಲಕಂ ಪರಿಸಾಂತ್ವಯಂತೀ

Rarest Archiver

'ಸುಮುಖ ತಾತ ತಾತ ! ಪುನಃ ಇತಿ ಮಾ ಪ್ರರೋದೀಃ. ಮಾತಾ ತ್ವರಿತಂ ತವ ರುಚಿತಂ ತನೋತಿ' ಇತಿ ಮುಗ್ಧಾಕ್ಷರೇಣ ವಚಸಾ ಅನುನಿನಾಯ.

ಅ :—ಮುಗ್ಧಾ=ಸುಂದರಿಯಾದ ಅಥವಾ ಏನೂ ಅರಿಯದ, ಸಾ=ಆ ಹುಡುಗಿಯು, ಪ್ರರುದಿತಂ=ಬಹಳವಾಗಿ ಅತ್ತು, ಬಾಲಕಂ=ಮಗುವನ್ನು, ಪರಿಸಾಂತ್ವಯಂತೀ = ಸಮಾಧಾನಗೊಳಿಸುತ್ತ, ಸುಮುಖ=ಸುಂದರವಾದ ಮುಖವುಳ್ಳ, ತಾತ ತಾತ=ಅಪ್ಪ (ಮಗು), ಪುನಃ=ತಿರುಗಿ, ಇತಿ=ಹೀಗೆ, ಮಾ ಪ್ರರೋದೀಃ=ಅಳಬೇಡ. ಮಾತಾ = ಅಮ್ಮನು, ತ್ವರಿತಂ=ಶೀಘ್ರವಾಗಿ, ತವ=ನಿನಗೆ, ರುಚಿತಂ=ಇಷ್ಟವಾದುದನ್ನು, ತನೋತಿ=ಮಾಡುತ್ತಾಳೆ. ಇತಿ=ಹೀಗೆಂದು, ಮುಗ್ಧಾಕ್ಷರೇಣ ವಚಸಾ = ಮುದ್ದಾದ ನುಡಿಯಿಂದ, ಅನುನಿನಾಯ=ಸಂತೈಸಿದಳು.

ತಾ :—ತರುಣಾಯ ಆ ಚಿಕ್ಕ ಹುಡುಗಿಯು ಹೆಚ್ಚಾಗಿ ಅಳುತ್ತಿರುವ ಮಗುವನ್ನು 'ಮುದ್ದು ಮಗುವೆ ! ಮತ್ತೆ ಮತ್ತೆ ಹೀಗೆ ಅಳಬೇಡ. ಅಮ್ಮನು ನಿನಗೆ ಬೇಕಾದುದನ್ನು ಬೇಗನೆ ತಂದುಕೊಡುತ್ತಾಳೆ. ಸುಮ್ಮನಿರು' ಎಂದು ಸಂತೈಸಿದಳು.

ವ್ಯಾ.ವಿ. :—ಮುಗ್ಧಾನಿ ಅಕ್ಷರಾಣಿ ಯಸ್ಮಿನ್ ತತ್=ಮುಗ್ಧಾಕ್ಷರಮ್. ಶೋಭನಂ ಮುಖಂ ಯಸ್ಯ ಸಃ=ಸುಮುಖಃ, ತಸ್ಯ ಸಂಬುದ್ಧಿಃ. ಪ್ರರೋದೀಃರುದಿರ್ ಅಶ್ರುವಿಮೋಚನೇ, ಎರಡನೆ ಗಣ, ಅಕ. ಲುಙ್, ಪರ. ಪ್ರ. ಏ. ಪ್ರ ಉಪಸರ್ಗ, 'ನ ಮಾಙ್‌ಯೋಗೇ' ಈ ಸೂತ್ರದಿಂದ ಲುಙಿನಲ್ಲಿ ಅಡಾಗಮವಿಲ್ಲ. ಪ್ರ+ಅರೋದೀತ್, ಅರೋದಿಷ್ಟಾಂ, ಅರೋದಿಷುಃ ಅರೋದೀಃ, ಅರೋದಿಷ್ಟಂ, ಅರೋದಿಷ್ಟ, ಅರೋದಿಷಂ, ಅರೋದಿಷ್ವ, ಅರೋದಿಷ್ಮ.

ರೋದೇ ಕ್ರಿಯಾಸಮಭಿಹಾರತ ಏವ ವೃತ್ತೇ
ಪೋತಸ್ಯ ಮಾತರಿ ಚಿರಾದಪಿ ನಾಗತಾಯಾಮ್
ಜಗ್ರಾಹ ಬಾಲಮಥ ಚೈಕ್ಷತ ಮಾತೃಮಾರ್ಗಂ
ಸಾಪಿ ಕ್ರಿಯಾಸಮಭಿಹಾರತ ಏವ ಬಾಲಾ ॥ ೩೭ ॥

ಅ :—ಪೋತಸ್ಯ ರೋದೇ ಕ್ರಿಯಾಸಮಭಿಹಾರತಃ ಏವ ವೃತ್ತೇ

ಮಾತರಿ ಅಪಿ ಚಿರಾತ್ ನಾಗತಾಯಾಂ ಸಾಪಿ ಬಾಲಾ ಬಾಲಂ ಜಗ್ರಾಹ. ಅಥ ಚ ಮಾತೃಮಾರ್ಗಂ ಕ್ರಿಯಾಸಮಭಿಹಾರತಃ ಏವ ಐಕ್ಷತ.

ಅ :—ಪೋತಸ್ಯ=ಮಗುವಿನ, ರೋದೇ=ಅಳುವಿಕೆಯು, ಕ್ರಿಯಾ-ಸಮಭಿಹಾರತಃ ಏವ=ಮತ್ತೆ ಮತ್ತೆ, ವೃತ್ತೇ=ಉಂಟಾಗಲು, ಮಾತರಿ ಅಪಿ =ತಾಯಿಯೂ, ಚಿರಾತ್=ಬಹಳ ಕಾಲದವರೆಗೆ, ನಾಗತಾಯಾಂ=ಬರದಿರಲು, ಸಾಪಿ ಬಾಲಾ=ಆ ಹುಡುಗಿಯೂ, ಬಾಲಂ=ಮಗುವನ್ನು, ಜಗ್ರಾಹ =ಎತ್ತಿಕೊಂಡಳು. ಅಥ ಚ=ಅನಂತರ, ಮಾತೃಮಾರ್ಗಂ=ತಾಯಿಯ ದಾರಿಯನ್ನು, ಕ್ರಿಯಾಸಮಭಿಹಾರತಃ ಏವ=ಮತ್ತೆ ಮತ್ತೆ, ಐಕ್ಷತ= ನೋಡಿದಳು.

ತಾ : ಆ ಹುಡುಗಿಯು ಹೀಗೆ ಸಮಾಧಾನ ಮಾಡಿದರೂ ಮಗುವು ಮತ್ತೂ ಮತ್ತೂ ಅತ್ತಿತು. ಬಹಳ ಹೊತ್ತಿನವರೆಗೆ ತಾಯಿಯೂ ಬರಲಿಲ್ಲ. ತರುವಾಯ ಆ ಹುಡುಗಿಯು ಆ ಶಿಶುವನ್ನು ಎತ್ತಿಕೊಂಡಳು. ತಾಯಿಯು ಬರುವಳೊ ಎಂದು ಮತ್ತೂ ಮತ್ತೂ ಅವಳ ದಾರಿಯನ್ನು ನೋಡಿದಳು.

ವ್ಯಾ. ವಿ :—ಕ್ರಿಯಾಯಾಃ ಸಮಭಿಹಾರಃ=ಕ್ರಿಯಾಸಮಭಿಹಾರಃ, ತಸ್ಮಾತ್ ಕ್ರಿಯಾಸಮಭಿಹಾರತಃ. ಮಾತುಃ ಮಾರ್ಗಃ=ಮಾತೃಮಾರ್ಗಃ, ತಮ್. ಐಕ್ಷತ-ಈಕ್ಷ ದರ್ಶನೇ, ಒಂದನೆ ಗಣ, ಸಕ. ಲಙ್, ಆತ್ಮ. ಪ್ರ. ಏ. ಐಕ್ಷತ, ಐಕ್ಷೇತಾಂ, ಐಕ್ಷಂತ. ಐಕ್ಷಥಾಃ, ಐಕ್ಷೇಥಾಂ, ಐಕ್ಷಧ್ವಮ್. ಐಕ್ಷೇ, ಐಕ್ಷಾವಹಿ, ಐಕ್ಷಾಮಹಿ.

ಕರ್ತವ್ಯಮೌಢ್ಯಮಭಿಪದ್ಯನಿರೂಪ್ಯ ಸಾ ತಂ
ಪ್ರಾಭೋಜಯತ್ಖಲು ಕುಲಿತ್ಥಕುಲಂ ಪ್ರಪಕ್ವಮ್ ।
ಶೀತಂ ಪಯೋಽಪಿ ಸತತಂ ಪರಿಪಾಯಯಂತೀ
ಯಸ್ಯೋಷ್ಣರೋಗಮತಿವೇಲಮಶಂಕತಾಂಬಾ ॥ ೩೮ ॥

ಅ : ಸಾ ಕರ್ತವ್ಯಮೌಢ್ಯಂ ಅಭಿಪದ್ಯ ನಿರೂಪ್ಯ ಪಯಃ ಅಪಿ ಶೀತಂ ಸತತಂ ಪರಿಪಾಯಯಂತೀ ಅಂಬಾ ಯಸ್ಯ ಅತಿವೇಲಂ ಉಷ್ಣರೋಗಂ ಅಶಂಕತ, ತಂ ಪ್ರಪಕ್ವಂ ಕುಲಿತ್ಥಕುಲಂ ಪ್ರಾಭೋಜಯತ್ ಖಲು.

ಅ :—ಸಾ = ಆ ಹುಡುಗಿಯು, ಕರ್ತವ್ಯಮೌಢ್ಯಂ = ಮಾಡುವ

ಕೆಲಸದ ವಿಷಯದಲ್ಲಿ ಮೂಢತ್ವವನ್ನು, ಅಭಿಪದ್ಯ=ಹೊಂದಿ, ನಿರೂಪ್ಯ= ವಿಚಾರಮಾಡಿ, ಪಯಃ ಅಪಿ=ಹಾಲನ್ನೂ, ಶೀತಂ=ತಣ್ಣಗಿರುವುದನ್ನು, ಪರಿಪಾಯಯಂತೀ=ಕುಡಿಸುತ್ತಿರುವ, ಅಂಬಾ=ತಾಯಿಯು, ಯಸ್ಯ= ಯಾವ ಶಿಶುವಿಗೆ, ಅತಿವೇಲಂ=ಬಹಳವಾಗಿ, ಉಷ್ಣರೋಗಂ=ಉಷ್ಣದಿಂದುಂಟಾದ ರೋಗವನ್ನು, ಅಶಂಕತ=ಊಹಿಸುತ್ತಿದ್ದಳೊ, ತಂ=ಆ ಬಾಲಕನಿಗೆ, ಪ್ರಪಕ್ವಂ=ಚೆನ್ನಾಗಿ ಬೆಂದ, ಕುಲಿತ್ಥ ಕುಲಂ=ಹುರುಳಿಕಾಳುಗಳ ರಾಶಿಯನ್ನು, ಪ್ರಾಭೋಜಯತ್ ಖಲು=ಚೆನ್ನಾಗಿ ತಿನ್ನಿಸಿದಳು.

ತಾ :—ಆ ಹುಡುಗಿಯು ಮಗುವು ಹಾಗೆ ಅಳುತ್ತಿರುವಾಗ ಏನು ಮಾಡಬೇಕು ಎಂಬುದನ್ನರಿಯಲಿಲ್ಲ. ತಾಯಿಯು ಯಾವ ಮಗುವಿಗೆ ಉಷ್ಣವಾಗುವುದೆಂದು ತಿಳಿದು ಹಾಲನ್ನು ಕುಡಿಸುವಾಗಲೂ ಅದನ್ನು ತಣ್ಣಗೆಮಾಡಿ ಕುಡಿಸುತ್ತಿದ್ದರೊ, ಅಂತಹ ಮಗುವಿಗೆ ಎತ್ತಿಗಾಗಿ ಬೇಯಿಸಿದ ಹುರುಳಿ ಕಾಳುಗಳನ್ನು ಚೆನ್ನಾಗಿ ತಿನ್ನಿಸಿದಳು.

ವ್ಯಾ. ವಿ. :—ಮೂಢಸ್ಯ ಭಾವಃ, ಕರ್ತವ್ಯೇ ಮೌಢ್ಯಂ=ಕರ್ತವ್ಯ-ಮೌಢ್ಯಂ, ತತ್. ಕುಲಿತ್ಥಾನಾಂ ಕುಲಂ=ಕುಲಿತ್ಥಕುಲಂ, ತತ್. ಉಷ್ಣೇನ ರೋಗಃ=ಉಷ್ಣರೋಗಃ, ತಮ್. ಪ್ರಾಭೋಜಯತ್—ಭುಜ ಪಾಲನಾಭ್ಯವ-ಹಾರಯೋಃ, ಏಳನೆ ಗಣ, ಸಕ. ಣಿಜನ್ತ, ಲಙ್, ಪರ ಪ್ರ.ಏ. ಪ್ರ ಉಪಸರ್ಗ. ಪ್ರ+ಅಭೋಜಯತ್, ಅಭೋಜಯತಾಂ, ಅಭೋಜಯನ್. ಅಭೋ-ಜಯಃ, ಅಭೋಜಯತಂ, ಅಭೋಜಯತ. ಅಭೋಜಯಂ, ಅಭೋಜ-ಯಾವ, ಅಭೋಜಯಾಮ. ಅಶಂಕತ=ಶಕಿ ಶಂಕಾಯಾಂ, ಒಂದನೆ ಗಣ, ಸಕ. ಲಙ್, ಆತ್ಮ. ಪ್ರ. ಏ. ಅಶಂಕತ, ಅಶಂಕೇತಾಂ, ಅಶಂಕಂತ. ಅಶಂಕಥಾಃ ಅಶಂಕೇಥಾಂ, ಅಶಂಕಧ್ವಮ್. ಅಶಂಕೇ, ಅಶಂಕಾವಹಿ, ಅಶಂಕಾಮಹಿ.

ನೂನಂ ಪಿಪಾಸುರತಿರೋದಿತಿ ಹಂತ ಬಾಲೋ
ಧಿಙ್ಮಾಂ ದಯಾವಿರಹಿತಾಂ ಪರಕೃತ್ಯಸಕ್ತಾಮ್ ।
ಇತ್ಯಾಕುಲಾ ಗೃಹಮುಪೇತ್ಯ ತದಾ ಪ್ರಸನ್ನಂ
ಪೂರ್ಣೋದರಂ ಸುತಮವೈಕ್ಷತ ವಿಪ್ರಪತ್ನೀ ॥ ೩೯ ॥

ಅ :—ತದಾ ವಿಪ್ರಪತ್ನೀ "ಬಾಲಃ ಪಿಪಾಸುಃ ಅತಿರೋದಿತಿ ನೂನಂ.

ಹಂತ ! ದಯಾವಿರಹಿತಾಂ ಪರಕೃತ್ಯಸಕ್ತಾಂ ಮಾಂ ಧಿಕ್." ಇತಿ ಆಕುಲಾ ಗೃಹಂ ಉಪೇತ್ಯ ಪ್ರಸನ್ನಂ ಪೂರ್ಣೋದರಂ ಸುತಂ ಅನ್ವೈಕ್ಷತ.

ಅ :—ತದಾ=ಆಗ, ವಿಪ್ರಪತ್ನೀ=ಮಧ್ಯಗೇಹಭಟ್ಟರ ಹೆಂಡತಿಯಾದ ಆ ವೇದವತಿಯು, ಬಾಲಃ=ಮಗುವು, ಪಿಪಾಸುಃ=ಎದೆಹಾಲನ್ನು ಕುಡಿಯ ಲಿಚ್ಛಿಸುವುದಾಗಿ, ಅತಿರೋದಿತಿ ನೂನಂ=ನಿಶ್ಚಯವಾಗಿ ಹೆಚ್ಚಾಗಿ ಅಳುತ್ತಿದೆ. ಹಂತ=ಅಯ್ಯೋ, ದಯಾವಿರಹಿತಾಂ=ಮಗುವಿನಲ್ಲಿ ಕೃಪೆಯಿಲ್ಲದ, ಪರಕೃತ್ಯ-ಸಕ್ತಾಂ=ಇತರ(ರ) ಕೆಲಸದಲ್ಲಿ ಆಸಕ್ತಳಾದ, ಮಾಂ=ನನ್ನನ್ನು, ಧಿಕ್=ನಿಂದಿಸಬೇಕಾಗಿದೆ. ಇತಿ = ಹೀಗೆಂದು, ಆಕುಲಾ=ವ್ಯಥೆಗೊಂಡವರಾಗಿ, ಗೃಹಂ=ಮನೆಯನ್ನು, ಉಪೇತ್ಯ=ಸಮೀಪಿಸಿ, ಪ್ರಸನ್ನಂ=ನಗುಮುಖ ವುಳ್ಳ, ಪೂರ್ಣೋದರಂ=ತುಂಬಿದ ಹೊಟ್ಟೆಯುಳ್ಳ, ಸುತಂ=ಮಗನನ್ನು, ಅನ್ವೈಕ್ಷತ=ನೋಡಿದರು.

ತಾ :—ಆಗ ಹೊರಗೆ ಹೋಗಿದ್ದ ಮಾತೆಯು 'ಅಯ್ಯೋ! ಮಗುವು ಎದೆ ಹಾಲನ್ನು ಕುಡಿಯಲು ಮನೆಯಲ್ಲಿ ಅಳುತ್ತಿದೆ. ನಾನು ಬೇರೆ ಕೆಲಸದಲ್ಲಿ ತೊಡಗಿದ್ದೇನೆ. ನನಗೆ ಮಗುವಿನಲ್ಲಿ ಸ್ವಲ್ಪವೂ ಕರುಣೆಯಿಲ್ಲ. ಛೀ' ಎಂದು ತನ್ನನ್ನು ಬೈದುಕೊಳ್ಳುತ್ತ ವ್ಯಥೆಯಿಂದ ಮನೆಗೆ ಬಂದರು. ಅಲ್ಲಿ ಹೊಟ್ಟೆ ತುಂಬಿರುವುದರಿಂದ ಸಂತೋಷದಿಂದಿರುವ ಮಗುವನ್ನು ಕಂಡರು.

ವ್ಯಾ.ವಿ. :—ಪಾತುಮಿಚ್ಛುಃ=ಪಿಪಾಸುಃ. ದಯಯಾ ವಿರಹಿತಾ =ದಯಾವಿರಹಿತಾ, ತಾಮ್. ಪರಂ ಚ ತತ್ ಕೃತ್ಯಂ ಚ, ಪರಕೃತ್ಯೇ ಸಕ್ತಾ=ಪರಕೃತ್ಯಸಕ್ತಾ, ತಾಮ್. ಪೂರ್ಣಂ ಉದರಂ ಯಸ್ಯ. ಸಃ=ಪೂರ್ಣೋದರಃ, ತಮ್. ವಿಪ್ರಸ್ಯ ಪತ್ನೀ. ಅತಿರೋದಿತಿ=ರುದಿರ್ ಅಶ್ರು-ವಿಮೋಚನೇ, ಎರಡನೇ ಗಣ, ಅಕ. ಲಟ್, ಪರ. ಪ್ರ. ಏ. ಅತಿ ಉಪಸರ್ಗ. ಅತಿ+ರೋದಿತಿ, ರುದಿತಃ, ರುದಂತಿ. ರೋದಿಷಿ, ರುದಿಥಃ, ರುದಿಥ. ರೋದಿಮಿ, ರುದಿವಃ, ರುದಿಮಃ ಅನ್ವೈಕ್ಷತ-ಅವ ಉಪಸರ್ಗ (೩೭ನೆ ಪದ್ಯ ವನ್ನು ನೋಡಿ).

ಪೃಷ್ಟ್ವಾಽಮುಗನ್ಯ್ಯ ಸಕಲಂ ಚ ತತಃ ಪ್ರವೃತ್ತಂ
ಯೂನಾಂ ಚ ದುಸ್ಸಹಮಿದಂ ಶಿಶುನೋಪಭುಕ್ತಮ್ ।

ಇತ್ಥಂ ವಿಚಿಂತ್ಯ ತನಯಾಂ ಬಹು ಭರ್ತ್ಸಯಂತ್ಯಾ
ಭೀತಂ ತಯೋತ ಕುಪಿತಂ ಮನಸಾನುತಪ್ತಮಪ್ || ೪೦ ||

ಅ :—ತತಃ ಪೃಷ್ಟ್ವಾ ಪ್ರವೃತ್ತಂ ಸಕಲಂ ಚ ಅವಗಮ್ಯ 'ಶಿಶುನಾ ಉಪಭುಕ್ತಂ ಇದಂ ಯೂನಾಂ ಚ ದುಸ್ಸಹಂ'. ಇತ್ಥಂ ವಿಚಿಂತ್ಯ ತನಯಾಂ ಬಹು ಭರ್ತ್ಸಯಂತ್ಯಾ ತಯಾ ಭೀತಂ ಕುಪಿತಂ ಮನಸಾ ಅನುತಪ್ತಮಪ್ ಉತ.

ಅ :—ತತಃ = ಬಳಿಕ, ಪೃಷ್ಟ್ವಾ = ಹುಡುಗಿಯನ್ನು ಕೇಳಿ, ಪ್ರವೃತ್ತಂ = ನಡೆದ, ಸಕಲಂ ಚ = ಎಲ್ಲವನ್ನೂ, ಅವಗಮ್ಯ = ತಿಳಿದುಕೊಂಡು, ಶಿಶುನಾ = ಮಗುವಿನಿಂದ, ಉಪಭುಕ್ತಂ = ತಿನ್ನಲ್ಪಟ್ಟ, ಇದಂ = ಈ ಹುರುಳಿ ಕಾಳು, ಯೂನಾಂ ಚ = ತರುಣರಿಗೂ, ದುಸ್ಸಹಂ = ಸಹಿಸಲಶಕ್ಯವು. ಇತ್ಥಂ = ಈ ರೀತಿ, ವಿಚಿಂತ್ಯ = ಆಲೋಚಿಸಿ, ತನಯಾಂ = ಮಗಳನ್ನು, ಬಹು = ಬಹಳವಾಗಿ, ಭರ್ತ್ಸಯಂತ್ಯಾ = ಗದರಿಸುತ್ತಿರುವ, ತಯಾ = ಆ ತಾಯಿಯಿಂದ ಭೀತಂ = ಹೆದರೋಣವಾಯಿತು. ಕುಪಿತಂ = ಮಗಳ ಮೇಲೆ ಕೋಪ ಗೊಳ್ಳೋಣವಾಯಿತು. ಮನಸಾ = ಮನಸ್ಸಿನಿಂದ, ಅನುತಪ್ತಂ ಉತ = ವ್ಯಥೆಯೂ ಹೊಂದೋಣವಾಯಿತು.

ತಾ :—ಆ ತಾಯಿಯು ಬಳಿಕ ಹುಡುಗಿಯನ್ನು 'ಮಗುವಿನ ಹೊಟ್ಟೆ ತುಂಬಿರುವುದು ಹೇಗೆ ?' ಎಂದು ಕೇಳಿದರು. ಅವಳಿಂದ ನಡೆದ ಸಮಾಚಾರ ವನ್ನು ತಿಳಿದುಕೊಂಡರು. ಈ ಮಗುವು ತಿಂದಿರುವ ಹುರುಳಿಯನ್ನು ತರುಣರೂ ತಿಂದು ಜೀರ್ಣಿಸಿಕೊಳ್ಳಲಾರರು ಎಂದು ಚಿಂತಾಮಗ್ನರಾದರು. ಹೀಗೆ ಏಕೆ ಹುರುಳಿಕಾಳನ್ನು ತಿನ್ನಿಸಿದೆ ? ಎಂದು ಸಿಟ್ಟಿನಿಂದ ಮಗಳನ್ನು ಗದರಿಸಿದರು. ಮಗುವಿಗೆ ಇದರಿಂದ ಏನಾಗುವುದೋ ! ಎಂದು ಹೆದರಿದರು. ಮನಸ್ಸಿನಲ್ಲಿ ನನ್ನ ಔದಾಸೀನ್ಯದಿಂದ ಹೀಗಾಯಿತೆಂದು ಪಶ್ಚಾತ್ತಾಪಗೊಂಡರು.

ಆರೋಗ್ಯಶಾಲಿನಿ ತದಾಪಿ ಪುರೇವ ಪುತ್ರೇ
ವಿಸ್ಮೇರತಾಮುಪಜಗಾಮ ಜನನ್ಯಮುಷ್ಯ
ಯಸ್ಯ ತ್ರಿಲೋಕಜನನೀ ಜನನೀ ವಿಷೇಽಪಿ
ಪೀತೇ ನ ವಿಸ್ಮಯಮವಾಪ ಸಮಸ್ತಶಕ್ತೇಃ || ೪೧ ||

Rarest Archiver

ಅ :—ಪುತ್ರೇ ತದಾ ಅಪಿ ಪುರಾ ಇವ ಆರೋಗ್ಯಶಾಲಿನಿ ಅಮುಷ್ಯ ಜನನೀ ವಿಸ್ಮೇರತಾಂ ಉಪಜಗಾಮ. ತ್ರಿಲೋಕಜನನೀ ಸಮಸ್ತಶಕ್ತೇಃ ಯಸ್ಯ ಜನನೀ ವಿಷೇ ಪೀತೇ ಅಪಿ ವಿಸ್ಮಯಂ ನ ಅವಾಪ.

ಅ :—ಪುತ್ರೇ = ಮಗನು, ತದಾ ಅಪಿ = ಹುರುಳಿ ಕಾಳುಗಳನ್ನು ತಿಂದಾಗಲೂ, ಪುರಾ ಇವ = ಮೊದಲಿನಂತೆಯೇ, ಆರೋಗ್ಯಶಾಲಿನಿ = ಆರೋಗ್ಯದಿಂದ ಕಂಗೊಳಿಸುತ್ತಿರಲು, ಅಮುಷ್ಯ = ಆ ಮಗುವಿನ, ಜನನೀ = ತಾಯಿಯು, ವಿಸ್ಮೇರತಾಂ = ಆಶ್ಚರ್ಯವನ್ನು, ಉಪಜಗಾಮ = ಹೊಂದಿದರು. ತ್ರಿಲೋಕಜನನೀ = ಮೂರು ಲೋಕದ ತಾಯಿಯಾದ, ಸಮಸ್ತಶಕ್ತೇಃ = ಎಲ್ಲ ಸಾಮರ್ಥ್ಯವುಳ್ಳ, ಯಸ್ಯ = ಯಾವ ಮುಖ್ಯಪ್ರಾಣದೇವರ, ಜನನೀ = ತಾಯಿಯಾದ ಲಕ್ಷ್ಮೀದೇವಿಯು, ವಿಷೇ = ವಿಷವು, ಪೀತೇ ಅಪಿ = ಕುಡಿಯಲ್ಪಟ್ಟರೂ, ವಿಸ್ಮಯಂ = ಆಶ್ಚರ್ಯವನ್ನು, ನ ಅವಾಪ = ಹೊಂದಲಿಲ್ಲವೊ.

ತಾ : ಹಿಂದೆ ದೇವದಾನವರು ಒಟ್ಟಿಗೆ ಸೇರಿ ಮಂದರ ಪರ್ವತದಿಂದ ಕ್ಷೀರ ಸಮುದ್ರವನ್ನು ಕಡೆದಾಗ ವಿಷವು ಹುಟ್ಟಿತು. ಆಗ ಮುಖ್ಯಪ್ರಾಣ ದೇವರು ಅದನ್ನು ಕುಡಿದು ಜೀರ್ಣಿಸಿಕೊಂಡರು. ಹೀಗೆ ಮಗನಾದ ವಾಯು ದೇವರು ವಿಷವನ್ನು ಕುಡಿದರೂ ಅವರು ಎಲ್ಲ ವಿಷಯದಲ್ಲಿಯೂ ಸಮರ್ಥ ರಾದ್ದರಿಂದ ತಾಯಿ ಮಹಾಲಕ್ಷ್ಮೀದೇವಿಯು ಆಗ ಆಶ್ಚರ್ಯಗೊಳ್ಳಲಿಲ್ಲ. ಈಗ ಅಂತಹ ಮುಖ್ಯ ಪ್ರಾಣದೇವರ ಅವತಾರವಾದ ಈ ಮಗುವು ಹುರುಳಿ ಕಾಳುಗಳನ್ನು ತಿಂದರೂ ಆರೋಗ್ಯವಾಗಿರುವುದನ್ನು ಕಂಡ ತಾಯಿಯು ಆಶ್ಚರ್ಯಗೊಂಡರು.

ವ್ಯಾ.ವಿ. :—ಆರೋಗ್ಯೇಣ ಶಾಲತ ಇತಿ = ಆರೋಗ್ಯಶಾಲೀ, ತಸ್ಮಿನ್. ವಿಸ್ಮೇರಸ್ಯ ಭಾವಃ = ವಿಸ್ಮೇರತಾ, ತಾಮ್. ತ್ರಿಲೋಕಸ್ಯ ಜನನೀ = ತ್ರಿಲೋಕಜನನೀ. ಸಮಸ್ತಾ ಶಕ್ತಿಃ ಯಸ್ಯ ಸಃ = ಸಮಸ್ತಶಕ್ತಿಃ, ತಸ್ಯ. ಉಪಜಗಾಮ–'ಗಮ್ಲೃ ಗತೌ, ಒಂದನೆ ಗಣ, ಸಕ. ಲಿಟ್, ಪರ. ಪ್ರ. ಏ. ಉಪ ಉಪಸರ್ಗ, ಉಪ+ಜಗಾಮ, ಜಗ್ಮತುಃ, ಜಗ್ಮುಃ. ಜಗಮಿಥ ಜಗಂಥ, ಜಗ್ಮಥುಃ, ಜಗ್ಮ. ಜಗಾಮ ಜಗಮ, ಜಗ್ಮಿವ, ಜಗ್ಮಿಮ.

ಸ್ತನ್ಯಂ ಮುಹುಃ ಕಿಲ ದದೌ ಜನನೀ ಗೃಹೀತ್ವಾ
ಕ್ಷೇಮಾಯ ತಂ ಕಿಲ ದಧಜ್ಜನಕೋ ಜಜಾಪ |

Rarest Archiver

**ಅನ್ಯೋ ಜನೋಽಪಿ ಲಾಲಯತಿ ಸ್ಮ ಕಿಂ ತು**
**ಸರ್ವೋಽಪಿ ತನ್ಮುಖಸುಹಾಸರಸಾಯನೋತ್ಕಃ** || ೪೨ ||

ಅ :—ಜನನೀ ತಂ ಗೃಹೀತ್ವಾ ಮುಹುಃ ಸ್ತನ್ಯಂ ದದೌ ಕಿಲ. ಜನಕಃ ತಂ ದಧತ್ ಕ್ಷೇಮಾಯ ಜಜಾಪ ಕಿಲ. ಅನ್ಯಃ ಜನಃ ಅಪಿ ಲಾಲಯತಿ ಸ್ಮ ಕಿಲ. ಕಿಂ ತು ಸರ್ವಃ ಅಪಿ ತನ್ಮುಖಸುಹಾಸರಸಾಯನೋತ್ಕಃ.

ಅ :—ಜನನೀ=ತಾಯಿಯು, ತಂ=ಆ ಮಗುವನ್ನು, ಗೃಹೀತ್ವಾ=ಎತ್ತಿಕೊಂಡು, ಮುಹುಃ=ಬಾರಿ ಬಾರಿಗೂ, ಸ್ತನ್ಯಂ=ಎದೆ ಹಾಲನ್ನು, ದದೌ ಕಿಲ=ಕೊಟ್ಟರು. ಜನಕಃ=ತಂದೆಯು, (ತಂ) ದಧತ್=ಆ ಮಗುವನ್ನು ಎತ್ತಿಕೊಂಡವರಾಗಿ, ಕ್ಷೇಮಾಯ=ಮಂಗಳಕ್ಕಾಗಿ, ಜಜಾಪ ಕಿಲ=ಮಂತ್ರಗಳನ್ನು ಜಪಿಸಿದರು. ಅನ್ಯಃ ಜನಃ ಅಪಿ=ಇತರ ಜನರೂ, ಲಾಲಯತಿ ಸ್ಮ ಕಿಲ=ಮುದ್ದಿಸಿದರು. ಕಿಂ ತು=ಆದರೆ, ಸರ್ವಃ ಅಪಿ=ಎಲ್ಲರೂ, ತನ್ಮುಖ=ಆ ಮಗುವಿನ ಮುಖದ, ಸುಹಾಸ=ಒಳ್ಳೆ ನಗುವೆಂಬ, ರಸಾಯನ=ಅಮೃತದಲ್ಲಿ, ಉತ್ಕಃ=ಔತ್ಸುಕ್ಯವುಳ್ಳವರು, (ಆದರು).

ತಾ :—ತಾಯಿಯು ಮಗುವನ್ನು ಎತ್ತಿಕೊಂಡು ಪ್ರೀತಿಯಿಂದ ಸ್ತನ್ಯವನ್ನಿತ್ತರು. ತಂದೆಯು ಮಗನಿಗೆ ಶುಭವನ್ನು ಕೋರುತ್ತ ಎತ್ತಿಕೊಂಡು ಧನ್ವಂತರಿ ಮಂತ್ರ, ಶಾಂತಿಸೂಕ್ತ ಮೊದಲಾದುವುಗಳನ್ನು ಜಪಿಸಿದರು. ಇತರ ಜನರೂ ಮುದ್ದಿಸಿದರು. ಎಲ್ಲರೂ ಆವನ ಮುಗುಳ್ನಗೆಯ ಮುಖವನ್ನು ನೋಡಲು ಅತ್ಯಾಶೆಯುಳ್ಳವರಾದರು.

ವ್ಯಾ.ವಿ. :—ತಸ್ಯ ಮುಖಂ, ತನ್ಮುಖಸ್ಯ ಸುಹಾಸಃ, ತನ್ಮುಖಸುಹಾಸಃ ಏವ ರಸಾಯನಂ, ತನ್ಮುಖಸುಹಾಸರಸಾಯನೇ ಉತ್ಕಃ=ತನ್ಮುಖಸುಹಾಸರಸಾಯನೋತ್ಕಃ. ದದೌ—ಡು ದಾಞ್ ದಾನೇ, ಮೂರನೇ ಗಣ, ಸಕ, ಲಿಟ್, ಪರ. ಪ್ರ. ಏ. ದದೌ, ದದತುಃ, ದದುಃ. ದದಿಥ ದದಾಥ, ದದಥುಃ, ದದ, ದದೌ, ದದಿವ, ದದಿಮ. ಜಜಾಪ—ಜಪ ವ್ಯಕ್ತಾಯಾಂ ವಾಚಿ. ಮಾನಸೇಚ, ಒಂದನೇ ಗಣ, ಸಕ. ಲಿಟ್. ಪರ. ಪ್ರ. ಏ. ಜಜಾಪ, ಜೇಪತುಃ, ಜೇಪುಃ, ಜೇಪಿಥ, ಜೇಪಥುಃ, ಜೇಪ. ಜಜಾಪ ಜಜಪ, ಜೇಪಿವ, ಜೇಪಿಮ. ಲಾಲಯತಿ—ಲಲ ಈಪ್ಸಾಯಾಂ, ಹತ್ತನೇ ಗಣ, ಸಕ. ಲಟ್, ಪರ.

Rarest Archiver

ಪ್ರ. ಏ. ಲಾಲಯತಿ, ಲಾಲಯತಃ, ಲಾಲಯಂತಿ. ಲಾಲಯಸಿ, ಲಾಲಯಥಃ, ಲಾಲಯಥ. ಲಾಲಯಾಮಿ, ಲಾಲಯಾವಃ, ಲಾಲಯಾಮಃ.

ದೇವಾದಿಸದ್ಭಿರನುಪಾಲಿತಯಾಽದರೇಣ
ದೇವ್ಯಾತ್ಮನೇವ ವಿಲಸತ್ಪದಯಾ ನಿತಾಂತಮ್ ।
ಅವ್ಯಕ್ತಯಾ ಪ್ರಥಮತೋ ವದನೇಽಸ್ಯ ವಾಣ್ಯಾ
ಶಾಲೀನಯೇವ ಭುವನಾರ್ಚಿತಯಾ ವಿಜಹ್ರೇ ॥೪೩॥

ಅ :—ಅಸ್ಯ ವದನೇ ದೇವಾದಿಸದ್ಭಿಃ ಆದರೇಣ ಅನುಪಾಲಿತಯಾ ವಿಲಸತ್ಪದಯಾ ಪ್ರಥಮತಃ ಅವ್ಯಕ್ತಯಾ ಶಾಲೀನಯಾ ಇವ ಭುವನಾರ್ಚಿತಯಾ ದೇವ್ಯಾ ವಾಣ್ಯಾ ಆತ್ಮನಾ ಇವ ನಿತಾಂತಂ ವಿಜಹ್ರೇ.

ಅ :—ಅಸ್ಯ = ಈ ಮಗುವಿನ, ವದನೇ = ಬಾಯಿಯಲ್ಲಿ, ದೇವಾದಿಸದ್ಭಿಃ = ದೇವತೆಗಳೇ ಮೊದಲಾದ ಸಜ್ಜನರಿಂದ, ಆದರೇಣ = ಭಕ್ತಿಯಿಂದ, ಅನುಪಾಲಿತಯಾ = ನಿರೀಕ್ಷಿಸಲ್ಪಟ್ಟ, ವಿಲಸತ್ = ಪ್ರಕಾಶಿಸುವ, ಪದಯಾ = ಶಬ್ದಗಳುಳ್ಳ, ಪ್ರಥಮತಃ = ಮೊದಲು, ಅವ್ಯಕ್ತಯಾ = ಅಸ್ಪಷ್ಟಳಾದ, ಶಾಲೀನಯಾ ಇವ = ದಿಟ್ಟತನವಿಲ್ಲದಂತಿರುವ, ಭುವನಾರ್ಚಿತಯಾ = ಲೋಕದಲ್ಲಿ ಪೂಜಿಸಲ್ಪಟ್ಟ, ದೇವ್ಯಾ ವಾಣ್ಯಾ = ಸರಸ್ವತೀದೇವಿಯಿಂದ, ಆತ್ಮನೇವ = ದೇಹವನ್ನು ಧರಿಸಿದವಳೋ ಎಂಬಂತೆ, ನಿತಾಂತಂ = ಬಹಳವಾಗಿ, ವಿಜಹ್ರೇ = ವಿಹರಿಸೋಣವಾಯಿತು.

ತಾ :—ಶ್ರೀಸರಸ್ವತೀದೇವಿಯು ಬ್ರಹ್ಮನ ಸಭೆಯಲ್ಲಿ ದೇವತೆಗಳು ನಿರೀಕ್ಷಿಸುತ್ತಿರುವಾಗಲೇ ವಿಲಾಸದಿಂದ ಹೆಜ್ಜೆಯನ್ನಿಡುತ್ತ ಮೊದಲು ಅದೃಶ್ಯಳಾಗಿ ಅನಂತರ ನಾಚಿಕೆಯಿಂದ ಬ್ರಹ್ಮನ ಮುಂದೆ ಬಂದು ವಿಹರಿಸುವಳು. ಹಾಗೆಯೇ ಆ ವಾಣಿಯು ಈ ಮಗುವಿನ ಬಾಯಿಯಲ್ಲಿ ದೇವತೆಗಳೇ ಮೊದಲಾದ ಸಜ್ಜನರು ಮಗುವು ಯಾವಾಗ ಮಾತನಾಡುವನು ಎಂದು ನಿರೀಕ್ಷಿಸುತ್ತಿರುವಾಗಲೇ ದೇಹವನ್ನು ಧರಿಸಿದವಳಂತೆ ಅಸ್ಪಷ್ಟವಾಗಿ ವಿಹರಿಸಿದಳು. ಎಂದರೆ ಮಗುವು ಮೊದಲು ತೊದಲು ನುಡಿಯಿಂದ ಮಾತಾಡಲು ಆರಂಭಿಸಿತು.

ವ್ಯಾ. ವಿ. :—ದೇವಾಃ ಆದಯಃ ಯೇಷಾಂ ತೇ, ದೇವಾದಯಶ್ಚ ತೇ ಸಂತಶ್ಚ = ದೇವಾದಿಸಂತಃ, ತೈಃ. ವಿಲಸಂತಿ ಪದಾನಿ ಯಸ್ಯಾಸ್ಸಾ = ವಿಲಸತ್ಪದಾ,

Rarest Archiver

ತಯಾ. ಭುವನೇನ ಅರ್ಚಿತಾ=ಭುವನಾರ್ಚಿತಾ, ತಯಾ. ವಿಜಹ್ರೇ–ಹೃಞ್ ಹರಣೆ, ಒಂದನೆ ಗಣ, ಸಕ. ಕರ್ಮಣಿ, ಲಿಟ್, ಆತ್ಮ. ಪ್ರ.ಏ. ವಿ ಉಪಸರ್ಗ, ವಿ+ಜಹ್ರೇ, ಜಹ್ರಾತೇ, ಜಹ್ರಿರೇ, ಜಹ್ರಿಷೇ, ಜಹ್ರಾಥೇ, ಜಹ್ರಿಢ್ವೆ ಜಹ್ರಿಢ್ವೆ. ಜಹ್ರೇ, ಜಹ್ರಿವಹೇ, ಜಹ್ರಿಮಹೇ, ಉತ್ಪ್ರೇಕ್ಷಾಲಂಕಾರ.

ಪ್ರಾಗ್ರಿಂಖಣಂ ಸ್ವಯಮಥ ಸ್ಥಿತಿಮೇಷ ಚಕ್ರೇ
ಪಶ್ಚಾದ್ಗತಿಂ ಪರಿಚಯೇನ ಕಿಲ ಕ್ರಮೇಣ ।
ವಿಶ್ವಸ್ಯ ಚೇಷ್ಟಿತಮಹೋ ಯದನುಗ್ರಹೇಣ
ಸರ್ವಂ ತದಸ್ಯ ಪವನಸ್ಯ ವಿಡಂಬನಂ ಹಿ ॥ ೪೪ ॥

ಅ :—ಏಷಃ ಪ್ರಾಕ್ ರಿಂಖಣಂ, ಅಥ ಸ್ವಯಂ ಸ್ಥಿತಿಂ, ಪಶ್ಚಾತ್ ಗತಿಂ ಕ್ರಮೇಣ ಪರಿಚಯೇನ ಚಕ್ರೇ ಕಿಲ. ವಿಶ್ವಸ್ಯ ಚೇಷ್ಟಿತಂ ಯದನುಗ್ರಹೇಣ ಅಸ್ಯ ಪವನಸ್ಯ ತತ್ ಸರ್ವಂ ವಿಡಂಬನಂ ಹಿ ಅಹೋ.

ಅ :—ಏಷಃ=ಈ ಶಿಶುವು, ಪ್ರಾಕ್=ಮೊದಲು. ರಿಂಖಣಂ=ಅಂಬೆಗಾಲಿಡುವುದನ್ನು, ಅಥ=ತರುವಾಯ, ಸ್ವಯಂ=ತಾನಾಗಿಯೇ, ಸ್ಥಿತಿಂ=ನಿಲ್ಲುವಿಕೆಯನ್ನು, ಪಶ್ಚಾತ್=ಬಳಿಕ, ಗತಿಂ=ಗಮನವನ್ನು, ಕ್ರಮೇಣ ಪರಿಚಯೇನ=ಕ್ರಮವಾಗಿ ಆಯಾ ದಾರಿಯ ಪರಿಚಯದಿಂದ, ಚಕ್ರೇ ಕಿಲ =ಮಾಡಿದನು. ವಿಶ್ವಸ್ಯ=ಜಗತ್ತಿನ, ಚೇಷ್ಟಿತಂ=ಚಲನೆ ಮೊದಲಾದುದು, ಯತ್=ಯಾವ ವಾಯುದೇವರ, ಅನುಗ್ರಹೇಣ=ಅನುಗ್ರಹದಿಂದ (ಆಗುವುದೋ), ಅಸ್ಯ=ಈ, ಪವನಸ್ಯ=ವಾಯುದೇವರ, ತತ್ ಸರ್ವಂ=ಅದೆಲ್ಲ, ವಿಡಂಬನಂ ಹಿ=ಅನುಕರಣವಷ್ಟೆ. ಅಹೋ=ಆಶ್ಚರ್ಯ.

ತಾ :—ಈ ಮಗುವು ಮೊದಲು ಸಾಮಾನ್ಯಮಕ್ಕಳಂತೆ ಅಂಬೆಗಾಲಿಟ್ಟನು. ತರುವಾಯ ಯಾರ ಸಹಾಯವೂ ಇಲ್ಲದೆ ನಿಂತುಕೊಂಡನು. ಬಳಿಕ ಮೆಲ್ಲಮೆಲ್ಲನೆ ನಡೆಯಲು ಕಲಿತನು. ಯಾವ ಜಗತ್ಪ್ರಾಣನ ಅನುಗ್ರಹದಿಂದ ಈ ಪ್ರಪಂಚದ ಚಲನವಲನಗಳು ನಡೆಯುವವೊ; ಮಗುವಾಗಿರುವ ಅಂತಹ ಮುಖ್ಯಪ್ರಾಣದೇವರಿಗೆ ಇದೆಲ್ಲ ನಟನೆಯಷ್ಟೆ.

ವ್ಯಾ.ವಿ. :—ಯಸ್ಯ ಅನುಗ್ರಹಃ=ಯದನುಗ್ರಹಃ, ತೇನ. ಚಕ್ರೇ–ಡುಕೃಞ್ ಕರಣೇ, ಎಂಟನೆ ಗಣ, ಸಕ, ಲಿಟ್, ಆತ್ಮ, ಪ್ರ. ಏ. ಚಕ್ರೇ,

Rarest Archiver

ಚಕ್ರಾತೇ, ಚಕ್ರಿರೇ. ಚಕೃಷೇ, ಚಕ್ರಾಥೇ, ಚಕೃಢ್ವೇ. ಚಕ್ರೇ, ಚಕೃವಹೇ, ಚಕೃಮಹೇ.

ಪುಚ್ಛಾಂತಮುಚ್ಛ್ರಮವಲಂಬ್ಯ ಕದಾಚಿದೇಷ
ಪ್ರಾತರ್ವ್ರಜಾದ್ವ್ರಜತ ಏವ ನಿಜರ್ಷಭಸ್ಯ ।
ಪ್ರಾಯಾತ್ಪ್ರಿಯಸ್ಯ ಸಹಸಾ ಸ್ವಜನೈರದೃಷ್ಟೋ
ನಾನಾವನೇಷು ಚರತಶ್ಚರತಸ್ತೃಣಾನಿ ॥ ೪೫ ॥

ಅ :—ಸ್ವಜನೈಃ ಅದೃಷ್ಟಃ ಏಷಃ ಕದಾಚಿತ್ ಪ್ರಾತಃ ವ್ರಜಾತ್ ವ್ರಜತಃ ಏವ ಪ್ರಿಯಸ್ಯ ನಾನಾವನೇಷು ಚರತಃ ತೃಣಾನಿ ಚರತಃ ನಿಜರ್ಷಭಸ್ಯ ಅಚ್ಛಂ ಪುಚ್ಛಾಂತಂ ಅವಲಂಬ್ಯ ಸಹಸಾ ಪ್ರಾಯಾತ್.

ಅ :—ಸ್ವಜನೈಃ=ತಂದೆ ಮೊದಲಾದ ಬಂಧುಗಳಿಂದ, ಅದೃಷ್ಟಃ=ನೋಡಲ್ಪಡದ, ಏಷಃ=ಈ ಹುಡುಗನು, ಕದಾಚಿತ್=ಒಂದಾನೊಂದು ದಿನ, ಪ್ರಾತಃ=ಬೆಳಿಗ್ಗೆ, ವ್ರಜಾತ್=ಕೊಟ್ಟಿಗೆಯಿಂದ, ವ್ರಜತಃ ಏವ=ಹೋಗುತ್ತಿರುವಾಗಲೇ, ಪ್ರಿಯಸ್ಯ=ತನಗೆ ಇಷ್ಟವಾದ, ನಾನಾವನೇಷು=ಅನೇಕ ಕಾಡುಗಳಲ್ಲಿ, ಚರತಃ=ಸಂಚರಿಸುತ್ತಿರುವ, ತೃಣಾನಿ=ಹುಲ್ಲುಗಳನ್ನು, ಚರತಃ=ಮೇಯುತ್ತಿರುವ, ನಿಜರ್ಷಭಸ್ಯ=ತಮ್ಮ ಎತ್ತಿನ, ಅಚ್ಛಂ=ನಿರ್ಮಲವಾದ, ಪುಚ್ಛಾಂತಂ=ಬಾಲದ ಕೊನೆಯನ್ನು, ಅವಲಂಬ್ಯ=ಹಿಡಿದುಕೊಂಡು, ಸಹಸಾ=ಕೂಡಲೇ, ಪ್ರಾಯಾತ್=ಹೊರಟು ಹೋದನು.

ತಾ :—ಆ ಮಧ್ಯಗೇಹಭಟ್ಟರ ಮನೆಯಲ್ಲಿ ಒಂದು ಎತ್ತು ಇದ್ದಿತು. ಒಂದಾನೊಂದು ದಿನ ಬೆಳಗ್ಗೆ ಅದನ್ನು ಮೇಯಲು ಕಾಡಿಗೆ ಬಿಟ್ಟರು ಅದು ಹಾಗೆ ಕಾಡಿಗೆ ಹೋಗುತ್ತಿರುವಾಗ ಈ ಚಿಕ್ಕ ಹುಡುಗನು ತನಗೆ ಪ್ರಿಯವಾದ ಆ ಎತ್ತಿನ ಬಾಲವನ್ನು ಹಿಡಿದುಕೊಂಡು ತಂದೆ ಮೊದಲಾದವರು ಕಾಣದಿರುವಾಗ ಅಕಸ್ಮಾತ್ತಾಗಿ ತಾನೂ ಅದರ ಜೊತೆಯಲ್ಲಿ ಕಾಡಿಗೆ ಹೋದನು.

ವ್ಯಾ. ವಿ. :—ಪುಚ್ಛಸ್ಯ ಅಂತಃ=ಪುಚ್ಛಾಂತಃ, ತಂ. ನಾನಾ ಚ ತಾನಿ ವನಾನಿ ಚ=ನಾನಾವನಾನಿ, ತೇಷು.

ಉತ್ತುಂಗಶೃಂಗಲಸಿತಸ್ಯ ಮಹಿಷ್ಠಮೂರ್ತೇಃ
ಪಾದಾವೃತಾವನಿತಲಸ್ಯ ಸುರಂಧ್ರಕಸ್ಯ ।

Rarest Archiver

ಆಶ್ರಿತ್ಯ ತಸ್ಯ ಶುಶುಭೇಽವಯವೈಕದೇಶಂ
ಬಾಲೋ ದಿವಾಕರ ಇವೋದಯಪರ್ವತಸ್ಯ ॥ ೪೬ ॥

ಅ :—ಬಾಲಃ ಉತ್ತುಂಗಶೃಂಗಲಸಿತಸ್ಯ ಮಹಿಷ್ಠಮೂರ್ತೇಃ ಪಾದಾವೃತಾವನಿತಲಸ್ಯ ಸುರಂಧ್ರಕಸ್ಯ ತಸ್ಯ ಅವಯವೈಕದೇಶಂ ಆಶ್ರಿತ್ಯ ಉದಯ ಪರ್ವತಸ್ಯ ಅವಯವೈಕದೇಶಂ ಆಶ್ರಿತ್ಯ ಬಾಲಃ ದಿವಾಕರಃ ಇವ ಶುಶುಭೇ.

ಅ :—ಬಾಲಃ=ಹುಡುಗನು, ಉತ್ತುಂಗ=ಎತ್ತರವಾದ, ಶೃಂಗ=ಕೊಂಬುಗಳಿಂದ, ಶಿಖರಗಳಿಂದ, ಲಸಿತಸ್ಯ=ಪ್ರಕಾಶಮಾನವಾದ, ಮಹಿಷ್ಠ=ಅತಿ ದೊಡ್ಡ, ಮೂರ್ತೇಃ=ದೇಹವುಳ್ಳ, ವಿಸ್ತಾರವಾದ, ಪಾದ=ಕಾಲುಗಳಿಂದ, ತಪ್ಪಲುಗಳಿಂದ, ಆವೃತ=ಮುಚ್ಚಲ್ಪಟ್ಟ, ಅವನಿತಲಸ್ಯ=ಭೂಮಿಯುಳ್ಳ, ಸುರಂಧ್ರಕಸ್ಯ=ಚೆನ್ನಾಗಿರುವ (ಇಲ್ಲಿ ಎತ್ತಿನ ವಿಷಯದಲ್ಲಿ ರಂಧ್ರ ಶಬ್ದಕ್ಕೆ ದ್ವಾರ ಎಂದು ಅರ್ಥ ಹೇಳುವುದಕ್ಕಿಂತ ಚೆನ್ನಾಗಿರುವಿಕೆ ಎಂಬರ್ಥವನ್ನು ಹೇಳುವುದು ಉಚಿತವೆಂದು ತೋರುತ್ತದೆ.) ನವದ್ವಾರಗಳುಳ್ಳ, ಒಳ್ಳೆ ಗುಹೆಗಳುಳ್ಳ, ತಸ್ಯ=ಆ ಎತ್ತಿನ, ಅವಯವೈಕದೇಶಂ=ಬಾಲವನ್ನು, ಆಶ್ರಿತ್ಯ=ಹಿಡಿದುಕೊಂಡು, ಉದಯ ಪರ್ವತಸ್ಯ=ಉದಯಾಚಲದ, ಅವಯವೈಕದೇಶಂ=ಒಂದು ಭಾಗವನ್ನು, ಆಶ್ರಿತ್ಯ=ಆಶ್ರಯಿಸಿ ಇರುವ, ಬಾಲಃ ದಿವಾಕರಃ ಇವ=ಎಳೆಸೂರ್ಯನಂತೆ, ಶುಶುಭೇ=ಪ್ರಕಾಶಿಸಿದನು.

ತಾ :—ಆ ಹುಡುಗನು ಎತ್ತರವಾದ ಕೊಂಬುಗಳುಳ್ಳದೂ, ದೊಡ್ಡ ದೇಹವುಳ್ಳದೂ, ಅಗಲವಾದ ಪಾದಗಳಿಂದ ಭೂಮಿಯಲ್ಲಿ ನಡೆಯುತ್ತಿರುವುದೂ, ಚೆನ್ನಾಗಿರುವುದೂ ಆದ ಎತ್ತಿನ ಬಾಲವನ್ನು ಹಿಡಿದುಕೊಂಡು ಹೋಗುತ್ತಿದ್ದನು. ಆಗ ಅವನು ಎತ್ತರವಾದ ಶಿಖರವುಳ್ಳದೂ, ಅತ್ಯಂತ ದೊಡ್ಡದೂ, ತಪ್ಪಲುಗಳಿಂದ ಭೂಮಿಯನ್ನು ಆವರಿಸಿಕೊಂಡಿರುವುದೂ, ಒಳ್ಳೆ ಗುಹೆಗಳುಳ್ಳದೂ ಆದ ಉದಯಾಚಲದಲ್ಲಿ ಉದಯಿಸುತ್ತಿರುವ ಎಳೆ ಸೂರ್ಯನಂತೆ ವಿರಾಜಿಸಿದನು.

ವ್ಯಾ ವಿ. :—ಉತ್ತುಂಗೇ ಚ ತೇ ಶೃಂಗೇ ಚ, ಉತ್ತುಂಗಶೃಂಗಾಭ್ಯಾಂ ಲಸಿತಃ=ಉತ್ತುಂಗಶೃಂಗಲಸಿತಃ, ತಸ್ಯ. ಅತಿಶಯೇನ ಮಹತೀ, ಮಹಿಷ್ಠಾ ಮೂರ್ತಿಃ ಯಸ್ಯ ಸಃ=ಮಹಿಷ್ಠಮೂರ್ತಿಃ, ತಸ್ಯ. ಪಾದೈಃ ಆವೃತಂ—

Rarest Archiver

ಪಾದಾವೃತಂ, ಅವನೇಃ ತಲಂ—ಅವನಿತಲಂ, ಪಾದಾವೃತಂ ಅವನಿತಲಂ ಯಸ್ಯ ಸಃ—ಪಾದಾವೃತಾವನಿತಲಃ, ತಸ್ಯ. ಶೋಭನಾನಿ ರಂಧ್ರಾಣಿ ಯಸ್ಯ ಸಃ—ಸುರಂಧ್ರಕಃ, ತಸ್ಯ. ಅವಯವಸ್ಯ ಏಕದೇಶಃ—ಅವಯವೈಕದೇಶಃ, ತವ್. ದಿವಾ ಕರೋತೀತಿ—ದಿವಾಕರಃ. ಉದಯಸ್ಯ ಪರ್ವತಃ—ಉದಯ-ಪರ್ವತಃ, ತಸ್ಯ. ಶುಶುಭೇ—ಶುಭ ದೀಪ್ತೌ, ಒಂದನೆ ಗಣ, ಅಕ. ಲಿಟ್, ಆತ್ಮ. ಪ್ರ. ಏ. ಶುಶುಭೇ, ಶುಶುಭಾತೇ, ಶುಶುಭಿರೇ. ಶುಶುಭಿಷೇ, ಶುಶು-ಭಾಥೇ, ಶುಶುಭಿಧ್ವೇ ಶುಶುಭಿಢ್ವೇ. ಶುಶುಭೇ, ಶುಶುಭಿವಹೇ, ಶುಶುಭಿ-ಮಹೇ. ಉಪಮಾಲಂಕಾರ.

ಲೀಲಾಂ ಕರೋತಿ ನು ಗೃಹಾಂತರಗೋ ನು ಬಾಲಃ
ಕೂಪಾಂತರೇ ನು ಪತಿತಃ ಪ್ರಕೃತಿಸ್ವತಂತ್ರಃ ।
ಇತ್ಥಂ ವಿಚಿಂತ್ಯ ಸ ಮುಹುಃ ಸ್ವಜನೋ ವಿಮೃಗ್ಯ
ಹಂತಾನವೇಕ್ಷ್ಯ ತನಯಂ ಹೃದಿ ತಾಪಮಾಪ ॥ ೪೭ ॥

ಅ :—ಸಃ ಸ್ವಜನಃ ಪ್ರಕೃತಿಸ್ವತಂತ್ರಃ ಬಾಲಃ ಲೀಲಾಂ ಕರೋತಿ ನು ? ಗೃಹಾಂತರಗಃ ನು ? ಕೂಪಾಂತರೇ ಪತಿತಃ ನು ? ಇತ್ಥಂ ಮುಹುಃ ವಿಚಿಂತ್ಯ ತನಯಂ ವಿಮೃಗ್ಯ ಅನವೇಕ್ಷ್ಯ ಹಂತ ಹೃದಿ ತಾಪಂ ಆಪ.

ಅ :—ಸಃ—ಆ, ಸ್ವಜನಃ—ತಂದೆ ಮೊದಲಾದ ಬಂಧು ಜನರು, ಪ್ರಕೃತಿಸ್ವತಂತ್ರಃ—ಸ್ವಭಾವದಿಂದ ಸ್ವತಂತ್ರನಾದ, ಬಾಲಃ—ಹುಡುಗನು, ಲೀಲಾಂ ಕರೋತಿ ನು ?—ತಮಾಷೆ ಮಾಡುತ್ತಾನೋ ? ಗೃಹಾಂತರಗಃ ನು ?—ಮನೆಯೊಳಗೆ (ಬೇರೆ ಮನೆಯಲ್ಲಿ) ಇರುವನೋ ? ಕೂಪಾಂತರೇ—ಭಾವಿಯೊಳಗೆ, ಪತಿತಃ ನು ?—ಬಿದ್ದನೊ ? ಇತ್ಥಂ—ಈ ರೀತಿ, ಮುಹುಃ ವಿಚಿಂತ್ಯ—ಬಹಳವಾಗಿ ಆಲೋಚಿಸಿ, ತನಯಂ—ಮಗನನ್ನು, ವಿಮೃಗ್ಯ—ಹುಡುಕಿ, ಅನವೇಕ್ಷ್ಯ—ನೋಡದೆ, ಹಂತ—ಅಯ್ಯೋ ಎಂದು, ಹೃದಿ—ಮನಸ್ಸಿನಲ್ಲಿ ತಾಪಂ—ಸಂತಾಪವನ್ನು, ಆಪ—ಹೊಂದಿದರು.

ತಾ :— ತಂದೆ ತಾಯಿಗಳು, ಸ್ವೇಚ್ಛೆಯಿಂದ ವರ್ತಿಸುವ ಸ್ವಭಾವದ ಬಾಲಕನು, ಮನೆಯೊಳಗೆ ಅಡಗಿಕೊಂಡು ತಮಾಷೆ ಮಾಡುತ್ತಿರುವನೋ ? (ಬೇರೆ ಮನೆಯಲ್ಲಿರುವನೊ) ಅಥವಾ ಬಾವಿಯಲ್ಲಿ ಬಿದ್ದನೊ ? ಎಂದು ಬಹು ವಾಗಿ ಆಲೋಚಿಸಿ ಹುಡುಕಿ ಎಲ್ಲಿಯೂ ಕಾಣದೆ ಮರುಗಿದರು.

Rarest Archiver

ವ್ಯಾ ವಿ. :—ಗೃಹಸ್ಯ ಅಂತರಂ, ಗೃಹಾಂತರಂ ಗಚ್ಛತೀತಿ=ಗೃಹಾಂತರಗಃ, ಕೂಪಸ್ಯ ಅಂತರಂ=ಕೂಪಾಂತರಂ ತಸ್ಮಿನ್. ಪ್ರಕೃತ್ಯಾ ಸ್ವತಂತ್ರಃ=ಪ್ರಕೃತಿ ಸ್ವತಂತ್ರಃ. ಸ್ವಶ್ಚಾಸೌ ಜನಶ್ಚ=ಸ್ವಜನಃ. ಕರೋತಿ–ಡು ಕೃಞ್ ಕರಣೇ, ಎಂಟನೇ ಗಣ, ಸಕ, ಲಟ್, ಪರ. ಪ್ರ. ಏ. ಕರೋತಿ, ಕುರುತಃ, ಕುರ್ವಂತಿ. ಕರೋಷಿ, ಕುರುಥಃ ಕುರುಥ. ಕರೋಮಿ, ಕುರ್ವಃ, ಕುರ್ಮಃ.

ಬಾಲಸ್ಯ ಬಾಲಪರಿಲಂಬನಗೋಚರಂ ತದ್ವ್ಯ-
ಶ್ವಸ್ಯತಾಪಿ ವಚನಂ ವನಗೋಚರೋಕ್ತಮ್ ।
ಯತ್ಸಾಯಮೈಕ್ಷತ ಜನಃ ಶಿಶುಮಾವ್ರಜಂತ-
ಮೇಕಾಬ್ದಕಂ ವೃಷಭಬಾಲಕೃತಾವಲಂಬಮ್ ॥ ೪೮ ॥

ಅ :—ಜನಃ ಸಾಯಂ ಏಕಾಬ್ದಕಂ ವೃಷಭಬಾಲಕೃತಾವಲಂಬಂ ಆವ್ರಜಂತಂ ಶಿಶುಂ ಯತ್ ಐಕ್ಷತ; ತತ್ ಬಾಲಸ್ಯ ಬಾಲಪರಿಲಂಬನಗೋಚರಂ ವನಗೋಚರೋಕ್ತಂ ವಚನಂ ಅಪಿ ವ್ಯಶ್ವಸ್ಯತ.

ಅ :—ಜನಃ=ತಂದೆ ತಾಯಿ ಮೊದಲಾದ ಬಂಧು ಜನರು, ಸಾಯಂ =ಸಂಜೆ, ಏಕಾಬ್ದಕಂ=ಒಂದು ವರ್ಷ ವಯಸ್ಸುಳ್ಳ, ವೃಷಭಬಾಲ=ಎತ್ತಿನ ಬಾಲದಿಂದ, ಕೃತ=ಮಾಡಲ್ಪಟ್ಟ, ಅವಲಂಬಂ=ಆಶ್ರಯವುಳ್ಳ, ಆವ್ರಜಂತಂ =ಬರುತ್ತಿರುವ, ಶಿಶುಂ=ಮಗುವನ್ನು, ಯತ್=ಯಾವ ಕಾರಣದಿಂದ, ಐಕ್ಷತ=ನೋಡಿದರೊ, ತತ್=ಆದ್ದರಿಂದ, ಬಾಲಸ್ಯ=ಮಗುವಿನ, ಬಾಲಪರಿಲಂಬನಗೋಚರಂ = ಎತ್ತಿನ ಬಾಲದ ಆಶ್ರಯ ವಿಷಯಕವಾದ, ವನಗೋಚರ=ಕಾಡಿನಲ್ಲಿ ಸಂಚರಿಸುವ ಗೊಲ್ಲನಿಂದ, ಉಕ್ತಂ=ಹೇಳಲ್ಪಟ್ಟ, ವಚನಂ ಅಪಿ=ಮಾತೂ, ವ್ಯಶ್ವಸ್ಯತ=ನಂಬಲ್ಪಟ್ಟಿತು.

ತಾ : —ಹುಡುಕುತ್ತಿರುವ ತಂದೆತಾಯಿಗಳು ಸಾಯಂಕಾಲ ಎತ್ತಿನ ಬಾಲವನ್ನು ಹಿಡಿದುಕೊಂಡು ಬರುತ್ತಿರುವ ಒಂದು ವರ್ಷದ ವಯಸ್ಸಿನ ತಮ್ಮ ಮಗುವನ್ನು ಕಂಡರು. ಆದರಿಂದ ಕಾಡಿನಲ್ಲಿ ಸಂಚರಿಸುವ ಗೊಲ್ಲನು 'ಬೆಳಗ್ಗೆ ಮಗುವು ಎತ್ತಿನಬಾಲವನ್ನು ಹಿಡಿದುಕೊಂಡು ಹೋಗುತ್ತಿರುವುದನ್ನು ನಾನು ಕಂಡಿದ್ದೆನು' ಎಂದು ಹೇಳಿದ ಮಾತನ್ನು ನಂಬಿದರು

Rarest Archive

ವ್ಯಾ.ವಿ. :—ಬಾಲಸ್ಯ ಪರಿಲಂಬನಂ, ಬಾಲಪರಿಲಂಬನಂ ಗೋಚರಃ ಯಸ್ಯ ತತ್=ಬಾಲಪರಿಲಂಬನಗೋಚರಮ್, ತತ್. ವನಂ ಗೋಚರಃ ಯಸ್ಯ ಸಃ=ವನಗೋಚರಃ, ವನಗೋಚರೇಣ ಉಕ್ತಂ=ವನಗೋಚರೋಕ್ತಂ, ತತ್. ಏಕಃ ಅಬ್ದಃ ಯಸ್ಯ ಸಃ=ಏಕಾಬ್ದಕಃ, ತಮ್. ವೃಷಭಸ್ಯ ಬಾಲಃ, ವೃಷಭ ಬಾಲೇನ ಕೃತಃ, ವೃಷಭಬಾಲಕೃತಃ ಅವಲಂಬಃ ಯಸ್ಯ ಸಃ =ವೃಷಭಬಾಲಕೃತಾವಲಂಬಃ, ತಮ್. ವ್ಯಶ್ವಸ್ಯತ-ಶ್ವಸ ಪ್ರಾಣನೇ, ಎರಡನೆ ಗಣ, ಅಕ. ಕರ್ಮಣಿ, ಲಙ್, ಆತ್ಮ, ಪ್ರ. ಏ. ವಿ. ಉಪಸರ್ಗ. ವಿ+ ಅಶ್ವಸ್ಯತ, ಅಶ್ವಸ್ಯೇತಾಂ, ಅಶ್ವಸ್ಯಂತ. ಅಶ್ವಸ್ಯಥಾಃ, ಅಶ್ವಸ್ಯೇಥಾಂ, ಅಶ್ವಸ್ಯಧ್ವಮ್. ಅಶ್ವಸ್ಯೇ, ಅಶ್ವಸ್ಯಾವಹಿ, ಅಶ್ವಸ್ಯಾಮಹಿ.

ಚಿಂತಾಮಣೀಂದ್ರಮಿವ ಚಿಂತಿತದಂ ದರಿದ್ರೋ
ವಿಜ್ಞಾನಮಾರ್ಗಮಿವ ವಿಷ್ಣುಪರಂ ಮುಮುಕ್ಷುಃ ।
ನಷ್ಟಂ ಚ ನಂದನಮಿತಿ ಸ್ವಜನೋಽಸ್ಯ ಲಬ್ಧ್ವಾ
ನಾಥಸ್ಯ ತಸ್ಯ ತಮನುಗ್ರಹಮೇವ ಮೇನೇ ॥ ೪೯ ॥

ಅ :—ದರಿದ್ರಃ ಚಿಂತಿತದಂ ಚಿಂತಾಮಣೀಂದ್ರಂ ಇವ, ಮುಮುಕ್ಷುಃ ವಿಷ್ಣುಪರಂ ವಿಜ್ಞಾನಮಾರ್ಗಂ ಇವ, ಅಸ್ಯ ಸ್ವಜನಃ ಇತಿ ನಷ್ಟಂ ಚಿಂತಿತದಂ ವಿಷ್ಣುಪರಂ ನಂದನಂ ಚ ಲಬ್ಧ್ವಾ ತಂ ತಸ್ಯ ನಾಥಸ್ಯ ಅನುಗ್ರಹಂ ಏವ ಮೇನೇ.

ಅ :—ದರಿದ್ರಃ=ಬಡವನು, ಚಿಂತಿತದಂ=ಬೇಡಿದ್ದನ್ನು ಕೊಡುವ, ಚಿಂತಾಮಣೀಂದ್ರಂ ಇವ=ಶ್ರೇಷ್ಠವಾದ ಚಿಂತಾಮಣಿಯನ್ನು ಎಂಬಂತೆ, ಮುಮುಕ್ಷುಃ=ಮುಕ್ತಿಯನ್ನಿಚ್ಛಿಸುವವನು, ವಿಷ್ಣುಪರಂ=ವಿಷ್ಣುಸರ್ವೋತ್ತಮತ್ವವಿಷಯಕವಾದ, ವಿಜ್ಞಾನಮಾರ್ಗಂ ಇವ=ಉತ್ತಮ ತತ್ತ್ವಜ್ಞಾನವೆಂಬ ಮಾರ್ಗವನ್ನು ಎಂಬಂತೆ, ಅಸ್ಯ=ಈ ಬಾಲಕನ, ಸ್ವಜನಃ=ತಂದೆ ತಾಯಿ ಮೊದಲಾದ ಬಂಧು ಜನಗಳು, ಇತಿ=ಹೀಗೆ, ನಷ್ಟಂ=ಕಾಣದಿರುವ, ಚಿಂತಿತದಂ=ಬೇಡಿದ್ದನ್ನು ಕೊಡುವ, ವಿಷ್ಣುಪರಂ=ನಾರಾಯಣನಲ್ಲಿ ಆಸಕ್ತನಾದ, ನಂದನಂ ಚ=ಮಗನನ್ನೂ, ಲಬ್ಧ್ವಾ=ಹೊಂದಿ, ತಂ=ಅದನ್ನು, ತಸ್ಯ ನಾಥಸ್ಯ=ಆ ಅನಂತಾಸನಸ್ವಾಮಿಯ, ಅನುಗ್ರಹಂ ಏವ=ಅನುಗ್ರಹವನ್ನಾಗಿಯೇ, ಮೇನೇ=ತಿಳಿದರು.

ತಾ :—ಈ ಬಾಲಕನ ತಂದೆತಾಯಿಗಳು ಬೆಳಗಿನಿಂದ ಕಾಣದೆ ಇದ್ದ

ಸಕಲ ಇಷ್ಟಾರ್ಥವನ್ನೀಯುವವನೂ, ವಿಷ್ಣುನಿಷ್ಠನೂ ಆದ ಮಗನನ್ನು ಸಾಯಂಕಾಲ ನೋಡಿದರು. ಅದು ಕಡುಬಡವನಿಗೆ ಬೇಡಿದ್ದನ್ನು ನೀಡುವ ಚಿಂತಾಮಣಿಯೆಂಬ ರತ್ನವು ಸಿಕ್ಕಿದಂತೆ, ಮುಕ್ತಿಯನ್ನು ಬಯಸುವವನಿಗೆ ಸರ್ವೋತ್ತಮನಾದ ವಿಷ್ಣುವಿನ ತತ್ತ್ವಜ್ಞಾನ ಸಿಕ್ಕಿದಂತಾಯಿತು. ಅವರು ಈ ಮಗನು ಸಿಕ್ಕಿರುವುದು ಶ್ರೀಅನಂತಾಸನಸ್ವಾಮಿಯ ಅನುಗ್ರಹವೆಂದೇ ತಿಳಿದರು.

ವ್ಯಾ. ವಿ.:—ಚಿಂತಾಮಣಿಷು ಇಂದ್ರಃ=ಚಿಂತಾಮಣೀಂದ್ರಃ, ತಮ್. ಚಿಂತಿತಂ ದದಾತೀತಿ=ಚಿಂತಿತದಃ, ತಮ್. ವಿಜ್ಞಾನಸ್ಯ ಮಾರ್ಗಃ=ವಿಜ್ಞಾನಮಾರ್ಗಃ, ತಮ್. ವಿಷ್ಣುಃ ಪರಃ ಯಸ್ಯ ಸಃ=ವಿಷ್ಣುಪರಃ, ತಮ್. ಮೋಕ್ತುಮಿಚ್ಛುಃ=ಮುಮುಕ್ಷುಃ, ಮೇನೆ-ಮನ ಜ್ಞಾನೇ, ನಾಲ್ಕನೆ ಗಣ, ಸಕ. ಲಿಟ್, ಆತ್ಮ, ಪ್ರ. ಪು. ಮೇನೇ, ಮೇನಾತೇ, ಮೇನಿರೇ. ಮೇನಿಷೇ, ಮೇನಾಥೇ, ಮೇನಿಧ್ವೇ. ಮೇನೇ, ಮೇನಿವಹೇ, ಮೇನಿಮಹೇ.

ಲೀಲಾವಸಾನಸಮಯೇ ಸಹಸಾ ಕದಾಚಿ-
ದಾರ್ಯೋಽಮುನಾಭ್ಯವಹೃತಿಂ ಪ್ರತಿ ಚೋದ್ಯಮಾನಃ ।
ರೋದ್ಧೈಷ ನೋಽಸ್ತಿ ಧನಿಕೋ ವೃಷವಿಕ್ರಯೀತಿ
ಪ್ರೋವಾಚ ನಂದನಮುಖೇಂದುಮವೇಕ್ಷ್ಯ ಮಂದಮ್ ॥ ೫೦ ॥

ಅ:—ಕದಾಚಿತ್ ಲೀಲಾವಸಾನಸಮಯೇ ಸಹಸಾ ಅಮುನಾ ಅಭ್ಯವ-ಹೃತಿಂ ಪ್ರತಿ ಚೋದ್ಯಮಾನಃ ಆರ್ಯಃ ನಂದನಮುಖೇಂದುಂ ಅವೇಕ್ಷ್ಯ ನಃ ವೃಷವಿಕ್ರಯೀ ಏಷಃ ಧನಿಕಃ ರೋದ್ಧಾ ಅಸ್ತಿ ಇತಿ ಮಂದಂ ಪ್ರೋವಾಚ.

ಅ:—ಕದಾಚಿತ್=ಒಂದಾನೊಂದು ದಿನ, ಲೀಲಾವಸಾನಸಮಯೇ=ಆಟದ ಕೊನೆಯ ವೇಳೆಯಲ್ಲಿ, ಸಹಸಾ=ಕೂಡಲೇ, ಅಮುನಾ=ಈ ಬಾಲಕನಿಂದ, ಅಭ್ಯವಹೃತಿಂ ಪ್ರತಿ=ಊಟವನ್ನು ಕುರಿತು, ಚೋದ್ಯಮಾನಃ=ಪ್ರೇರಿಸಲ್ಪಡುವ, ಆರ್ಯಃ=ಸಜ್ಜನರಾದ ತಂದೆಯು, ನಂದನಮುಖೇಂದುಂ=ಮಗನ ಮುಖವೆಂಬ ಚಂದ್ರನನ್ನು, ಅವೇಕ್ಷ್ಯ=ನೋಡಿ, ನಃ=ನಮಗೆ, ವೃಷವಿಕ್ರಯೀ=ಎತ್ತನ್ನು ಮಾರಿದ, ಏಷಃ=ಈ, ಧನಿಕಃ=ಹಣಗಾರನು, ರೋದ್ಧಾ=ತಡೆಯುವವನಾಗಿ, ಅಸ್ತಿ=ಇದ್ದಾನೆ. ಇತಿ=ಹೀಗೆಂದು, ಮಂದಂ=ಮೆಲ್ಲನೆ, ಪ್ರೋವಾಚ=ಹೇಳಿದರು.

Rarest Archives

ತಾ :—ಒಂದಾನೊಂದು ದಿನ ಈ ಬಾಲಕನು ಆಟವು ಮುಗಿದ ಕೂಡಲೆ ತಂದೆಯ ಹತ್ತಿರ ಬಂದು 'ಅಪ್ಪ! ಊಟಕ್ಕೆ ಬಾ' ಎಂದು ಕರೆದನು. ಆಗ 'ಇಗೋ ನೋಡು. ನಮಗೆ ಒಂದು ಎತ್ತನ್ನು ಅನಂತರ ಹಣ ಕೊಡೆಂದು ಮಾರಿದ ಹಣಗಾರನು ಇಲ್ಲಿ ಕೂತಿದ್ದಾನೆ. ಇವನು ನನಗೆ ಹಣವನ್ನು ಕೊಡದೆ ನೀನು ಊಟ ಮಾಡಕೂಡದು, ಎಂದು ಹಠದಿಂದ ಇದ್ದಾನೆ. ಆದ್ದರಿಂದ ನಾನೀಗ ಇವನಿಗೆ ಹಣ ಕೊಡದೆ ಊಟ ಮಾಡುವಂತಿಲ್ಲ. ನೀನು ಊಟ ಮಾಡು' ಎಂದು ಮಗನ ಮುಖವನ್ನು ನೋಡಿ ಮೆಲ್ಲಗೆ ಹೇಳಿದರು.

ವ್ಯಾ. ವಿ.:—ಲೀಲಾಯಾಃ ಅವಸಾನಂ, ಲೀಲಾವಸಾನಸ್ಯ ಸಮಯಃ =ಲೀಲಾವಸಾನಸಮಯಃ, ತಸ್ಮಿನ್. ವೃಷಂ ವಿಕ್ರೇತುಂ ಶೀಲಂ ಅಸ್ಯೇತಿ= ವೃಷವಿಕ್ರಯೀ. ಮುಖಂ ಇಂದುಃ ಇವ, ನಂದನಸ್ಯ ಮುಖೇಂದುಃ= ನಂದನಮುಖೇಂದುಃ, ತಮ್.

ಲೀಲಾಕರೇಣ ಸ ಕರೇಣ ಸುಕೋಮಲೇನ
ಬೀಜಾಂತರಾಣಿ ಕಿಲ ಕಾನಿಚಿದಾಶು ತಸ್ಮೈ ।
ಸ್ಮಿತ್ವಾರ್ಭಕೋಽಭಿಮತನಿಷ್ಕಪದೇ ಯದಾದಾ-
ದಾದತ್ತ ತಾನಿ ಧನಿಕೋ ಬಹುಮಾನಪೂರ್ವಮ್ ॥ ೫೧ ॥

ಅ :—ಸಃ ಲೀಲಾಕರೇಣ ಸುಕೋಮಲೇನ ಕರೇಣ ಆಶು ಅಭಿಮತ-ನಿಷ್ಕಪದೇ ಕಾನಿಚಿತ್ ಬೀಜಾಂತರಾಣಿ ಸ್ಮಿತ್ವಾ ತಸ್ಮೈ ಯದಾ ಅದಾತ್, ಧನಿಕಃ ತಾನಿ ಬಹುಮಾನಪೂರ್ವಂ ಆದತ್ತ ಕಿಲ.

ಅ :—ಸಃ=ಆ ಬಾಲಕನು, ಲೀಲಾಕರೇಣ=ಆಟಕ್ಕೆ ಆಶ್ರಯವಾದ, ಸುಕೋಮಲೇನ=ಅತಿಮೃದುವಾದ, ಕರೇಣ=ಕೈಯಿಂದ, ಆಶು=ಜಾಗ್ರತೆಯಾಗಿ, ಅಭಿಮತ=ಒಪ್ಪಲ್ಪಟ್ಟ, ನಿಷ್ಕಪದೇ=ನಾಣ್ಯದ ಸ್ಥಾನದಲ್ಲಿ, ಕಾನಿ-ಚಿತ್=ಕೆಲವು, ಬೀಜಾಂತರಾಣಿ=ಹುಣಸೆ ಬೀಜಗಳನ್ನು, ಸ್ಮಿತ್ವಾ=ನಕ್ಕು, ತಸ್ಮೈ=ಆ ಧನಿಕನಿಗೆ, ಯದಾ=ಯಾವಾಗ, ಅದಾತ್=ಕೊಟ್ಟನೊ, (ಆಗ) ಧನಿಕಃ=ಹಣಗಾರನು, ತಾನಿ=ಅವುಗಳನ್ನು, ಬಹುಮಾನಪೂರ್ವಂ =ಆದರದಿಂದ ಸಹಿತವಾಗಿ, ಆದತ್ತ ಕಿಲ=ತೆಗೆದುಕೊಂಡನು.

ತಾ :—ಆ ಬಾಲಕನು ಕೂಡಲೇ ಆಟವಾಡುವ ಮೃದು ಕೈಗಳಿಂದ

Rarest Archive

ಕೊಡಬೇಕಾದ ಹಣದಷ್ಟು ಹುಣಸೆ ಬೀಜಗಳನ್ನು ಆ ಧನಿಕನಿಗೆ ಕೊಟ್ಟನು. ಅವನು ಅವುಗಳನ್ನು ಪ್ರೀತಿಯಿಂದ ತೆಗೆದುಕೊಂಡು ನನಗೆ ಬರಬೇಕಾದ ಹಣ ಬಂತೆಂದು ಹೇಳಿ ಹೊರಟುಹೋದನಂತೆ.

ವ್ಯಾ. ವಿ.:—ಲೀಲಾಯಾಃ ಆಕರಃ=ಲೀಲಾಕರಃ, ತೇನ. ಅನ್ಯಾನಿ ಬೀಜಾನಿ=ಬೀಜಾಂತರಾಣಿ, ತಾನಿ. ನಿಷ್ಕಸ್ಯ ಪದಂ, ಅಭಿಮತಂ ಚ ತತ್ ನಿಷ್ಕಪದಂ ಚ=ಅಭಿಮತನಿಷ್ಕಪದಂ, ತಸ್ಮಿನ್. ಬಹುಮಾನಃ ಪೂರ್ವಃ ಯಥಾ ಭವತಿ ತಥಾ=ಬಹುಮಾನಪೂರ್ವಂ. ಅದಾತ್–ಡು ದಾಞ್ ದಾನೇ, ಮೂರನೆ ಗಣ, ಸಕ. ಲುಙ್, ಪರ, ಪ್ರ. ಏ. ಅದಾತ್, ಅದಾತಾಂ, ಅದುಃ. ಅದಾಃ, ಅದಾತಂ, ಅದಾತ. ಅದಾಂ, ಅದಾವ, ಅದಾಮ. ಆದತ್ತ–ಇದೇ ಧಾತು ಆತ್ಮನೇ ಪದ, ಲಙ್. ಆ ಉಪಸರ್ಗ ಆ+ಅದತ್ತ, ಅದದಾತಾಂ, ಅದದತ. ಅದತ್ಥಾಃ, ಅದದಾಥಾಂ, ಅದದ್‌ಧ್ವಮ್. ಅದದಿ, ಅದದ್ವಹಿ, ಅದದ್ಮಹಿ.

ಲಬ್ಧಂ ಸುತಾದಿತಿ ವದನ್ ದ್ವಿಜಪುಂಗವೇನ
ಕಾಲಾಂತರೇ ನಿಜಧನೇ ಪ್ರತಿದಿತ್ಸಿತೇಽಪಿ ।
ಸಾಕ್ಷಾದಮಾನವನವಾಕೃತಿತಃ ಸ ಲೇಭೇ
ಬೀಜಚ್ಛಲೇನ ಪುರುಷಾರ್ಥಮಹೋ ವಿಶಿಷ್ಟಮ್ ॥ ೫೨ ॥

ಅ :—ದ್ವಿಜಪುಂಗವೇನ ಕಾಲಾಂತರೇ ನಿಜಧನೇ ಪ್ರತಿದಿತ್ಸಿತೇಽಪಿ ಸುತಾತ್ ಲಬ್ಧಂ ಇತಿ ವದನ್ ಸಃ ಅಮಾನವನವಾಕೃತಿತಃ ಬೀಜಚ್ಛಲೇನ ಸಾಕ್ಷಾತ್ ವಿಶಿಷ್ಟಂ ಪುರುಷಾರ್ಥಂ ಲೇಭೇ. ಅಹೋ.

ಅ :—ದ್ವಿಜಪುಂಗವೇನ=ಬ್ರಾಹ್ಮಣ ಶ್ರೇಷ್ಠರಾದ ಮಧ್ಯಗೇಹಭಟ್ಟ ರಿಂದ, ಕಾಲಾಂತರೇ=ಇನ್ನೊಂದು ಸಮಯದಲ್ಲಿ, ನಿಜಧನೇ=ತಾನು ಎತ್ತಿ ಗಾಗಿ ಕೊಡಬೇಕಾದ ಹಣವು, ಪ್ರತಿದಿತ್ಸಿತೇ ಅಪಿ=ಕೊಡಲು ಅಪೇಕ್ಷಿಸಲ್ಪ ಟ್ಟರೂ, ಸುತಾತ್=(ನಿಮ್ಮ) ಮಗನಿಂದ, ಲಬ್ಧಂ=ಹೊಂದಲ್ಪಟ್ಟಿತು. ಇತಿ=ಹೀಗೆಂದು, ವದನ್=ಹೇಳುತ್ತಿರುವ, ಸಃ=ಆ ಸಾಹುಕಾರನು, ಅಮಾನವನವಾಕೃತಿತಃ=ಮುಖ್ಯಪ್ರಾಣದೇವರ ಹೊಸ ಅವತಾರವಾದ ವಾಸು ದೇವನಿಂದ, ಬೀಜಚ್ಛಲೇನ=ಬೀಜದ ನೆಪದಿಂದ, ಸಾಕ್ಷಾತ್=ಮುಖ್ಯವಾಗಿ,

Rarest Archiver

ವಿಶಿಷ್ಟಂ=ಉತ್ತಮವಾದ, ಪುರುಷಾರ್ಥಂ=ಮೋಕ್ಷವನ್ನು, ಲೇಭೇ=ಪಡೆದನು. ಅಹೋ=ಆಶ್ಚರ್ಯ.

ತಾ :—ಒಂದಾನೊಂದು ವೇಳೆ ಮಧ್ಯಗೇಹಭಟ್ಟರು ಎತ್ತಿನ ಒಡೆಯನಿಗೆ ತಾವು ಕೊಡಬೇಕಾದ ಹಣವನ್ನು ಕೊಡಲು ಹೋದರು. ಆಗ ಅವನು ನಿಮ್ಮ ಮಗನಿಂದ ನನಗೆ ಹಣ ಸಂದಿದೆ ಎಂದನು. ಹೀಗೆ ಆ ಧನಿಕನು ವಾಯುದೇವರ ಹೊಸ ಅವತಾರನಾದ ವಾಸುದೇವನು ಕೊಟ್ಟ ಹುಣಸೆ ಬೀಜಗಳನ್ನು ತೆಗೆದುಕೊಳ್ಳುವ ಮೂಲಕ ಮುಖ್ಯ ಪುರುಷಾರ್ಥವಾದ ಮೋಕ್ಷವನ್ನೇ ಪಡೆದನು. ಎಂದರೆ ವಾಸುದೇವನು ಧನಿಕನಿಗೆ ಬೀಜವನ್ನು ಕೊಟ್ಟಂತೆ ಕಂಡರೂ ಅದು ಮೋಕ್ಷವನ್ನು ಕೊಟ್ಟಂತೆ ಆಯಿತು ಎಂದುಭಾವ.

ವ್ಯಾ. ವಿ. :—ದ್ವಿಜೇಷು ಪುಂಗವಃ=ದ್ವಿಜಪುಂಗವಃ, ತೇನ, ಅನ್ಯಃ ಕಾಲಃ=ಕಾಲಾಂತರಮ್, ತಸ್ಮಿನ್. ನಿಜಂ ಚ ತತ್ ಧನಂ ಚ=ನಿಜಧನಂ, ತಸ್ಮಿನ್. ಪ್ರತಿದಾತುಂ ಇಷ್ಟಂ=ಪ್ರತಿದಿತ್ಸಿತಮ್, ತಸ್ಮಿನ್. ಮಾನವಃ ನ ಭವತೀತಿ=ಅಮಾನವಃ, ನವಾ ಚ ಸಾ ಆಕೃತಿಶ್ಚ, ಅಮಾನವಸ್ಯ ನವಾಕೃತಿಃ, ತಸ್ಯಾಃ=ಅಮಾನವನವಾಕೃತಿತಃ. ಬೀಜಂ ಇತಿ ಛಲಂ=ಬೀಜಚ್ಛಲಂ, ತೇನ. ಪುರುಷಸ್ಯ ಅರ್ಥಃ=ಪುರುಷಾರ್ಥಃ, ತಮ್.

*ವಾಸುದೇವಮಿಹ ವಾಸುದೇವತಾ-
ಸತ್ಕಲಾಮಭಿನನಂದ ತಂ ಜನಃ ।
ವಾಸುದೇವಮಿತಿ ವಾಸುದೇವಸ-
ನ್ನಾಮಕಂ ವಿವಿಧಲೀಲಮರ್ಭಕಮ್ ॥ ೩೩ ॥

ಅ:—ಜನಃ ಇಹ ಅಸುದೇವತಾಸತ್ಕಲಾಂ ಇತಿ ವಿವಿಧಲೀಲಂ ವಾಸುದೇವಸನ್ನಾಮಕಂ ತಂ ಅರ್ಭಕಂ ವಾಸುದೇವಂ ವಾಸುದೇವಂ ವಾ ಅಭಿನನಂದ.

ಅ:—ಜನಃ=ಸಜ್ಜನರು, ಇಹ=ಈ ಭೂಮಿಯಲ್ಲಿರುವ, ಅಸುದೇವತಾ=ಶ್ರೀಮುಖ್ಯಪ್ರಾಣದೇವರ, ಸತ್ಕಲಾಂ=ದೋಷವಿಲ್ಲದ ಅಂಶವಾದ, ಇತಿ=ಈ ರೀತಿ, ವಿವಿಧಲೀಲಂ=ನಾನಾವಿಧ ಬಾಲಕ್ರೀಡೆಯುಳ್ಳ, ವಾಸುದೇವ ಸನ್ನಾಮಕಂ=ವಾಸುದೇವ ಎಂಬ ಒಳ್ಳೆ ಹೆಸರುಳ್ಳ, ತಂ=ಆ, ಅರ್ಭಕಂ=

*'ರಾನ್ನರಾವಿಹ ರಥೋದ್ಧತಾ ಲಗೌ' ಎಂಬ ಲಕ್ಷಣದಂತೆ ರಥೋದ್ಧತಾ ವೃತ್ತ.

Rarest Archiver

ಬಾಲಕನನ್ನು, ವಾಸುದೇವಂ=ವಸುದೇವನ ಮಗನಾದ, ವಾಸುದೇವಂ ವಾ= ಶ್ರೀಕೃಷ್ಣನನ್ನು ಎಂಬಂತೆ,ಅಭಿನನಂದ=ಕೇಳಿ, ನೋಡಿ ಸಂತೋಷಗೊಂಡರು.

ತಾ:—ಈ ರೀತಿ ಭೂಮಿಯಲ್ಲಿ ಅವತರಿಸಿರುವ ಶ್ರೀಮುಖ್ಯಪ್ರಾಣದೇವರ ನಿರ್ದುಷ್ಟಾಂಶನಾದ ವಾಸುದೇವನು ನಾನಾವಿಧ ಬಾಲಕ್ರೀಡೆಗಳನ್ನು ಮಾಡುತ್ತಿದ್ದನು. ಸಜ್ಜನರು ಅಂತಹ ಆ ಬಾಲಕನನ್ನು ಕೇಳಿ, ನೋಡಿ ವಸುದೇವನ ಮಗನಾದ ಶ್ರೀಕೃಷ್ಣನನ್ನು ಕೇಳಿ, ನೋಡಿ ಆನಂದಿಸುವಂತೆ ಆನಂದಗೊಂಡರು.

ವ್ಯಾ.ವಿ.:—ಅಸೂನಾಂ ದೇವತಾ=ಅಸುದೇವತಾ, ಅಸುದೇವತಾಯಾಃ ಸತ್ಕಲಾ=ಅಸುದೇವತಾಸತ್ಕಲಾ, ತಾಮ್. ಸಚ್ಚ ತತ್ ನಾಮ ಚ, ವಾಸುದೇವ ಇತಿ ಸನ್ನಾಮ ಯಸ್ಯ ಸಃ=ವಾಸುದೇವಸನ್ನಾಮಕಃ, ತಮ್, ವಿವಿಧಾ ಲೀಲಾ ಯಸ್ಯ ಸಃ=ವಿವಿಧಲೀಲಃ, ತಮ್.

*ಇತಿ ವಿಹರತಿ ಮಹ್ಯಾಂ ವಿಷ್ಣುದಾಸೇಽಪಿ ಗೂಢೇ
ಸಮಜನಿ ಸುಜನಾನಾಂ ಚಿತ್ತಮಾನಂದಪೂರ್ಣಮ್ ।
ಉದಯತಿ ಘನಮಾಲಾಲೀನಭಾನೌ ಚ ಭಾನೌ
ನನು ಜನನಯನಾಬ್ಜೈರ್ಲಭ್ಯತೇಽಲಂ ವಿಕಾಸಃ ॥ ೩೪ ॥

ಇತಿ ಶ್ರೀಮತ್ಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯಸುತನಾರಾಯಣ-
ಪಂಡಿತಾಚಾರ್ಯವಿರಚಿತೇ ಶ್ರೀಮತ್ಸುಮಧ್ವವಿಜಯೇ
ಮಹಾಕಾವ್ಯೇ ಆನಂದಾಂಕೇ ದ್ವಿತೀಯಃ ಸರ್ಗಃ

ಅ:—ವಿಷ್ಣುದಾಸೇ ಗೂಢೇ ಅಪಿ ಮಹ್ಯಾಂ ಇತಿ ವಿಹರತಿ ಸುಜನಾನಾಂ ಚಿತ್ತಂ ಆನಂದಪೂರ್ಣಂ ಸಮಜನಿ. ಘನಮಾಲಾಲೀನಭಾನೌ ಭಾನೌ ಚ ಉದಯತಿ ಜನನಯನಾಬ್ಜೈಃ ಅಲಂ ವಿಕಾಸಃ ಲಭ್ಯತೇ ನನು.

ಅ:—ವಿಷ್ಣುದಾಸೇ=ಶ್ರೀಮನ್ನಾರಾಯಣನ ಭಕ್ತರಾದ ವಾಯುದೇವರು, ಗೂಢೇ ಅಪಿ=ಮನುಷ್ಯರಂತೆ ನಟಿಸುತ್ತ ಗುಟ್ಟಾಗಿದ್ದರೂ, ಮಹ್ಯಾಂ=ಭೂಮಿಯಲ್ಲಿ, ಇತಿ=ಈ ರೀತಿ, ವಿಹರತಿ=ಕ್ರೀಡಿಸುತ್ತಿರಲು, ಸುಜನಾನಾಂ=ಸಜ್ಜನರ, ಚಿತ್ತಂ=ಮನಸ್ಸು, ಆನಂದಪೂರ್ಣಂ=

*'ನನಮಯಯಯುತೇಯಂ ಮಾಲಿನೀ ಭೋಗಿಲೋಕೈಃ' ಇದರಂತೆ ಮಾಲಿನೀವೃತ್ತ.

Rarest Archiver

ಸಂತೋಷದಿಂದ ತುಂಬಿದ್ದಾಗಿ, ಸಮಜನಿ—ಆಯಿತು. ಘನ—ಮೋಡಗಳ, ಮಾಲಾ—ಸಾಲುಗಳಲ್ಲಿ, ಲೀನ—ಅಡಗಿರುವ, ಭಾನೌ—ಕಾಂತಿಯುಳ್ಳ, ಭಾನೌ ಚ—ಸೂರ್ಯನೂ, ಉದಯತಿ—ಉದಯಿಸಲು, ಜನನಯನಾಬ್ಜೈಃ —ಜನರ ಕಣ್ಣುಗಳೆಂಬ ತಾವರೆ ಹೂವುಗಳಿಂದ, ಅಲಂ—ಚೆನ್ನಾಗಿ, ವಿಕಾಸಃ —ಅರಳುವಿಕೆಯು, ಲಭ್ಯತೇ ನನು—ಹೊಂದಲ್ಪಡುವುದಷ್ಟೆ.

ತಾ :—ಸೂರ್ಯನು ಮೋಡಗಳೊಳಗಿನಿಂದಲೇ ಉದಯಿಸಿದರೂ ತಾವರೆ ಹೂವುಗಳು ಚೆನ್ನಾಗಿ ಅರಳುವುವು. ಜನರ ಕಣ್ಣುಗಳೂ ವಿಕಾಸಗೊಳ್ಳುವುವು. ಹೀಗೆಯೇ, ಶ್ರೀಮುಖ್ಯಪ್ರಾಣದೇವರು ವಾಸುದೇವನ ರೂಪದಿಂದ ಅವತರಿಸಿ ಗುಟ್ಟಾಗಿ ಮನುಷ್ಯರಂತೆ ನಟಿಸುತ್ತಿದ್ದರೂ ಅವರ ಮಾಹಾತ್ಮ್ಯವು ಅಪಾರ ವಾದ್ದರಿಂದ ಸಜ್ಜನರ ಮನಸ್ಸು ಆನಂದದಿಂದ ತುಂಬಿತು.

ವ್ಯಾ.ವಿ.:—ವಿಷ್ಣೋಃ ದಾಸಃ, ತಸ್ಮಿನ್. ಆನಂದೇನ ಪೂರ್ಣಂ—ಆನಂದಪೂರ್ಣಂ. ಘನಾನಾಂ ಮಾಲಾಃ, ಘನಮಾಲಾಸು ಲೀನಾಃ, ಘನ-ಮಾಲಾಲೀನಾಃ ಭಾನವಃ ಯಸ್ಯ ಸಃ—ಘನಮಾಲಾಲೀನಭಾನುಃ, ತಸ್ಮಿನ್. ಜನಾನಾಂ ನಯನಾನಿ, ಜನನಯನಾನ್ಯೇವ ಅಬ್ಜಾನಿ—ಜನನಯನಾಬ್ಜಾನಿ, ತೈಃ. ಸಮಜನಿ-ಜನೀ ಪ್ರಾದುರ್ಭಾವೇ, ನಾಲ್ಕನೇ ಗಣ, ಆಶ. ಲುಙ್, ಆತ್ಮ. ಪ್ರ. ಏ. ಸಂ ಉಪಸರ್ಗ. ಸಂ+ಅಜನಿ ಅಜನಿಷ್ಟ, ಆಜನಿಷಾತಾಂ, ಅಜನಿಷತ. ಅಜನಿಷ್ಠಾಃ, ಅಜನಿಷಾಥಾಂ, ಅಜನಿಧ್ವಂ ಅಜನಿಢ್ವಮ್, ಅಜನಿಷಿ, ಅಜ-ನಿಷ್ವಹಿ, ಆಜನಿಷ್ಮಹಿ. ಲಭ್ಯತೇ-ಲಭಧಾತು, ಕರ್ಮಣಿ, ಲಟ್, ಆತ್ಮ. ಪ್ರ. ಏ. ಲಭ್ಯತೇ ಲಭ್ಯೇತೇ, ಲಭ್ಯಂತೇ. ಲಭ್ಯಸೇ, ಲಭ್ಯೇಥೇ, ಲಭ್ಯಧ್ವೇ. ಲಭ್ಯೇ, ಲಭ್ಯಾವಹೇ, ಲಭ್ಯಾಮಹೇ.

ಇಲ್ಲಿಗೆ ಕವಿಕುಲತಿಲಕ ಶ್ರೀಮನ್ನಾರಾಯಣಪಂಡಿತಾಚಾರ್ಯ
ರಚಿತವಾದ ಶ್ರೀಸುಮಧ್ವವಿಜಯ ಮಹಾಕಾವ್ಯದ
ದ್ವಿತೀಯಸರ್ಗದ ಅನುವಾದವು ಮುಗಿಯಿತು.

— ೦ —

Rarest Archiver

## ತೃತೀಯಸರ್ಗದ ಕಥಾಸಾರ

ಒಂದಾನೊಂದು ದಿನ ಮಧ್ಯಗೇಹಭಟ್ಟರೂ, ಅವರ ಪತ್ನಿಯೂ ಬಂಧುಗಳ ಮನೆಯ ಉತ್ಸವಕ್ಕಾಗಿ ಮನೆಯಿಂದ ಹೊರಟರು. ಅವರೊಡನೆ ಅಲ್ಲಿಗೆ ತೆರಳಿದ ಆ ವಾಸುದೇವನು ಉತ್ಸವದ ಗದ್ದಲದಲ್ಲಿ ತಾಯಿಯು ತನ್ನನ್ನು ಅರಿಯಲಾರಳೆಂದು ತಿಳಿದು ಅಲ್ಲಿಂದ ಒಬ್ಬನೇ ಹೊರಗೆ ಹೊರಟನು. ದಾರಿಗರು 'ಮಗು! ನೀನು ಒಬ್ಬನೇ ಎಲ್ಲಿಗೆ ಹೋಗುತ್ತೀ?' ಎಂದು ಕೇಳಲು ನಕ್ಕು ಮುಂದೆ ಸಾಗಿದನು. ಹಾಗೆಯೇ ಹೋಗಿ ಕೊಡವೂರು ಮತ್ತು ತಾಳೆಕುಡೆ (ಬನ್ನಂಜೆ) ದೇವಾಲಯದಲ್ಲಿರುವ ಶ್ರೀಹರಿಯನ್ನು ವಂದಿಸಿದನು. ಅಲ್ಲಿಂದ ಮುಂದಕ್ಕೆ ಉಡುಪಿಗೆ ಹೋಗಿ ಅನಂತಾಸನನನ್ನು ವಂದಿಸಿದನು. ಇತ್ತ ಮಧ್ಯಗೇಹಭಟ್ಟರು ಮಗನನ್ನು ಕಾಣದೆ ಜನರನ್ನು ವಿಚಾರಿಸುತ್ತ ಅವನನ್ನು ಹುಡುಕಿಕೊಂಡು ಹೋದರು. ಉಡುಪಿಯಲ್ಲಿ ಬಾಲಕನು ಸಿಕ್ಕಿದನು. ಅವನನ್ನು 'ಮಗು ನೀನು ಒಬ್ಬನೇ ಬಂದಿರುವೆ. ನಿನಗೆ ಯಾರು ಸಹಾಯಕರಾಗಿದ್ದರು?' ಎಂದು ಕೇಳಿದರು. ಅದಕ್ಕೆ ಬಾಲಕನು ನನಗೆ ಇಲ್ಲಿಯವರೆಗೂ ಆಯಾಯಾ ದೇವಾಲಯದ ಹರಿಯೇ ಸಹಾಯಕನು ಎಂದನು. ಇದರಿಂದ ಅಲ್ಲಿಯ ಜನರೆಲ್ಲ ಆಶ್ಚರ್ಯಗೊಂಡು ಅವನನ್ನು ಅಭಿನಂದಿಸಿದರು. ತಂದೆಯು ದೇವರನ್ನು ಪ್ರಾರ್ಥಿಸಿ ಮಗನನ್ನು ಪಾಜಕ ಕ್ಷೇತ್ರದಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಬಂದರು. ಸರಸ್ವತಿಯಿಂದಲೂ ವಂದಿತನಾದ ಅವನಿಗೆ ಒಳ್ಳೆ ಮುಹೂರ್ತದಲ್ಲಿ ಅಕ್ಷರಾಭ್ಯಾಸ ಮಾಡಿಸಿದರು. ಅವರು ಮಾರನೆದಿನ ಹಿಂದಿನ ದಿನದ ಅಕ್ಷರಗಳನ್ನೇ ಆವೃತ್ತಿಗಾಗಿ ಪುನಃ ಬರೆಸಲು ವಾಸುದೇವನು ತನ್ನ ಪ್ರತಿಭೆಯಿಂದ 'ಅಪ್ಪ! ನಿನ್ನೆಯ ಅಕ್ಷರಗಳನ್ನೇ ಮತ್ತೆ ಏಕೆ ಬರೆಯುತ್ತೀರಿ' ಎಂದು ಕೇಳಿದನು. ಅದರಿಂದ ತಂದೆಗೆ ಬಹಳ ಆನಂದವಾಯಿತು.

ಒಂದಾನೊಂದು ದಿನ ವಾಸುದೇವನು ತಾಯಿಯೊಡನೆ ನೇಯಂಪಳ್ಳಿಗೆ ಹೋದನು. ಅಲ್ಲಿ ಪುರಾಣ ಹೇಳುತ್ತಿದ್ದ ಶಿವಭಟ್ಟನೆಂಬ ಬ್ರಾಹ್ಮಣನನ್ನು ಕಂಡು 'ಎಲೈ ಪೌರಾಣಿಕರೇ! ನೀವು ಹೇಳುತ್ತಿರುವ ಅರ್ಥವು ಸರಿಯಲ್ಲ' ಎಂದನು. ಆಗ ಅಲ್ಲಿ ನೆರೆದಿದ್ದ ಜನರು 'ನೀನೇ ಸರಿಯಾದ ಅರ್ಥವನ್ನು ಹೇಳೆ'ಂದರು. ಕೂಡಲೆ ವಾಸುದೇವನು ಸರಿಯಾದ ಅರ್ಥವನ್ನು ಸುರಿದನು. ಅದರಿಂದ ಜನರೂ,

Rarest Archive

ದೇವತೆಗಳೂ ಆನಂದಗೊಂಡರು. ವಾಸುದೇವನು ತಾಯಿಯೊಡನೆ ಮನೆಗೆ ಹೋಗಿ ಅಲ್ಲಿ ನಡೆದ ಸಮಾಚಾರವನ್ನು ತಂದೆಗೆ ತಿಳಿಸಿದನು. ತಂದೆಯು ಮಗನ ಪಾಂಡಿತ್ಯದಿಂದ ಆಶ್ಚರ್ಯಗೊಂಡು ಅನಂತಾಸನನನ್ನು ನೆನೆದರು. ಒಂದು ದಿನ ತಂದೆಯು ಪುರಾಣವನ್ನು ಹೇಳುತ್ತ 'ಲಿಕುಚ'ವೆಂಬ ಪದದ ಅರ್ಥವನ್ನು ಹೇಳದೆ ಮುಂದೆ ಹೇಳಲಾರಂಭಿಸಿದರು. ಆಗ ಅದನ್ನು ಕೇಳುತ್ತಿದ್ದ ವಾಸು ದೇವನು 'ಅಪ್ಪ! ಲಿಕುಚ ಪದದ ಅರ್ಥವನ್ನು ಏಕೆ ಹೇಳಲಿಲ್ಲ?' ಎಂದು ಮೆಲ್ಲಗೆ ಕೇಳಿದನು. ಹೀಗೆ ಮಗನು ಕೇಳಿದರೂ ತಂದೆಯು ಆ ಲಿಕುಚ ಎಂಬ ಶಬ್ದದ ಅರ್ಥವನ್ನು ಹೇಳಲಿಲ್ಲ. ನೆರೆದಿದ್ದ ಜನರೆಲ್ಲ ಅದರ ಅರ್ಥವನ್ನು ತಿಳಿಯಲು ಕುತೂಹಲಗೊಂಡರು. ಆಗ ವಾಸುದೇವನು ತಾನೇ ಅದರ ಅರ್ಥ ವನ್ನು ಹೇಳಿದನು. (ಲಿಕುಚ=ಹೆಬ್ಬಲಸು. ತುಳು ಭಾಷೆಯಲ್ಲಿ ಪೆಜಕಾಯಿ) ಜನರು ಆಶ್ಚರ್ಯದಿಂದ ಅವರನ್ನು ಸನ್ಮಾನಿಸಿದರು. ಹೀಗೆ ಹಲವು ಅದ್ಭುತ ಚರಿತ್ರೆಗಳಿಂದ ಜನರಿಗೆ ಕುತೂಹಲವನ್ನುಂಟುಮಾಡುತ್ತಿರುವ ವಾಸುದೇವನಿಗೆ ತಂದೆಯು ಎಂಟನೆಯ ವಯಸ್ಸಿನಲ್ಲಿ ಉಪನಯನ ಮಾಡಿದರು. ಇದರಿಂದ ವೇದಾಭಿಮಾನಿಗಳಾದ ಲಕ್ಷ್ಮೀ ಮೊದಲಾದ ದೇವತಾಸ್ತ್ರೀಯರು ಆನಂದ ಗೊಂಡರು. ತಂದೆಯು 'ಮಗನಿಗೆ ಆಚಾರವಂತನಾಗಿ ಅಗ್ನಿಕಾರ್ಯ ಮಾಡು. ಗುರುಗಳನ್ನು ಸೇವಿಸು. ವೇದಾಧ್ಯಯನ ಮಾಡು.' ಎಂದು ಉಪದೇಶ ಮಾಡಿದರು. ದೇವತೆಗಳು ಮೂರು ಲೋಕದ ಗುರುವಾದ ವಾಸುದೇವನಿಗೆ ತಂದೆಯು ಮಾಡಿದ ಈ ಉಪದೇಶವನ್ನು ಕೇಳಿ ನಕ್ಕರು.

ಒಂದಾನೊಂದು ದಿನ ಒಬ್ಬ ದೈತ್ಯನು ಘೋರ ಸರ್ಪರೂಪವನ್ನು ತಾಳಿ ವಾಸುದೇವನನ್ನು ಕಚ್ಚಿದನು. ಕೂಡಲೆ ವಾಸುದೇವನು ತನ್ನ ಕಾಲಿನ ಬೆರಳಿನಿಂದ ಸರ್ಪವನ್ನು ಅಮುಕಿದಾಗ ಅಸುರನು ಸತ್ತನು. ಅನಂತರ ಶಂಕರಾದಿ ದೇವತೆಗಳಿಂದ ವಂದಿತನಾದ ವಾಸುದೇವನು ತೋಟಂತಿಲ್ಲಾಯ ಗುರುವಿಗೆ ವಂದಿಸಿ ಅವರಲ್ಲಿ ವೇದ ಮೊದಲಾದ ವಿದ್ಯೆಗಳನ್ನು ಕಲಿಯಲು ತೊಡಗಿದನು. ತಾನು ಸರ್ವಜ್ಞನಾದರೂ ಸಾಮಾನ್ಯ ಬಾಲಕರಂತೆ ನಟಿಸುತ್ತ ವಿದ್ಯಾಭ್ಯಾಸ ಮಾಡುತ್ತಿದ್ದನು. ಅಧ್ಯಯನವು ಮುಗಿದೊಡನೆ ಸ್ನೇಹಿತರೊಡನೆ ಆಡುತ್ತ ಹಾರುವುದು, ಈಜುವುದು ಮೊದಲಾದ ಆಟಗಳಲ್ಲಿ ಅವರನ್ನು ಗೆಲ್ಲುತ್ತಿದ್ದನು. ಹೀಗೆ ಯಾವಾಗಲೂ ಆಡುತ್ತಿದ್ದು ಓದುತ್ತಿರಲಿಲ್ಲ. ಊಟದ ನೆಪದಿಂದ

Rarest Archiver

ಮನೆಗೆ ಹೋದವನು ಬೇಗನೆ ಓದಲು ಬರುತ್ತಿರಲಿಲ್ಲ. ಇದರಿಂದ ಉಪಾಧ್ಯಾಯರು ಸಿಟ್ಟಾದರು. ಹೀಗೆ ಒಂದುದಿನ ಉಪಾಧ್ಯಾಯರು ಪಾಠವನ್ನು ಹೇಳಿಕೊಡುತ್ತಿರಲು ಇವನು ಬೇರೆ ಏನನ್ನೋ ಆಲೋಚಿಸುತ್ತಿದ್ದನು. ಆಗ ಅತ್ಯಂತ ಕೋಪಗೊಂಡ ಗುರುಗಳು 'ಎಲೈ ಮೂರ್ಖ! ನೀನು ಸಹಾಧ್ಯಾಯಿಗಳೊಡನೆ ಏಕೆ ಸರಿಯಾಗಿ ಓದುವುದಿಲ್ಲ.' ಎಂದು ಕೇಳಿದರು. ವಾಸುದೇವನು 'ನೀವು ಹೇಳಿಕೊಟ್ಟಿದ್ದನ್ನು ಪುನಃ ಪುನಃ ಆವೃತ್ತಿಮಾಡುವುದು ನನಗೆ ರುಚಿಸುವುದಿಲ್ಲ' ಎಂದನು. ಆಗ ಗುರುಗಳು 'ಹಾಗಾದರೆ ನೀನು ಮುಂದಿನ ಯಾವುದಾದರೂ ಒಂದು ವೇದಭಾಗವನ್ನು ಹೇಳು' ಎಂದರು. ವಾಸುದೇವನು ಸ್ವಲ್ಪವೂ ತಪ್ಪದೆ ಹೇಳಿಕೊಡದಿರುವ ವೇದಭಾಗವನ್ನು ಹೇಳಿದನು. ಆಗ ಗುರುಗಳು ಮಾತ್ರವಲ್ಲದೆ ದೇವತೆಗಳೂ ಆಶ್ಚರ್ಯಗೊಂಡರು. ಒಂದು ದಿನ ಈ ವಾಸುದೇವನು ನಿರ್ಜನ ಕಾಡಿನಲ್ಲಿ ತನ್ನ ಸ್ನೇಹಿತನಾದ ಗುರುಗಳ ಮಗನ ಹುಟ್ಟಿದ ದಿನದಿಂದಿರುವ ಸಹಿಸಲಾಗದ ತಲೆನೋವನ್ನು ಕಿವಿಯಲ್ಲಿ ಗಾಳಿಯನ್ನು ಊದಿ ವಾಸಿಮಾಡಿದನು. ಗುರುಗಳಿಗೆ ಐತರೇಯೋಪನಿಷತ್ತಿನ ಸಾರವನ್ನರುಹಿ ವಿಷ್ಣುವಿನಲ್ಲಿ ಭಕ್ತಿಯನ್ನು ಹುಟ್ಟಿಸಿದನು. ಅದೇ ಗುರುದಕ್ಷಿಣೆಯಾಯಿತು. ಇವನನ್ನು ದೇವತೆಗಳು 'ದುಷ್ಟರನ್ನು ಶಿಕ್ಷಿಸಿ ಶ್ರೀಮನ್ನಾರಾಯಣನ ಗುಣಗಳನ್ನು ಸ್ಪಷ್ಟಪಡಿಸು' ಎಂದು ಬೇಡಿಕೊಳ್ಳಲು ಅದರಂತೆ ವಾಸುದೇವನು ಸಜ್ಜನರಿಗೆ ಜ್ಞಾನೋಪದೇಶಮಾಡಲು ಗುರುಗಳ ಆಜ್ಞೆಯನ್ನು ಪಡೆದು ಗುರುಕುಲದಿಂದ ಹೊರಟನು.

Rarest Archiver

ಶ್ರೀಗುರುಭ್ಯೋ ನಮಃ

## ತೃತೀಯಸರ್ಗ

*ಅಥ ಕದಾಚನ ಸುಂದರನಂದನ-
ಸ್ಮಿತಮುಖೇಂದುದೃಶಾಂ ದಯಿತೌ ನೃಣಾಮ್ ।
ಮಹ (ಮಿ) ಮತೋ ನಿಜಬಂಧುಮುದೇ ಮುದಾ
ಪ್ರಯಯತುಃ ಸ್ವಜನೈಃ ಸಹ ದಂಪತೀ ॥ ೧ ॥

ಅ :—ಅಥ ಕದಾಚನ ಸುಂದರನಂದನಸ್ಮಿತಮುಖೇಂದುದೃಶಾಂ ನೃಣಾಂ ದಯಿತೌ ದಂಪತೀ ನಿಜಬಂಧುಮುದೇ ಸ್ವಜನೈಃ ಸಹ ಮಹಂ ಅತಃ (ಇತಃ) ಮುದಾ ಪ್ರಯಯತುಃ.

ಅ :—ಅಥ=ಕೆಲವು ವರ್ಷಗಳ ತರುವಾಯ, ಕದಾಚನ=ಒಂದಾನೊಂದು ದಿನ, ಸುಂದರ=ಚೆನ್ನಾಗಿರುವ, ನಂದನ=ಮಗನ, ಸ್ಮಿತ=ಮುಗುಳುನಗೆಯ, ಮುಖ=ಮುಖವೆಂಬ, ಇಂದು=ಚಂದ್ರನನ್ನು, ದೃಶಾಂ=ನೋಡುತ್ತಿರುವ, ನೃಣಾಂ=ಜನರಿಗೆ, ದಯಿತೌ=ಇಷ್ಟರಾದ, ದಂಪತೀ=ಆ ಮಧ್ಯಗೇಹಭಟ್ಟರು ಮತ್ತು ಅವರ ಹೆಂಡತಿಯು, ನಿಜ=ತಮ್ಮ, ಬಂಧು=ನಡುವೈಂ ಎಂಬ ಮನೆಯ ಬಂಧುಗಳ, ಮುದೇ—ಸಂತೋಷಕ್ಕಾಗಿ, ಸ್ವಜನೈಃ ಸಹ=ತಮ್ಮ ಜನರೊಡನೆ, ಮಹಂ=ಉತ್ಸವವನ್ನು ಕುರಿತು, (ಇತಃ)=ಈ ತಮ್ಮ ಮನೆಯಿಂದ, ಮುದಾ=ಸಂತೋಷದಿಂದ, ಪ್ರಯಯತುಃ=ಹೊರಟರು.

ತಾ :—ವಾಸುದೇವನ ಸುಂದರ ಮುಗುಳ್ನಗೆಯ ಮುಖವನ್ನು ನೋಡುತಿದ್ದ ಜನರು ಇಂತಹ ಮಗನನ್ನು ಪಡೆದ ತಂದೆ ತಾಯಿಗಳು ಧನ್ಯರೆಂದು ಆ ಮಧ್ಯಗೇಹ ಭಟ್ಟರನ್ನೂ, ಅವರ ಧರ್ಮಪತ್ನಿಯನ್ನೂ ಪ್ರೀತಿಸುತ್ತಿದ್ದರು. ಅಂತಹ ದಂಪತಿಗಳು ಬಳಿಕ ಒಂದಾನೊಂದು ದಿನ ನಡುವೈಂ

*ದ್ರುತವಿಲಂಬಿತಮಾಹ ನಭೌ ಭರೌ ಎಂಬಂತೆ ಈ ಸರ್ಗದಲ್ಲಿ ಪದ್ಯಗಳು ದ್ರುತವಿಲಂಬಿತವೃತ್ತದಲ್ಲಿವೆ.

Rarest Archiver

ಎಂಬ ಮನೆಯ ಬಂಧುಗಳ ಕರೆಯನ್ನು ಮನ್ನಿಸಿ ಸಂತೋಷದಿಂದ ತಮ್ಮ ಜನರೊಡನೆ ಉತ್ಸವಕ್ಕಾಗಿ ಮನೆಯಿಂದ ಹೊರಟರು.

ವ್ಯಾ. ವಿ :—ಸುಂದರಶ್ಚಾಸೌ ನಂದನಶ್ಚ, ಸ್ಮಿತಯುಕ್ತಂ ಚ ತತ್ ಮುಖಂ ಚ, ಸ್ಮಿತಮುಖಂ ಇಂದುರಿವ, ಸುಂದರನಂದನಸ್ಯ ಸ್ಮಿತಮುಖೇಂದುಃ ಸುಂದರ....ಮುಖೇಂದುಂ. ಪಶ್ಯಂತೀತಿ = ಸುಂದರ....ದೃಶಃ, ತೇಷಾಮ್, ನಿಜಾಶ್ಚತೇ ಬಂಧವಶ್ಚ, ನಿಜಬಂಧೂನಾಂ ಮುತ್ = ನಿಜಬಂಧುಮುತ್, ತಸ್ಯೈ. ಸ್ವೇ ಚ ತೇ ಜನಾಶ್ಚ = ಸ್ವಜನಾಃ, ತೈಃ. ಜಾಯಾ ಚ ಪತಿಶ್ಚ = ದಂಪತೀ. (ಜಾಯಾಪತೀ) ಎಂಬಲ್ಲಿ–ಜಾಯಾ ಶಬ್ದಕ್ಕೆ ದಂಭಾವವು ಹೇಳಲ್ಪಟ್ಟಿದೆ. ಪ್ರಯಯತುಃ–ಯಾ ಧಾತು ಲಿಟ್, ಪರ. ಪ್ರ. ದ್ವಿವಚನ. ಪ್ರ. ಉಪಸರ್ಗ. ಪ್ರ+ಯಯೌ, ಯಯತುಃ, ಯಯುಃ. ಯಯಿಥ ಯಯಾಥ. ಯಯಥುಃ, ಯಯ. ಯಯೌ, ಯಯಿವ, ಯಯಿಮ.

ಸ್ವಜನತಾಪಗಮಾಗಮಸಂಗಮ-
ಪ್ರತಿಸಭಾಜಿತಪೂರ್ವಕಸಂಭ್ರಮೇ ।
ಅವಿದುಷೀ ಜನನೀತಿ ಸ ಬಾಲಕಃ
ಶರಣತೋ ರಣತೋ ನಿರಗಾನ್ನೃಭಿಃ ॥ ೨ ॥

ಅ :—ಸಃ ಬಾಲಕಃ ನೃಭಿಃ ರಣತಃ ಶರಣತಃ ಸ್ವಜನತಾಪಗಮಾಗಮ-ಸಂಗಮಪ್ರತಿಭಾಜಿತಪೂರ್ವಕಸಂಭ್ರಮೇ ಜನನೀ ಅವಿದುಷೀ ಇತಿ ನಿರಗಾತ್.

ಅ :—ಸಃ = ಆ, ಬಾಲಕಃ = ಹುಡುಗನಾದ ವಾಸುದೇವನು, ನೃಭಿಃ = ಜನರಿಂದ, ರಣತಃ = ಶಬ್ದ ಮಾಡುತ್ತಿರುವ, ಶರಣತಃ = ಮನೆಯಿಂದ, ಸ್ವಜನತಾ = ತನ್ನ ಬಂಧುಜನಗಳ ಸಮೂಹದ, ಅಪಗಮ = ಹೊರಡುವಿಕೆ, ಆಗಮ = ಬರುವಿಕೆ, ಸಂಗಮ = ಒಟ್ಟು ಸೇರುವಿಕೆ, ಪ್ರತಿಸಭಾಜಿತ = ಪರಸ್ಪರ ಸನ್ಮಾನ ಇವುಗಳೇ, ಪೂರ್ವಕ = ಮೊದಲಾಗುಳ್ಳ, ಸಂಭ್ರಮೇ = ಸಡಗರದಲ್ಲಿ, ಜನನೀ = ತಾಯಿಯು, ಅವಿದುಷೀ = ತಿಳಿಯತಕ್ಕವಳಲ್ಲ, ಇತಿ = ಹೀಗೆಂದು ತಿಳಿದು, ನಿರಗಾತ್ = ಹೊರಟನು.

ತಾ :—ಆ ಉತ್ಸವದಲ್ಲಿ ವಾಸುದೇವನು 'ಬಂಧುಬಳಗದವರ, ಹೋಗೋಣ, ಬರೋಣ, ಸೇರೋಣ, ಸನ್ಮಾನ ಮೊದಲಾದುವುಗಳ ಗದ್ದಲ

Rarest Archiver

ದಲ್ಲಿ ತಾಯಿಯೂ ತಾನು ಹೊರಟು ಹೋಗುವುದನ್ನು ತಿಳಿಯಲಾರಳು' ಎಂದಾಲೋಚಿಸಿದನು. ಅದರಿಂದ ಅವನು ಗದ್ದಲವಾಗುತ್ತಿರುವ ಮನೆಯಿಂದ ಒಬ್ಬನೇ ಹೊರ ಹೊರಟನು.

ವ್ಯಾ. ವಿ :—ಸ್ವಸ್ಯ ಜನತಾ=ಸ್ವಜನತಾ, ಅಪಗಮಶ್ಚ ಆಗಮಶ್ಚ ಸಂಗಮಶ್ಚ ಪ್ರತಿಸಭಾಜಿತಂ ಚ=ಅಪಗಮಾಗಮಸಂಗಮಪ್ರತಿಸಭಾಜಿತಾನಿ. ಸ್ವಜನತಾಯಾಃ ಅಪಗಮಾಗಮಸಂಗಮಪ್ರತಿಸಭಾಜಿತಾನಿ, ಸ್ವಜನ.... ಸಭಾಜಿತಾನಿ ಪೂರ್ವಾಣಿ ಯಸ್ಯ ಸಃ, ಸ್ವಜನತಾ.... ಪೂರ್ವಕಶ್ಚಾಸೌ ಸಂಭ್ರಮಶ್ಚ=ಸ್ವಜನತಾಪ.....ಸಂಭ್ರಮಃ, ತಸ್ಮಿನ್. ವಿದುಷೀ ನ ಭವತೀತಿ=ಅವಿದುಷೀ. ನಿರಗಾತ್—ಇಣ್ ಗತೌ, ಎರಡನೆ ಗಣ, ಸಕ. ಲುಙ್, ಪರ. ಪ್ರ. ಏ. ನಿರ್ ಉಪಸರ್ಗ. ನಿರಗಾತ್, ನಿರಗಾತಾಂ, ನಿರಗುಃ. ನಿರಗಾಃ, ನಿರಗಾತಂ, ನಿರಗಾತ. ನಿರಗಾಂ, ನಿರಗಾಂ, ನಿರಗಾವ, ನಿರಗಾಮ.

ಕ್ವ ನು ಯಿಯಾಸಸಿ ತಾತ ನ ಸಾಂಪ್ರತಂ
ಸ್ವಜನಸಂತ್ಯಜನಂ ತವ ಸಾಂಪ್ರತಮ್ ।
ಇತಿ ವಿಭುಃ ಪಥಿಕೈರುದಿತೋ ವ್ರಜನ್
ಸ್ಮಿತಮನಾಕುಲಮುತ್ತರಮಾತನೋತ್ ॥ ೩ ॥

ಅ:—ತಾತ! ಕ್ವ ನು ಯಿಯಾಸಸಿ ? ಸಾಂಪ್ರತಂ ತವ ಸ್ವಜನಸಂತ್ಯಜನಂ ಸಾಂಪ್ರತಂ ನ. ಇತಿ ಪಥಿಕೈಃ ಉದಿತಃ ವ್ರಜನ್ ವಿಭುಃ ಅನಾಕುಲಂ ಸ್ಮಿತಂ ಉತ್ತರಂ ಆತನೋತ್.

ಅ :—ತಾತ=ಮಗು ! ಕ್ವ ನು=ಎಲ್ಲಿಗೆ, ಯಿಯಾಸಸಿ=ಹೋಗಲಿಚ್ಛಿಸುವಿ ? ಸಾಂಪ್ರತಂ=ಈಗ, ತವ=ನಿನಗೆ, ಸ್ವಜನ=ಬಂಧುಗಳ, ಸಂತ್ಯಜನಂ=ಬಿಡುವಿಕೆಯು, ಸಾಂಪ್ರತಂ=ಉಚಿತವು, ನ=ಅಲ್ಲ. ಇತಿ=ಹೀಗೆಂದು, ಪಥಿಕೈಃ=ಹಾದಿಹೋಕರಿಂದ, ಉದಿತಃ=ಹೇಳಲ್ಪಟ್ಟ (ಕೇಳಲ್ಪಟ್ಟ) ವ್ರಜನ್=ಹೋಗುತ್ತಿರುವ, ವಿಭುಃ=ಶಕ್ತನಾದ ವಾಸುದೇವನು, ಅನಾಕುಲಂ=ಗಾಬರಿಯಿಲ್ಲದ, ಸ್ಮಿತಂ=ಮುಗುಳ್ನಗೆಯನ್ನು, ಉತ್ತರಂ=ಪ್ರತ್ಯುತ್ತರವನ್ನಾಗಿ, ಆತನೋತ್=ಮಾಡಿದನು.

ತಾ :—ಆಗ ದಾರಿಗರು 'ಮಗು ನೀನು ಎಲ್ಲಿಗೆ ಹೋಗಲಿಚ್ಛಿಸುತ್ತೀ ?

Rarest Archiver

ಈಗ ಬಾಲಕನಾದ ನೀನು ಬಂಧುಗಳನ್ನು ತ್ಯಜಿಸಿ ಒಬ್ಬಂಟಿಗನಾಗಿ ತೆರಳುವುದು ಉಚಿತವಲ್ಲ' ಎಂದು ಹೇಳಿದರು. ವಾಸುದೇವನು ಅವರ ಪ್ರಶ್ನೆಗೆ ನಿರ್ಭಯ ವಾದ ಮುಗುಳ್ನಗೆಯನ್ನು ಉತ್ತರವನ್ನಾಗಿ ಮಾಡಿ ಮುಂದೆ ಹೋದನು.

ವ್ಯಾ. ವಿ. :—ಸ್ವಜನಸ್ಯ ಸಂತ್ಯಜನಂ=ಸ್ವಜನಸಂತ್ಯಜನಮ್. ಆಕುಲಂ ನ ಭವತೀತಿ=ಅನಾಕುಲಂ, ತತ್. ಯಿಯಾಸಸಿ-ಯಾಧಾತು, ಸನ್ನಂತ, ಲಟ್, ಪರ. ಮ. ಏ. ಯಿಯಾಸತಿ, ಯಿಯಾಸತಃ, ಯಿಯಾಸಂತಿ, ಯಿಯಾಸಸಿ, ಯಿಯಾಸಥಃ, ಯಿಯಾಸಥ, ಯಿಯಾಸಾಮಿ, ಯಿಯಾಸಾವಃ, ಯಿಯಾಸಾಮಃ, ಆತನೋತ್-ತನು ವಿಸ್ತಾರೇ, ಎಂಟನೆ ಗಣ, ಸಕ. ಲಙ್, ಪರ. ಪ್ರ. ಏ. ಆ ಉಪಸರ್ಗ. ಆ+ಅತನೋತ್, ಅತನುತಾಂ, ಅತನ್ವನ್. ಅತನೋಃ, ಅತನುತಂ, ಅತನುತ. ಅತನವಂ, ಅತನುವ ಅತನ್ವ, ಅತನುಮ ಅತನ್ಮ.

ತ್ವರಿತಮೇತ್ಯ ಸ ಕಾನನದೇವತಾ-
ಸದನಮತ್ರ ನನಾಮ ರಮಾಪತಿಮ್ ।
ಅಪಿ ತತಃ ಪ್ರಗತೋ ಲಘು ನಾರಿಕೇ-
ಲ್ಯುಪಪದಾಂತರಸದ್ಮಗತಂ ಚ ತಮ್ ॥ ೪ ॥

ಅ :—ಸಃ ತ್ವರಿತಂ ಕಾನನದೇವತಾಸದನಂ ಏತ್ಯ ಅತ್ರ ರಮಾಪತಿಂ ನನಾಮ. ತತಃ ಅಪಿ ಲಘು ಪ್ರಗತಃ ನಾರಿಕೇಲ್ಯುಪಪದಾಂತರಸದ್ಮಗತಂ ತಂ ಚ ನನಾಮ.

ಅ :—ಸಃ=ಆ ವಾಸುದೇವನು, ತ್ವರಿತಂ=ಜಾಗ್ರತೆಯಾಗಿ, ಕಾನನ-ದೇವತಾಸದನಂ=ಕೊಡವೂರ ಕಾಡಿನಲ್ಲಿರುವ ದೇವಾಲಯವನ್ನು, ಏತ್ಯ=ಸೇರಿ, ಅತ್ರ=ಈ ದೇವಸ್ಥಾನದಲ್ಲಿರುವ, ರಮಾಪತಿಂ=ಶ್ರೀಮನ್ನಾರಾಯಣ ನನ್ನು, ನನಾಮ=ನಮಸ್ಕಾರಮಾಡಿದನು. ತತಃ ಅಪಿ=ಅಲ್ಲಿಂದಲೂ, ಲಘು =ಶೀಘ್ರವಾಗಿ, ಪ್ರಗತಃ=ಹೊರಟವನಾಗಿ, ನಾರಿಕೇಲ್ಯುಪಪದಾಂತರ=ತಾಳಿ ಕುಡೆ (ಖನ್ನಂಜೆ) ಎಂಬ ಸ್ಥಳದಲ್ಲಿರುವ, ಸದ್ಮಗತಂ=ದೇವಾಲಯದಲ್ಲಿ ನೆಲೆ ಸಿರುವ, ತಂ ಚ=ಶಿವಾಂತರ್ಗತನಾದ ನಾರಾಯಣನನ್ನೂ, ನನಾಮ= ವಂದಿಸಿದನು.

ತಾ :—ಆ ವಾಸುದೇವನು ಶೀಘ್ರವಾಗಿ ಕೊಡವೂರ ಕಾಡಿನಲ್ಲಿರುವ

Rarest Archiver

ದೇವಸ್ಥಾನವನ್ನು ಸೇರಿ ಅಲ್ಲಿರುವ ಹರಿಗೆ ವಂದಿಸಿದನು. ಅಲ್ಲಿಂದ ಮುಂದಕ್ಕೆ ಸಾಗಿ ತಾಳಿಕುಡೆ (ಬನ್ನಂಜೆ) ದೇವಾಲಯದಲ್ಲಿರುವ ಶಿವಾಂತರ್ಯಾಮಿ ಹರಿಗೂ ನಮಸ್ಕಾರ ಮಾಡಿದನು.

ವ್ಯಾ. ವಿ.:—ಕಾನನಸ್ಯ ದೇವತಾ, ಕಾನನದೇವತಾಯಾಃ ಸದನಂ=ಕಾನನದೇವತಾಸದನಂ, ತತ್. ರಮಾಯಾಃ ಪತಿಃ=ರಮಾಪತಿಃ, ತಮ್. ನಾರಿಕೇಲೀ ಉಪಪದಂ ಯಸ್ಯ ತತ್, ನಾರಿಕೇಲ್ಯುಪಪದಂ ಚ ತತ್ ಅಂತರಂ ಚ, ನಾರಿಕೇಲ್ಯುಪಪದಾಂತರೇ ಸದ್ಮ, ನಾ....ಸದ್ಮನಿ ಗತಃ=ನಾರಿಕೇ.... ಗತಃ, ತಮ್. ನನಾಮ–ನಮ ಧಾತು, ಲಿಟ್, ಪರ. ಪ್ರ. ಏ. ನನಾಮ, ನೇಮತುಃ, ನೇಮುಃ. ನೇಮಿಥ ನನಂಥ, ನೇಮಥುಃ ನೇಮ. ನನಾಮ ನನಮ, ನೇಮಿವ, ನೇಮಿಮ.

ನಲಿನನಾಭನಿಭಾಲನಸಂಮುದಾ–
ಗಮವಿಕಸ್ವರಭಾಸ್ವರಲೋಚನಃ ।
ಜನಮನೋನಯನಾಂಬುಜಭಾಸ್ಕರೋ
ರಜತಪೀಠಪುರಂ ಪ್ರಯಯಾವಸೌ ॥ ೫ ॥

ಅ :— ನಲಿನನಾಭನಿಭಾಲನಸಮ್ಮುದಾಗಮವಿಕಸ್ವರಭಾಸ್ವರಲೋಚನಃ ಜನಮನೋನಯನಾಂಬುಜಭಾಸ್ಕರಃ ಅಸೌ ರಜತಪೀಠಪುರಂ ಪ್ರಯಯೌ.

ಅ :—ನಲಿನನಾಭ=ಶ್ರೀಹರಿಯ, ನಿಭಾಲನ = ನೋಡುವುದರಿಂದ ಉಂಟಾದ, ಸಮ್ಮುದ=ಸಂತೋಷದ, ಆಗಮ=ಪ್ರಾಪ್ತಿಯಿಂದ, ವಿಕಸ್ವರ= ಅರಳಿದ, ಭಾಸ್ವರ=ಪ್ರಕಾಶಮಾನವಾದ, ಲೋಚನಃ=ಕಣ್ಣುಗಳುಳ್ಳ, ಜನ =ಜನಗಳ, ಮನಃ=ಮನಸ್ಸು, ನಯನಾಂಬುಜ=ಕಮಲಸಮಾನವಾದ ಕಣ್ಣು ಇವುಗಳಿಗೆ, ಭಾಸ್ಕರಃ=ಸೂರ್ಯನಂತೆ ಸಂತೋಷವನ್ನುಂಟುಮಾಡುವ, ಅಸೌ= ಈ ವಾಸುದೇವನು, ರಜತಪೀಠಪುರಂ=ಉಡುಪಿಗೆ, ಪ್ರಯಯೌ= ಹೋದನು.

ತಾ:—ಈ ವಾಸುದೇವನು ಅರಣ್ಯದಲ್ಲಿರುವ ಶ್ರೀಮನ್ನಾರಾಯಣನನ್ನು ನೋಡುವುದರಿಂದ ಆನಂದಗೊಂಡನು. ಮುಂದೆ ತನ್ನನ್ನು ನೋಡುತ್ತಿರುವ ಜನರ ಮನಸ್ಸು ಮತ್ತು ಕಮಲದಂತಿರುವ ಕಣ್ಣುಗಳನ್ನು ಸೂರ್ಯನಂತೆ ಸಂತೋಷಗೊಳಿಸುತ್ತ ಉಡುಪಿಗೆ ಹೋದನು.

Rarest Archiver

ವ್ಯಾ. ವಿ.:—ನಲಿನಂ ನಾಭೌ ಯಸ್ಯ ಸಃ, ನಲಿನನಾಭಸ್ಯ ನಿಭಾಲನಂ, ನಲಿ....ನಿಭಾಲನೇನ ಸಮ್ಮದಃ, ನಲಿನ....ಸಮ್ಮದಸ್ಯ ಆಗಮಃ, ನಲಿನ....ದಾಗಮೇನ ವಿಕಸ್ವರೇ ಭಾಸ್ವರೇ ಲೋಚನೇ ಯಸ್ಯ ಸಃ = ನಲಿನ....ಲೋಚನಃ. ಮನಾಂಸಿ ಚ ನಯನಾನಿ ಚ=ಮನೋನಯನಾನಿ, ಜನಾನಾಂ ಮನೋನಯನಾನಿ, ಜನ....ನಯನಾನಿ ಅಂಬುಜಾನೀವ, ಜನ....ನಾಂಬುಜಾನಾಂ ಭಾಸ್ಕರಃ=ಜನಮನೋನಯನಾಂಬುಜಭಾಸ್ಕರಃ.

ಸುಹಯಮೇಧಗಣಾತಿಶಯಾಲವೋ
ಹರಿನಮಸ್ಕೃತಯಃ ಸುಕೃತಾ ಇಮಾಃ ।
ಇತಿ ಸುರೈರಪಿ ಭೂಸುರಮಂಡಲೈಃ
ಸಮನಮತ್ಸ ಸವಿಸ್ಮಯಮೀಕ್ಷಿತಃ ॥ ೬ ॥

ಅ:—ಸುಕೃತಾಃ ಇಮಾಃ ಹರಿನಮಸ್ಕೃತಯಃ ಸುಹಯಮೇಧಗಣಾತಿಶಯಾಲವಃ ಇತಿ ಸುರೈಃ ಅಪಿ ಭೂಸುರಮಂಡಲೈಃ ಸವಿಸ್ಮಯಂ ಈಕ್ಷಿತಃ ಸಃ ಸಮನಮತ್.

ಅ:—ಸುಕೃತಾಃ=ಚೆನ್ನಾಗಿ ಸಾಷ್ಟಾಂಗವಾಗಿ ಮಾಡಲ್ಪಟ್ಟ, ಇಮಾಃ=ಈ, ಹರಿನಮಸ್ಕೃತಯಃ=ಶ್ರೀವಿಷ್ಣುವಿಗೆ ಮಾಡಿದ ನಮಸ್ಕಾರಗಳು, ಸುಹಯಮೇಧ=ಉತ್ತಮವಾದ ಅಶ್ವಮೇಧಯಾಗಗಳ, ಗಣ=ಸಮೂಹವನ್ನು, ಅತಿಶಯಾಲವಃ=ಮೀರಿದುವು. ಇತಿ=ಈ ಅಭಿಪ್ರಾಯದಿಂದ, ಸುರೈಃ=ದೇವತೆಗಳಿಂದ, ಅಪಿ=ಮತ್ತು, ಭೂಸುರಮಂಡಲೈಃ=ಬ್ರಾಹ್ಮಣರ ಸಮೂಹಗಳಿಂದ, ಸವಿಸ್ಮಯಂ=ಆಶ್ಚರ್ಯದಿಂದ ಸಹಿತವಾಗಿ, ಈಕ್ಷಿತಃ=ನೋಡಲ್ಪಟ್ಟ, ಸಃ=ಆ ವಾಸುದೇವನು, ಸಮನಮತ್=ನಮಸ್ಕಾರ ಮಾಡಿದನು.

ತಾ:—ಅಲ್ಲಿ ಆ ವಾಸುದೇವನು ಅನಂತಪದ್ಮನಾಭನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಆಗ ದೇವತೆಗಳೂ, ಅಲ್ಲಿ ನೆರೆದಿದ್ದ ಬ್ರಾಹ್ಮಣರೂ ಇವನು ಮಾಡುತ್ತಿರುವ ಒಂದೊಂದು ಶ್ರೀವಿಷ್ಣುವಿನ ಪ್ರಣಾಮಗಳು ಹತ್ತು ಅಶ್ವಮೇಧ ಯಾಗಗಳ ಅವಭೃಥಸ್ನಾನಕ್ಕೆ ಸಮವಾದುವು ಎಂದು ಆಶ್ಚರ್ಯದಿಂದ ಆ ವಾಸುದೇವನನ್ನು ನೋಡಿದರು.

Rarest Archive

ವ್ಯಾ. ವಿ :—ಶೋಭನಾಶ್ಚ ತೇ ಹಯಮೇಧಾಶ್ಚ, ಸುಹಯಮೇಧಾನಾಂ ಗಣಾಃ, ಸುಹಯಮೇಧಗಣಾನ್ ಅತಿಶಯಿತುಂ, ಶೀಲಂ ಆಸಾಂ ಅಸ್ತೀತಿ=ಸುಹಯಮೇಧಗಣಾತಿಶಯಾಲವಃ. ಹರೇಃ ನಮಸ್ಕೃತಯಃ=ಹರಿನಮಸ್ಕೃತಯಃ. ಭೂಸುರಾಣಾಂ ಮಂಡಲಾನಿ=ಭೂಸುರಮಂಡಲಾನಿ, ತೈಃ. ವಿಸ್ಮಯೇನ ಸಹಿತಂ ಯಥಾ ಭವತಿ ತಥಾ=ಸವಿಸ್ಮಯಮ್.

ನ ಹಿ ಹರಿಂ ಸತತಂ ನ ನಮತ್ಯಸೌ
ನ ಚ ನ ಪಶ್ಯತಿ ನಾಪಿ ನ ವಂದತೇ ।
ಅಪಿ ತಥೇತಿ ವಿಧಾಯ ವಿಶೇಷತಃ
ನ ನನು ಸಾಧುಜನಾನ್ ಸಮಶಿಕ್ಷಯತ್ ॥ ೭ ॥

ಅ:—ಅಸೌ ಹರಿಂ ಸತತಂ ನ ನಮತಿ (ಇತಿ) ನ ಹಿ. ನ ಪಶ್ಯತಿ (ಇತಿ) ಚ ನ. ನ ವಂದತೇ (ಇತಿ) ಅಪಿ ನ. ತಥಾ ಅಪಿ ಸಃ ಇತಿ ವಿಶೇಷತಃ ವಿಧಾಯ ಸಾಧುಜನಾನ್ ಸಮಶಿಕ್ಷಯತ್ ನನು.

ಅ:—ಅಸೌ=ಈ ವಾಸುದೇವನು, ಹರಿಂ=ವಿಷ್ಣುವನ್ನು, ಸತತಂ=ಯಾವಾಗಲೂ, ನ ನಮತಿ ಇತಿ ನ ಹಿ=ನಮಸ್ಕಾರ ಮಾಡುವುದಿಲ್ಲ ಎಂದಿಲ್ಲ. ನ ಪಶ್ಯತಿ ಇತಿ ಚ ನ=ನೋಡುವುದಿಲ್ಲವೆಂದಿಲ್ಲ. ನ ವಂದತೇ ಇತಿ ಅಪಿ ನ=ಸ್ತೋತ್ರ ಮಾಡುವುದಿಲ್ಲವೆಂದೂ ಇಲ್ಲ. ತಥಾ ಅಪಿ=ಹಾಗಾದರೂ, ಸಃ=ಆ ವಾಸುದೇವನು, ಇತಿ=ಈ ರೀತಿ, ವಿಶೇಷತಃ=ಹೆಚ್ಚಾಗಿ, ವಿಧಾಯ=ನಮಸ್ಕಾರಾದಿಗಳನ್ನು ಮಾಡಿ, ಸಾಧುಜನಾನ್=ಸಜ್ಜನರನ್ನು, ಸಮಶಿಕ್ಷಯತ್ ನನು=ಶಿಕ್ಷಿಸಿದನಷ್ಟೆ! (ನಮಸ್ಕಾರಗಳನ್ನು ಮಾಡಲು ಉಪದೇಶಿಸಿದನು.)

ತಾ :—ಹರಿಯ ಪರಮ ಭಕ್ತನಾದ ಈ ವಾಸುದೇವನು ಯಾವಾಗಲೂ ಆ ಹರಿಯನ್ನು ನಮಸ್ಕರಿಸುವವನೂ, ನೋಡುವವನೂ, ಸ್ತೋತ್ರ ಮಾಡುವವನೂ ಆಗಿದ್ದಾನೆ. ಆದರೂ 'ಸಜ್ಜನರೇ! ನೀವೂ ಹೀಗೆ ನನ್ನಂತೆ ಹರಿಗೆ ನಮಸ್ಕಾರಾದಿಗಳನ್ನು ಮಾಡಿರಿ' ಎಂದು ಉಪದೇಶ ಮಾಡುವುದಕ್ಕಾಗಿಯೇ ಅವರ ಮುಂದೆ ಹೀಗೆ ನಮಸ್ಕಾರ ಮಾಡಿದನು.

ವ್ಯಾ.ವಿ :—ಸಾಧವಶ್ಚ ತೇ ಜನಾಶ್ಚ=ಸಾಧುಜನಾಃ, ತಾನ್.

Rarest Archives

ವಂದತೇ ವದಿ ಅಭಿವಾದನಸ್ತುತ್ಯೋಃ, ಒಂದನೆ ಗಣ, ಸಕ. ಲಟ್, ಆತ್ಮ. ಪ್ರ. ಏ. ವಂದತೇ, ವಂದೇತೇ, ವಂದಂತೇ. ವಂದಸೇ, ವಂದೇಥೇ, ವಂದಧ್ವೇ. ವಂದೇ, ವಂದಾವಹೇ, ವಂದಾಮಹೇ. ಅಶಿಕ್ಷಯತ್=ಶಿಕ್ಷ ವಿದ್ಯೋಪಾದಾನೇ, ಒಂದನೆ ಗಣ, ಸಕ. ಣಿಜನ್ತ, ಲಙ್, ಪರ. ಪ್ರ. ಏ. ಅಶಿಕ್ಷಯತ್, ಅಶಿಕ್ಷಯತಾಂ ಅಶಿಕ್ಷಯನ್. ಅಶಿಕ್ಷಯಃ, ಅಶಿಕ್ಷಯತಂ, ಅಶಿಕ್ಷಯತ. ಅಶಿಕ್ಷಯಂ, ಅಶಿಕ್ಷಯಾವ, ಅಶಿಕ್ಷಯಾಮ.

ಅನವಲೋಕ್ಯ ಸುತಂ ಸುತವತ್ಸಲೋ
ಮೃಗಯತೇ ಸ್ಮ ಮಹೀಸುರಪುಂಗವಃ
ಮುಹುರಪೃಚ್ಛದಮುಷ್ಯ ಗತಿಂ ನರಾನ್
ಪಥಿ ಪಥಿ ಪ್ರಗತೋಽನುಪದಂ ದ್ರುತಮ್ ||೮||

ಅ:—ಅನುಪದಂ ದ್ರುತಂ ಪ್ರಗತಃ ಸುತವತ್ಸಲಃ ಮಹೀಸುರಪುಂಗವಃ ಸುತಂ ಅನವಲೋಕ್ಯ ಮೃಗಯತೇ ಸ್ಮ. ಅಮುಷ್ಯ ಗತಿಂ ನರಾನ್ ಪಥಿ ಪಥಿ ಮುಹುಃ ಅಪೃಚ್ಛತ್.

ಅ :—ಅನುಪದಂ=ಕೂಡಲೆ ಅಥವಾ ಹೆಜ್ಜೆಯನ್ನನುಸರಿಸಿ, ದ್ರುತಂ=ಬೇಗನೇ, ಪ್ರಗತಃ=ಹುಡುಕಿಕೊಂಡು ಹೋದ, ಸುತವತ್ಸಲಃ=ಮಗನಲ್ಲಿ ಪ್ರೀತಿಯುಳ್ಳ, ಮಹೀಸುರಪುಂಗವಃ=ಬ್ರಾಹ್ಮಣ ಶ್ರೇಷ್ಠರಾದ ಮಧ್ಯಗೇಹ ಭಟ್ಟರು, ಸುತಂ=ಮಗನನ್ನು, ಅನವಲೋಕ್ಯ=ಕಾಣದೆ, ಮೃಗಯತೇ ಸ್ಮ=ಹುಡುಕಿದರು. ಅಮುಷ್ಯ=ಈ ವಾಸುದೇವನ, ಗತಿಂ=ಹೋಗುವಿಕೆಯನ್ನು ಕುರಿತು, ನರಾನ್=ಮನುಷ್ಯರನ್ನು, ಪಥಿ ಪಥಿ=ಪ್ರತಿಯೊಂದು ದಾರಿಯಲ್ಲಿಯೂ, ಮುಹುಃ=ಬಾರಿಬಾರಿಗೂ, ಅಪೃಚ್ಛತ್=ಕೇಳಿದರು.

ತಾ :—ಆ ಬ್ರಾಹ್ಮಣೋತ್ತಮರಾದ ಮಧ್ಯಗೇಹಭಟ್ಟರು ಉತ್ಸವದ ನಡುವೆ ಮಗನನ್ನು ಕಾಣದೆ ಅವನ ಹೆಜ್ಜೆಯ ಗುರುತಿನ ಮೇಲೆ ಬೇಗನೆ ಹುಡುಕಿಕೊಂಡು ಹೋದರು. ಆದರೆ ಅವನು ಸಿಕ್ಕಲಿಲ್ಲ. ದಾರಿಯಲ್ಲಿ ಹೋಗುತ್ತಿರುವ ಜನರನ್ನು 'ನಮ್ಮ ಮಗುವು ಇಲ್ಲಿ ಹೋಗುತ್ತಿರುವುದನ್ನು ನೋಡಿದ್ದೀರಾ ?' ಎಂದು ಪ್ರತಿಯೊಂದು ದಾರಿಯಲ್ಲಿಯೂ ದಾರಿಗರನ್ನು ಪ್ರಶ್ನಿಸಿದರು.

Rarest Archives

ವ್ಯಾ.ವಿ :—ಸುತೇ ವತ್ಸಲಃ=ಸುತವತ್ಸಲಃ. ಮಹೀಸುರೇಷು ಪುಂಗವಃ=ಮಹೀಸುರಪುಂಗವಃ. ಪದಮನುಸ್ಮೃತ್ಯ=ಅನುಪದಮ್. ಮೃಗಯತೇ–ಮೃಗ ಅನ್ವೇಷಣೇ, ಹತ್ತನೆ ಗಣ. ಸಕ. ಲಟ್, ಆತ್ಮ. ಪ್ರ. ಏ. ಮೃಗಯತೇ, ಮೃಗಯೇತೇ, ಮೃಗಯಂತೇ. ಮೃಗಯಸೇ, ಮೃಗಯೇಥೇ, ಮೃಗಯಧ್ವೇ. ಮೃಗಯೇ, ಮೃಗಯಾವಹೇ, ಮೃಗಯಾಮಹೇ.

ಜನಸದಾಗತಿಸೂಚಿತವರ್ತ್ಮನಾ
ಪ್ರತಿಪದಂ ವ್ರಜತಾ ಪರಯಾ ತೃಷಾ ।
ದ್ವಿಜಮಹಾಮಧುಪೇನ ಮನೋಹರಂ
ಸ್ಮಿತಮಲಾಭಿ ಸುತಾನನವಾರಿಜಮ್ ॥ ೯ ॥

ಅ:—ಪ್ರತಿಪದಂ ಜನಸದಾಗತಿಸೂಚಿತವರ್ತ್ಮನಾ ಪರಯಾ ತೃಷಾ ವ್ರಜತಾ ದ್ವಿಜಮಹಾಮಧುಪೇನ ಮನೋಹರಂ ಸ್ಮಿತಂ ಸುತಾನನವಾರಿಜಂ ಅಲಾಭಿ.

ಅ :—ಪ್ರತಿಪದಂ=ಪ್ರತಿ ಹೆಜ್ಜೆಯಲ್ಲಿಯೂ, ಜನ=ಎದುರಾಗಿ ಬರುತ್ತಿರುವ ಮನುಷ್ಯರ, ಮನುಷ್ಯನೆಂಬ, ಸದಾಗತಿ=ಎಡೆಬಿಡದ ಆಗಮನದಿಂದ, ಗಾಳಿಯಿಂದ, ಸೂಚಿತವರ್ತ್ಮನಾ=ಸೂಚಿಸಲ್ಪಟ್ಟ ದಾರಿಯಿಂದ, ಪರಯಾ=ಹೆಚ್ಚಾದ, ತೃಷಾ=ಆಶೆಯಿಂದ, ಬಾಯಾರಿಕೆಯಿಂದ, ವ್ರಜತಾ=ಹೋಗುತ್ತಿರುವ, ದ್ವಿಜ=ಮಧ್ಯಗೇಹಭಟ್ಟರೆಂಬ, ಮಹಾಮಧುಪೇನ=ದೊಡ್ಡ ಜೇನುನೊಣದಿಂದ, ಮನೋಹರಂ=ಸುಂದರವಾದ, ಸ್ಮಿತಂ=ಮುಗುಳ್ನಗೆಯ, ಅರಳಿದ, ಸುತಾನನ=ಮಗನ ಮುಖವೆಂಬ, ವಾರಿಜಂ=ತಾವರೆ ಹೂವು, ಅಲಾಭಿ=ಹೊಂದಲ್ಪಟ್ಟಿತು.

ತಾ:—ಆ ಮಧ್ಯಗೇಹಭಟ್ಟರು ದಾರಿಗರು ತಿಳಿಸಿದ ದಾರಿಯಿಂದ ಅತ್ಯಾತುರದಿಂದ ಹೋಗುತ್ತ ಮಗನ ನಗುಮುಖವನ್ನು ಕಂಡರು. ಅದು ಕಮಲದ ಸುವಾಸನೆಯ ಗಾಳಿ ಸೂಚಿಸಿದ ದಾರಿಯಿಂದ ಅತ್ಯಾಶೆಯಿಂದ ಹೋಗುತ್ತಿರುವ ಜೇನುನೊಣವು, ಅರಳಿದ ಸುಂದರ ತಾವರೆ ಹೂವನ್ನು ಕಂಡಂತಾಯಿತು.

ವ್ಯಾ.ವಿ :—ಜನಃ ಏವ ಸದಾಗತಿಃ। ಜನಸದಾಗತಿನಾ ಸೂಚಿತಂ।

Rarest Archive

ಜನಸದಾಗತಿಸೂಚಿತಂ ಚ ತತ್ ವರ್ತ್ಮ ಚ=ಜನ....ವರ್ತ್ಮ, ತೇನ ಪದಂ ಪದಂ ಪ್ರತಿ=ಪ್ರತಿಪದವ್. ಮಹಾಂಶ್ಚಾಸೌ ಮಧುಪಶ್ಚ, ದ್ವಿಜಃ ಏವ ಮಹಾಮಧುಪಃ=ದ್ವಿಜಮಹಾಮಧುಪಃ, ತೇನ. ಸುತಸ್ಯ ಆನನಂ, ಸುತಾನನಮೇವ ವಾರಿಜಂ = ಸುತಾನನವಾರಿಜವ್. ಅಲಾಭಿ-ಲಭಧಾತು, ಲುಜ್, ಪ್ರ. ಏ. ಅಲಾಭಿ, ಅಲಾಭಿಷಾತಾಂ, ಅಲಾಭಿಷತ. ಅಲಾಭಿಷ್ಠಾಃ, ಅಲಾಭಿಷಾಥಾಂ, ಅಲಾಭಿಢ್ವಂ, ಅಲಾಭಿಷಿ, ಅಲಾಭಿಷ್ವಹಿ, ಅಲಾಭಿಷ್ಮಹಿ. ರೂಪಕಾಲಂಕಾರ.

ವಿರಹದೂನತಯೋದ್ಗಮನೋನ್ಮುಖಂ
ನ್ಯರುಣದಶ್ರು ಪುರಾ ಸ ಯಯೋರ್ದೃಶೋಃ ।
ಅಥ ತಯೋಃ ಪ್ರಮದೋತ್ಥಿತಮಪ್ಯದಃ
ಪ್ರತಿನಿರುಧ್ಯ ಗಿರಂ ಗುರುರಬ್ರವೀತ್ ॥ ೧೦ ॥

ಅ :—ಸಃ ಗುರುಃ ಪುರಾ ವಿರಹದೂನತಯಾ ಉದ್ಗಮನೋನ್ಮುಖಂ ಯಯೋಃ ದೃಶೋಃ ಅಶ್ರು ನ್ಯರುಣತ್ ಅಥ ತಯೋಃ ಪ್ರಮದೋತ್ಥಿತಂ ಅದಃ ಅಪಿ ಪ್ರತಿನಿರುಧ್ಯ ಗಿರಂ ಅಬ್ರವೀತ್.

ಅ :—ಸಃ=ಆ, ಗುರುಃ=ತಂದೆಯು, ಪುರಾ=ಮೊದಲು, ವಿರಹದೂನತಯಾ = ವಿಯೋಗದಿಂದುಂಟಾದ ದುಃಖದಿಂದ, ಉದ್ಗಮನ= ಉಕ್ಕುವುದಕ್ಕೆ, ಉನ್ಮುಖಂ=ಉದ್ಯುಕ್ತವಾದ, ಯಯೋಃ ದೃಶೋಃ=ಯಾವ ಕಣ್ಣುಗಳ, ಅಶ್ರು=ಕಣ್ಣೀರನ್ನು, ನ್ಯರುಣತ್=ತಡೆದರೊ, ಅಥ=ತರುವಾಯ, ತಯೋಃ=ಆ ಕಣ್ಣುಗಳ, ಪ್ರಮದೋತ್ಥಿತಂ = ಸಂತೋಷದಿಂದುಂಟಾದ, ಅದಃ ಅಪಿ=ಈ ಕಣ್ಣೀರನ್ನೂ, ಪ್ರತಿನಿರುಧ್ಯ=ತಡೆದು, ಗಿರಂ =ಮಾತನ್ನು, ಅಬ್ರವೀತ್=ಹೇಳಿದರು.

ತಾ :—ಆ ಮಧ್ಯಗೇಹಭಟ್ಟರು ಮಗನ ಅಗಲಿಕೆಯಿಂದ ಅತ್ಯಂತ ದುಃಖಗೊಂಡು ಅಳುತ್ತ ಅಮಂಗಳದ ಭಯದಿಂದ ಮೊದಲು ಕಣ್ಣೀರನ್ನು ತಡೆದುಕೊಂಡಿದ್ದರು. ಮಗನನ್ನು ನೋಡಿದ ತರುವಾಯವೂ ಉಂಟಾದ ಆನಂದಬಾಷ್ಪವನ್ನು ಅದೇ ಅಮಂಗಳದ ಭಯದಿಂದ ತಡೆದುಕೊಂಡು

Rarest Archiver

ಇಂತೆಂದರು. ಎಂದರೆ ಮೊದಲು ಅವರಿಗೆ ದುಃಖದಿಂದಲೂ, ಅನಂತರ ಸಂತೋಷದಿಂದಲೂ ಕಣ್ಣೀರು ಸುರಿಯಿತು.

ವ್ಯಾ. ವಿ :—ವಿರಹೇಣ ದೂನಃ. ವಿರಹದೂನಸ್ಯ ಭಾವಃ=ವಿರಹ ದೂನತಾ, ತಯಾ. ಉದ್ಗಮನಾಯ ಉನ್ಮುಖಂ=ಉದ್ಗಮನೋನ್ಮುಖಂ. ಪ್ರಮದೇನ ಉತ್ಥಿತಂ = ಪ್ರಮದೋತ್ಥಿತಮ್. ನ್ಯರುಣತ್=ರುಧಿರ್ ಆವರಣೇ, ಏಳನೆ ಗಣ, ಸಕ. ಲಜ್, ಪರ. ಪ್ರ. ಏ. ನಿ ಉಪಸರ್ಗ, ಅರುಣತ್, ಅರುಂಧಾಂ, ಅರುಂಧನ್, ಅರುಣತ್ ಅರುಣಃ, ಅರುಂಧಂ, ಅರುಂಧ. ಅರುಣಧಂ, ಅರುಂಧ್ವ, ಅರುಂಧ್ಮ. ಅಬ್ರವೀತ್–ಬ್ರೂಞ್‌ಧಾತು, ಲಜ್, ಪರ. ಪ್ರ. ಏ. ಅಬ್ರವೀತ್, ಅಬ್ರೂತಾಂ, ಅಬ್ರುವನ್. ಅಬ್ರವೀಃ, ಅಬ್ರೂತಂ, ಅಬ್ರೂತ. ಅಬ್ರವಂ, ಅಬ್ರೂವ, ಅಬ್ರೂಮ.

ಅಯಿ ಸುತೇದಮುದಾಹರ ತತ್ತ್ವತೋ
ನನು ಸಮಾಗತವಾನಸಿ ಸಾಂಪ್ರತಮ್।
ಸ್ವಜನತಾರಹಿತಸ್ಯ ತು ಕೋಽತ್ರ ತೇ
ಸಹಚರೋಽರ್ಭಕ ದೀರ್ಘತಮೇ ಪಥಿ ॥ ೧೧ ॥

ಅ :—ಅಯಿ ಸುತ ! ಸಾಂಪ್ರತಂ ಸಮಾಗತವಾನ್ ಅಸಿ ನನು. ಅರ್ಭಕ ! ಸ್ವಜನತಾರಹಿತಸ್ಯ ತೇ ತು ಅತ್ರ ದೀರ್ಘತಮೇ ಪಥಿ ಸಹಚರಃ ಕಃ ? ಇದಂ ತತ್ತ್ವತಃ ಉದಾಹರ.

ಅ :—ಅಯಿ ಸುತ=ಎಲೈ ಮಗುವೆ! ಸಾಂಪ್ರತಂ=ಈಗ, ಸಮಾಗತವಾನ್ ಅಸಿ ನನು=ಇಷ್ಟೊಂದುದೂರ ಬಂದಿದ್ದೀಯಷ್ಟೆ. ಅರ್ಭಕ !=ಮಗು ! ಸ್ವಜನತಾರಹಿತಸ್ಯ=ಬಂಧುಜನರ ಸಮೂಹವಿಲ್ಲದ, ತೇ ತು=ನಿನಗಾದರೋ, ಅತ್ರ=ಇಲ್ಲಿ, ದೀರ್ಘತಮೇ=ಅತ್ಯಂತ ದೂರವಾದ. ಪಥಿ=ದಾರಿಯಲ್ಲಿ, ಸಹಚರಃ=ಸಂಗಡಿಗನು, ಕಃ=ಯಾವನು? ಇದಂ=ಇದನ್ನು, ತತ್ತ್ವತಃ=ನಿಜವಾಗಿ, ಉದಾಹರ=ಹೇಳು.

ತಾ :—ಮಗು ನೀನು ಇಷ್ಟು ದೂರ ಬಂದಿರುವಿ. ನಿನ್ನೊಡನೆ ಬಂಧುಗಳು ಯಾರೂ ಬರಲಿಲ್ಲ. ಇಷ್ಟು ದೂರ ಬರುವಾಗ ನಿನಗೆ ದಾರಿಯಲ್ಲಿ ಯಾರು ಜೊತೆಯಲ್ಲಿ ಸಹಾಯಕರಾಗಿದ್ದರು ? ನಿಜವಾಗಿ ಹೇಳು.

Rarest Archives

ವ್ಯಾ.ವಿ :—ಸ್ವಜನತಯಾ ರಹಿತಃ=ಸ್ವಜನತಾರಹಿತಃ, ತಸ್ಯ. ಸಹ ಚರತೀತಿ=ಸಹಚರಃ. ಅತಿಶಯೇನ ದೀರ್ಘಃ=ದೀರ್ಘತಮಃ, ತಸ್ಮಿನ್. ಉದಾಹರ–ಹೃಞ್ ಹರಣೇ, ಒಂದನೆ ಗಣ, ಸಕ. ಲೋಟ್, ಪರ. ಮ. ಏ. ಉತ್ ಆ ಉಪಸರ್ಗಗಳು. ಉದ್+ಆ+ಹರತು ಹರತಾತ್, ಹರತಾಂ, ಹರಂತು. ಹರ ಹರತಾತ್, ಹರತಂ, ಹರತ. ಹರಾಣಿ, ಹರಾವ, ಹರಾಮ.

ಜನಕವಾಚಮಿಮಾಮವಧಾರಯನ್
ಕಲಮುದಾಹರದಂಬುರುಹೇಕ್ಷಣಃ ।
ಸ್ವಪದಮಾವ್ರಜತೋ ವ್ರಜತೋಽಪ್ಯತೋ
ನನು ಸಖಾ ಮಮ ಕಾನನಗೋ ವಿಭುಃ ॥ ೧೨ ॥

ಅ:—ಇಮಾಂ ಜನಕವಾಚಂ ಅವಧಾರಯನ್ ಅಂಬುರುಹೇಕ್ಷಣಃ ಸ್ವಪದಂ ಆವ್ರಜತಃ ಅತಃ ವ್ರಜತಃ ಅಪಿ ಮಮ ಕಾನನಗಃ ವಿಭುಃ ಸಖಾ ನನು (ಇತಿ) ಕಲಂ ಉದಾಹರತ್.

ಅ :—ಇಮಾಂ=ಈ, ಜನಕವಾಚಂ=ತಂದೆಯ ಮಾತನ್ನು, ಅವಧಾರಯನ್=ಒಮ್ಮನಸ್ಸಿನಿಂದ ಕೇಳುತ್ತಿದ್ದ, ಅಂಬುರುಹೇಕ್ಷಣಃ=ಕಮಲದಂತಹ ಕಣ್ಣುಗಳುಳ್ಳ ಬಾಲಕನು, ಸ್ವಪದಂ=ತನ್ನ ಸ್ಥಾನವಾದ ಅರಣ್ಯದ ದೇವಾಲಯಕ್ಕೆ, ಆವ್ರಜತಃ=ಬರುತ್ತಿರುವ, ಅತಃ=ಇಲ್ಲಿಂದ, ವ್ರಜತಃ ಅಪಿ=ಹೋಗುತ್ತಿರುವವನೂ ಆದ, ಮಮ=ನನಗೆ, ಕಾನನಗಃ=ಕಾಡಿನಲ್ಲಿರುವ, ವಿಭುಃ=ಪ್ರಭುವಾದ ಶ್ರೀನಾರಾಯಣನೇ, ಸಖಾ ನನು=ಸ್ನೇಹಿತನಲ್ಲೆ, (ಇತಿ=ಹೀಗೆಂದು) ಕಲಂ=ತೊದಲುನುಡಿಯಿಂದ, ಉದಾಹರತ್ ಹೇಳಿದನು.

ತಾ :—ಪ್ರಸನ್ನ ಮುಖದ ಸುಂದರನಾದ ಆ ವಾಸುದೇವನು ತಂದೆಯ ಮಾತನ್ನು ಕಿವಿಗೊಟ್ಟು ಆಲಿಸಿದನು. 'ಅಪ್ಪ ! ನಾನು ಕಾಡಿನಲ್ಲಿರುವ ಶ್ರೀ ನಾರಾಯಣನ ಗುಡಿಗೂ, ಅಲ್ಲಿಂದ ತಾಳಿಕುಡೆ (ಬನ್ನಂಜೆ) ಗುಡಿಗೂ ಹೋಗುವಾಗ ಆ ಸ್ವಾಮಿಯೇ ದಾರಿಯಲ್ಲಿ ಸ್ನೇಹಿತನಾಗಿದ್ದನು. ಎಂದನು.

ವ್ಯಾ.ವಿ :—ಜನಕಸ್ಯ ವಾಕ್=ಜನಕವಾಕ್, ತಾಮ್. ಅಂಬುರುಹೇ ಇವ ಈಕ್ಷಣೇ ಯಸ್ಯ ಸಃ=ಅಂಬುರುಹೇಕ್ಷಣಃ. ಸ್ವಸ್ಯ ಪದಂ=ಸ್ವಪದಂ, ತತ್. ಕಾನನಂ ಗಚ್ಛತೀತಿ=ಕಾನನಗಃ. ಉದ್+ಆ+ಅಹರತ್, ಹೃಧಾತು ಪ. ಲಙ್.

Rarest Archives

ತದಿತರಾಯತನಾತ್ತು ಯದಾಗಮಂ
ಕೃತರತಿಃ (ನತಿಃ) ಖಲು ತತ್ರ ಹರಿಃ ಸಖಾ ।
ಅಹಮಿಹಾಪಿ ಮಹೇಂದ್ರದಿಗಾಲಯಂ
ಪ್ರಣತವಾನುತ ಯಾವದಧೀಶ್ವರಮ್ ॥ ೧೩ ॥

ಅ :—ಅಹಂ ತು ತದಿತರಾಯತನಾತ್ ಯತ್ ಆಗಮಂ ತತ್ರ ಕೃತರತಿಃ (ಕೃತನತಿಃ) ಹರಿಃ ಇಹ ಅಪಿ ಯಾವತ್ ಮಹೇಂದ್ರದಿಗಾಲಯಂ ಅಧೀಶ್ವರಂ ಉತ ಪ್ರಣತವಾನ್ (ತಾವತ್) ಸಖಾ ಖಲು.

ಅ :—ಅಹಂ ತು=ನಾನು, ತದಿತರ=ಅರಣ್ಯ ದೇವಾಲಯಕ್ಕಿಂತ ಬೇರೆಯಾದ, ಆಯತನಾತ್=ತಾಳೇಕುಡಿ ಗುಡಿಯಿಂದ, ಯತ್=ಯಾವ ಉಡುಪಿಯನ್ನು ಕುರಿತು, ಆಗಮಂ=ಬಂದೆನೊ, ತತ್ರ=ಆ ಕಾಡಿನ ದೇವಾಲಯದಲ್ಲಿ, ಕೃತರತಿಃ (ನತಿಃ)=ಮಾಡಲ್ಪಟ್ಟ ಕ್ರೀಡೆಯುಳ್ಳ, (ಮಾಡಲ್ಪಟ್ಟ ನಮಸ್ಕಾರವುಳ್ಳ) ಹರಿಃ=ಶ್ರೀ ನಾರಾಯಣನು, ಇಹ ಅಪಿ=ಈ ಉಡುಪಿಯಲ್ಲಿಯೂ, ಯಾವತ್=ಯಾವಾಗ, ಮಹೇಂದ್ರದಿಕ್=ಪೂರ್ವ ದಿಕ್ಕಿನಲ್ಲಿ, ಆಲಯಂ=ಮನೆಯುಳ್ಳ, ಅಧೀಶ್ವರಂ ಉತ=ಹರಿಯನ್ನೂ, ಪ್ರಣತವಾನ್=ನಮಸ್ಕಾರ ಮಾಡಿದೆನೋ, (ತಾವತ್=ಅಷ್ಟರವರೆಗೆ) ಸಖಾ ಖಲು=ಸ್ನೇಹಿತನಾಗಿದ್ದನು.

ತಾ :—ಅಪ್ಪ ! ನಾನು ಅರಣ್ಯ ದೇವಾಲಯದಲ್ಲಿ ಹರಿಗೆ ನಮಸ್ಕಾರ ಮಾಡಿ ಅಲ್ಲಿಂದ ತಾಳೆಕುಡೆ ದೇವಾಲಯಕ್ಕೆ ಬಂದು ಅಲ್ಲಿಂದ ಉಡುಪಿಗೆ ಬಂದೆನು. ಇಲ್ಲಿ ಪೂರ್ವದಿಕ್ಕಿನ ಗುಡಿಯಲ್ಲಿರುವ ಹರಿಯನ್ನು ನಮಸ್ಕಾರ ಮಾಡಿದೆನು. ಇಲ್ಲಿಯವರೆಗೂ ನನಗೆ ಆ ಅರಣ್ಯದೇವಾಲಯದ ಹರಿಯೇ ಸ್ನೇಹಿತನಾಗಿದ್ದನು.

ವ್ಯಾ.ವಿ :—ತಸ್ಮಾತ್ ಇತರತ್, ತದಿತರಚ್ಚ ತತ್ ಆಯತನಂ ಚ=ತದಿತರಾಯತನಂ. ತಸ್ಮಾತ್. ಕೃತಾ ನತಿಃ ಯಸ್ಯ ಸಃ=ಕೃತನತಿಃ. ಮಹೇಂದ್ರಸ್ಯ ದಿಕ್, ಮಹೇಂದ್ರದಿಶಿ ಆಲಯಃ ಯಸ್ಯ ಸಃ=ಮಹೇಂದ್ರದಿಗಾಲಯಃ, ತಮ್. ಆಗಮಂ=ಗಮ್ಲ್ ಗತೌ. ಒಂದನೆ ಗಣ, ಸಕ. ಲುಙ್, ಪರ. ಉ. ಏ. ಆ ಉಪಸರ್ಗ. ಆಗಮತ್, ಆಗಮತಾಂ, ಆಗಮನ್. ಆಗಮಃ, ಆಗಮತಂ, ಆಗಮತ. ಆಗಮಂ, ಆಗಮಾವ, ಆಗಮಾಮ.

Rarest Archiver

ಅಪಿ ತತೋಽಹಮಮುಪೇತ್ಯ ಸಹಾಮುನಾ
ಭಗವತೇಽತ್ರ ಸತೇ ಪ್ರಣತಿಂ ವ್ಯಧಾಮ್ ।
ಇತಿ ನಿಗದ್ಯ ವಿಭಾತಿ ಶಿಶುಃ ಸ್ಮವಿ-
ಸ್ಮಿತಸಭಾಜನಚೀರ್ಣಸಭಾಜನಃ ॥ ೧೪ ॥

ತಾ :—ಅಹಂ ತತಃ ಅಪಿ ಅಮುನಾ ಸಹ ಉಪೇತ್ಯ ಅತ್ರ ಸತೇ ಭಗವತೇ ಪ್ರಣತಿಂ ವ್ಯಧಾಮ್. ಇತಿ ನಿಗದ್ಯ ವಿಸ್ಮಿತಸಭಾಜನಚೀರ್ಣಸಭಾಜನಃ ಶಿಶುಃ ವಿಭಾತಿ ಸ್ಮ.

ಅ :—'ಅಹಂ=ನಾನು, ತತಃ ಅಪಿ=ಪೂರ್ವದಿಕ್ಕಿನ ದೇವಾಲಯದಿಂದಲೂ, ಅಮುನಾ ಸಹ=ಈ ಹರಿಯೊಡನೆ, ಉಪೇತ್ಯ=ಬಂದು, ಅತ್ರ =ಈ ಪಶ್ಚಿಮಾಲಯದಲ್ಲಿ, ಸತೇ=ಇರುವ, ಭಗವತೇ = ಪೂಜ್ಯನಾದ ಅನಂತಾಸನಸ್ವಾಮಿಗೆ, ಪ್ರಣತಿಂ=ನಮಸ್ಕಾರವನ್ನು, ವ್ಯಧಾಂ=ಮಾಡಿದೆನು,' ಇತಿ=ಹೀಗೆ, ನಿಗದ್ಯ=ಹೇಳಿ, ವಿಸ್ಮಿತ=ಆಶ್ಚರ್ಯಗೊಂಡ, ಸಭಾಜನ =ಸಭೆಯಲ್ಲಿರುವ ಜನರಿಂದ, ಚೀರ್ಣ=ಸಂಪಾದಿಸಲ್ಪಟ್ಟ (ಮಾಡಲ್ಪಟ್ಟ), ಸಭಾಜನಃ=ಸನ್ಮಾನವುಳ್ಳ ಶಿಶುಃ=ಮಗುವು, ವಿಭಾತಿ ಸ್ಮ=ಪ್ರಕಾಶಗೊಂಡನು.

ತಾ :—ಆ ಬಾಲಕನು 'ನಾನು ಈ ಉಡುಪಿಯಲ್ಲಿಯೂ ಪೂರ್ವಾಲಯದ ಹರಿಯೊಡನೆ ಪಶ್ಚಿಮಾಲಯಕ್ಕೆ ಬಂದೆನು. ಇಲ್ಲಿರುವ ಅನಂತಾಸನ ದೇವರನ್ನು ವಂದಿಸಿದೆನು' ಎಂದನು. ಆದರಿಂದ ಅಲ್ಲಿ ಸಭೆಯಲ್ಲಿರುವ ಜನರೆಲ್ಲರೂ ಆಶ್ಚರ್ಯಗೊಂಡು ಅವನಿಗೆ ಸನ್ಮಾನ ಮಾಡಿದರು. ಈ ರೀತಿ ಆ ಅದ್ಭುತ ಬಾಲಕನು ವಿರಾಜಿಸಿದನು.

ವ್ಯಾ. ವಿ:—ವಿಸ್ಮಿತಾಶ್ಚ ತೇ ಸಭಾಜನಾಶ್ಚ, ವಿಸ್ಮಿತಸಭಾಜನೈಃ ಚೀರ್ಣಂ, ವಿಸ್ಮಿತಸಭಾಜನಚೀರ್ಣಂ ಸಭಾಜನಂ ಯಸ್ಯ ಸಃ=ವಿಸ್ಮಿತಸಭಾಜನಚೀರ್ಣಸಭಾಜನಃ. ವ್ಯಧಾಮ್-ಡು ಧಾಞ್ ಧಾರಣಪೋಷಣಯೋಃ, ಮೂರನೆ ಗಣ, ಸಕ. ಲುಜ್, ಪರ, ಉ. ಏ. ವಿ. ಉಪಸರ್ಗ. ಅಧಾತ್, ಅಧಾತಾಂ, ಅಧುಃ. ಅಧಾಃ, ಅಧಾತಂ. ಅಧಾತ. ಅಧಾಂ, ಅಧಾವ, ಅಧಾಮ.

ವಿರಹಿತಸ್ವಜನಂ ಚರಣಪ್ರಿಯಂ
ವಿವಿಧಭೂತಭಯಂಕರವರ್ತ್ಮನಿ ।

Rarest Archiver

ಅಯಿ ಕೃಪಾಲಯ ಪಾಲಯ ಬಾಲಕಂ
ಲಘುಶುಭಸ್ಯ ಮಮೇತ್ಯನಮದ್ದ್ವಿಜಃ || ೧೫ ||

ಅ :—ಅಯಿ ಕೃಪಾಲಯ ! ವಿರಹಿತಸ್ವಜನಂ ವಿವಿಧಭೂತಭಯಂಕರ-ವರ್ತ್ಮನಿ ಚರಣಪ್ರಿಯಂ ಲಘುಶುಭಸ್ಯ ಮಮ ಬಾಲಕಂ ಪಾಲಯ ಇತಿ ದ್ವಿಜಃ ಅನಮತ್.

ಅ :—ಅಯಿ ಕೃಪಾಲಯ=ಎಲೈ ! ದಯೆಯ ಬೀಡಾದ ಸ್ವಾಮಿಯೆ! ವಿರಹಿತಸ್ವಜನಂ=ಬಿಡಲ್ಪಟ್ಟ ಬಂಧು ಜನರುಳ್ಳ, ವಿವಿಧ=ನಾನಾ ವಿಧವಾದ, ಭೂತ = ಪ್ರಾಣಿಗಳಿಂದ, ಭಯಂಕರ = ಹೆದರಿಕೆಯನ್ನುಂಟುಮಾಡುವ, ವರ್ತ್ಮನಿ=ದಾರಿಯಲ್ಲಿ, ಚರಣಪ್ರಿಯಂ=ಸಂಚಾರ ಮಾಡುವುದರಲ್ಲಿ ಪ್ರೀತಿಯುಳ್ಳ, ಲಘುಶುಭಸ್ಯ=ಸ್ವಲ್ಪಮಂಗಳವುಳ್ಳ (ಭಾಗ್ಯವುಳ್ಳ), ಮಮ=ನನ್ನ, ಬಾಲಕಂ=ಮಗುವನ್ನು, ಪಾಲಯ=ಕಾಪಾಡು. ಇತಿ=ಹೀಗೆಂದು, ದ್ವಿಜಃ ಮಧ್ಯಗೇಹಭಟ್ಟರು, ಅನಮತ್=ನಮಸ್ಕಾರಮಾಡಿದರು.

ತಾ :—ಅನಂತಪದ್ಮನಾಭ ! ನೀನು ದಯಾಳುವು. ನಾನು ಅಲ್ಪ ಭಾಗ್ಯನು. ನನ್ನ ಮಗುವು ಬಂಧುಗಳನ್ನೆಲ್ಲ ಬಿಟ್ಟು ತಾನೊಬ್ಬನೆ ಅನೇಕ ಬಗೆಯ ಪ್ರಾಣಿಗಳಿಂದ ಭಯಂಕರವಾದ ದಾರಿಯಲ್ಲಿ ಸಂಚರಿಸಲು ಅಪೇಕ್ಷೆಯುಳ್ಳವನಾಗಿರುತ್ತಾನೆ. ಇಂತಹ ಮಗುವನ್ನು ಕಾಪಾಡು. ಎಂದು ಮಧ್ಯಗೇಹಭಟ್ಟರು ಅನಂತಾಸನನನ್ನು ವಂದಿಸಿದರು.

ವ್ಯಾ.ವಿ :—ವಿರಹಿತಾಃ ಸ್ವಜನಾಃ ಯಸ್ಯ ಸಃ=ವಿರಹಿತಸ್ವಜನಃ, ತಮ್. ಚರಣೇ ಪ್ರಿಯಃ=ಚರಣಪ್ರಿಯಃ, ತಮ್. ವಿವಿಧಾಶ್ಚ ತೇ ಭೂತಾಶ್ಚ, ವಿವಿಧಭೂತೈಃ ಭಯಂಕರಂ, ವಿವಿಧಭೂತಭಯಂಕರಂ ಚ ತತ್ ವರ್ತ್ಮ ಚ=ವಿವಿಧಭೂತಭಯಂಕರವರ್ತ್ಮ, ತಸ್ಮಿನ್. ಕೃಪಾಯಾಃ ಆಲಯಃ =ಕೃಪಾಲಯಃ, ತಸ್ಯ. ಸಂಬುದ್ಧಿಃ. ಲಘು ಶುಭಂ ಯಸ್ಯ ಸಃ=ಲಘು ಶುಭಃ, ತಸ್ಯ. ಪಾಲಯ–ಪಾಲ ರಕ್ಷಣೇ, ಹತ್ತನೆ ಗಣ, ಸಕ. ಲೋಟ್, ಪರ. ಮ. ಏ. ಪಾಲಯತು ಪಾಲಯತಾತ್, ಪಾಲಯತಾಂ, ಪಾಲಯಂತು. ಪಾಲಯ ಪಾಲಯತಾತ್, ಪಾಲಯತಂ, ಪಾಲಯತ. ಪಾಲಯಾನಿ, ಪಾಲಯಾವ, ಪಾಲಯಾಮ. ಅನಮತ್–ಣಮ ಪ್ರಹ್ವತ್ವೇ ಶಬ್ದೇ ಚ,

Rarest Archiver

ಒಂದನೆ ಗಣ, ಸಕ. ಲಙ್, ಪರ, ಪ್ರ. ಏ. ಅನಮತ್, ಅನಮತಾಂ, ಅನ-
ಮನ್. ಅನಮಃ, ಅನಮತಂ, ಅನಮತ. ಅನಮಂ, ಅನಮಾವ, ಅನಮಾಮ.

ತಮುಪಗೃಹ್ಯ ಸುತಂ ಸುತಪೋನಿಧಿ-
ರ್ಗೃಹಮಸೌ ಗೃಹಿಣೀಸಹಿತೋ ಯಯೌ ।
ಉದಯತೀತಿ ಹಿ ಬಾಲದಿವಾಕರೇ
ಸ್ಮಿತಮಭೂತ್ಸುಜನಾನನವಾರಿಜಮ್ ॥ ೧೬ ॥

ಅ :—ಸುತಪೋನಿಧಿಃ ಅಸೌ ತಂ ಸುತಂ ಉಪಗೃಹ್ಯ ಗೃಹಿಣೀಸಹಿತಃ ಗೃಹಂ ಯಯೌ. ಬಾಲದಿವಾಕರೇ ಇತಿ ಉದಯತಿ ಸುಜನಾನನವಾರಿಜಂ ಸ್ಮಿತಂ ಅಭೂತ್ ಹಿ.

ಅ :—ಸುತಪೋನಿಧಿಃ=ಒಳ್ಳೆಯ ತಪಸ್ಸಿಗೆ ಆಶ್ರಯರಾದ, ಅಸೌ= ಈ ಮಧ್ಯಗೇಹಭಟ್ಟರು, ತಂ=ಆ, ಸುತಂ=ಮಗನನ್ನು, ಉಪಗೃಹ್ಯ= ಕರೆದುಕೊಂಡು, ಗೃಹಿಣೀಸಹಿತಃ=ಹೆಂಡತಿಯಿಂದ ಸಹಿತರಾಗಿ, ಗೃಹಂ= ಮನೆಗೆ, ಯಯೌ=ಹೋದರು. ಬಾಲ=ಹುಡುಗನೆಂಬ, ದಿವಾಕರೇ= ಸೂರ್ಯನು, ಇತಿ=ಹೀಗೆ ಉದಯತಿ (ಸತಿ)=ಅಭಿವೃದ್ಧಿ ಹೊಂದುತ್ತಿರಲು, ಉದಯಿಸುತ್ತಿರಲು, ಸುಜನಾನನ=ಸಜ್ಜನರ ಮುಖವೆಂಬ, ವಾರಿಜಂ= ಕಮಲವು, ಸ್ಮಿತಂ=ಅರಳಿದ್ದು, ಅಭೂತ್=ಆಯಿತು.

ತಾ :—ತಪಸ್ವಿಗಳಾದ ಮಧ್ಯಗೇಹಭಟ್ಟರು ಆ ಹುಡುಗನನ್ನು ಕರೆದು ಕೊಂಡು ಹೆಂಡತಿಯೊಡನೆ ತಮ್ಮ ಮನೆಗೆ ತೆರಳಿದರು. ಈ ವಾಸುದೇವನ ಸಾಮರ್ಥ್ಯವು ಹೀಗೆ ಪ್ರಕಟಗೊಳ್ಳುತ್ತಿರಲು, ಸೂರ್ಯನು ಉದಯಿಸಲು ತಾವರೆ ಹೂವು ಅರಳುವಂತೆ ಸಜ್ಜನರ ಮುಖವು ವಿಕಾಸಗೊಂಡಿತು.

ವ್ಯಾ. ವಿ. :—ಶೋಭನಾನಿ ಚ ತಾನಿ ತಪಾಂಸಿ ಚ, ಸುತಪಸಾಂ ನಿಧಿಃ =ಸುತಪೋನಿಧಿಃ. ಗೃಹಿಣ್ಯಾ ಸಹಿತಃ=ಗೃಹಿಣೀಸಹಿತಃ. ಬಾಲ ಏವ ದಿವಾಕರಃ, ಬಾಲದಿವಾಕರಃ, ತಸ್ಮಿನ್. ಸುಜನಸ್ಯ ಆನನಂ, ಸುಜನಾನನಂ ಏವ ವಾರಿಜಮ್=ಸುಜನಾನನವಾರಿಜಮ್. ಯಯೌ-ಯಾ ಪ್ರಾಪಣೇ, ಸಕ. ಲಿಟ್, ಪರ. ಪ್ರ. ಏ. ಯಯೌ. ಯಯತುಃ, ಯಯುಃ. ಯಯಿಥ ಯಯಾಥ, ಯಯಥುಃ ಯಯ. ಯಯೌ, ಯಯಿವ, ಯಯಿಮ.

Rarest Archive

ವರವಿಮಾನಗಿರಾವಪಿ ಚಂಡಿಕಾ
ಶಿಶುಮಹೋ ಜನನೀ ತಮಲಾಲಯತ್ ।
ಅಪರಥಾ ಪರಿತುಷ್ಟಮನಾಃ ಕಥಂ
ಚಿರಮಿಹೈಷ ವಸೇದ್ವಿಸಹಾಯಕಃ || ೧೬ ||

ಅ :—ವರವಿಮಾನಗಿರೌ ಜನನೀ ಚಂಡಿಕಾ ಅಪಿ ತಂ ಶಿಶುಂ ಅಲಾಲಯತ್ ಅಹೋ. ಅಪರಥಾ ವಿಸಹಾಯಕಃ ಏಷಃ ಇಹ ಪರಿತುಷ್ಟಮನಾಃ ಕಥಂ ಚಿರಂ ವಸೇತ್.

ಅ :—ವರ = ಉತ್ತಮವಾದ, ವಿಮಾನಗಿರೌ = ಪಾಜಕಕ್ಷೇತ್ರದ ವಿಮಾನಗಿರಿಯಲ್ಲಿ, ಜನನೀ = ತಾಯಿಯಾದ, ಚಂಡಿಕಾ ಅಪಿ = ಲಕ್ಷ್ಮೀರೂಪಳಾದ ದುರ್ಗಾದೇವಿಯೂ, ತಂ = ಆ, ಶಿಶುಂ = ಮಗುವನ್ನು, ಅಲಾಲಯತ್ ಲಾಲನೆ ಮಾಡಿದಳು. ಅಹೋ = ಆಶ್ಚರ್ಯ ! ಅಪರಥಾ = ಹಾಗಿಲ್ಲದಿದ್ದರೆ, ವಿಸಹಾಯಕಃ = ಸಹಾಯಕರಿಲ್ಲದ, ಏಷಃ = ಈ ಬಾಲಕನು, ಇಹ = ಈ ಕಾಡಿನ ವಿಮಾನಗಿರಿಯಲ್ಲಿ, ಪರಿತುಷ್ಟಮನಾಃ = ಸಂತೋಷಗೊಂಡ ಮನಸ್ಸುಳ್ಳವನಾಗಿ, ಕಥಂ = ಹೇಗೆ, ಚಿರಂ = ಬಹಳ ಕಾಲ, ವಸೇತ್ = ವಾಸ ಮಾಡಿಯಾನು ?

ತಾ :—ಈ ವಾಸುದೇವನಿಗೆ ಸಹಾಯಕರು ಯಾರೂ ಇಲ್ಲದಿದ್ದರೂ ಅಲ್ಲಿ ವಿಮಾನಗಿರಿಯಲ್ಲಿ ವಾಸವಾಗಿದ್ದ ಲಕ್ಷ್ಮೀಸ್ವರೂಪಳಾದ ದುರ್ಗಾದೇವಿಯು ಲಾಲನೆ ಮಾಡುತ್ತಿದ್ದಳು. ಹಾಗಿಲ್ಲದಿದ್ದರೆ ರಕ್ಷಕನಾದ ಅನಂತಾಸನನು ಅಲ್ಲಿಲ್ಲದಿರುವುದರಿಂದ ಈ ವಾಸುದೇವನು ಆ ವಿಮಾನಗಿರಿಯಲ್ಲಿ ಬಹಳ ಕಾಲ ಹೇಗೆ ಸಂತೋಷದಿಂದ ವಾಸಮಾಡಿಕೊಂಡಿರುತ್ತಿದ್ದನು ? (ವಾಸುದೇವನು ರಾತ್ರಿ ಒಬ್ಬನೇ ಅಲ್ಲಿ ಇರುತ್ತಿದ್ದನು.)

ವ್ಯಾ. ವಿ:—ವರಶ್ಚಾಸೌ ವಿಮಾನಗಿರಿಶ್ಚ = ವರವಿಮಾನಗಿರಿಃ, ತಸ್ಮಿನ್, ಪರಿತುಷ್ಟಂ ಮನಃ ಯಸ್ಯ ಸಃ = ಪರಿತುಷ್ಟಮನಾಃ. ವಿಗತಃ ಸಹಾಯಃ ಯಸ್ಯ ಸಃ = ವಿಸಹಾಯಕಃ. ಅಲಾಲಯತ್–ಲಲ ಈಪ್ಸಾಯಾಂ, ಹತ್ತನೆ ಗಣ, ಸಕ. ಲಙ್, ಪರ. ಪ್ರ. ಏ. ಅಲಾಲಯತ್, ಅಲಾಲಯತಾಂ ಅಲಾಲಯನ್, ಅಲಾಲಯಃ ಅಲಾಲಯತಂ ಅಲಾಲಯತ, ಅಲಾಲಯಂ, ಅಲಾಲಯಾವ, ಅಲಾಲಯಾಮ. ವಸೇತ್–ವಸ ನಿವಾಸೇ

Rarest Archives

ಒಂದನೆ ಗಣ, ಸಕ. ವಿಧಿಲಿಙ್, ಪರ. ಪ್ರ. ಏ. ವಸೇತ್, ವಸೇತಾಂ, ವಸೇಯುಃ, ವಸೇಃ, ವಸೇತಂ, ವಸೇತ. ವಸೇಯಂ, ವಸೇವ, ವಸೇಮ.

ಸಕಲಶಬ್ದಮಯೀ ಚ ಸರಸ್ವತೀ
ಸತತಮಾನಮತಿ ಸ್ವಯಮೇವ ಯಮ್ ।
ದ್ವಿಜವರೋಽಥ ಕದಾಚನ ಮಾತೃಕಾಃ
ಕಿಲ ಸುತಂ ಪರಿಚಾಯಯತಿ ಸ್ಮ ತಮ್ ॥ ೧೮ ॥

ಅ :—ಅಥ ದ್ವಿಜವರಃ ಸಕಲಶಬ್ದಮಯೀ ಸರಸ್ವತೀ ಚ ಯಂ ಸ್ವಯಂ ಏವ ಸತತಂ ಆನಮತಿ, ತಂ ಸುತಂ ಮಾತೃಕಾಃ ಕದಾಚನ ಪರಿಚಾಯಯತಿ ಸ್ಮ ಕಿಲ.

ಅ:—ಅಥ=ಬಳಿಕ, ದ್ವಿಜವರಃ=ಬ್ರಾಹ್ಮಣೋತ್ತಮರಾದ ಮಧ್ಯಗೇಹಭಟ್ಟರು, ಸಕಲಶಬ್ದಮಯೀ=ಎಲ್ಲಾ ಶಬ್ದಗಳಿಗೆ ಅಭಿಮಾನಿದೇವತೆಯಾದ, ಸರಸ್ವತೀ ಚ=ಸರಸ್ವತಿಯೂ, ಯಂ=ಯಾವ ವಾಯುದೇವರ ಅವತಾರನಾದ ಈ ವಾಸುದೇವನನ್ನು, ಸ್ವಯಂ ಏವ=ತಾನಾಗಿಯೇ, ಸತತಂ =ಯಾವಾಗಲೂ, ಆನಮತಿ=ನಮಸ್ಕಾರ ಮಾಡುತ್ತಾಳೋ, ತಂ=ಆ, ಸುತಂ=ಮಗನನ್ನು ಕುರಿತು, ಮಾತೃಕಾಃ=ಅಕ್ಷರಗಳನ್ನು, ಕದಾಚನ= ಒಂದು ಮುಹೂರ್ತದಲ್ಲಿ, ಪರಿಚಾಯಯತಿ ಸ್ಮ ಕಿಲ=ಅಭ್ಯಾಸ ಮಾಡಿಸುತ್ತಿದ್ದರು.

ತಾ :—ಸರಸ್ವತೀದೇವಿಯು ಸಮಸ್ತ ಶಬ್ದಗಳಿಗೂ ಅಭಿಮಾನಿದೇವತೆಯಾಗಿರುವಳು. ಅವಳು ತಾನಾಗಿಯೇ ಮುಖ್ಯಪ್ರಾಣದೇವರ ಅವತಾರನಾದ ಆ ವಾಸುದೇವನನ್ನು ಯಾವಾಗಲೂ ನಮಿಸುವಳು. ಅಂತಹ ವಾಸುದೇವನಿಗೆ ಅಕ್ಷರಾಭ್ಯಾಸ ಮಾಡಿಸುವುದು ಅನಾವಶ್ಯಕವಾದರೂ ತಂದೆ ಮಧ್ಯಗೇಹ ಭಟ್ಟರು ಪ್ರಪಂಚದ ಎಲ್ಲಾ ಮಕ್ಕಳಂತೆ ಅವನಿಗೆ ಶುಭ ಮುಹೂರ್ತದಲ್ಲಿ ಅಕ್ಷರಾಭ್ಯಾಸ ಮಾಡಿಸಿದರು.

ವ್ಯಾ. ವಿ :—ಸಕಲಾಶ್ಚ ತೇ ಶಬ್ದಾಶ್ಚ, ಸಕಲಶಬ್ದರೂಪಾ=ಸಕಲ ಶಬ್ದಮಯೀ. ದ್ವಿಜೇಷು ವರಃ=ದ್ವಿಜವರಃ. ಪರಿಚಾಯಯತಿ-ಚಿಞ್ ಚಯನೇ, ಐದನೆ ಗಣ, ಸಕ. ಲಟ್, ಣಿಜಂತ, ಪ್ರ. ಏ. ಪರಿ ಉಪಸರ್ಗ.

Rarest Archiver

ಪರಿ+ಚಾಯಯತಿ, ಚಾಯಯತಃ, ಚಾಯಯಂತಿ. ಚಾಯಯಸಿ, ಚಾಯಯಥಃ, ಚಾಯಯಥ. ಚಾಯಯಾಮಿ, ಚಾಯಯಾವಃ, ಚಾಯಯಾಮಃ.

**ಲಿಪಿಕುಲಂ ನನು ತಾತ ಗತೇ ದಿನೇ**
**ಲಿಖಿತಮೇವ ಪುನರ್ಲಿಖಿತಂ ಕುತಃ ।**
**ಇತಿ ನಿಜಪ್ರತಿಭಾಗುಣಭಾವಿತಂ**
**ಹರಿಪದಸ್ಯ ವಚಸ್ತಮನಂದಯತ್ ॥ ೧೯ ॥**

ಅ :—ನನು ತಾತ ! ಗತೇ ದಿನೇ ಲಿಖಿತಂ ಲಿಪಿಕುಲಂ ಏವ ಪುನಃ ಕುತಃ ಲಿಖಿತಂ ? ಇತಿ ನಿಜಪ್ರತಿಭಾಗುಣಭಾವಿತಂ ಹರಿಪದಸ್ಯ ವಚಃ ತಂ ಅನಂದಯತ್.

ಅ:—ನನು ತಾತ=ಎಲೈ ತಂದೆಯೆ ! ಗತೇ ದಿನೇ=ಕಳೆದ ದಿನದಲ್ಲಿ (ನಿನ್ನೆ), ಲಿಖಿತಂ=ಬರೆಯಲ್ಪಟ್ಟ, ಲಿಪಿಕುಲಂ ಏವ=ಅಕ್ಷರಗಳ ಸಮೂಹವೇ, ಪುನಃ=ಮರಳಿ, ಕುತಃ=ಏತಕ್ಕೆ, ಲಿಖಿತಂ=ಬರೆಯಲ್ಪಟ್ಟಿತು ? ಇತಿ= ಹೀಗೆಂಬ, ನಿಜಪ್ರತಿಭಾ=ತನ್ನ ಸ್ವಾಭಾವಿಕ ಬುದ್ಧಿಯೆಂಬ, ಗುಣ=ಗುಣದಿಂದ, ಭಾವಿತಂ=ಉಂಟುಮಾಡಲ್ಪಟ್ಟ, ಹರಿಪದಸ್ಯ=ವಿಷ್ಣುವಿನ ಹೆಸರಿನವನಾದ ವಾಸುದೇವನ, ವಚಃ=ಮಾತು, ತಂ=ಆ ತಂದೆಯನ್ನು, ಅನಂದಯತ್=ಸಂತೋಷಗೊಳಿಸಿತು.

ತಾ :—ತಂದೆ ಮಧ್ಯಗೇಹಭಟ್ಟರು ಸಾಮಾನ್ಯ ಮಕ್ಕಳಿಗೆ ಬರೆದು ಹೇಳಿಕೊಡುವಂತೆ ವಾಸುದೇವನಿಗೂ ಹಿಂದಿನ ದಿನ ಬರೆದ ಅಕ್ಷರವನ್ನು ಹೇಳಿಕೊಡಲು ಮರಳಿ ಬರೆದರು. ಅದನ್ನು ನೋಡಿ ವಾಸುದೇವನು 'ಅಪ್ಪ ! ನಿನ್ನೆ ಬರೆದ ಅಕ್ಷರವನ್ನೇ ಏಕೆ ಬರೆದಿರುತ್ತೀರಿ ?' ಎಂದು ಕೇಳಿದನು. ಹೀಗೆ ಸ್ವಾಭಾವಿಕ ಬುದ್ಧಿಯಿಂದ ನಿಪುಣನಾದ ಮಗನ ಮಾತನ್ನು ಕೇಳಿ ತಂದೆಯು ಆನಂದಗೊಂಡರು.

ವ್ಯಾ.ವಿ. :—ನಿಜಾ ಚ ಸಾ ಪ್ರತಿಭಾ ಚ, ನಿಜಪ್ರತಿಭೈವ ಗುಣಃ, ನಿಜಪ್ರತಿಭಾಗುಣೇನ ಭಾವಿತಂ=ನಿಜಪ್ರತಿಭಾಗುಣಭಾವಿತಮ್. ಅನಂದಯತ್-ಟು ನದಿ ಸಮೃದ್ಧೌ, ಒಂದನೆ ಗಣ, ಸಕ. ಣಿಜನ್ತ, ಲಙ್, ಪರ. ಪ್ರ. ಏ. ಅನಂದಯತ್, ಅನಂದಯತಾಂ, ಅನಂದಯನ್. ಅನಂದಯಃ, ಅನಂದಯತಂ, ಅನಂದಯತ. ಅನಂದಯಂ, ಅನಂದಯಾವ, ಅನಂದಯಾಮ.

Rarest Archiver

ಶಿಶುರಸೌ ಪ್ರತಿಭಾಂಬುಧಿರಿತ್ಯಲಂ
ಜನಮನೋವಚನಗ್ರಹಪೀಡನಾ ।
ನ ಭವತಾದಿತಿ ತಂ ವಿಜನಸ್ಥಲೇ
ಸ್ವತನಯಂ ಸಮಶಿಕ್ಷಯದೇಷಕಃ ॥ ೨೦ ॥

ಅ :—ಏಷಕಃ ಸ್ವತನಯಂ ತಂ 'ಅಸೌ ಶಿಶುಃ ಅಲಂ ಪ್ರತಿಭಾಂಬುಧಿಃ' ಇತಿ ಜನಮನೋವಚನಗ್ರಹಪೀಡನಾ ನ ಭವತಾತ್' ಇತಿ ವಿಜನಸ್ಥಲೇ ಸಮಶಿಕ್ಷಯತ್.

ಅ :—ಏಷಕಃ = ಈ ತಂದೆಯು, ಸ್ವತನಯಂ = ತನ್ನ ಮಗನಾದ, ತಂ = ಆ ವಾಸುದೇವನನ್ನು, ಅಸೌ = ಈ, ಶಿಶುಃ = ಮಗುವು, ಅಲಂ = ಚೆನ್ನಾಗಿ, ಪ್ರತಿಭಾಂಬುಧಿಃ = ಬುದ್ಧಿಯಿಂದ ಸಮುದ್ರದಂತಿದ್ದಾನೆ. ಇತಿ = ಹೀಗೆಂದು, ಜನ = ಜನರ, ಮನಃ = ಮನಸ್ಸು, ವಚನ = ಮಾತು ಇವುಗಳೆಂಬ, ಗ್ರಹ = ಪಿಶಾಚದ, ಪೀಡನಾ = ಬಾಧೆಯು, ನ ಭವತಾತ್ = ಆಗದಿರಲಿ, ಇತಿ = ಹೀಗೆಂದು, ವಿಜನಸ್ಥಲೇ = ಜನರಿಲ್ಲದ ಸ್ಥಳದಲ್ಲಿ (ಗುಟ್ಟಿನಲ್ಲಿ), ಸಮಶಿಕ್ಷಯತ್ = ವಿದ್ಯಾಭ್ಯಾಸ ಮಾಡಿಸಿದರು.

ತಾ :—ಮಧ್ಯಗೇಹ ಭಟ್ಟರು ತಮ್ಮ ಮಗನಿಗೆ ವಿದ್ಯೆಯನ್ನು ಕಲಿಸುವಾಗ ಜನರು ಅವನ ಪ್ರತಿಭೆಯನ್ನು ಕಂಡು 'ಈ ಹುಡುಗನು ಎಷ್ಟು ಪ್ರತಿಭೆಯುಳ್ಳವನಾಗಿದ್ದಾನೆ.' ಎಂದು ಹೇಳಿಯಾರು. ಆದರಿಂದ ಏನಾದರೂ ದೃಷ್ಟಿ ದೋಷ ಬಂದು ಕೆಟ್ಟದಾದೀತೆಂದು ತಿಳಿದು ಗುಟ್ಟಿನಲ್ಲಿ ಅವನಿಗೆ ವಿದ್ಯೆಯನ್ನು ಕಲಿಸಿದರು.

ವ್ಯಾ. ವಿ. :—ಪ್ರತಿಭಯಾ ಅಂಬುಧಿಃ ಇವ = ಪ್ರತಿಭಾಂಬುಧಿಃ. ಮನಾಂಸಿ ಚ ವಚನಾನಿ ಚ, ಜನಾನಾಂ ಮನೋವಚನಾನಿ, ಜನಮನೋವಚನಾನ್ಯೇವ ಗ್ರಹಃ, ಜನ....ಗ್ರಹಸ್ಯ ಪೀಡನಾ = ಜನ....ಪೀಡನಾ. ವಿಗತಾಃ ಜನಾಃ ಯಸ್ಮಿನ್ ತತ್, ವಿಜನಂ ಚ ತತ್ ಸ್ಥಲಂ ಚ = ವಿಜನಸ್ಥಲಂ, ಭವತಾತ್–ಭೂ ಸತ್ತಾಯಾಂ, ಒಂದನೆ ಗಣ, ಅಕ. ಲೋಟ್, ಪ್ರ. ಏ. ಭವತು ಭವತಾತ್, ಭವತಾಂ, ಭವಂತು. ಭವ ಭವತಾತ್, ಭವತಂ, ಭವತ. ಭವಾನಿ, ಭವಾವ, ಭವಾಮ.

Rarest Archiver

ಮಹವತಾ ಸ್ವಜನೇನ ಸಮೀರಿತ-
ಸ್ವಜನನೀಸಹಿತೇನ ಕದಾಚನ ।
ರುಚಿರವಾಚನಯಾರ್ಚಿತವಾಕ್ಶ್ರಿಯಾ
ಪ್ರತಿಯಯೇ ಪ್ರಭುಣಾ ಘೃತವಲ್ಲ್ಯಪಿ ॥ ೨೧ ॥

ಅ :—ಕದಾಚನ ಮಹವತಾ ಸ್ವಜನೇನ ಸಮೀರಿತಸ್ವಜನನೀಸಹಿತೇನ ರುಚಿರವಾಚನಯಾ ಅರ್ಚಿತವಾಕ್ಶ್ರಿಯಾ ಪ್ರಭುಣಾ ಘೃತವಲ್ಲೀ ಅಪಿ ಪ್ರತಿಯಯೇ.

ಅ :—ಕದಾಚನ=ಒಂದಾನೊಂದು ದಿನ, ಮಹವತಾ=ಉತ್ಸವವುಳ್ಳ, ಸ್ವಜನೇನ=ಬಂಧುಜನರಿಂದ, ಸಮೀರಿತ=ಪ್ರೇರಿಸಲ್ಪಟ್ಟ, ಸ್ವಜನನೀ=ತನ್ನ ತಾಯಿಯಿಂದ, ಸಹಿತೇನ=ಕೂಡಿರುವ, ರುಚಿರವಾಚನಯಾ=ಮನೋಹರವಾಗಿ ಓದುವುದರಿಂದ, ಅರ್ಚಿತವಾಕ್ಶ್ರಿಯಾ=ಸನ್ಮಾನಿಸಲ್ಪಟ್ಟ ಮಾತಿನ ಸಂಪತ್ತುಳ್ಳ, ಪ್ರಭುಣಾ=ಸಮರ್ಥನಾದ ವಾಸುದೇವನಿಂದ, ಘೃತವಲ್ಲೀ ಅಪಿ=ನೇಯಂಪಳ್ಳಿಯು ಕೂಡ, ಪ್ರತಿಯಯೇ=ಹೋಗಲ್ಪಟ್ಟಿತು.

ತಾ :—ಒಂದಾನೊಂದು ದಿನ ನೇಯಂಪಳ್ಳಿ ಎಂಬ ಹಳ್ಳಿಯಲ್ಲಿರುವ ಬಂಧುವಿನ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಅಲ್ಲಿರುವ ವಾಸುದೇವನ ತಾಯಿಯ ಬಂಧುವು ಬರಬೇಕೆಂದು ಅವರನ್ನು ಕರೆದನು. ಆಗ ವಾಸುದೇವನು ತಾಯಿಯೊಡನೆ ಅಲ್ಲಿಗೆ ಹೋದನು. ಅಷ್ಟರಲ್ಲಿ ಆ ವಾಸುದೇವನು ಎಲ್ಲ ಪುಸ್ತಕಗಳನ್ನು ಓದುವುದರಲ್ಲಿ ಮತ್ತು ಅರ್ಥ ಹೇಳುವುದರಲ್ಲಿ ಚತುರನಾಗಿದ್ದನು. ಅದರಿಂದ ಅವನನ್ನು ಎಲ್ಲರೂ ಸನ್ಮಾನಿಸುತ್ತಿದ್ದರು.

ವ್ಯಾ. ವಿ. :—ಮಹಃ ಅಸ್ಯಾಸ್ತೀತಿ=ಮಹವಾನ್, ತೇನ. ಸ್ವಸ್ಯ ಜನನೀ, ಸಮೀರಿತಾ ಚ ಸಾ ಸ್ವಜನನೀ ಚ, ಸಮೀರಿತಸ್ವಜನನ್ಯಾ ಸಹಿತಃ=ಸಮೀರಿತಸ್ವಜನನೀಸಹಿತಃ, ತೇನ. ರುಚಿರಾ ಚ ಸಾ ವಾಚನಾ ಚ=ರುಚಿರವಾಚನಾ, ತಯಾ, ವಾಚಃ ಶ್ರೀಃ, ಅರ್ಚಿತಾ ವಾಕ್ಶ್ರೀಃ ಯಸ್ಯ ಸಃ=ಅರ್ಚಿತವಾಕ್ಶ್ರೀಃ, ತೇನ. ಯಯೇ-ಯಾ ಪ್ರಾಪಣೇ, ಕರ್ಮಣಿ ಲಿಟ್, ಆತ್ಮ, ಪ್ರ. ಏ. ಪ್ರತಿ ಉಪಸರ್ಗ. ಪ್ರತಿ+ಯಯೇ, ಯಯಾತೇ, ಯಯಿರೇ. ಯಯಿಷೇ, ಯಯಾಥೇ, ಯಯಿಧ್ವೇ. ಯಯೇ, ಯಯಿವಹೇ, ಯಯಿಮಹೇ.

Rarest Archive

ಪರಿಷದಾ ನಿತರಾಂ ಪರಿವಾರಿತಃ
ಶಿವಪದಃ ಕಿಲ ಧೌತಪಟೋದ್ಭವಃ ।
ಇಹ ಕಥಾಂ ಕಥಯನ್ ದದೃಶೇ ತತಃ
ಪೃಥುಧಿಯಾ ಪೃಥುಕಾಕೃತಿನಾಽಮುನಾ ॥ ೨೨ ॥

ಅ :—ತತಃ ಇಹ ಕಥಾಂ ಕಥಯನ್ ಪರಿಷದಾ ನಿತರಾಂ ಪರಿವಾರಿತಃ ಶಿವಪದಃ ಧೌತಪಟೋದ್ಭವಃ ಪೃಥುಧಿಯಾ ಪೃಥುಕಾಕೃತಿನಾ ಅಮುನಾ ದದೃಶೇ ಕಿಲ.

ಅ :—ತತಃ = ನೇಯಂಪಳ್ಳಿಗೆ ಹೋದ ತರುವಾಯ, ಇಹ = ಈ ನೇಯಂಪಳ್ಳಿಯಲ್ಲಿ, ಕಥಾಂ = ಪುರಾಣದ ಕಥೆಯನ್ನು, ಕಥಯನ್ = ಹೇಳುತ್ತಿರುವ, ಪರಿಷದಾ = ಸಭೆಯವರಿಂದ, ನಿತರಾಂ = ಬಹಳವಾಗಿ, ಪರಿವಾರಿತಃ = ಸುತ್ತುವರಿಯಲ್ಪಟ್ಟ, ಶಿವಪದಃ = ಶಿವನೆಂದು ಹೆಸರುಳ್ಳ, ಧೌತಪಟೋದ್ಭವ = ಮಡಿನಾಯ ವಂಶದಲ್ಲಿ ಹುಟ್ಟಿರುವ ಬ್ರಾಹ್ಮಣನು, ಪೃಥುಧಿಯಾ = ಅಧಿಕಜ್ಞಾನವುಳ್ಳ, ಪೃಥುಕಾಕೃತಿನಾ = ಬಾಲಕನ ಆಕೃತಿಯುಳ್ಳ, ಅಮುನಾ = ಈ ವಾಸುದೇವನೆಂದು ಹೆಸರುಳ್ಳ ಮುಖ್ಯ ಪ್ರಾಣದೇವರಿಂದ, ದದೃಶೇ ಕಿಲ = ನೋಡಲ್ಪಟ್ಟನು.

ತಾ :—ಆ ನೇಯಂಪಳ್ಳಿಯಲ್ಲಿ ಮಡಿನಾಯ ವಂಶದಲ್ಲಿ ಜನಿಸಿದ ಶಿವಭಟ್ಟನೆಂಬ ಬ್ರಾಹ್ಮಣನು ಪುರಾಣ ಕಥೆಯನ್ನು ಹೇಳುತ್ತಿದ್ದನು. ಸಭೆಯ ಜನರೆಲ್ಲ ಕುತೂಹಲದಿಂದ ಗುಂಪು ಗುಂಪಾಗಿ ಅವನನ್ನು ಸುತ್ತಿಕೊಂಡಿದ್ದರು. ಅತಿ ಬುದ್ಧಿಶಾಲಿಯಾದ ಈ ವಾಸುದೇವನು ಅವನನ್ನು ಕಂಡನು.

ವ್ಯಾ.ವಿ. :—ಪೃಥುಕಸ್ಯ ಆಕೃತಿಃ ಯಸ್ಯ ಸಃ = ಪೃಥುಕಾಕೃತಿಃ, ತೇನ. ದದೃಶೇ-ದೃಶಿರ್ ಪ್ರೇಕ್ಷಣೇ, ಕರ್ಮಣಿ, ಲಿಟ್, ದದೃಶೇ, ದದೃಶಾತೇ, ದದೃಶಿರೇ. ದದೃಶಿಷೇ, ದದೃಶಾಥೇ, ದದೃಶಿಧ್ವೇ. ದದೃಶೇ, ದದೃಶಿವಹೇ, ದದೃಶಿಮಹೇ.

ಇದಮುವಾಚ ವಿಚಾರವಿಚಕ್ಷಣಃ
ಶುಚಿವಚಃ ಶನಕೈಃ ಸ ಜನಾಂತರೇ ।

Rarest Archives

ಅಪರಥಾ ಕಥಿತಂ ಕಥಕ ತ್ವಯಾ
ನನು ಮತಾನ್ಮಹತಾಮಿತಿ ಸಸ್ಮಿತಮ್ || ೨೩ ||

ಅ :—ವಿಚಾರವಿಚಕ್ಷಣಃ ಸಃ ಜನಾಂತರೇ 'ಕಥಕ ! ತ್ವಯಾ ಮಹತಾಂ ಮತಾತ್ ಅಪರಥಾ ಕಥಿತಂ ನನು'. ಶುಚಿ ಇತಿ ಇದಂ ವಚಃ ಸಸ್ಮಿತಂ ಶನಕೈಃ ಉವಾಚ.

ಅ : —ವಿಚಾರವಿಚಕ್ಷಣಃ=ಪದ ಮತ್ತು ಅರ್ಥಗಳನ್ನು ವಿಮರ್ಶಿಸುವುದರಲ್ಲಿ ಕುಶಲನಾದ, ಸಃ=ಆ ವಾಸುದೇವನು, ಜನಾಂತರೇ=ಜನರ ನಡುವೆ, ಕಥಕ=ಪುರಾಣಿಕರೆ ! ತ್ವಯಾ=ನಿಮ್ಮಿಂದ, ಮಹತಾಂ=ದೊಡ್ಡವರಾದ ವ್ಯಾಸ ಶುಕಾದಿಗಳ, ಮತಾತ್=ಸಿದ್ಧಾಂತಕ್ಕಿಂತ, ಅಪರಥಾ=ಬೇರೆ ವಿಧವಾಗಿ, ಕಥಿತಂ ನನು=ಹೇಳಲ್ಪಟ್ಟಿತಷ್ಟೆ. ಶುಚಿ=ಶುದ್ಧವಾದ, ಇತಿ=ಈ ರೀತಿಯಾದ, ಇದಂ ವಚಃ=ಈ ಮಾತನ್ನು, ಸಸ್ಮಿತಂ=ಮುಗುಳ್ನಗೆಯಿಂದ ಕೂಡಿ, ಶನಕೈಃ=ಮೆಲ್ಲಗೆ, ಉವಾಚ=ಹೇಳಿದನು.

ತಾ :—ಆ ವಾಸುದೇವನು ಶಬ್ದಾರ್ಥಗಳನ್ನು ವಿಚಾರ ಮಾಡುವುದರಲ್ಲಿ ಚತುರನಾಗಿದ್ದನು. ಅವನು ಜನರೆಲ್ಲ ಕೇಳುತ್ತಿರುವಾಗಲೇ 'ಎಲೈ ಪುರಾಣಿಕರೆ ! ನೀವು ಹೇಳಿರುವುದು ಸರಿಯಲ್ಲ. ಇದು ವ್ಯಾಸ ಶುಕಾದಿಗಳ ಸಿದ್ಧಾಂತಕ್ಕೆ ವಿರುದ್ಧವಾದುದು.' ಎಂದು ಸ್ಫುಟವಾಗಿ ನಗುತ್ತ ಮೆಲ್ಲಗೆ ಹೇಳಿದನು.

ವ್ಯಾ.ವಿ. :—ವಿಚಾರೇ ವಿಚಕ್ಷಣಃ=ವಿಚಾರವಿಚಕ್ಷಣಃ. ಜನಾನಾಂ ಅಂತರಂ=ಜನಾಂತರಂ, ತಸ್ಮಿನ್.

ಅಗಣಯನ್ನ ಶಿವಂ ಜನತಾ ತದಾ
ಸವಚನೇ ವಸುದೇವಸುತಾಹ್ವಯೇ ।
ಮುಖರಮಿಚ್ಛತಿ ಕೋ ಮೃಗಧೂರ್ತಕಂ
ಪ್ರಕೃತಹುಂಕೃತಸಿಂಹಶಿಶೌ ಸತಿ || ೨೪ ||

ಅ :—ವಸುದೇವಸುತಾಹ್ವಯೇ ಸವಚನೇ ತದಾ ಜನತಾ ಶಿವಂ ನ ಅಗಣಯತ್. ಪ್ರಕೃತಹುಂಕೃತಸಿಂಹಶಿಶೌ ಸತಿ ಮುಖರಂ ಮೃಗಧೂರ್ತಕಂ ಕಃ ಇಚ್ಛತಿ.

Rarest Archive

ಅ :—ವಸುದೇವ = ವಸುದೇವನ, ಸುತ=ಮಗನಾದ ಕೃಷ್ಣನ, ಆಹ್ವಯೀ=ಹೆಸರುಳ್ಳ ವಾಸುದೇವನು, ಸವಚನೆ (ಸತಿ)=ಮಾತನಾಡುತ್ತಿರಲು, ತದಾ=ಆಗ, ಜನತಾ=ಜನರ ಗುಂಪು, ಶಿವಂ=ಶಿವನೆಂಬ ಪುರಾಣಿಕನನ್ನು, ನ ಅಗಣಯತ್=ಲೆಕ್ಕಿಸಲಿಲ್ಲ. ಪ್ರಕೃತ=ಚೆನ್ನಾಗಿ ಮಾಡಲ್ಪಟ್ಟ (ಆರಂಭಿಸಲ್ಪಟ್ಟ) ಹುಂಕೃತ=ಹುಂಕಾರವುಳ್ಳ, ಸಿಂಹಶಿಶೌ=ಸಿಂಹದ ಮರಿಯು, ಸತಿ= ಇರಲು, ಮುಖರಂ=ಸುಮ್ಮನೆ ಕೂಗುತ್ತಿರುವ, ಮೃಗಧೂರ್ತಕಂ=ನರಿಯನ್ನು, ಕಃ=ಯಾವನು, ಇಚ್ಛತಿ=ಅಪೇಕ್ಷಿಸುತ್ತಾನೆ ?

ತಾ :— ಈ ವಾಸುದೇವನು ಸ್ಫುಟವಾಗಿ ಮಾತಾಡಲು ಆರಂಭಿಸಿದ ಕೂಡಲೇ ಅಲ್ಲಿ ನೆರೆದಿದ್ದ ಜನರೆಲ್ಲ ಶಿವಪುರಾಣಿಕನ ಪುರಾಣವನ್ನು ಕೇಳುವುದನ್ನು ಬಿಟ್ಟು ಇವನ ಮಾತನ್ನೇ ಆಲಿಸಿದರು. ಅದು ಉಚಿತವೇ ಆಗಿದೆ. ಸಿಂಹದ ಮರಿಯು ಗರ್ಜಿಸುತ್ತಿರಲು, ಕೂಗುತ್ತಿರುವ ನರಿಯ ನಿಸ್ಸಾರವಾದ ಕೂಗನ್ನು ಯಾರು ಕೇಳುತ್ತಾರೆ ?

ವ್ಯಾ. ವಿ. :—ವಚನೇನ ಸಹಿತಃ=ಸವಚನಃ, ತಸ್ಮಿನ್, ವಸುದೇವಸ್ಯ ಸುತಃ, ವಸುದೇವಸುತಸ್ಯ ಆಹ್ವಯಃ ಯಸ್ಯ ಸಃ=ವಸುದೇವಸುತಾಹ್ವಯಃ, ತಸ್ಮಿನ್. ಪ್ರಕೃತಂ ಹುಂಕೃತಂ ಯೇನ ಸಃ, ಸಿಂಹಸ್ಯ ಶಿಶುಃ, ಪ್ರಕೃತಹುಂಕೃತಶ್ಚಾಸೌ ಸಿಂಹಶಿಶುಶ್ಚ=ಪ್ರಕೃತಹುಂಕೃತಸಿಂಹಶಿಶುಃ, ತಸ್ಮಿನ್. ಅಗಣಯತ್—ಗಣ ಸಂಖ್ಯಾನೇ. ಹತ್ತನೇ ಗಣ, ಸಕ. ಲಙ್, ಪರ, ಪ್ರ. ಏ. ಅಗಣಯತ್. ಅಗಣಯತಾಂ, ಅಗಣಯನ್. ಅಗಣಯಃ, ಅಗಣಯತಂ, ಅಗಣಯತ. ಆಗಣಯಂ, ಅಗಣಯಾವ, ಅಗಣಯಾಮ.

ಅಥ ಕಥಂ (ಥಾಂ) ಕಥಯೇತಿ ತದಾ ಜನೇ
ಗದಿತವತ್ಯುಚಿತಾರ್ಥಮುದಾಹರತ್ ।
ಸ ಸಮಲಾಲ್ಯತ ವಿಸ್ಮಯಿಭಿರ್ನರೈ-
ರಪಿ ಸುರೈರ್ವಿಜಯಾಂಕುರಪೂಜಕೈಃ ॥ ೨೫ ॥

ಅ :—ಅಥ ಕಥಂ (ಕಥಾಂ) ಕಥಯ ಇತಿ ಜನೇ ಗದಿತವತಿ ಉಚಿತಾರ್ಥಂ ಉದಾಹರತ್. ತದಾ ಸಃ ವಿಸ್ಮಯಿಭಿಃ ನರೈಃ ಅಪಿ ವಿಜಯಾಂಕುರಪೂಜಕೈಃ ಸುರೈಃ ಸಮಲಾಲ್ಯತ.

Rarest Archiver

ಅ :—ಅಥ=ಹಾಗಿಲ್ಲದಿದ್ದರೆ, ಕಥಂ=(ಅರ್ಥವು) ಹೇಗೆ, (ಕಥಾಂ =ಕಥೆಯನ್ನು) ಕಥಯ=ಹೇಳು. ಇತಿ=ಹೀಗೆಂದು, ಜನೇ=ಜನರು, ಗದಿತವತಿ=ಹೇಳಲು, ಉಚಿತಾರ್ಥಂ=ಯೋಗ್ಯವಾದ ಅರ್ಥವನ್ನು, ಉದಾಹರತ್=ಹೇಳಿದನು. ತದಾ=ಆಗ, ಸಃ=ಆ ವಾಸುದೇವನು, ವಿಸ್ಮಯಿಭಿಃ =ಆಶ್ಚರ್ಯವುಳ್ಳ, (ಆಶ್ಚರ್ಯಗೊಂಡ) ನರೈಃ=ಮನುಷ್ಯರಿಂದ, ಅಪಿ=ಮತ್ತು, ವಿಜಯ=ಜಯದ, ಅಂಕುರ=ಮೊಳಕೆಯನ್ನು, ಪೂಜಕೈಃ=ಪೂಜಿಸುವ, ಸುರೈಃ=ದೇವತೆಗಳಿಂದ, ಸಮುಲಾಲ್ಯತ=ಸನ್ಮಾನಿಸಲ್ಪಟ್ಟನು.

ತಾ :—ಜನರು 'ಎಲೈ ಮಗುವೆ! ಪುರಾಣಿಕರು ಹೇಳಿದ ಅರ್ಥವು ಸರಿಯಿಲ್ಲದಿದ್ದರೆ ಹೇಗೆ ಅರ್ಥವನ್ನು ಹೇಳಬೇಕು. (ಕಥೆಯನ್ನು) ನೀನೇ ಹೇಳು' ಎಂದರು. ಆಗ ವಾಸುದೇವನು ಜನರು ಮೆಚ್ಚುವ ಸರಿಯಾದ ಅರ್ಥವನ್ನು ಹೇಳಿದನು. ಅದರಿಂದ ಜನರು ಆಶ್ಚರ್ಯಗೊಂಡರು. ಅವರೂ ಮುಖ್ಯಪ್ರಾಣದೇವರ ಜಯದ ಆರಂಭದಿಂದ ಸಂತೋಷಗೊಂಡ ದೇವತೆಗಳೂ ಆ ವಾಸುದೇವನನ್ನು ಸನ್ಮಾನಿಸಿದರು.

ವ್ಯಾ. ವಿ. :—ಉಚಿತಶ್ಚಾಸೌ ಅರ್ಥಶ್ಚ=ಉಚಿತಾರ್ಥಃ, ತಮ್. ವಿಜಯಸ್ಯ ಅಂಕುರಃ, ವಿಜಯಾಂಕುರಸ್ಯ ಪೂಜಕಾಃ=ವಿಜಯಾಂಕುರಪೂಜಕಾಃ, ತೈಃ. ಕಥಯ-ಕಥ ವಾಕ್ಯಪ್ರಬಂಧೇ, ಹತ್ತನೆ ಗಣ, ಸಕ. ಲೋಟ್, ಪರ. ಮ. ಏ. ಕಥಯತು ಕಥಯತಾತ್, ಕಥಯತಾಂ, ಕಥಯಂತು. ಕಥಯ ಕಥಯತಾತ್, ಕಥಯತಂ, ಕಥಯತ. ಕಥಯಾನಿ, ಕಥಯಾವ, ಕಥಯಾಮ. ಸಮುಲಾಲ್ಯತ-ಲಲ ಈಪ್ಸಾಯಾಂ, ಹತ್ತನೆ ಗಣ, ಸಕ. ಕರ್ಮಣಿ, ಲಙ್, ಆತ್ಮ. ಪ್ರ. ಏ. ಸಮ್ ಉಪಸರ್ಗ. ಸಮ್+ಅಲಾಲ್ಯತ, ಅಲಾಲ್ಯೇತಾಂ, ಅಲಾಲ್ಯಂತ. ಅಲಾಲ್ಯಥಾಃ, ಅಲಾಲ್ಯೇಥಾಂ, ಅಲಾಲ್ಯಧ್ವಮ್. ಅಲಾಲ್ಯೇ, ಅಲಾಲ್ಯಾವಹಿ, ಅಲಾಲ್ಯಾಮಹಿ.

ಸ ಜನನೀಸಹಿತೋ ಜನಕಂ ಗೃಹೇ
ಪ್ರಗತವಾಂಸ್ತಮುದಂತಮವೇದಯತ್ ।
ನಿಗದ ತಾತ ಶಿವಃ ಕಥಕಃ ಸ ಕಿಂ
ವಿತಥಗೀರಥ ವಾಹಮಿತೀರಯನ್ ॥ ೨೬ ॥

Rarest Archives

ಅ :—ಜನನೀಸಹಿತಃ ಪ್ರಗತವಾನ್ ಸಃ ಗೃಹೇ ಜನಕಂ 'ತಾತ ! ನಿಗದ. ಕಥಕಃ ಸಃ ಶಿವಃ ವಿತಥಗೀಃ ಕಿಂ ? ಅಥ ಅಹಂ ವಾ ?' ಇತಿ ಈರಯನ್ ತಂ ಉದಂತಂ ಅವೇದಯತ್.

ಅ :—ಜನನೀ=ತಾಯಿಯಿಂದ, ಸಹಿತಃ=ಕೂಡಿದವನಾಗಿ, ಪ್ರಗತವಾನ್=ಮನೆಗೆ ಹೋದ, ಸಃ=ಆ ವಾಸುದೇವನು, ಗೃಹೇ=ಮನೆಯಲ್ಲಿ, ಜನಕಂ=ತಂದೆಯನ್ನು ಕುರಿತು, ತಾತ=ತಂದೆಯೇ ! ನಿಗದ=ಹೇಳಿರಿ. ಕಥಕಃ=ಪುರಾಣ ಹೇಳುವ, ಸಃ=ಆ, ಶಿವಃ=ಶಿವನೆಂಬುವರು, ವಿತಥಗೀಃ =ತಪ್ಪರ್ಥದ ಮಾತುಳ್ಳವರು, ಕಿಂ=ಏನು ? ಅಥ=ಅಥವಾ, ಅಹಂ ವಾ =ನಾನೋ ? ಇತಿ=ಹೀಗೆಂದು, ಈರಯನ್=ಹೇಳುತ್ತ, ತಂ=ಆ, ಉದಂತಂ=ಸಮಾಚಾರವನ್ನು, ಅವೇದಯತ್=ತಿಳಿಸಿದನು.

ತಾ :—ಆ ವಾಸುದೇವನು ಅನಂತರ ತಾಯಿಯೊಡನೆ ಮನೆಗೆ ಹೋದನು. ಅಲ್ಲಿ ತಂದೆಯನ್ನು ಕುರಿತು 'ಅಪ್ಪ ! ಆ ಶಿವಪುರಾಣಿಕರು ಹೇಳಿದುದು ತಪ್ಪೋ ? ಅಥವಾ ನಾನು ಹೇಳಿದುದು ತಪ್ಪೊ ? ನೀವೇ ಹೇಳಿರಿ' ಎಂದು ನಡೆದ ಸಮಾಚಾರವನ್ನು ತಿಳಿಸಿದನು.

ವ್ಯಾ.ವಿ. :—ಜನನ್ಯಾ ಸಹಿತಃ=ಜನನೀಸಹಿತಃ. ವಿತಥಾ ಗೀಃ ಯಸ್ಯ ಸಃ=ವಿತಥಗೀಃ. ಅವೇದಯತ್-ವಿದ ಜ್ಞಾನೇ, ಎರಡನೆ ಗಣ, ಸಕ. ಣಿಜಂತ, ಲಙ್, ಪರ. ಪ್ರ. ಏ. ಅವೇದಯತ್, ಅವೇದಯತಾಮ್. ಅವೇದಯನ್, ಅವೇದಯಃ, ಅವೇದಯತಂ, ಅವೇದಯತ. ಅವೇದಯಂ, ಅವೇದಯಾವ, ಅವೇದಯಾಮ. ನಿಗದ-ಗದ ವ್ಯಕ್ತಾಯಾಂ ವಾಚಿ, ಒಂದನೆ ಗಣ, ಸಕ. ಲೋಟ್, ಪರ. ಮ. ಏ. ನಿ ಉಪಸರ್ಗ ನಿ+ಗದತು ಗದತಾತ್, ಗದತಾಂ, ಗದಂತು. ಗದ ಗದತಾತ್, ಗದತಂ, ಗದತ. ಗದಾನಿ, ಗದಾವ, ಗದಾಮ.

ನನು ಸುತಾವಿತಥಂ ಕಥಿತಂ ತ್ವಯೇ-
ತ್ಯಮುಮುದೀರ್ಯ ಸವಿಸ್ಮಯಮಸ್ಮರತ್ ।
ಪ್ರಕೃತಿತಃ ಕೃತಿತಾ ಖಲು ಮೇ ಶಿಶೋ-
ರ್ಮದಧಿನಾಥದಯೋದಯಜೇತ್ಯಸೌ ॥ ೨೭ ॥

ಅ :—ಅಸೌ 'ಸುತ ! ತ್ವಯಾ ಅವಿತಥಂ ಕಥಿತಂ ನನು.' ಇತಿ ಅಮುಂ ಉದೀರ್ಯ ಸವಿಸ್ಮಯಂ 'ಮೇ ಶಿಶೋಃ ಪ್ರಕೃತಿತಃ ಕೃತಿತಾ ಮದಧಿನಾಥದಯೋದಯಜಾ ಖಲು ಇತಿ ಅಸ್ಮರತ್.

ಅ :—ಅಸೌ=ಈ ಮಧ್ಯಗೇಹಭಟ್ಟರು, ಸುತ=ಮಗನೆ !, ತ್ವಯಾ ನಿನ್ನಿಂದ, ಅವಿತಥಂ=ಸರಿಯಾದ ಅರ್ಥವು, ಕಥಿತಂ ನನು=ಹೇಳಲ್ಪಟ್ಟಿ ತಷ್ಟೆ. ಇತಿ=ಹೀಗೆಂದು, ಅಮುಂ=ಈ ಮಗುವನ್ನು ಕುರಿತು, ಉದೀರ್ಯ =ಹೇಳಿ, ಸವಿಸ್ಮಯಂ=ಆಶ್ಚರ್ಯದಿಂದ ಸಹಿತವಾಗಿ, ಮೇ=ನನ್ನ, ಶಿಶೋಃ =ಮಗುವಿನ, ಪ್ರಕೃತಿತಃ=ಸ್ವಭಾವದಿಂದ, ಕೃತಿತಾ=ಬುದ್ಧಿವಂತಿಕೆಯು, ಮತ್=ನನ್ನ, ಅಧಿನಾಥ=ಸ್ವಾಮಿಯಾದ ಅನಂತಾಸನದೇವರ, ದಯಾ= ಕರುಣೆಯ, ಉದಯಜಾ ಖಲು=ಆವಿರ್ಭಾವದಿಂದ ಹುಟ್ಟಿರುವುದು ನಿಜ, ಇತಿ=ಹೀಗೆಂದು, ಅಸ್ಮರತ್=ಆ ದೇವರನ್ನು ಸ್ಮರಿಸಿದರು.

ತಾ :—ಈ ಮಧ್ಯಗೇಹಭಟ್ಟರು 'ಮಗು ನೀನು ಸರಿಯಾದ ಅರ್ಥ ವನ್ನು ಹೇಳಿದ್ದಿ' ಎಂದರು. ಮತ್ತು ಆಶ್ಚರ್ಯದಿಂದ 'ನನ್ನ ಮಗುವು ಯಾರ ಶಿಕ್ಷಣವೂ ಇಲ್ಲದೆ ಬುದ್ಧಿವಂತನಾಗಿರುವನು. ಇದು ನನ್ನ ಒಡೆಯನಾದ ಶ್ರೀ ಅನಂತಾಸನದೇವರ ದಯೆಯಿಂದ ಉಂಟಾಗಿದೆ' ಎಂದು ಆ ಸ್ವಾಮಿಯನ್ನು ನೆನೆಸಿಕೊಂಡರು.

ವ್ಯಾ.ವಿ. :—ವಿಸ್ಮಯೇನ ಸಹಿತಂ ಯಥಾ ಭವತಿ ತಥಾ=ಸವಿಸ್ಮಯಂ, ಕ್ರಿಯಾವಿಶೇಷಣ ಮಮ ಅಧಿನಾಥಃ, ಮದಧಿನಾಥಸ್ಯ ದಯಾ, ಮದಧಿನಾಥದಯಾಯಾಃ ಉದಯಃ, ಮದಧಿ....ಯೋದಯಾತ್ ಜಾಯತೇ ಇತಿ–ಮದಧಿ....ದಯೋದಯಜಾ ಅಸ್ಮರತ್–ಸ್ಮೃ ಚಿಂತಾಯಾಂ, ಒಂದನೆ ಗಣ, ಸಕ. ಲಙ್, ಪರ. ಪ್ರ. ಏ. ಅಸ್ಮರತ್, ಅಸ್ಮರತಾಂ, ಅಸ್ಮರನ್. ಅಸ್ಮರಃ, ಅಸ್ಮರತಂ, ಅಸ್ಮರತ. ಅಸ್ಮರಂ, ಅಸ್ಮರಾವ, ಅಸ್ಮರಾಮ.

ಕಥಯತಾಂ ಪ್ರಥಮೋ ಕಥಯತ್ಯಲಂ
ಸ್ವಜನಕೇ ಜನಸಂಘವೃತೇ ಕಥಾಮ್ ।
ಸಕಲಲೋಕಮನೋನಯನೋತ್ಸವ–
ಶ್ಚತುರಧೀಃ ಸ ಕದಾಚಿದವಾಚಯತ್ ॥ ೨೮ ॥

Rarest Archive

ಅ :—ಕದಾಚಿತ್ ಕಥಯತಾಂ ಪ್ರಥಮೇ ಜನಸಂಘವೃತೇ ಸ್ವಜನಕೇ ಕಥಾಂ ಕಥಯತಿ ಸಕಲಲೋಕಮನೋನಯನೋತ್ಸವಃ ಚತುರಧೀಃ ಸಃ ಅಲಂ ಅವಾಚಯತ್.

ಅ :—ಕದಾಚಿತ್=ಒಂದಾನೊಂದು ವೇಳೆ, ಕಥಯತಾಂ=ಪುರಾಣ ಹೇಳುವವರಲ್ಲಿ, ಪ್ರಥಮೇ=ಶ್ರೇಷ್ಠರಾದ, ಜನ=ಜನರ, ಸಂಘ=ಸಮೂಹ ದಿಂದ, ವೃತೇ=ಸುತ್ತುವರಿಯಲ್ಪಟ್ಟ, ಸ್ವಜನಕೇ=ತನ್ನ ತಂದೆಯು, ಕಥಾಂ =ಪುರಾಣದಲ್ಲಿ ಹೇಳಿರುವ ಭಗವಂತನ ಕಥೆಯನ್ನು, ಕಥಯತಿ=ಹೇಳು ತ್ತಿರಲು, ಸಕಲ=ಎಲ್ಲ, ಲೋಕ=ಜನರ, ಮನಃ=ಮನಸ್ಸು, ನಯನ= ಕಣ್ಣು ಇವುಗಳಿಗೆ, ಉತ್ಸವಃ=ಹಬ್ಬದಂತೆ ಮನೋಹರನಾದ, ಚತುರಧೀಃ =ಕುಶಲಬುದ್ಧಿಯುಳ್ಳ, ಸಃ=ಆ ವಾಸುದೇವನು, ಅಲಂ=ಚೆನ್ನಾಗಿ, ಅವಾಚಯತ್=ವಾಚನ ಮಾಡಿದನು (ಪಠಿಸಿದನು.)

ತಾ :—ಒಂದಾನೊಂದು ಸಮಯದಲ್ಲಿ ಪೌರಾಣಿಕರಲ್ಲಿ ಶ್ರೇಷ್ಠರಾದ ಮಧ್ಯಗೇಹಭಟ್ಟರು ಪುರಾಣ ಹೇಳುತ್ತಿದ್ದರು. ಅವರ ಸುತ್ತ ಜನರು ನೆರೆದಿ ದ್ದರು. ಆಗ ಸಮಸ್ತ ಜನರ ಕಣ್ಣು ಮನಗಳಿಗೆ ಆನಂದವನ್ನುಂಟು ಮಾಡುವ ಬುದ್ಧಿಶಾಲಿಯಾದ ವಾಸುದೇವನು ಚೆನ್ನಾಗಿ ಪುರಾಣವಾಚನ ಮಾಡಿದನು.

ವಾ. ವಿ. :—ಸಕಲಾಶ್ಚ ತೇ ಲೋಕಾಶ್ಚ=ಸಕಲಲೋಕಾಃ, ಮನಾಂಸಿ ಚ ನಯನಾನಿ ಚ=ಮನೋನಯನಾನಿ, ಸಕಲಲೋಕಾನಾಂ ಮನೋ- ನಯನಾನಿ, ಸಕಲಲೋಕಮನೋನಯನಾನಾಂ ಉತ್ಸವಃ = ಸಕಲ.... ಉತ್ಸವಃ, ಚತುರಾ ಧೀಃ ಯಸ್ಯ ಸಃ=ಚತುರಧೀಃ. ಅವಾಚಯತ್-ವಚ ಪರಿಭಾಷಣೇ, ಹತ್ತನೆ ಗಣ. ಸಕ. ಲಙ್, ಪರ. ಪ್ರ.ಏ. ಅವಾಚಯತ್, ಅವಾಚಯತಾಂ, ಅವಾಚಯನ್. ಅವಾಚಯಃ. ಅವಾಚಯತಂ, ಅವಾಚ- ಯತ. ಅವಾಚಯಂ, ಅವಾಚಯಾವ, ಅವಾಚಯಾಮ.

ವಿವಿಧಶಾಖಿಪದಾರ್ಥನಿವೇದನೇ
ಲಿಕುಚನಾಮ್ನಿ ತದಾನುದಿತಾರ್ಥಕೇ ।
ಕಿಮಿತಿ ತಾತ ತದರ್ಥಮವರ್ಣಯನ್
ಕಥಯಸೀತಿ ಶನೈರಯಮಬ್ರವೀತ್ ॥ ೨೯ ॥

Rarest Archives

ಅ :—ತದಾ ವಿವಿಧಶಾಖಿಪದಾರ್ಥನಿವೇದನೇ ಲಿಕುಚನಾಮ್ನಿ ಅನುದಿತಾರ್ಥಕೇ ಅಯಂ 'ತಾತ ! ತದರ್ಥಂ ಅವರ್ಣಯನ್ ಕಿಮ್ ಇತಿ ಕಥಯಸಿ?' ಇತಿ ಶನೈಃ ಅಬ್ರವೀತ್.

ಅ :—ತದಾ=ಆಗ, ವಿವಿಧ=ನಾನಾ ಬಗೆಯ, ಶಾಖಿ=ಮರಗಳ, ಪದ=ಬೋಧಕ ಶಬ್ದಗಳ, ಅರ್ಥ=ಅರ್ಥಗಳ, ನಿವೇದನೇ=ತಿಳಿಸುವಿಕೆಯ ಸಂದರ್ಭದಲ್ಲಿ, ಲಿಕುಚನಾಮ್ನಿ=ಲಿಕುಚವೆಂಬ ಶಬ್ದವು, ಅನುದಿತಾರ್ಥಕೇ=ಹೇಳಲ್ಪಡದ ಅರ್ಥವುಳ್ಳದ್ದಾಗಲು, ಅಯಂ=ಈ ವಾಸುದೇವನು, ತಾತ=ತಂದೆಯೇ ! ತದರ್ಥಂ=ಆ ಲಿಕುಚವೆಂಬ ಪದದ ಅರ್ಥವನ್ನು, ಅವರ್ಣಯನ್=ಹೇಳದವರಾಗಿ, ಕಿಮಿತಿ=ಏನೆಂದು (ಏತಕ್ಕೆ), ಕಥಯಸಿ=ಪುರಾಣವನ್ನು ಹೇಳುತ್ತೀರಿ ? ಇತಿ=ಹೀಗೆಂದು, ಶನೈಃ=ಮೆಲ್ಲಗೆ, ಅಬ್ರವೀತ್=ಹೇಳಿದನು.

ತಾ :—ಆಗ ಮಧ್ಯಗೇಹಭಟ್ಟರು ಮರಗಳನ್ನು ಬೋಧಿಸುವ ಅನೇಕ ಶಬ್ದಗಳಿಗೆ ಅರ್ಥವನ್ನು ಹೇಳಿ 'ಲಿಕುಚ' ಎಂಬ ಶಬ್ದಕ್ಕೆ ಅರ್ಥವನ್ನು ಹೇಳದೆ ಮುಂದೆ ಹೇಳಲು ಆರಂಭಿಸಿದರು. ಆಗ ಆ ವಾಸುದೇವನು 'ಅಪ್ಪ ! ಲಿಕುಚ ಪದದ ಅರ್ಥವನ್ನು ಹೇಳದೆ ಏನು ಪುರಾಣ ಹೇಳುತ್ತಿದ್ದೀರಿ' ಎಂದು ಮೆಲ್ಲಗೆ ಹೇಳಿದನು.

ವ್ಯಾ. ವಿ :—ಶಾಖಾಃ ಏಷಾಂ ಸಂತೀತಿ=ಶಾಖಿನಃ, ವಿವಿಧಾಶ್ಚ ತೇ ಶಾಖಿನಶ್ಚ, ವಿವಿಧಶಾಖಿನಾಂ ಪದಾನಿ, ವಿವಿಧ....ಪದಾನಾಂ ಅರ್ಥಾಃ, ವಿವಿಧ ....ಪದಾರ್ಥಾನಾಂ ನಿವೇದನಂ=ವಿವಿಧ....ನಿವೇದನಂ, ತಸ್ಮಿನ್. ಲಿಕುಚಃ ಇತಿ ನಾಮ ಯಸ್ಯ ತತ್=ಲಿಕುಚನಾಮ, ತಸ್ಮಿನ್. ಅನುದಿತಃ ಅರ್ಥಃ ಯಸ್ಯ ತತ್ ಅನುದಿತಾರ್ಥಕಂ, ತಸ್ಮಿನ್. ವರ್ಣಯತೀತಿ=ವರ್ಣಯನ್, ನ ವರ್ಣಯನ್=ಅವರ್ಣಯನ್.

ಅವಪತೀತಿ ಪಿತರ್ಯಪಿ ಚೋದಿತೇ
ಪ್ರತಿಬುಭುತ್ಸುಷು ತತ್ರ ಜನೇಷ್ವಪಿ ।
ಅಯಮುದೀರ್ಯ ತದರ್ಥಮವಾಪ್ತವಾನ್
ಪರಿಷದೋ ಹ್ಯಸಮಾನಸುಮಾನನಾಮ್ || ೩೦ ||

Rarest Archiver

ಅ :—ಇತಿ ಚೋದಿತೇ ಅಪಿ ಪಿತರಿ ಅವದತಿ ತತ್ರ ಜನೇಷು ಅಪಿ ಪ್ರತಿಬುಭುತ್ಸುಷು ಅಯಂ ತದರ್ಥಂ ಉದೀರ್ಯ ಪರಿಷದಃ ಅಸಮಾನಸು-ಮಾನನಾಂ ಅವಾಪ್ತವಾನ್ ಹಿ,

ಅ :—ಇತಿ=ಹೀಗೆ, ಚೋದಿತೇ ಅಪಿ=ಹೇಳಿ ಎಂದು ಪ್ರೇರಿಸಿದರೂ, ಪಿತರಿ=ತಂದೆಯು, ಅವದತಿ=ಹೇಳದಿರಲು, ತತ್ರ=ಆ ಸಭೆಯಲ್ಲಿರುವ, ಜನೇಷು ಅಪಿ=ಜನರೂ, ಪ್ರತಿಬುಭುತ್ಸುಷು=ತಿಳಿಯಲು ಅಪೇಕ್ಷಿಸಲು, ಅಯಂ=ಈ ವಾಸುದೇವನು, ತದರ್ಥಂ=ಆ ಲಿಕುಚ ಶಬ್ದದ ಹೆಬ್ಬಲಸು ಎಂಬ ಅರ್ಥವನ್ನು, ಉದೀರ್ಯ=ಹೇಳಿ. ಪರಿಷದಃ=ಸಭೆಯು, ಅಸಮಾನಸುಮಾನನಾಂ=ಅಸಾಧಾರಣವಾದ ಪೂಜೆಯನ್ನು, ಅವಾಪ್ತವಾನ್ ಹಿ=ಹೊಂದಿದನಷ್ಟೆ.

ತಾ :—ವಾಸುದೇವನು ತಂದೆಗೆ 'ಹೇಳಿ' ಎಂದು ತಿಳಿಸಿದರೂ ಅವರು ಹೇಳಲಿಲ್ಲ. ಅಲ್ಲಿ ಸಭೆಯಲ್ಲಿ ಸೇರಿದ್ದ ಜನರು ಅದರ ಅರ್ಥವನ್ನು ತಿಳಿಯಲು ಉತ್ಸುಕರಾದರು. ಆಗ ವಾಸುದೇವನು ಲಿಕುಚ ಎಂಬ ಪದದ ಸರಿಯಾದ ಹೆಬ್ಬಲಸು ಎಂಬ ಅರ್ಥವನ್ನು (ವಡಹಲಾ-ಮರಾಠೀ, ಪೆಜಕಾಯಿ-ತುಳು) ತಾನೇ ಹೇಳಿದನು. ಅದರಿಂದ ಸಭೆಯುವರು ಆನಂದದಿಂದ ಅವನನ್ನು ಪೂಜಿಸಿದರು.

ವ್ಯಾ. ವಿ.:—ಪ್ರತಿಬೋದ್ಧುಂ ಇಚ್ಛವಃ=ಪ್ರತಿಬುಭುತ್ಸವಃ, ತೇಷು. ಅಸಮಾನಾ ಚ ಸಾ ಸುಮಾನನಾ ಚ=ಅಸಮಾನಸುಮಾನನಾ, ತಾಮ್.

ಬಹುವಿಧೈಶ್ಚರಿತೈರಿತಿ ಚಾರುಭಿಃ
ಸಕಲಲೋಕಕುತೂಹಲಕಾರಿಣಮ್ ।
ದ್ವಿಜವರೇಣ ವಯಸ್ಯುಚಿತೇ ಸ್ಥಿತಂ
ತಮುಪನೇತಮನೇನ ದಧೇ ಮನಃ ॥ ೩೧ ॥

ಅ :—ಅನೇನ ದ್ವಿಜವರೇಣ ಇತಿ ಬಹುವಿಧೈಃ ಚಾರುಭಿಃ ಚರಿತೈಃ ಸಕಲಲೋಕಕುತೂಹಲಕಾರಿಣಂ ಉಚಿತೇ ವಯಸಿ ಸ್ಥಿತಂ ತಂ ಉಪನೇತುಂ ಮನಃ ಧಧೇ.

ಅ :—ಅನೇನ=ಈ, ದ್ವಿಜವರೇಣ=ಬ್ರಾಹ್ಮಣ ಶ್ರೇಷ್ಠರಾದ ಮಧ್ಯಗೇಹಭಟ್ಟರಿಂದ, ಇತಿ=ಹೀಗೆ, ಬಹುವಿಧೈಃ=ಅನೇಕ ಬಗೆಯ, ಚಾರುಭಿಃ

Rarest Archiver

—ಮನೋಹರವಾದ, ಚರಿತ್ರೈಃ—ನಡತೆಗಳಿಂದ, ಸಕಲ—ಎಲ್ಲ, ಲೋಕ—ಜನರಿಗೆ, ಕುತೂಹಲ — ಆಶ್ಚರ್ಯವನ್ನು, ಕಾರಿಣಂ — ಉಂಟುಮಾಡುವ, ಉಚಿತೇ—ಯೋಗ್ಯವಾದ, ವಯಸಿ—ವಯಸ್ಸಿನಲ್ಲಿ, ಸ್ಥಿತಂ—ಇರುವ, ತಂ —ಆ ವಾಸುದೇವನಿಗೆ, ಉಪನೇತುಂ—ಉಪನಯನ ಮಾಡುವುದಕ್ಕೆ, ಮನಃ —ಮನಸ್ಸು, ದಧೇ—ಮಾಡಲ್ಪಟ್ಟಿತು.

ತಾ:—ಹೀಗೆ ವಾಸುದೇವನು ಅನೇಕ ಬಗೆಯ ಮನೋಹರ ಚರಿತ್ರೆಗಳಿಂದ ಸಮಸ್ತ ಜನರಿಗೆ ಆಶ್ಚರ್ಯವನ್ನುಂಟು ಮಾಡುತ್ತಿದ್ದನು. ಮಧ್ಯಗೇಹ ಭಟ್ಟರು ಗರ್ಭದಿಂದ ಎಂಟನೆ ವರ್ಷ ವಯಸ್ಸಿನಲ್ಲಿ ಆ ವಾಸುದೇವನಿಗೆ ಉಪನಯನ ಮಾಡಲು ಬಯಸಿದರು, (ಹುಟ್ಟಿದ ಎಂಟನೆ ವರ್ಷದಲ್ಲಿ ಉಪನಯನ ಎಂದೂ ಹೇಳುತ್ತಾರೆ.)

ವ್ಯಾ.ವಿ. :—ಬಹ್ವ್ಯಃ ವಿಧಾಃ ಯೇಷಾಂ ತಾನಿ—ಬಹುವಿಧಾನಿ, ತೈಃ. ಸಕಲಾಶ್ಚ ತೇ ಲೋಕಾಶ್ಚ, ಸಕಲಲೋಕಾನಾಂ ಕುತೂಹಲಂ, ಸಕಲಲೋಕ-ಕುತೂಹಲಂ ಕರೋತೀತಿ—ಸಕಲಲೋಕಕುತೂಹಲಕಾರೀ, ತವ್. ದಧೇ-ಡು ಧಾಞ್ ಧಾತು, ಲಿಟ್, ಆತ್ಮ, ಪ್ರ.ಏ. ದಧೇ, ದಧಾತೇ, ದಧಿರೇ. ದಧಿಷೇ, ದಧಾಥೇ, ದಧಿಧ್ವೇ. ದಧೇ, ದಧಿವಹೇ, ದಧಿಮಹೇ.

ಸಮುಚಿತಗ್ರಹಯೋಗಗುಣಾನ್ವಿತಂ
ಸಮವಧಾರ್ಯ ಮುಹೂರ್ತಮದೂಷಣಮ್ ।
ಪ್ರಣಯಬಂಧುರಬಾಂಧವವಾನಸೌ
ದ್ವಿಜಕುಲಾಕುಲಮುತ್ಸವಮಾತನೋತ್ ॥ ೩೨ ॥

ಅ :—ಪ್ರಣಯಬಂಧುರಬಾಂಧವವಾನ್ ಅಸೌ ಸಮುಚಿತಗ್ರಹ-ಯೋಗಗುಣಾನ್ವಿತಂ ಅದೂಷಣಂ ಮುಹೂರ್ತಂ ಸಮವಧಾರ್ಯ ದ್ವಿಜಕುಲಾ-ಕುಲಂ ಉತ್ಸವಂ ಆತನೋತ್.

ಅ :—ಪ್ರಣಯ — ಸ್ನೇಹದಿಂದ, ಬಂಧುರ—ಮನೋಹರವಾದ, ಬಾಂಧವವಾನ್—ಬಂಧು ಜನರುಳ್ಳ, ಅಸೌ—ಈ ಮಧ್ಯಗೇಹಭಟ್ಟರು, ಸಮುಚಿತ—ಉಪನಯನಕ್ಕೆ ಯೋಗ್ಯವಾದ, ಗ್ರಹ—ಗ್ರಹಗಳ, ಯೋಗ—

Rarest Archiver

ಸಂಬಂಧದಿಂದ, ಗುಣ—ಎಂಟನೆ ಮನೆಯಲ್ಲಿ ಗ್ರಹಗಳಿಲ್ಲದಿರುವುದೇ ಮೊದಲಾದ ಗುಣಗಳಿಂದ, ಅನ್ವಿತಂ—ಕೂಡಿದ, ಅದೂಷಣಂ—ದೋಷವಿಲ್ಲದ, ಮುಹೂರ್ತಂ—ವೃಷಭಾದಿ ಲಗ್ನವನ್ನು, ಸಮವಧಾರ್ಯ—ನಿಶ್ಚಯಿಸಿ, ದ್ವಿಜ—ಬ್ರಾಹ್ಮಣರ, ಕುಲ—ಸಮೂಹದಿಂದ, ಆಕುಲಂ—ಗದ್ದಲವಾದ, ಉತ್ಸವಂ—ಉಪನಯನ ಮಹೋತ್ಸವವನ್ನು, ಆತನೋತ್—ಮಾಡಿದರು.

ತಾ :—ಅನಂತರ ಮಧ್ಯಗೇಹಭಟ್ಟರು ಉಪನಯನಕ್ಕೆ ಮುಹೂರ್ತವನ್ನು (ಲಗ್ನವನ್ನು) ಇಟ್ಟರು. ಅದು ಅಷ್ಟಮ ಶುದ್ಧಿ ಮೊದಲಾದ ಗುಣಗಳಿಂದ ಕೂಡಿ ದೋಷವಿಲ್ಲದ್ದಾಗಿತ್ತು. ಆ ದಿನ ಅವರ ಪ್ರೀತಿಯ ಬಂಧುಗಳೂ, ಬ್ರಾಹ್ಮಣರೂ ನೆರೆದರು. ಅಂತಹ ಶುಭ ಮುಹೂರ್ತದಲ್ಲಿ ವಾಸುದೇವನಿಗೆ ಸಂಭ್ರಮದಿಂದ ಉಪನಯನೋತ್ಸವವನ್ನು ನೆರವೇರಿಸಿದರು.

ವ್ಯಾ. ವಿ.:—ಗ್ರಹಾಣಾಂ ಯೋಗಃ, ಸಮುಚಿತಶ್ಚಾಸೌ ಗ್ರಹಯೋಗಶ್ಚ, ಸಮುಚಿತಗ್ರಹಯೋಗ ಏವ ಗುಣಃ, ಸಮುಚಿತಗ್ರಹಯೋಗಗುಣೇನ ಅನ್ವಿತಃ ಸಮುಚಿತಗ್ರಹಯೋಗಗುಣಾನ್ವಿತಃ, ತಮ್, ನ ವಿದ್ಯತೇ ದೂಷಣಂ ಯಸ್ಯ ಸಃ—ಅದೂಷಣಃ, ತಮ್. ಪ್ರಣಯೇನ ಬಂಧುರಾಃ, ಪ್ರಣಯಬಂಧುರಾಶ್ಚ ತೇ ಬಾಂಧವಾಶ್ಚ, ಪ್ರಣಯ........ಬಾಂಧವಾಃ ಅಸ್ಯ ಸಂತೀತಿ—ಪ್ರಣಯಬಂಧುರಬಾಂಧವವಾನ್. ದ್ವಿಜಾನಾಂ ಕುಲಂ, ದ್ವಿಜಕುಲೇನ ಆಕುಲಃ—ದ್ವಿಜಕುಲಾಕುಲಃ, ತಮ್. ಆತನೋತ್, ಆ ಉಪಸರ್ಗ ಅತನೋತ್, (ಸರ್ಗ ೩ ಶ್ಲೋಕ ೩ ನೋಡಿರಿ)

ವಿವಿಧವೇದತಯಾ ವಿಜಿಹೀರ್ಷವೋ
ವದನರಂಗಪದೇಽಸ್ಯ ಚಿರಾಯ ಯಾಃ ।
ಸುರವರಪ್ರಮದಾ ಅಪಿ ಸಪ್ರಿಯಾ
ಅಭಿನನಂದುರಹೋ ವಿಯತೋ ಮಹಮ್ ॥ ೩೩ ॥

ಅ :—ಯಾಃ ಸುರವರಪ್ರಮದಾಃ ಅಪಿ ಚಿರಾಯ ಅಸ್ಯ ವದನರಂಗಪದೇ ವಿವಿಧವೇದತಯಾ ವಿಜಿಹೀರ್ಷವಃ (ತಾಃ) ಸಪ್ರಿಯಾ ವಿಯತಃ ಮಹಂ ಅಭಿನನಂದುಃ ಅಹೋ.

Rarest Archiver

ಅ :—ಯಾಃ=ಯಾವ, ಸುರವರಪ್ರಮದಾಃ ಅಪಿ=ದೇವೋತ್ತಮರ ಹೆಂಗಸರೂ, ಚಿರಾಯ=ಬಹಳ ಕಾಲದಿಂದ, ಅಸ್ಯ=ಇವನ, ವದನರಂಗಪದೇ=ಮುಖವೆಂಬ ಕುಣಿಯುವ ಸ್ಥಳದಲ್ಲಿ, ವಿವಿಧವೇದತಯಾ=ನಾನಾ ವಿಧವಾದ ವೇದರೂಪದಿಂದ, ವಿಜಿಹೀರ್ಷವಃ=ವಿಹಾರ ಮಾಡಲು ಇಚ್ಛೆಯುಳ್ಳವರೊ, (ತಾಃ=ಅವರು) ಸಪ್ರಿಯಾಃ=ತಮ್ಮ ಗಂಡಂದಿರಿಂದ ಸಹಿತರಾಗಿ, ವಿಯತಃ=ಆಕಾಶದಿಂದ. ಮಹಂ=ಉಪನಯನೋತ್ಸವವನ್ನು, ಅಭಿನಂದುಃ=ನೋಡಿ ಆನಂದಪಟ್ಟರು. ಅಹೋ=ಆಶ್ಚರ್ಯ.

ತಾ :—ಲಕ್ಷ್ಮೀ, ಭಾರತೀ, ವಾರುಣೀ, ಪಾರ್ವತೀ ಮೊದಲಾದ ಎಲ್ಲ ವೇದಗಳಿಗೆ ಅಭಿಮಾನಿಗಳಾದ ದೇವತಾ ಸ್ತ್ರೀಯರು ಬಹಳ ಕಾಲದಿಂದ ಆ ವಾಸುದೇವನ ಮುಖವೆಂಬ ರಂಗಸ್ಥಳದಲ್ಲಿ ಕುಣಿಯಬೇಕೆಂದು ಅಪೇಕ್ಷಿಸುತ್ತಿದ್ದರು. ಅವರು ಈಗ ತಮ್ಮ ಗಂಡಂದಿರೊಡನೆ ಆಕಾಶದಲ್ಲಿ ವಿಮಾನದಲ್ಲಿ ಕುಳಿತು ಆ ಉಪನಯನೋತ್ಸವವನ್ನು ನೋಡಿ ಆನಂದಿಸಿದರು. ಎಂದರೆ ಇಂದಿನವರೆಗೆ ವಾಸುದೇವನಿಗೆ ಉಪನಯನವಾಗದಿದ್ದುದರಿಂದ ಅವನು ವೇದವನ್ನು ಉಚ್ಚಾರಣೆ ಮಾಡುವಂತಿರಲಿಲ್ಲ. ಈಗ ಉಪನಯನವಾಯಿತು. ಆದ್ದರಿಂದ ವೇದಾಭಿಮಾನಿಗಳಾದ ಲಕ್ಷ್ಮೀ ಮೊದಲಾದವರು ತಮಗೆ ಅವನ ಬಾಯಿಯಿಂದ ಉಚ್ಚಾರವಾಗುವ ವೇದಗಳಲ್ಲಿ ನೆಲೆಸಲು ಅವಕಾಶವಾಯಿತೆಂದು ಆನಂದದಿಂದ ಆಕಾಶದಲ್ಲಿ ಪ್ರಿಯರೊಡನೆ ಉಪನಯನೋತ್ಸವವನ್ನು ವೀಕ್ಷಿಸಿದರು.

ವ್ಯಾ. ವಿ. :—ವಿವಿಧಾಶ್ಚ ತೇ ವೇದಾಶ್ಚ, ವಿವಿಧವೇದಾನಾಂ ಭಾವಃ=ವಿವಿಧವೇದತಾ, ತಯಾ. ವಿಹರ್ತುಂ ಇಚ್ಛವಃ=ವಿಜಿಹೀರ್ಷವಃ. ರಂಗಸ್ಯ ಪದಂ, ವದನಮೇವ ರಂಗಪದಂ=ವದನರಂಗಪದಂ,=ತಸ್ಮಿನ್. ಸುರೇಷು ವರಾಃ, ಸುರವರಾಣಾಂ ಪ್ರಮದಾಃ=ಸುರವರಪ್ರಮದಾಃ. ಪ್ರಿಯೈಃ ಸಹಿತಾಃ=ಸಪ್ರಿಯಾಃ.

ವಿಹಿತಸಾಧನಸಾಧಿತಸತ್ಕ್ರಿಯೋ
ಜ್ವಲನಮುಜ್ಜ್ವಲಧೀರ್ಜ್ವಲಯನ್ನಯಮ್ ।

Rarest Archiver

ಉಪನಿನಾಯ ಸುತಂ ಸಮಲಂಕೃತಂ
ಕುಶಲಿನಂ ಕುಶಲೀಕೃತಶೀರ್ಷಕಮ್ || ೩೪ ||

ಅ :—ವಿಹಿತಸಾಧನಸಾಧಿತಸತ್ಕ್ರಿಯಃ ಜ್ವಲನಂ ಜ್ವಲಯನ್ ಉಜ್ಜ್ವಲಧೀಃ ಅಯಂ ಸಮಲಂಕೃತಂ ಕುಶಲಿನಂ ಕುಶಲೀಕೃತಶೀರ್ಷಕಂ ಸುತಂ ಉಪನಿನಾಯ.

ಅ :—ವಿಹಿತ = ವೇದೋಕ್ತವಾದ, ಸಾಧನ = ಸಾಮಗ್ರಿಗಳಿಂದ, ಸಾಧಿತ= ನೆರವೇರಿಸಲ್ಪಟ್ಟ, ಸತ್ಕ್ರಿಯಃ = ಒಳ್ಳೆ ಕಾರ್ಯವುಳ್ಳ, ಜ್ವಲನಂ= ಅಗ್ನಿಯನ್ನು, ಜ್ವಲಯನ್ = ಆಹುತಿಗಳಿಂದ ಉರಿಯುವಂತೆ ಮಾಡುತ್ತಿರುವ, ಉಜ್ಜ್ವಲಧೀಃ = ನಿರ್ಮಲಮನಸ್ಸುಳ್ಳ, ಅಯಂ = ಈ ಮಧ್ಯಗೇಹಭಟ್ಟರು, ಸಮಲಂಕೃತಂ = ಅಲಂಕಾರ ಮಾಡಲ್ಪಟ್ಟ, ಕುಶಲಿನಂ = ಕ್ಷೇಮವುಳ್ಳ, ಕುಶಲೀಕೃತ = ಭದ್ರಾಕರಣ ಮಾಡಲ್ಪಟ್ಟ (ಕ್ಷೌರ ಮಾಡಿದ) ಶೀರ್ಷಕಂ = ತಲೆಯುಳ್ಳ, ಸುತಂ = ಮಗನನ್ನು, ಉಪನಿನಾಯ = ಉಪನೀತವನ್ನಾಗಿ ಮಾಡಿದರು.

ತಾ :—ಶುದ್ಧ ಮನಸ್ಸುಳ್ಳ ಈ ಮಧ್ಯಗೇಹಭಟ್ಟರು ಆಹುತಿಗಳಿಂದ ಅಗ್ನಿಯನ್ನು ಜ್ವಲಿಸುವಂತೆ ಮಾಡಿದರು. ವೇದದಲ್ಲಿ ಹೇಳಿದ ಸಾಮಗ್ರಿಗಳಿಂದ ಉಪನಯನ ಹೋಮವನ್ನು ಮುಗಿಸಿದರು. ಕಾಯಿಲೆ ಮೊದಲಾದುವುಗಳಿಲ್ಲದೆ ಕ್ಷೇಮವಾಗಿರುವ ಮಗನಿಗೆ ಕ್ಷೌರ ಮಾಡಿಸಿ ಒಡವೆಗಳಿಂದ ಅಲಂಕಾರಮಾಡಿ ಉಪನಯನ ಸಂಸ್ಕಾರವನ್ನು ಸಾಂಗವಾಗಿ ನೆರವೇರಿಸಿದರು.

ವ್ಯಾ.ವಿ. :—ವಿಹಿತಾನಿ ಚ ತಾನಿ ಸಾಧನಾನಿ ಚ. ವಿಹಿತಸಾಧನೈಃ ಸಾಧಿತಾ, ವಿಹಿತಸಾಧನಸಾಧಿತಾ ಸತ್ಕ್ರಿಯಾ ಯೇನ ಸಃ = ವಿಹಿತಸಾಧನ-ಸಾಧಿತಸತ್ಕ್ರಿಯಃ, ಉಜ್ಜ್ವಲಾ ಧೀಃ ಯಸ್ಯ ಸಃ = ಉಜ್ಜ್ವಲಧೀಃ. ಸಮ್ಯಕ್ ಅಲಂಕೃತಃ = ಸಮಲಂಕೃತಃ, ತಮ್. ಅಕುಶಲಂ ಕುಶಲಂ ಸಂಪದ್ಯ-ಮಾನಂ ಕೃತಂ, ಕುಶಲೀಕೃತಂ ಶೀರ್ಷಂ ಯಸ್ಯ ಸಃ = ಕುಶಲೀಕೃತಶೀರ್ಷಕಃ ತಮ್. ಉಪನಿನಾಯ–ಣೀಞ್ ಪ್ರಾಪಣೇ ಒಂದನೆ ಗಣ, ಸಕ. ಲಿಟ್. ಪರ. ಪ್ರ. ಏ. ಉಪ ಉಪಸರ್ಗ. ಉಪ+ನಿನಾಯ, ನಿನ್ಯತುಃ, ನಿನ್ಯುಃ. ನಿನಯಿಥ, ನಿನೇಥ, ನಿನ್ಯಥುಃ ನಿನ್ಯ, ನಿನಾಯ ನಿನಯ, ನಿನ್ಯಿವ, ನಿನ್ಯಿಮ.

Rarest Archiver

ಪರಿಚರಾಗ್ನಿಗುರೂ ಚರಿತವ್ರತಃ
ಸುಚರಣಃ ಪಠ ಸಾಧು ಸದಾಗಮಾನ್ ।
ಇತಿ ಗುರೋಸ್ತ್ರಿಜಗದ್ಗುರುಶಿಕ್ಷಣೇ
ಸ್ಫುಟಮಹಾಸಿ ಸುರೈಃ ಕೃತಸಾಕ್ಷಿಭಿಃ ॥ ೩೩ ॥

ಅ :—ಸುಚರಣಃ ಅಗ್ನಿಗುರೂ ಪರಿಚರ. ಚರಿತವ್ರತಃ ಸದಾಗಮಾನ್ ಸಾಧು ಪಠ. ಇತಿ ಗುರೋಃ ತ್ರಿಜಗದ್ಗುರುಶಿಕ್ಷಣೇ ಕೃತಸಾಕ್ಷಿಭಿಃ ಸುರೈಃ ಸ್ಫುಟಂ ಅಹಾಸಿ.

ಅ :—ಸುಚರಣಃ=ಒಳ್ಳೆ ಆಚಾರವುಳ್ಳವನಾಗಿ, ಅಗ್ನಿಗುರೂ=ಅಗ್ನಿಯನ್ನೂ, ಗುರುಗಳನ್ನೂ, ಪರಿಚರ = ಸೇವಿಸು. ಚರಿತ = ಅನುಷ್ಠಾನ ಮಾಡಲ್ಪಟ್ಟ, ವ್ರತಃ=ಬ್ರಹ್ಮಚರ್ಯ ನಿಯಮವುಳ್ಳವನಾಗಿ, ಸದಾಗಮಾನ್=ನಿರ್ದುಷ್ಟವಾದ ವೇದಶಾಸ್ತ್ರಗಳನ್ನು, ಸಾಧು=ಚೆನ್ನಾಗಿ, ಪಠ=ಓದು, ಇತಿ ಹೀಗೆಂದು, ಗುರೋಃ=ತಂದೆಯು, ತ್ರಿಜಗದ್ಗುರು=ಮೂರು ಲೋಕದ ಗುರುಗಳಾದ ಮುಖ್ಯಪ್ರಾಣದೇವರ ಅವತಾರನಾದ ವಾಸುದೇವನಿಗೆ, ಶಿಕ್ಷಣ=ಉಪದೇಶದ ವಿಷಯದಲ್ಲಿ, ಕೃತಸಾಕ್ಷಿಭಿಃ=ಮಾಡುವ ಕಾರ್ಯದಲ್ಲಿ ಸಾಕ್ಷಿಗಳಾದ, ಸುರೈಃ=ದೇವತೆಗಳಿಂದ, ಸ್ಫುಟಂ=ಸ್ಪಷ್ಟವಾಗಿ, ಅಹಾಸಿ=ನಗಲ್ಪಟ್ಟಿತು.

ತಾ :—ಮಧ್ಯಗೇಹಭಟ್ಟರು ಉಪನಯನವಾದ ತರುವಾಯ ವಾಸುದೇವನನ್ನು ಕುರಿತು 'ಮಗು ನೀನು ಆಚಾರವಂತನಾಗಿ ಅಗ್ನಿಕಾರ್ಯ ಮಾಡುತ್ತಿರು. ಗುರುಗಳನ್ನು ಸೇವಿಸು. ಬ್ರಹ್ಮಚರ್ಯ ನಿಯಮಗಳನ್ನು ಆಚರಿಸುತ್ತ ದೋಷವಿಲ್ಲದ ವೇದಾದಿಗಳನ್ನು ಓದು'. ಎಂದು ಉಪದೇಶ ಮಾಡಿದರು. ಇದನ್ನು ನೋಡುತ್ತಿದ್ದ ಸೂರ್ಯ ಮೊದಲಾದ ಸಾಕ್ಷಿ ದೇವತೆಗಳು 'ಮೂರು ಲೋಕದ ಗುರುಗಳಾದ ಮುಖ್ಯಪ್ರಾಣದೇವರಿಗೆ ಈ ರೀತಿ ಉಪದೇಶ ಮಾಡುತ್ತಿದ್ದಾರಲ್ಲ'. ಎಂದು ಚೆನ್ನಾಗಿ ನಕ್ಕರು.

ವ್ಯಾ.ವಿ.:—ಅಗ್ನಿಶ್ಚ ಗುರುಶ್ಚ=ಅಗ್ನಿಗುರೂ, ತೌ. ಚರಿತಂ ವ್ರತಂ ಯಸ್ಯ ಸಃ=ಚರಿತವ್ರತಃ. ಶೋಭನಂ ಚರಣಂ ಯಸ್ಯ ಸಃ=ಸುಚರಣಃ. ಸಂತಶ್ಚ ತೇ ಆಗಮಾಶ್ಚ=ಸದಾಗಮಾಃ, ತಾನ್. ತ್ರೀಣಿ ಚ ತಾನಿ ಜಗಂತಿ.

Rarest Archiver

ಚ=ತ್ರಿಜಗಂತಿ, ತ್ರಿಜಗತಾಂ ಗುರುಃ, ತ್ರಿಜಗದ್ಗುರೋಃ ಶಿಕ್ಷಣಂ=ತ್ರಿಜಗದ್ಗುರುಶಿಕ್ಷಣಂ, ತಸ್ಮಿನ್. ಕೃತೇ ಸಾಕ್ಷಿಣಃ=ಕೃತಸಾಕ್ಷಿಣಃ, ತೈಃ. ಅಹಾಸಿ-ಹಸೇ ಹಸನೇ, ಒಂದನೆ ಗಣ, ಅಕ. ಲುಙ್, ಆತ್ಮ. ಭಾವೇ ಪ್ರ. ಏ. ಅಹಾಸಿ.

ಜಿತಕುಮಾರಗುಣಂ ಸುಕುಮಾರಕಂ
ನಿಜಕುಮಾರಮವೇಕ್ಷ್ಯ ನಿರಂತರಮ್ ।
ಸಮುಚಿತಾಚರಣೇ ಚತುರಂ ಸ್ವತಃ
ಕ್ಷಿತಿಸುರೋ ಮುದಮಾಯತ ಶಿಕ್ಷಯನ್ ॥ ೩೬ ॥

ಅ:—ಜಿತಕುಮಾರಗುಣಂ ಸುಕುಮಾರಕಂ ನಿಜಕುಮಾರಂ ಶಿಕ್ಷಯನ್ ಕ್ಷಿತಿಸುರಃ ಸ್ವತಃ ನಿರಂತರಂ ಸಮುಚಿತಾಚರಣೇ ಚತುರಂ ಅವೇಕ್ಷ್ಯ ಮುದಂ ಆಯತ.

ಅ :—ಜಿತ=ಜಯಿಸಲ್ಪಟ್ಟ, ಕುಮಾರ=ಸುಬ್ರಹ್ಮಣ್ಯನ, ಗುಣಂ=ಬ್ರಹ್ಮಚರ್ಯ ಮೊದಲಾದ ಗುಣಗಳುಳ್ಳ, ಸುಕುಮಾರಕಂ=ಅತಿಕೋಮಲನಾದ, ನಿಜಕುಮಾರಂ=ತನ್ನ ಮಗನನ್ನು ಕುರಿತು, ಶಿಕ್ಷಯನ್=ಶೌಚಾಚಮನಾದಿಗಳನ್ನು ಹೇಳಿಕೊಡುತ್ತಾ, ಕ್ಷಿತಿಸುರಃ=ಮಧ್ಯಗೇಹಭಟ್ಟರು, ಸ್ವತಃ=ತಾನಾಗಿಯೇ, ನಿರಂತರಂ=ಯಾವಾಗಲೂ, ಸಮುಚಿತಾಚರಣೇ=ತಮ್ಮ ಜಾತಿ, ಆಶ್ರಮಗಳಿಗೆ ಯೋಗ್ಯವಾದ ಆಚಾರದಲ್ಲಿ, ಚತುರಂ=ಬುದ್ಧಿಶಾಲಿಯಾಗಿರುವುದನ್ನು, ಅವೇಕ್ಷ್ಯ=ನೋಡಿ, ಮುದಂ=ಸಂತೋಷವನ್ನು, ಆಯತ=ಹೊಂದಿದರು.

ತಾ :—ಮಧ್ಯಗೇಹಭಟ್ಟರು ಉಪನಯನವಾದ ಕೂಡಲೇ ಸುಬ್ರಹ್ಮಣ್ಯನಿಗಿಂತಲೂ ಗುಣಶಾಲಿಯಾದ ಬಾಲಕನಾಗಿರುವ ಮಗನಿಗೆ ಶುದ್ಧಿಕ್ರಮ, ಆಚಮನ, ಸಂಧ್ಯಾವಂದನೆ ಮೊದಲಾದುವುಗಳನ್ನು ಹೇಳಿಕೊಟ್ಟರು. ಆದರೆ ಆ ಬಾಲಕನು ತಾನಾಗಿಯೇ ಯಾವಾಗಲೂ ಅವುಗಳನ್ನು ಮಾಡುವುದರಲ್ಲಿ ಬುದ್ಧಿಶಾಲಿಯಾಗಿದ್ದನು. ಇದನ್ನು ನೋಡಿ ತಂದೆಗೆ ಬಹಳ ಸಂತೋಷವಾಯಿತು.

ವ್ಯಾ. ವಿ. :—ಕುಮಾರಸ್ಯ ಗುಣಾಃ, ಜಿತಾಃ ಕುಮಾರಗುಣಾಃ ಯೇನ ಸಃ = ಜಿತಕುಮಾರಗುಣಃ, ತಮ್. ನಿಜಶ್ಚಾಸೌ ಕುಮಾರಶ್ಚ = ನಿಜ-

Rarest Archiver

ಕುಮಾರಃ ತಮ್. ಸಮುಚಿತಂ ಚ ತತ್ ಆಚರಣಂ ಚ=ಸಮುಚಿತಾಚರಣಂ, ತಸ್ಮಿನ್. ಕ್ಷಿತೌ ಸುರಃ=ಕ್ಷಿತಿಸುರಃ. ಅಯತ-ಅಯ ಗತೌ, ಒಂದನೆ ಗಣ, ಸಕ. ಲಙ್, ಆತ್ಮ. ಪ್ರ. ಏ. ಆಯತ, ಆಯೇತಾಂ, ಆಯಂತ. ಆಯಥಾಃ. ಆಯೇಥಾಂ, ಆಯಧ್ವಂ, ಆಯೇ, ಆಯಾವಹಿ, ಆಯಾಮಹಿ.

ಸಪಟಖಂಡಮಕಿಂಚನವತ್ಕ್ವಚಿ-
ತ್ಸ್ವವಿಭವಾನುಚಿತಂ ಚರಣಾದಿಕಮ್ ।
ಭುವನಭರ್ತುರಹೋ ಸ್ವನಿಗೂಹನಂ
ಸುರಸಭಾಸು ಕುತೂಹಲಮಾತನೋತ್ ॥ ೩೭ ॥

ಅ :—ಕ್ವಚಿತ್ ಅಕಿಂಚನವತ್ ಸಪಟಖಂಡಂ ಸ್ವವಿಭವಾನುಚಿತಂ ಚರಣಾದಿಕಂ ಭುವನಭರ್ತುಃ ಸ್ವನಿಗೂಹನಂ ಸುರಸುಭಾಸು ಕುತೂಹಲಂ ಆತನೋತ್. ಅಹೋ.

ಅ :—ಕ್ವಚಿತ್=ಒಂದು ಸಮಯದಲ್ಲಿ ಅಥವಾ ಸ್ಥಳದಲ್ಲಿ, ಅಕಿಂಚನವತ್=ಬಡವನಂತೆ, ಸಪಟಖಂಡಂ=ಬಟ್ಟೆಚೂರಿನಿಂದ ಸಹಿತವಾಗಿ, ಸ್ವ=ತನ್ನ, ವಿಭವ=ಐಶ್ವರ್ಯಕ್ಕೆ, ಅನುಚಿತಂ=ಯೋಗ್ಯವಲ್ಲದ, ಚರಣ=ಸಂಚಾರವೇ, ಆದಿಕಂ=ಮೊದಲಾಗಿ ಉಳ್ಳ, ಭುವನಭರ್ತುಃ=ಸಕಲಲೋಕಗಳ ಸ್ವಾಮಿಯ, ಸ್ವನಿಗೂಹನಂ=ತನ್ನ ಐಶ್ವರ್ಯಾದಿಗಳ ಮುಚ್ಚುವಿಕೆಯು, ಸುರಸಭಾಸು=ದೇವತೆಗಳ ಸಭೆಗಳಲ್ಲಿ, ಕುತೂಹಲಂ=ಕೌತುಕವನ್ನು, ಆತನೋತ್=ಉಂಟುಮಾಡಿತು, ಅಹೋ=ಆಶ್ಚರ್ಯ.

ತಾ :—ಆ ವಾಸುದೇವನು ಬಡ ಮನುಷ್ಯ ಬಾಲಕನಂತೆ ಬಟ್ಟೆ ಚೂರುಗಳನ್ನುಟ್ಟು ಸಂಚರಿಸುತ್ತಿದ್ದನು. ಅದು ಮೂರುಲೋಕದ ಒಡೆಯನಾದ ಅವನ ವೈಭವಕ್ಕೆ ಯೋಗ್ಯವಲ್ಲ. ಹೀಗೆ ಅವನು ತನ್ನ ಐಶ್ವರ್ಯವನ್ನು ಮುಚ್ಚಿಕೊಂಡಿರುವುದನ್ನು ನೋಡಿ ದೇವತೆಗಳು ಕುತೂಹಲ (ಸಂತೋಷ)ಗೊಂಡರು. ಇದು ಎಂತಹ ಆಶ್ಚರ್ಯ.

ವ್ಯಾ. ವಿ. :—ಪಟಖಂಡೇನ ಸಹಿತಂ ಯಥಾ ಭವತಿ ತಥಾ=ಸಪಟಖಂಡಮ್. ಸ್ವಸ್ಯ ವಿಭವಾಃ, ಸ್ವವಿಭವಾನಾಂ ಅನುಚಿತಂ=ಸ್ವವಿಭಾನು-

Rarest Archiver

ಚಿತಮ್. ಚರಣಂ ಆದಿ ಯಸ್ಯ ತತ್ = ಚರಣಾಧಿಕಮ್. ಭುವನಸ್ಯ ಭರ್ತಾ = ಭುವನಭರ್ತಾ, ತಸ್ಯ. ಸ್ವಸ್ಯ ನಿಗೂಹನಂ = ಸ್ವನಿಗೂಹನಂ. ಸುರಾಣಾಂ ಸಭಾಃ = ಸುರಸಭಾಃ, ತಾಸು. ಆತನೋತ್–೩ನೆ ಸರ್ಗ ೩ನೇ ಪದ್ಯವನ್ನು ನೋಡಿ.

ಅವಿರಲೈರ್ಗರಲೋಷ್ಮಭಿರಾಕುಲೀ-
ಕೃತಸಮಸ್ತಜನೋ ವಿಚಚಾರ ಯಃ ।
ಕ್ವಚಿದಮುಂ ನಿಜಿಘಾಂಸುರಶಾಂತಿಮಾ-
ನುಪಸಸರ್ಪ ಸ ಸರ್ಪಮಯೋಽಸುರಃ ॥ ೩೮ ॥

ಅ :—ಅಶಾಂತಿಮಾನ್ ಯಃ ಸರ್ಪಮಯಃ ಅಸುರಃ ಅವಿರಲೈಃ ಗರಲೋಷ್ಮಭಿಃ ಆಕುಲೀಕೃತಸಮಸ್ತಜನಃ ವಿಚಚಾರ, ಸಃ ಅಮುಂ ನಿಜಿಘಾಂಸುಃ ಕ್ವಚಿತ್ ಉಪಸಸರ್ಪ.

ಅ :—ಅಶಾಂತಿಮಾನ್ = ಮಂತ್ರ, ಔಷಧಾದಿಗಳಿಂದ ಶಾಂತಿಯಿಲ್ಲದ, ಯಃ = ಯಾವ, ಸರ್ಪಮಯಃ = ಸರ್ಪದ ಆಕೃತಿಯುಳ್ಳ, ಅಸುರಃ = ದೈತ್ಯನು, ಅವಿರಲೈಃ = ಬಹಳವಾದ, ಗರಲ = ವಿಷದ, ಊಷ್ಮಭಿಃ = ಬೇಗೆಗಳಿಂದ, ಆಕುಲೀಕೃತ = ವ್ಯಥೆಗೊಳಿಸಲ್ಪಟ್ಟ (ಹೆದರಿಸಲ್ಪಟ್ಟ), ಸಮಸ್ತಜನಃ = ಆ ಪ್ರದೇಶದ ಎಲ್ಲ ಜನರುಳ್ಳವನಾಗಿ, ವಿಚಚಾರ = ಸಂಚರಿಸಿದನೊ, ಸಃ = ಆ ದೈತ್ಯನು, ಅಮುಂ = ಈ ವಾಸುದೇವನನ್ನು, ನಿಜಿಘಾಂಸುಃ = ಕೊಲ್ಲಲು ಇಚ್ಛೆಯುಳ್ಳವನಾಗಿ, ಕ್ವಚಿತ್ = ಒಂದೆಡೆಯಲ್ಲಿ, ಉಪಸಸರ್ಪ = ಸಮೀಪಿಸಿದನು.

ತಾ :—ಸರ್ಪದ ಆಕಾರವನ್ನು ಧರಿಸಿದ ಒಬ್ಬ ದೈತ್ಯನು ತನ್ನ ವಿಷದ ಜ್ವಾಲೆಯಿಂದ ಎಲ್ಲ ಜನರನ್ನು ತೊಂದರೆಪಡಿಸುತ್ತ (ಹೆದರಿಸುತ್ತ) ಸಂಚರಿಸುತ್ತಿದ್ದನು. ಅವನ ವಿಷವು ಮಂತ್ರ, ಔಷಧ ಮೊದಲಾದುವುಗಳಿಂದಲೂ ಶಾಂತವಾಗುತ್ತಿರಲಿಲ್ಲ. ಆ ದೈತ್ಯನು ಒಂದು ದಿನ ಒಂದು ಸ್ಥಳದಲ್ಲಿ ಈ ವಾಸುದೇವನನ್ನು ಕೊಲ್ಲಲು ಬಂದನು.

ವ್ಯಾ.ವಿ. :—ಗರಲಾನಾಂ ಊಷ್ಮಾಣಿ = ಗರಲೋಷ್ಮಾಣಿ, ತೈಃ. ಆಕುಲೀಕೃತಾಃ ಸಮಸ್ತಾ ಜನಾಃ ಯೇನ ಸಃ = ಆಕುಲೀಕೃತಸಮಸ್ತಜನಃ.

Rarest Archiver

ನಿಹಂತುಮಿಚ್ಛುಃ = ನಿಜಿಘಾಂಸುಃ. ಅಶಾಂತಿಃ ಅಸ್ಯಾಸ್ತೀತಿ = ಅಶಾಂತಿಮಾನ್, ವಿಚಚಾರ–ಚರ ಗತಿಭಕ್ಷಣಯೋಃ, ಒಂದನೇ ಗಣ, ಸಕ. ಲಿಟ್, ಪರ, ಪ್ರ. ಏ. ವಿ ಉಪಸರ್ಗ + ಚಚಾರ, ಚೇರತುಃ, ಚೇರುಃ. ಚೇರಿಥ, ಚೇರಥುಃ, ಚೇರ. ಚಚಾರ ಚಚರ, ಚೇರಿವ, ಚೇರಿಮ.

ತ್ವರಿತಮುದ್ಯತವಿಸ್ತೃತಮಸ್ತಕಃ
ಪ್ರತಿದದಂಶ ಯದೈನಮವಿಕ್ಷತಮ್ ।
ಪ್ರಭುಪದಾರುಣಚಾರುತರಾಂಗುಲೀ-
ವಿಹೃತಿಪಿಷ್ಟತನುಃ ಪ್ರತತಾಮ ಸಃ ॥ ೩೯ ॥

ಅ :—ಸಃ ತ್ವರಿತಂ ಉದ್ಯತವಿಸ್ತೃತಮಸ್ತಕಃ ಯದಾ ಅವಿಕ್ಷತಂ ಏನಂ ಪ್ರತಿದದಂಶ, ಪ್ರಭುಪದಾರುಣಚಾರುತರಾಂಗಲೀವಿಹೃತಿಪಿಷ್ಟತನುಃ ಪ್ರತತಾಮ.

ಅ :—ಸಃ = ಆ ಸರ್ಪಾಕಾರದ ದೈತ್ಯನು, ತ್ವರಿತಂ = ಜಾಗ್ರತೆಯಾಗಿ, ಉದ್ಯತ = ಎತ್ತಲ್ಪಟ್ಟ, ವಿಸ್ತೃತಮಸ್ತಕಃ = ಬಿಡಿಸಿದ ಹೆಡೆಯುಳ್ಳವನಾಗಿ, ಯದಾ = ಯಾವಾಗ, ಅವಿಕ್ಷತಂ = ಘಾಯವಿಲ್ಲದ, ಏನಂ = ಈ ವಾಸುದೇವನನ್ನು, ಪ್ರತಿದದಂಶ = ಕಚ್ಚಿದನೋ, (ಆಗ) ಪ್ರಭು = ಸಮರ್ಥನಾದ ವಾಸುದೇವನ, ಪದ = ಪಾದದ, ಅರುಣ = ಕೆಂಪಾದ, ಚಾರುತರ = ಅತ್ಯಂತ ಮನೋಹರವಾದ, ಅಂಗುಲೀ = ಬೆರಳಿನ, ವಿಹೃತಿ = ಲೀಲೆಯಿಂದ, ಪಿಷ್ಟ = ಪುಡಿ ಮಾಡಲ್ಪಟ್ಟ, ತನುಃ = ಶರೀರವುಳ್ಳವನಾಗಿ, ಪ್ರತತಾಮ = ಆಯಾಸಗೊಂಡನು.

ತಾ :—ಸರ್ಪಾಕಾರದ ಆ ದೈತ್ಯನು ಕೋಪದಿಂದ ಹೆಡೆಬಿಡಿಸಿದನು. ಕೂಡಲೆ ಯಾವ ವಿಧವಾದ ಘಾಯಕ್ಕೂ ಎಡೆಯಿಲ್ಲದ ಈ ವಾಸುದೇವನನ್ನು ಕಚ್ಚಿದನು. ಆಗ ಸಮರ್ಥನಾದ ವಾಸುದೇವನು ತನ್ನ ಕಾಲಿನ ಸುಂದರ ಬೆರಳಿನಿಂದ ಅನಾಯಾಸವಾಗಿ ಅವನನ್ನು ಅಮುಕಿದನು. ಅದರಿಂದವನು ಬಹಳ ಆಯಾಸಗೊಂಡನು.

ವ್ಯಾ.ವಿ.—ವಿಸ್ತೃತಂ ಚ ತತ್ ಮಸ್ತಕಂ ಚ, ಉದ್ಯತಂ ವಿಸ್ತೃತಮಸ್ತಕಂ ಯಸ್ಯ ಸಃ = ಉದ್ಯತವಿಸ್ತೃತಮಸ್ತಕಃ. ಅತಿಶಯೇನ ಚಾರುಃ =

Rarest Archiver

ಚಾರುತರಾ, ಚಾರುತರಾ ಚ ಸಾ ಅಂಗುಲೀಚ, ಅರುಣಾಚ ಸಾ ಚಾರುತರಾಂಗುಲೀಚ, ಪ್ರಭೋಃ ಪದಂ, ಪ್ರಭುಪದಸ್ಯ ಚಾರುತರಾರುಣಾಂಗುಲೀ, ಪ್ರಭು...ಗುಲ್ಯಾಃ ವಿಹೃತಿಃ, ಪ್ರಭು....ವಿಹೃತ್ಯಾ ಪಿಷ್ಟಾ, ಪ್ರಭು....ಪಿಷ್ಟಾ ತನುಃ ಯಸ್ಯ ಸಃ = ಪ್ರಭುಪದಾರುಣಚಾರುತರಾಂಗುಗುಲೀವಿಹೃತಿಪಿಷ್ಟತನುಃ. ಪ್ರತತಾಮ-ತಮು ಗ್ಲಾನೌ (ಕಾಂಕ್ಷಾಯಾಂ) ನಾಲ್ಕನೆ ಗಣ, ಸಕ. ಲಿಟ್, ಪರ. ಪ್ರ. ಏ. ಪ್ರ ಉಪಸರ್ಗ. ಪ್ರ + ತತಾಮ, ತೇಮತುಃ. ತೇಮುಃ. ತೇಮಿಥ, ತೇಮಥುಃ, ತೇಮ. ತತಾಮ ತತಮ, ತೇಮಿವ, ತೇಮಿಮ.

ಗರುಡತುಂಡಮಿವ ಪ್ರತಿಪನ್ನವಾ-
ನ್ದ್ವಿಜಕುಮಾರಪದಂ ಸ ಮಮಾರ ಚ ।
ಸಮುಚಿತಂ ಚರಿತಂ ಮಹತಾಮಿದಂ
ಸುಮನಸೋ ಮನಸೇಷ್ಟಮಪೂಜಯನ್ ॥ ೪೦ ॥

ಅ :—ಸಃ ಗರುಡತುಂಡಂ ಇವ ದ್ವಿಜಕುಮಾರಪದಂ ಪ್ರತಿಪನ್ನವಾನ್ ಮಮಾರ ಚ. ಸುಮನಸಃ ಮಹತಾಂ ಸಮುಚಿತಂ ಇಷ್ಟಂ ಇದಂ ಚರಿತಂ ಮನಸಾ ಅಪೂಜಯನ್.

ಅ :—ಸಃ = ಆ ಸರ್ಪಾಕಾರದ ದೈತ್ಯನು, ಗರುಡ = ಗರುಡನ, ತುಂಡಂ ಇವ = ಕೊಕ್ಕಿನೋಪಾದಿಯಲ್ಲಿರುವ, ದ್ವಿಜಕುಮಾರ = ಬ್ರಾಹ್ಮಣ ಬಾಲಕನಾದ ವಾಸುದೇವನ, ಪದಂ = ಕಾಲನ್ನು, ಪ್ರತಿಪನ್ನವಾನ್ = ಹೊಂದಿದವನಾಗಿ, ಮಮಾರ ಚ = ಸತ್ತೂ ಹೋದನು. (ಆಗ) ಸುಮನಸಃ = ದೇವತೆಗಳು, ಮಹತಾಂ = ದೊಡ್ಡವರಿಗೆ, ಸಮುಚಿತಂ = ಯೋಗ್ಯವಾದ, ಇಷ್ಟಂ = ಸಜ್ಜನರಿಗೆ ಪ್ರಿಯವಾದ, ಇದಂ = ಈ, ಚರಿತಂ = ಕೆಲಸವನ್ನು, ಮನಸಾ = ಮನಸ್ಸಿನಿಂದ, ಅಪೂಜಯನ್ = ಪೂಜಿಸಿದರು.

ತಾ :—ಆ ಸರ್ಪಾಕಾರದ ದೈತ್ಯನು ಸರ್ಪವು ಗರುಡನ ಬಾಯಿಗೆ ಸಿಕ್ಕಿ ಸಾಯುವಂತೆ ವಾಸುದೇವನ ಕಾಲಿನ ಒತ್ತುವಿಕೆಯಿಂದ ಸತ್ತನು. ಅದು ದೊಡ್ಡವರಿಗೆ ಸಾಧ್ಯವಾದುದೂ, ಸಜ್ಜನರಿಗೆ ಇಷ್ಟವಾದುದೂ ಆಗಿದ್ದಿತು. ಇದನ್ನು ದೇವತೆಗಳು ತಮ್ಮ ಮನಸ್ಸಿನಿಂದಲೇ ಸಂತೋಷದಿಂದ ಸನ್ಮಾನಿಸಿದರು.

ವ್ಯಾ.ವಿ. :—ಗರುಡಸ್ಯ ತುಂಡಂ = ಗರುಡತುಂಡಮ್. ದ್ವಿಜಸ್ಯ

Rarest Archive

ಕುಮಾರಃ, ದ್ವಿಜಕುಮಾರಸ್ಯ ಪದಂ=ದ್ವಿಜಕುಮಾರಪದಮ್. ಅಪೂಜಯನ್ -ಪೂಜ ಪೂಜಾಯಾಂ, ಹತ್ತನೆ ಗಣ, ಸಕ. ಲಙ್, ಪರ. ಪ್ರ. ಬ. ಅಪೂಜಯತ್, ಅಪೂಜಯತಾಂ, ಅಪೂಜಯನ್. ಅಪೂಜಯಃ, ಅಪೂಜಯತಂ, ಅಪೂಜಯತ. ಅಪೂಜಯಂ, ಅಪೂಜಯಾವ, ಅಪೂಜಯಾಮ.

ಗಿರಿಶಗುರ್ವಮರೇಂದ್ರಮುಖ್ಯೈಶ್ಚ ಯ-
ಚ್ಚರಣರೇಣುರಧಾರಿ ಸುರಾಧಿಪೈಃ ।
ಕ್ಷಿತಿಸುರಾಂಘ್ರ್ಯಭಿವಂದನಪೂರ್ವಕಂ
ಸ ವಿದಧೇಽಧ್ಯಯನಂ ಛಲಮಾನುಷಃ ॥ ೪೧ ॥

ಅ:—ಯಚ್ಚರಣರೇಣುಃ ಗಿರಿಶಗುರ್ವಮರೇಂದ್ರಮುಖ್ಯೈಃ ಸುರಾಧಿಪೈಃ ಚ ಅಧಾರಿ, ಸಃ ಛಲಮಾನುಷಃ ಕ್ಷಿತಿಸುರಾಂಘ್ರ್ಯಭಿವಂದನಪೂರ್ವಕಂ ಅಧ್ಯಯನಂ ವಿಧಧೇ.

ಅ :—ಯತ್=ಯಾವ ವಾಸುದೇವನ, ಚರಣ=ಕಾಲುಗಳ, ರೇಣುಃ =ಧೂಳು, ಗಿರಿಶ=ಶಂಕರ, ಗುರು=ಬೃಹಸ್ಪತಿ, ಅಮರೇಂದ್ರ=ದೇವೇಂದ್ರ ಇವರೇ, ಮುಖ್ಯೈಃ=ಮೊದಲಾಗಿ ಉಳ್ಳ, ಸುರಾಧಿಪೈಶ್ಚ=ದೇವತೆಗಳ ಒಡೆಯರಿಂದಲೂ, ಅಧಾರಿ=ಧರಿಸಲ್ಪಟ್ಟಿತೋ, ಸಃ=ಆ, ಛಲಮಾನುಷಃ=ನೆಪದಿಂದ ಮನುಷ್ಯನಾದ ವಾಸುದೇವನು, ಕ್ಷಿತಿಸುರ=ಬ್ರಾಹ್ಮಣನ, ಅಂಘ್ರಿ= ಪಾದಗಳ, ಅಭಿವಂದನ=ನಮಸ್ಕಾರವೇ, ಪೂರ್ವಕಂ=ಮೊದಲಾಗಿ ಉಳ್ಳಂತಹ ಅಧ್ಯಯನಂ=ವೇದಾಧ್ಯಯನವನ್ನು, ವಿದಧೇ=ಮಾಡಿದನು.

ತಾ :—ಮುಖ್ಯಪ್ರಾಣದೇವರ ಅವತಾರನಾದ ಆ ವಾಸುದೇವನ ಪಾದವನ್ನು ಶಂಕರ, ಬೃಹಸ್ಪತಿ, ದೇವೇಂದ್ರ ಮೊದಲಾದ ದೇವತೆಗಳೂ ನಮಸ್ಕರಿಸುತ್ತಿದ್ದರು. ಈಗ ನೆಪಮಾತ್ರದಿಂದ ಮನುಷ್ಯನಾದ ಆ ವಾಸುದೇವನು ಮನುಷ್ಯರ ಬಾಲಕರಂತೆ ಬ್ರಾಹ್ಮಣನಿಗೆ ನಮಸ್ಕಾರಮಾಡಿ ವೇದಾಧ್ಯಯನ ಮಾಡಲು ಆರಂಭಿಸಿದನು.

ವ್ಯಾ.ವಿ. :—ಗಿರಿಶಶ್ಚ ಗುರುಶ್ಚ ಅಮರೇಂದ್ರಶ್ಚ, ಗಿರಿಶಗುರ್ವಮರೇಂದ್ರಾಃ ಮುಖಾನಿ ಯೇಷಾಂ ತೇ=ಗಿರಿಶಗುರ್ವಮರೇಂದ್ರಮುಖಾಃ,

Rarest Archiver

ತ್ರೈಃ ಚರಣಯೋಃ ರೇಣುಃ=ಚರಣರೇಣುಃ. ಸುರಾಣಾಂ ಅಧಿಪಾಃ=ಸುರಾಧಿಪಾಃ, ತ್ರೈಃ. ಕ್ಷಿತಿಸುರಸ್ಯ ಅಂಘ್ರೀ, ಕ್ಷಿತಿಸುರಾಂಘ್ರ್ಯೋಃ ಅಭಿವಂದನಂ, ಕ್ಷಿತಿಸುರಾಂಘ್ರ್ಯಭಿವಂದನಂ ಪೂರ್ವಂ ಯಥಾ ಭವತಿ ತಥಾ=ಕ್ಷಿತಿಸುರಾಂಘ್ರ್ಯಭಿವಂದನಪೂರ್ವಕಮ್. ಛಲೇನ ಮಾನುಷಃ=ಛಲಮಾನುಷಃ. ಅಧಾರಿ-ಧೃಞ್ ಧಾರಣೇ, ಒಂದನೆ ಗಣ, ಸಕ. ಕರ್ಮಣಿ ಲುಙ್, ಪ್ರ. ಏ. ಅಧಾರಿ, ಅಧಾರಿಷಾತಾಂ, ಅಧಾರಿಷತ. ಅಧಾರಿಷ್ಠಾಃ, ಅಧಾರಿಷಾಥಾಂ, ಅಧಾರಿಢ್ವಂ. ಅಧಾರಿಷಿ, ಅಧಾರಿಷ್ವಹಿ, ಅಧಾರಿಷ್ಮಹಿ.

ಕರತಲೇ ಖಲು ಕಂದುಕವತ್ಸದಾ
ಸಕಲಯಾ ಕಲಯಾ ಸಹ ವಿದ್ಯಯಾ ।
ಅರಿಧರೇಣ ಸಮಂ ಸ್ಫುರಿತಂ ಗುರೋ-
ರ್ಮನಸಿ ತಸ್ಯ ವಿಡಂಬಯತೋ ಜನಾನ್ ॥ ೪೨ ॥

ಅ :—ಜನಾನ್ ವಿಡಂಬಯತಃ ಗುರೋಃ ತಸ್ಯ ಮನಸಿ ಸಕಲಯಾ ವಿದ್ಯಯಾ ಕಲಯಾ ಸಹ ಕರತಲೇ ಕಂದುಕವತ್ ಅರಿಧರೇಣ ಸಮಂ ಸದಾ ಸ್ಫುರಿತಂ ಖಲು.

ಅ :—ಜನಾನ್=ಜನರನ್ನು, ವಿಡಂಬಯತಃ=ಅನುಸರಿಸುತ್ತಿರುವ, ಗುರೋಃ=ಸಕಲ ಲೋಕಗಳ ಗುರುವಾದ, ತಸ್ಯ=ಆ ವಾಸುದೇವನ, ಮನಸಿ=ಮನಸ್ಸಿನಲ್ಲಿ, ಸಕಲಯಾ=ಎಲ್ಲ, ವಿದ್ಯಯಾ=ವಿದ್ಯೆಯಿಂದ, ಕಲಯಾ ಸಹ=ಇತರ ಕಲೆಗಳೊಡನೆ, ಕರತಲೇ=ಅಂಗೈಯಲ್ಲಿ, ಕಂದುಕವತ್=ಚೆಂಡಿನಂತೆ, ಅರಿಧರೇಣ ಸಮಂ=ಚಕ್ರವನ್ನು ಹಿಡಿದಿರುವ ನಾರಾಯಣನೊಡನೆ, ಸದಾ=ಯಾವಾಗಲೂ, ಸ್ಫುರಿತಂ ಖಲು=ಪ್ರಕಾಶಗೊಳ್ಳೀಣವಾಗಿದೆಯಷ್ಟೆ.

ತಾ :—ಮಾನವನು ಸಕಲ ವೇದವಿದ್ಯೆಗಳನ್ನೂ, ಸಂಗೀತ ಮೊದಲಾದ ಕಲೆಗಳನ್ನೂ ಸ್ವಾಧೀನಪಡಿಸಿಕೊಳ್ಳುವುದಕ್ಕೂ, ಅವುಗಳಿಂದ ಪ್ರತಿಪಾದ್ಯನಾದ ಭಗವಂತನನ್ನು ಅರಿಯುವುದಕ್ಕೂ ಅಭ್ಯಾಸ ಮಾಡಬೇಕಾಗುವುದು. ಆದರೆ ಸಮಸ್ತ ಜಗತ್ತಿಗೆ ಗುರುವಾದ ಆ ವಾಸುದೇವನು ಮೊದಲೇ ಅವುಗಳನ್ನು ಅಂಗೈಯಲ್ಲಿರುವ ಚೆಂಡಿನಂತೆ ಪೂರ್ತಿಯಾಗಿ ತಿಳಿದುಕೊಂಡಿದ್ದನು. ಆದರೂ ಸಾಮಾನ್ಯ ಜನರಂತೆ ನಟಿಸುತ್ತ ಆ ವಿದ್ಯೆಗಳನ್ನು ಅಭ್ಯಾಸ ಮಾಡುತ್ತಿದ್ದನು.

Rarest Archiver

ವ್ಯಾ.ವಿ :—ಕರಸ್ಯ ತಲಂ=ಕರತಲಂ, ತಸ್ಮಿನ್. ಕಂದುಕೇನ ತುಲ್ಯಂ =ಕಂದುಕವತ್.

ಅನಧಿಕೈರಧಿಕೈಶ್ಚ ವಯಸ್ಯಥೋ
ಬಹುಭಿರಧ್ಯಯನೋಪರಮಾಂತರೇ ।
ಅನಿಕಟೇ ವಟುಭಿಃ ಪಟುಭಿರ್ಗುರೋಃ
ಸ ವಿಜಹಾರ ಸುಖೀ ಸಖಿಭಿಃ ಸಮಮ್ ॥ ೪೩ ॥

ಅ :—ಅಥೋ ಸುಖೀ ಸಃ ಅಧ್ಯಯನೋಪರಮಾಂತರೇ ವಯಸಿ ಅನಧಿಕೈಃ ಅಧಿಕೈಃ ಚ ಬಹುಭಿಃ ಪಟುಭಿಃ ಸಖಿಭಿಃ ವಟುಭಿಃ ಸಮಂ ಗುರೋಃ ಅನಿಕಟೇ ವಿಜಹಾರ.

ಅ :—ಅಥೋ=ಬಳಿಕ, ಸುಖೀ=ಸುಖವುಳ್ಳ, ಸಃ=ಆ ವಾಸುದೇವನು, ಅಧ್ಯಯನ=ಓದುವುದರ, ಉಪರಮ=ಮುಗಿಯುವಿಕೆಯ, ಅಂತರೇ=ಮಧ್ಯದಲ್ಲಿ, ವಯಸಿ=ವಯಸ್ಸಿನಲ್ಲಿ, ಅನಧಿಕೈಃ=ಹೆಚ್ಚಾಗದಿರುವ, (ಸಮಾನರಾದ) ಚ=ಮತ್ತು, ಅಧಿಕೈಃ=ಹೆಚ್ಚಿನವರಾದ, ಬಹುಭಿಃ =ಬಹಳ ಮಂದಿ, ಪಟುಭಿಃ=ಬುದ್ಧಿವಂತರಾದ, ಸಖಿಭಿಃ=ಸ್ನೇಹಿತರಾದ, ವಟುಭಿಃ ಸಮಂ=ಬ್ರಹ್ಮಚಾರಿಗಳೊಡನೆ, ಗುರೋಃ=ಉಪಾಧ್ಯಾಯರ, ಅನಿಕಟೇ=ದೂರದಲ್ಲಿ, ವಿಜಹಾರ=ಆಟವಾಡಿದನು.

ತಾ :—ತರುವಾಯ ಸುಖಿಯಾದ ಆ ವಾಸುದೇವನು, ಓದುವಿಕೆಯು ಮುಗಿಯುವಷ್ಟರಲ್ಲಿ ತನಗೆ ಸಮಾನ ವಯಸ್ಸಿನವರೂ, ಹೆಚ್ಚಿನ ವಯಸ್ಸಿನವರೂ, ಸ್ನೇಹಿತರೂ ಆದ ಬಹುಮಂದಿ ಬುದ್ಧಿಶಾಲಿ ಬಾಲಕರೊಡನೆ ಗುರುಗಳಿಗಿರುವ ಸ್ಥಳಕ್ಕಿಂತ ದೂರದಲ್ಲಿ ಆಟವಾಡಿದನು.

ವ್ಯಾ.ವಿ :—ಅಧ್ಯಯನಸ್ಯ ಉಪರಮಃ, ಅಧ್ಯಯನೋಪರಮಸ್ಯ ಅಂತರಂ=ಅಧ್ಯಯನೋಪರಮಾಂತರಂ, ತಸ್ಮಿನ್. ಸಖಿಭಿಃ ಸಮಂ 'ಸಹಯುಕ್ತೇಽಪ್ರಧಾನೇ' ಈ ಸೂತ್ರದಿಂದ ತೃತೀಯಾ ವಿಭಕ್ತಿ ಬಂದಿದೆ. ವಿಜಹಾರ ಹೃಞ್ ಹರಣೇ, ಒಂದನೆ ಗಣ, ಸಕ. ಲಿಟ್, ಪರ. ಪ್ರ.ಏ. ಉಪಸರ್ಗ. ವಿ+ಜಹಾರ, ಜಹ್ರತುಃ, ಜಹ್ರುಃ. ಜಹರ್ಥ, ಜಹ್ರಥುಃ, ಜಹ್ರ. ಜಹಾರ ಜಹರ, ಜಹ್ರಿವ, ಜಹ್ರಿಮ.

Rarest Archiver

ಪದಮುದೀರ್ಯ ಜವೇನ ಯಿಯಾಸಿತಂ
ದ್ರುತಸಖೇಷ್ವಭವತ್ಸ ಪುರಸ್ಸರಃ ।
ಅಯಮಯತ್ನತಯೇತಿ ನ ವಿಸ್ಮಯೋ
ನನು ಮನೋಜವಜಿತ್ಪವನೋಽಸಕೌ (ಹ್ಯಸೌ) ॥ ೪೪ ॥

ಅ :—ಸಃ ಅಯಂ ಜವೇನ ಯಿಯಾಸಿತಂ ಪದಂ ಉದೀರ್ಯ ದ್ರುತ-ಸಖೇಷು ಅಯತ್ನತಯಾ ಪುರಸ್ಸರಃ ಅಭವತ್ ಇತಿ ವಿಸ್ಮಯಃ ನ. ಅಸಕೌ (ಅಸೌ) ಮನೋಜವಜಿತ್ ಪವನಃ ನನು.

ಅ:—ಸಃ ಅಯಂ=ಈ ವಾಸುದೇವನು, ಜವೇನ=ವೇಗದಿಂದ, ಯಿಯಾಸಿತಂ=ಹೋಗಲು ಅಪೇಕ್ಷಿಸಲ್ಪಟ್ಟ, ಪದಂ=ಸ್ಥಳವನ್ನು, ಉದೀರ್ಯ=ಹೇಳಿ, ದ್ರುತ=ಓಡಿದ, ಸಖೇಷು=ಸ್ನೇಹಿತರಲ್ಲಿ, ಅಯತ್ನತಯಾ=ಪ್ರಯತ್ನವಿಲ್ಲದೆಯೇ, ಪುರಸ್ಸರಃ=ಮುಂದೆ ಹೋಗುವವನು, ಅಭವತ್=ಆದನು. ಇತಿ=ಹೀಗೆಂದು, ವಿಸ್ಮಯಃ=ಆಶ್ಚರ್ಯವು, ನ=ಇಲ್ಲ. ಅಸಕೌ (ಅಸೌ)=ಇವನು, ಮನಃ=ಮನಸ್ಸಿನ, ಜವ=ವೇಗವನ್ನು, ಜಿತ್=ಗೆದ್ದ, ಪವನಃ ನನು=ವಾಯುವಷ್ಟೆ.

ತಾ :—ಈ ವಾಸುದೇವನು ಓಡುವುದರಲ್ಲಿ ಸ್ಪರ್ಧೆಯನ್ನು ಏರ್ಪಡಿಸಿದನು. ಅದರಲ್ಲಿ ಓಡಿ ಮುಟ್ಟುವ ಒಂದು ಜಾಗವನ್ನು ನಿಶ್ಚಯಿಸಿದನು. ಸ್ಪರ್ಧಿಸಲು ಬಂದ ಸ್ನೇಹಿತರೊಡನೆ ಓಡಿದನು. ಅವರೆಲ್ಲರಿಗಿಂತಲೂ ಮೊದಲು ನಿರ್ದಿಷ್ಟ ಸ್ಥಳವನ್ನು ತಾನು ಮುಟ್ಟಿ ಗೆದ್ದು ಮುಂದಾಳಾದನು. ಮನಸ್ಸಿನ ವೇಗವನ್ನು ಮೀರಿಸಿದ ವೇಗವುಳ್ಳ ವಾಯುವಿನ ಅವತಾರನಾದ ಈ ವಾಸುದೇವನ ವಿಷಯದಲ್ಲಿ ಇದು ಆಶ್ಚರ್ಯವಲ್ಲ.

ವ್ಯಾ.ವಿ :—ದ್ರುತಾಶ್ಚ ತೇ ಸಖಾಯಶ್ಚ=ದ್ರುತಸಖಾಃ, ತೇಷು. 'ರಾಜಾಹಸ್ಸಖಿಭ್ಯಃ ಟಚ್' ಇದರಿಂದ ಟಚ್ ಪ್ರತ್ಯಯ ಬಂದು ಸಖಿ ಶಬ್ದವು ಅಕಾರಾಂತವಾಗಿದೆ ಮನಸಃ ಜವಃ, ಮನೋಜವಂ ಜಯತೀತಿ=ಮನೋಜ-ವಜಿತ್.

ಪ್ಲವನತೇಜಸಿ ಹಂತ ನ ಕೇವಲಂ
ವಿಜಿತವಾನ್ ಸ ತದಾ ಸಕಲಾನ್ ಜನಾನ್ ।

Rarest Archive

(I) High jump, Long jump



ಪ್ರಭುನಿದೇಶಕರೋ ಹನುಮತ್ತನೌ
ನನು ಜಿಗಾಯ ಸ ವಾಲಿಸುತಾದಿಕಾನ್ || ೪೩ ||

ಅ:—ಸಃ ಪ್ಲವನತೇಜಸಿ ಸಕಲಾನ್ ಜನಾನ್ ಕೇವಲಂ ತದಾ ಹಂತ ವಿಜಿತವಾನ್ ನ. ಹನುಮತ್ತನೌ ಪ್ರಭುನಿದೇಶಕರಃ ಸ ವಾಲಿಸುತಾದಿಕಾನ್ ಜಿಗಾಯ ನನು.

ಅ :—ಸಃ=ಆ ವಾಸುದೇವನು, ಪ್ಲವನತೇಜಸಿ=ಎತ್ತರಕ್ಕೆ ಹಾರುವ ಬಲದಲ್ಲಿ, ಸಕಲಾನ್=ಎಲ್ಲ, ಜನಾನ್=ಜನರನ್ನು, ಕೇವಲಂ=ಮುಖ್ಯವಾಗಿ, ತದಾ=ಆಗ, ಹಂತ=ಸಂತೋಷದಿಂದ, ವಿಜಿತವಾನ್=ಗೆದ್ದವನು. ನ=ಅಲ್ಲ. ಹನುಮತ್ತನೌ=ಆಂಜನೇಯನ ಅವತಾರದಲ್ಲಿ, ಪ್ರಭು=ಸ್ವಾಮಿಯಾದ ಶ್ರೀರಾಮನ, ನಿದೇಶ=ಅಪ್ಪಣೆಯನ್ನು, ಕರಃ=ಮಾಡಿದ, ಸಃ=ವಾಸುದೇವನು, ವಾಲಿಸುತ=ವಾಲಿಯ ಮಗನಾದ ಅಂಗದನೆ, ಅದಿಕಾನ್=ಮೊದಲಾದವರನ್ನು, ಜಿಗಾಯ ನನು=ಗೆದ್ದಿರುವನಷ್ಟೆ. (I)

ತಾ :—ಆ ವಾಸುದೇವನು ಹಾರುವ ಸ್ಪರ್ಧೆಯಲ್ಲಿ ಸಂತೋಷದಿಂದ ಎಲ್ಲರನ್ನೂ ಗೆದ್ದು ಬಲಶಾಲಿಯೆನಿಸಿಕೊಂಡನು. ಹಿಂದೆ ರಾಮಾವತಾರದಲ್ಲಿ ಶ್ರೀರಾಮನ ಅಪ್ಪಣೆಯಂತೆ ಸೀತೆಯನ್ನು ಹುಡುಕಿ ಅವಳಿಗೆ ಮುದ್ರೆಯುಂಗುರವನ್ನು ಕೊಡಲೋಸುಗ ನೂರು ಗಾವುದ ದೂರದ ದಕ್ಷಿಣ ಸಮುದ್ರವನ್ನು ದಾಟಿ ಲಂಕೆಯನ್ನು ಸೇರಿ ವಾಲಿಯ ಮಗನಾದ ಅಂಗದ ಮೊದಲಾದವರನ್ನು ಗೆದ್ದ ಇವನಿಗೆ ಇದು ಆಶ್ಚರ್ಯವಲ್ಲ.

ವ್ಯಾ. ವಿ. :—ಪ್ಲವನಸ್ಯ ತೇಜಃ=ಪ್ಲವನತೇಜಃ, ತಸ್ಮಿನ್. ಪ್ರಭೋಃ ನಿದೇಶಃ, ಪ್ರಭುನಿದೇಶಂ ಕರೋತೀತಿ=ಪ್ರಭುನಿದೇಶಕರಃ ಹನುಮತಃ ತನುಃ =ಹನುಮತ್ತನುಃ, ತಸ್ಯಾಂ. ವಾಲಿನಃ ಸುತಃ, ವಾಲಿಸುತಃ ಆದಿಃ ಯೇಷಾಂ ತೇ=ವಾಲಿಸುತಾದಿಕಾಃ, ತಾನ್. ಜಿಗಾಯ—ಜಿ ಜಯೇ, ಒಂದನೆ ಗಣ, ಸಕ. ಲಿಟ್, ಪರ. ಪ್ರ. ಏ. ಜಿಗಾಯ, ಜಿಗ್ಯತುಃ, ಜಿಗ್ಯುಃ. ಜಿಗಯಿಥ ಜಿಗೇಥ, ಜಿಗ್ಯಥುಃ, ಜಿಗ್ಯ. ಜಿಗಾಯ ಜಗಯ, ಜಿಗ್ಯಿವ, ಜಿಗ್ಯಿಮ.

ಜಲವಿಹಾರಪರಾಜಯಿಭಿಃ ಸ್ಪೃಧಾ
ಸಖಿಭಿರೀರಿತವಾರಿಪರಿಶ್ರಿತಮ್ ।

Rarest Archives

ವದನಮಾಕುಲಲೋಚನಮಾದಧೇ
ಸ್ಮಿತಮಮುಷ್ಯ ಹಿ ಕಂಚನ ವಿಭ್ರಮಮ್ || ೪೬ ||

ಅ :—ಜಲವಿಹಾರಪರಾಜಯಿಭಿಃ ಸಖಿಭಿಃ ಸ್ಪೃಧಾ ಈರಿತವಾರಿ ಪರಿಶ್ರಿತಂ ಆಕುಲಲೋಚನಂ ಸ್ಮಿತಂ ಅಮುಷ್ಯ ವದನಂ ಕಂಚನ ವಿಭ್ರಮಂ ಆದಧೇ ಹಿ

ಅ :—ಜಲ=ನೀರಿನ, ವಿಹಾರ=ಆಟದಲ್ಲಿ, ಪರಾಜಯಿಭಿಃ=ಸೋತ, ಸಖಿಭಿಃ=ಸ್ನೇಹಿತರಿಂದ, ಸ್ಪೃಧಾ=ಸ್ಪರ್ಧೆಯಿಂದ, ಈರಿತ=ಬೊಗಸೆಯಿಂದ ಎರಚಲ್ಪಟ್ಟ, ವಾರಿ=ನೀರಿನಿಂದ, ಪರಿಶ್ರಿತಂ=ಆಶ್ರಯಿಸಲ್ಪಟ್ಟ, ಆಕುಲ=ವ್ಯಾಕುಲಗೊಂಡ, ಲೋಚನಂ=ಕಣ್ಣುಗಳುಳ್ಳ, ಸ್ಮಿತಂ=ಮುಗುಳ್ನಗೆಯಿಂದ ಕೂಡಿದ, ಅಮುಷ್ಯ=ಈ ವಾಸುದೇವನ, ವದನಂ=ಮುಖವು, ಕಂಚನ=ವಿಲಕ್ಷಣವಾದ, ವಿಭ್ರಮಂ=ಕಾಂತಿಯನ್ನು, ಆದಧೇ ಹಿ=ಧರಿಸಿತು.

ತಾ :—ಈ ವಾಸುದೇವನು ಸ್ನೇಹಿತರೊಡನೆ ಜಲಕ್ರೀಡೆಯಾಡಿ ಅವರನ್ನು ಗೆದ್ದನು. ಆಗ ಅವರು ಸ್ಪರ್ಧೆಯಿಂದ ಇವನ ಮುಖಕ್ಕೆ ಬೊಗಸೆಯಿಂದ ನೀರನ್ನು ಎರಚಿದರು. ಅದು ಇವನ ಕಣ್ಣುಗಳಿಗೆ ಬಿದ್ದು ತೊಂದರೆಯಾದರೂ ಮುಖವು ಆಗಲೂ ವಿಲಕ್ಷಣವಾದ ಕಾಂತಿಯನ್ನು ಬೀರಿತು.

ವ್ಯಾ.ವಿ. :—ಜಲೇ ವಿಹಾರಃ, ಜಲವಿಹಾರೇ ಪರಾಜಯಃ, ಜಲವಿಹಾರಪರಾಜಯಃ ಏಷಾಂ ಅಸ್ತೀತಿ=ಜಲವಿಹಾರಪರಾಜಯಿನಃ, ತೈಃ. ಈರಿತಂ ಚ ತತ್ ವಾರಿ ಚ, ಈರಿತವಾರಿಣಾ ಪರಿಶ್ರಿತಮ್=ಈರಿತವಾರಿಪರಿಶ್ರಿತಂ, ಆಕುಲೇ ಲೋಚನೇ ಯಸ್ಯ ತತ್=ಆಕುಲಲೋಚನಮ್.

ಸ ಶನಕೈರ್ಬಲಿನೋಽಯುಗಪದ್ಗತಾನ್
ಪ್ರವಿಹೃತೇಷು ಸಖೀನ್ನಿರಪಾತಯತ್ ।
ಅಶನಕೈರ್ಯುಗಪತ್ಪ್ರಕೃತಾಹವಾನ್
ಸಹಸಿತೋ ದ್ವಿಜಸೂನುರಯತ್ನವಾನ್ || ೪೭ ||

ಅ :—ಸಹಸಿತಃ ಸಃ ದ್ವಿಜಸೂನುಃ ಪ್ರವಿಹೃತೇಷು ಅಯುಗಪತ್ ಗತಾನ್ ಪ್ರಕೃತಾಹವಾನ್ ಬಲಿನಃ ಸಖೀನ್ ಶನಕೈಃ ನಿರಪಾತಯತ್.

Rarest Archiver

(1) Weight lifting.



ಯುಗಪತ್ (ಗತಾನ್) ಪ್ರಕೃತಾಹವಾನ್ ಸಖೀನ್ ಅಶನಕೈಃ ಅಯತ್ನವಾನ್ ನಿರಪಾತಯತ್.

ಅ :—ಸಹಸಿತಃ=ಮುಗುಳ್ನಗೆಯಿಂದ ಕೂಡಿದ, ಸಃ=ಆ, ದ್ವಿಜಸೂನುಃ=ಬ್ರಾಹ್ಮಣನ ಮಗನಾದ ವಾಸುದೇವನು, ಪ್ರವಿಹೃತೇಷು=ಆಟಗಳಲ್ಲಿ, ಅಯುಗಪತ್=ಬೇರೆಯಾಗಿ, ಗತಾನ್=ತನ್ನನ್ನು ಬೀಳಿಸಲು ಸಮೀಪಿಸಿದ, ಪ್ರಕೃತ=ಚೆನ್ನಾಗಿ ಮಾಡಲ್ಪಟ್ಟ, (ಆರಂಭಿಸಿದ) ಆಹವಾನ್=ಆಟದ ಜಗಳವುಳ್ಳ, ಬಲಿನಃ=ಬಲಿಷ್ಠರಾದ, ಸಖೀನ್=ಸ್ನೇಹಿತರನ್ನು, ಶನಕೈಃ=ಮೆಲ್ಲನೆ, ನಿರಪಾತಯತ್=ಕೆಡವಿದನು. ಯುಗಪತ್=ಒಂದೇ ಸಲ, ಗತಾನ್=ಸಮೀಪಿಸಿದ, ಪ್ರಕೃತಾಹವಾನ್=ಆಟಕ್ಕಾಗಿ ಜಗಳವಾಡಿದ, (ಆರಂಭಿಸಿದ ಜಗಳವುಳ್ಳ) ಸಖೀನ್=ಸ್ನೇಹಿತರನ್ನು, ಅಶನಕೈಃ=ಬೇಗನೆ, ಅಯತ್ನವಾನ್=ಪ್ರಯತ್ನವಿಲ್ಲದವನಾಗಿ, ನಿರಪಾತಯತ್=ಕೆಡವಿದನು.

ತಾ :—ಆ ವಾಸುದೇವನು ತಮಾಷೆಯಾಗಿ ಒಬ್ಬೊಬ್ಬರಾಗಿ ಜಗಳ ಮಾಡಲು ಬಂದ ಬಲಶಾಲಿಗಳಾದ ಸ್ನೇಹಿತರನ್ನು ಮೆಲ್ಲನೆ ನೆಲದಲ್ಲಿ ಉರುಳಿಸಿದನು. ಅನಂತರ ಒಟ್ಟಿಗೆ ಜಗಳವಾಡಲು ಬಂದ ಆ ಸ್ನೇಹಿತರನ್ನು ಅನಾಯಾಸವಾಗಿ ನೆಲದ ಮೇಲೆ ಬೇಗನೆ ಕೆಡವಿದನು.

ವ್ಯಾ. ವಿ :—ಪ್ರಕೃತಃ ಆಹವಃ ಯೈಸ್ತೇ=ಪ್ರಕೃತಾಹವಾಃ, ತಾನ್. ಹಸಿತೇನ ಸಹಿತಃ=ಸಹಸಿತಃ. ದ್ವಿಜಸ್ಯ ಸೂನುಃ=ದ್ವಿಜಸೂನುಃ. ಯತ್ನಃ ಅಸ್ಯಾಸ್ತೀತಿ=ಯತ್ನವಾನ್, ನ ಯತ್ನವಾನ್=ಅಯತ್ನವಾನ್. ನಿರಪಾತಯತ್ ಪತ್ಲೃ ಗತೌ, ಒಂದನೆ ಗಣ, ಸಕ ಣಿಜನ್ತ, ಲಙ್, ಪರ. ಪ್ರ. ಏ. ನಿರ್ ಉಪಸರ್ಗ. ನಿರ್+ಅಪಾತಯತ್, ಅಪಾತಯತಾಂ, ಅಪಾತಯನ್. ಅಪಾತಯಃ, ಅಪಾತಯತಂ, ಅಪಾತಯತ. ಅಪಾತಯಂ, ಅಪಾತಯಾವ, ಅಪಾತಯಾಮ.

ಗ್ರಹಣನಿಗ್ರಹಣೇ ಗ್ರಹಣೇ ಧೃಢೇ
(1) ಗುರುಭರೋದ್ಧರಣಾದಿವಿಧೌ ಪಟೌ ।
ಇಹ ವಿಧಾವುಪಚಾರಧಿಯಾ ನೃಣಾ-
ಮೃತಮಯಂ ನನು ಭೀಮ ಇತೀರಿತಮ್ ॥ ೪೮ ॥

ಅ :—ಗ್ರಹಣನಿಗ್ರಹಣೇ ಧೃಢೇ ಗ್ರಹಣೇ ಗುರುಭರೋದ್ಧರಣಾದಿವಿಧೌ

Rarest Archiver

ಪಟೌ ವಿಭೌ ಇಹ ಉಪಚಾರಧಿಯಾ ಅಯಂ ಭೀಮಃ ಇತಿ ನೃಣಾಂ ಈರಿತಂ ಋತಂ ನನು.

ಅ :—ಗ್ರಹಣ=ಇನ್ನೊಬ್ಬರ ಹಿಡಿತದ, ನಿಗ್ರಹಣೇ=ಬಿಡಿಸಿಕೊಳ್ಳು ವಿಕೆಯಲ್ಲಿ, ದೃಢೇ=ಘಟ್ಟಿಯಾಗಿ, ಗ್ರಹಣೇ=ತಾನು (ಇನ್ನೊಬ್ಬರನ್ನು) ಹಿಡಿದುಕೊಳ್ಳುವುದರಲ್ಲಿ, ಗುರು=ಹೆಚ್ಚಾದ, ಭರ=ಭಾರದ, ಉದ್ಧರಣ= ಎತ್ತುವುದೇ, ಆದಿ=ಮೊದಲಾಗಿ ಉಳ್ಳ, ವಿಧೌ=ಕೆಲಸದಲ್ಲಿ, ಪಟೌ= ಸಮರ್ಥನಾದ, ವಿಭೌ=ಶಕ್ತನಾದ, ಇಹ=ಈ ವಾಸುದೇವನಲ್ಲಿ, ಉಪಚಾರ- ಧಿಯಾ=ಉಪಚಾರ ಬುದ್ಧಿಯಿಂದ, (ಲಾಕ್ಷಣಿಕರೀತಿಯಿಂದ) ಅಯಂ= ಇವನು, ಭೀಮಃ ಇತಿ=ಭೀಮನೆಂಬ, ನೃಣಾಂ=ಮನುಷ್ಯರ, ಈರಿತಂ= ಮಾತು, ಋತಂ ನನು=ಸತ್ಯವಾದುದಷ್ಟೆ.

ತಾ :—ಈ ವಾಸುದೇವನು ಇನ್ನೊಬ್ಬರು ಹಿಡಿದುಕೊಂಡಾಗ ಬಿಡಿಸಿ ಕೊಳ್ಳುವುದರಲ್ಲಿಯೂ, ತಾನು ಮತ್ತೊಬ್ಬರನ್ನು ಗಟ್ಟಿಯಾಗಿ ಹಿಡಿದುಕೊಳ್ಳು ವುದರಲ್ಲಿಯೂ, ಹೆಚ್ಚು ಭಾರದ ವಸ್ತುವನ್ನು ಎತ್ತುವುದರಲ್ಲಿಯೂ ಅತ್ಯಂತ ಸಮರ್ಥನಾಗಿದ್ದನು. ಆದ್ದರಿಂದ ಇವನು ಮುಖ್ಯಪ್ರಾಣದೇವರ ಅವತಾರ ನಾಗಿರುವನೆಂದರಿಯದ ಜನರು ಇವನನ್ನು ನೋಡಿ ಇವನು ಭೀಮನು ಎಂದು ಹೇಳಿದರು. ಈ ಮಾತು ಹುಡುಗನು ಸಿಂಹದಂತೆ ಇದ್ದಾನೆ ಎಂಬ ಸಾದೃಶ್ಯದ ಮಾತಿನಂತೆ ಲಾಕ್ಷಣಿಕವಾಗಿತ್ತು. ಆದರೂ ಹಿಂದೆ ಭೀಮನಾಗಿದ್ದ ಇವನಲ್ಲಿ ಅದು ಸತ್ಯವೇ ಆಯಿತು.

ವ್ಯಾ.ವಿ :—ಗ್ರಹಣಸ್ಯ ನಿಗ್ರಹಣಂ=ಗ್ರಹಣನಿಗ್ರಹಣಂ, ತಸ್ಮಿನ್. ಗುರುಶ್ಚಾಸೌ ಭರಶ್ಚ, ಗುರುಭರಸ್ಯ ಉದ್ಧರಣಂ, ಗುರುಭರೋದ್ಧರಣಂ ಆದಿ ಯಸ್ಯ ಸಃ, ಗುರುಭರಣೋದ್ಧರಣಾದಿಶ್ಚಾಸೌ ವಿಧಿಶ್ಚ=ಗುರುಭರಣೋದ್ಧ- ರಣಾಧಿವಿದಿಃ, ತಸ್ಮಿನ್. ಉಪಚಾರೇಣ ಧೀಃ=ಉಪಚಾರಧೀಃ, ತಯಾ.

ವಿಹರತೀತಿ ಪಠತ್ಯಪಿ ನ ಸ್ಫುಟಂ
ಸ್ವಗೃಹಗಾಮಿನಿ ಚಾದ್ಭುತಮಾಯತಿ ।
ಪರಿತುತೋಷ ನ ತತ್ರ ಜಗದ್ಗುರೌ ಸ
ಕಿಲ ಪೂಗವನಾನ್ವಯಜೋ ದ್ವಿಜಃ ॥ ೪೯ ॥

Rarest Archiver

ಅ :—ಇತಿ ವಿಹರತಿ ಸ್ಫುಟಂ ನ ಪಠತಿ ಅಪಿ ಸ್ವಗೃಹಗಾಮಿನಿ, ಚ ಅದ್ರುತಂ ಆಯತಿ ಜಗದ್ಗುರೌ ತತ್ರ ಪೂಗವನಾನ್ವಯಜಃ ಸಃ ದ್ವಿಜಃ-ನ ಪರಿತುತೋಷ ಕಿಲ.

ಅ :—ಇತಿ=ಈ ರೀತಿ, ವಿಹರತಿ=ಆಡುತ್ತಿರುವ, ಸ್ಫುಟಂ=ಚೆನ್ನಾಗಿ, ನ ಪಠತಿ ಅಪಿ=ಓದದೆ ಇರುವವನಾದರೂ, ಸ್ವಗೃಹ=ತನ್ನ ಮನೆಗೆ, ಗಾಮಿನಿ=ಹೋಗುತ್ತಿರುವ, ಚ=ಮತ್ತು, ಅದ್ರುತಂ=ಮೆಲ್ಲನೆ, ಆಯತಿ=ಬರುತ್ತಿರುವ, ಜಗದ್ಗುರೌ=ಪ್ರಪಂಚದ ಗುರುವಾದ, ತತ್ರ=ಆ ವಾಸುದೇವನಲ್ಲಿ, ಪೂಗವನಾನ್ವಯಜಃ=ತೋಟಂತಿಲ್ಲಾಯ ಎಂಬ ವಂಶದಲ್ಲಿ ಹುಟ್ಟಿದ, ಸಃ=ಆ, ದ್ವಿಜಃ=ಬ್ರಾಹ್ಮಣೋಪಾಧ್ಯಾಯರು, ನ ಪರಿತುತೋಷ=ಸಂತೋಷಗೊಳ್ಳಲಿಲ್ಲ.

ತಾ :— ಜಗದ್ಗುರುವಾದ ಆ ವಾಸುದೇವನು ತಾನು ಎಲ್ಲವನ್ನೂ ಬಲ್ಲವನಾದ್ದರಿಂದ ಈ ರೀತಿ ಆಡುತ್ತ ಚೆನ್ನಾಗಿ ವೇದ ಪಾಠಗಳನ್ನು ಓದುತ್ತಿರಲಿಲ್ಲ. ಯಾವಾಗಲೂ ಊಟ ಮೊದಲಾದವುಗಳಿಗಾಗಿ ಮನೆಗೆ ಹೋಗುತ್ತಿದ್ದನು. ಬೇಗನೆ ಪಾಠವನ್ನು ಓದಲು ಬರುತ್ತಿರಲಿಲ್ಲ. ಇದನ್ನು ಕಂಡು ಅವನ ಮಾಹಾತ್ಮ್ಯವನ್ನರಿಯದ ಉಪಾಧ್ಯಾಯರಾದ ತೋಟಂತಿಲ್ಲಾಯ ವಂಶದ ಬ್ರಾಹ್ಮಣರು ಅಸಮಾಧಾನಗೊಂಡರು.

ವ್ಯಾ.ವಿ :—ಸ್ವಸ್ಯ ಗೃಹಂ, ಸ್ವಗೃಹಂ ಗಚ್ಛತೀತಿ=ಸ್ವಗೃಹಗಾಮೀ, ತಸ್ಮಿನ್. ಜಗತಃ ಗುರುಃ=ಜಗದ್ಗುರುಃ, ತಸ್ಮಿನ್. ಪೂಗವನಂ ಇತಿ ಅನ್ವಯಃ, ಪೂಗವನಾನ್ವಯೇ ಜಾತಃ=ಪೂಗವನಾನ್ವಯಜಃ. ಪರಿತುತೋಷ-ತುಷ ಪ್ರೀತೌ, ನಾಲ್ಕನೇ ಗಣ, ಅಕ. ಲಿಟ್, ಪರ. ಪ್ರ. ಏ. ಪರಿ. ಉಪಸರ್ಗ. ಪರಿ+ತುತೋಷ, ತುತುಷತುಃ, ತುತುಷುಃ. ತುತೋಷಿಥ, ತುತುಷಥುಃ, ತುತುಷ. ತುತೋಷ, ತುತುಷಿವ, ತುತುಷಿಮ.

ಅಥ ಕದಾಚನ ಸೋಽಧ್ಯಯನಾಂತರೇ
ತಮವದತ್ಕುಪಿತೋಽನ್ಯಮನಸ್ವಿನಮ್ ।
ಪಠಸಿ ನೋ ಶಠ ತೇ ಸಖಿಭಿಃ ಸಮಂ
ಕಿಮಿತಿ ನಿತ್ಯಮುದಾಸಿತಧೀರಿತಿ ॥ ೩೦ ॥

Rarest Archives

ಅ:—ಅಥ ಕದಾಚನ ಕುಪಿತಃ ಸಃ ಅಧ್ಯಯನಾಂತರೇ ಅನ್ಯಮನಸ್ವಿನಂ ತಂ 'ಶಠ! ನಿತ್ಯಂ ಉದಾಸಿತಧೀಃ ತೇ ಸಖಿಭಿಃ ಸಮಂ ಕಿಮಿತಿ ನೋ ಪಠಸಿ?' ಇತಿ ಅವದತ್.

ಅ:—ಅಥ=ತರುವಾಯ, ಕದಾಚನ=ಒಂದಾನೊಂದು ವೇಳೆ, ಕುಪಿತಃ=ಸಿಟ್ಟುಗೊಂಡ, ಸಃ=ಆ ಉಪಾಧ್ಯಾಯನು, ಅಧ್ಯಯನಾಂತರೇ=ಓದುವುದರ ಮಧ್ಯದಲ್ಲಿ, ಅನ್ಯಮನಸ್ವಿನಂ=ಬೇರೆ ವಿಷಯದಲ್ಲಿ ಮನಸ್ಸುಳ್ಳ, ತಂ=ಆ ವಾಸುದೇವನನ್ನು ಕುರಿತು, ಶಠ=ಮೂರ್ಖ! (ಅಥವಾ ಉತ್ತಮ ಗುಣಶಾಲಿಯೆ!) ನಿತ್ಯಂ=ಯಾವಾಗಲೂ, ಉದಾಸಿತಧೀಃ=ಉದಾಸೀನವಾದ ಮನಸ್ಸುಳ್ಳವನಾಗಿ, ತೇ=ನಿನ್ನ, ಸಖಿಭಿಃ ಸಮಂ=ಸ್ನೇಹಿತರೊಡನೆ, ಕಿಮಿತಿ=ಏತಕ್ಕೆ, ನೋ ಪಠಸಿ = ಓದುವುದಿಲ್ಲ? ಇತಿ=ಹೀಗೆಂದು, ಅವದತ್=ಹೇಳಿದನು.

ತಾ:—ಬಳಿಕ ಒಂದು ದಿನ ವಾಸುದೇವನು ಪಾಠವನ್ನು ಓದುತ್ತಿರುವಾಗ ಅದರಲ್ಲಿ ಮನಸ್ಸನ್ನಿಡದೆ ಬೇರೆ ಏನನ್ನೋ ಆಲೋಚಿಸುತ್ತಿದ್ದನು. ಆಗ ಉಪಾಧ್ಯಾಯರಿಗೆ ಕೋಪವುಂಟಾಯಿತು. ಅವರು 'ಎಲೈ ಮೂರ್ಖ! ನೀನು ಯಾವಾಗಲೂ ಪಾಠದಲ್ಲಿ ಉದಾಸೀನನಾಗಿರುವಿ. ನಿನ್ನ ಸ್ನೇಹಿತರಂತೆ ನೀನು ಏಕೆ ಮನಸ್ಸಿಟ್ಟು ಓದುತ್ತಿಲ್ಲ?' ಎಂದು ಗದರಿಸಿದರು.

ವ್ಯಾ. ವಿ:—ಅನ್ಯಸ್ಮಿನ್ ಮನಃ, ಅನ್ಯಮನಃ ಅಸ್ಯಾಸ್ತೀತಿ=ಅನ್ಯಮನಸ್ವೀ, ತಮ್. ಉದಾಸಿತಾ ಧೀಃ ಯಸ್ಯ ಸಃ=ಉದಾಸಿತಧೀಃ. ಸಖಿಭಿಃ ಸಮಂ-'ಸಹಯುಕ್ತೇಽಪ್ರಧಾನೇ' ಇದರಿಂದ ತೃತೀಯಾ ವಿಭಕ್ತಿ ಬಂದಿದೆ. ಪಠಸಿ-ಪಠ ವ್ಯಕ್ತಾಯಾಂ ವಾಚಿ, ಒಂದನೆ ಗಣ, ಸಕ. ಲಟ್, ಪರ. ಮ. ಏ. ಪಠತಿ, ಪಠತಃ, ಪಠಂತಿ. ಪಠಸಿ, ಪಠಥಃ, ಪಠಥ. ಪಠಾಮಿ, ಪಠಾವಃ, ಪಠಾಮಃ.

ಗುಣನಿಕಾ ಚರಣಾದಿಕಗೋಚರಾ
ನ ಮಮ ಹೃದ್ಗಯಿತೇತ್ಯುದಿತೇಽಮುನಾ ।
ವದ ವಿಶಾರದವಾದ ಯಥೇಪ್ಸಿತಂ
ತ್ವಮುಪರೀತ್ಯವದದ್ಧರಣೀಸುರಃ ॥ ೫೧ ॥

Rarest Archives

ಅ :—'ಚರಣಾದಿಕಗೋಚರಾ ಗುಣನಿಕಾ ಮಮ ಹೃದ್ದಯಿತಾನ' ಇತಿ ಅಮುನಾ ಉದಿತೇ ಧರಣೀಸುರಃ 'ವಿಶಾರದವಾದ ! ತ್ವಂ ಉಪರಿ ಯಥೇಪ್ಸಿತಂ ವದ' ಇತಿ ಅವದತ್.

ಅ :—ಚರಣಾದಿಕ=ಪಾದ ಮೊದಲಾದವುಗಳೇ, ಗೋಚರಾ= ವಿಷಯವಾಗುಳ್ಳ, ಗುಣನಿಕಾ=ಆವೃತ್ತಿಯು (ಪುನಃ ಪುನಃ ಹೇಳುವುದು) ಮಮ=ನನ್ನ, ಹೃದ್ದಯಿತಾ=ಮನಸ್ಸಿಗೆ ಇಷ್ಟವಾದುದು. ನ=ಅಲ್ಲ. ಇತಿ=ಹೀಗೆಂದು, ಅಮುನಾ=ಈ ವಾಸುದೇವನಿಂದ, ಉದಿತೇ=ಹೇಳಲ್ಪಡಲು, ಧರಣೀಸುರಃ=ಬ್ರಾಹ್ಮಣರು (ಉಪಾಧ್ಯಾಯರು) ವಿಶಾರದ= ವಿದ್ವಾಂಸರಂತೆ, ವಾದ=ಮಾತನಾಡುವ ವಾಸುದೇವನೆ ! ತ್ವಂ=ನೀನು, ಉಪರಿ=ಈಗ ಹೇಳಿಕೊಡುತ್ತಿರುವುದಕ್ಕಿಂತ ಮೇಲೆ, ಯಥೇಪ್ಸಿತಂ=ಇಷ್ಟ ಬಂದುದನ್ನು, ವದ=ಹೇಳು. ಇತಿ=ಹೀಗೆಂದು, ಅವದತ್=ಹೇಳಿದರು.

ತಾ:—ವಾಸುದೇವನು 'ಗುರುಗಳೆ ! ವೇದಮಂತ್ರವನ್ನು ಹೇಳಿ ಕೊಡುವಾಗ ಸಂಪ್ರದಾಯದಂತೆ ಮೊದಲು ಋಕ್ಕಿನ ಪಾದಭಾಗ, ಅನಂತರ ಅರ್ಧಭಾಗ, ತರುವಾಯ ಪೂರ್ತಿಯನ್ನು ತಾವುಹೇಳಿಕೊಟ್ಟು ಅದನ್ನು ನಾನು ಅನಂತರ ಆವೃತ್ತಿ ಮಾಡುತ್ತಿರುವುದು ನನಗೆ ಸರಿತೋರುವುದಿಲ್ಲ. ಆದ್ದರಿಂದ ನಾನು ಉದಾಸೀನನಾಗಿರುತ್ತೇನೆ' ಎಂದನು. ಆಗ ಗುರುಗಳು 'ನೀನು ಎಲ್ಲವನ್ನು ತಿಳಿದ ವಿದ್ವಾಂಸನಂತೆ ಮಾತುನಾಡುತ್ತಿರುವಿ. ಹಾಗಾದರೆ ಈಗ ನಾನು ಹೇಳಿಕೊಡುತ್ತಿರುವ ಮಂತ್ರಕ್ಕಿಂತ ಮುಂದಿನ ನಿನಗೆ ಇಷ್ಟ ಬಂದ ಯಾವುದಾದರೂ ಒಂದು ಮಂತ್ರವನ್ನು ಹೇಳು ನೋಡೋಣ' ಎಂದರು.

ವ್ಯಾ. ವಿ :—ಚರಣಃ ಆದಿಃ ಯಸ್ಯ ಸಃ=ಚರಣಾದಿಕಃ, ಚರಣಾದಿಕಃ ಗೋಚರಃ ಯಸ್ಯಾಸ್ಸಾ=ಚರಣಾದಿಕಗೋಚರಾ. ಹೃದಃ ದಯಿತಾ=ಹೃದ್ದಯಿತಾ. ವಿಶಾರದವತ್ ವದತಿ ಇತಿ=ವಿಶಾರದವಾದಃ, ತಸ್ಯ ಸಂಬುದ್ಧಿಃ. ಈಪ್ಸಿತಂ ಅನತಿಕ್ರಮ್ಯ=ಯಥೇಪ್ಸಿತಮ್.

ಸಕಲಲಕ್ಷಣಶಿಕ್ಷಣಮೂಲಭೂಃ
ಶ್ರುತಿಸಮಾಮನನಂ ಸ್ಖಲನೋಜ್ಝಿತಮ್ ।

Rarest Archiver

ನ ಖಲು ಕೇವಲಮಸ್ಯ ಗುರೋರ್ವ್ಯಧಾ-
ತ್ಸುಮನಸಾಮಪಿ ತತ್ರ ಕುತೂಹಲಮ್ ॥ ೫೨ ॥

ಅ :—ಸಕಲಲಕ್ಷಣಶಿಕ್ಷಣಮೂಲಭೂಃ ಸ್ಖಲನೋಜ್ಝಿತಂ ಅಸ್ಯ ಶ್ರುತಿ-ಸಮಾಮನನಂ ಗುರೋಃ ಕೇವಲಂ ಕುತೂಹಲಂ ನ ವ್ಯಧಾತ್, ತತ್ರ ಸುಮ-ನಸಾಂ ಅಪಿ ಕುತೂಹಲಂ ವ್ಯಧಾತ್ ಖಲು.

ಅ:—ಸಕಲ=ಎಲ್ಲ, ಲಕ್ಷಣ=ವೇದೋಚ್ಚಾರಣ ಲಕ್ಷಣಗಳ, ಶಿಕ್ಷಣ=ಕಲಿಯುವಿಕೆಗೆ, ಮೂಲಭೂಃ=ಉತ್ಪತ್ತಿಕಾರಣವಾದ ಸ್ಥಾನದಂತಿರುವ, ಸ್ಖಲನ=ತಪ್ಪುವಿಕೆಯಿಂದ, ಉಜ್ಝಿತಂ=ಬಿಡಲ್ಪಟ್ಟ, ಅಸ್ಯ=ಈ ವಾಸುದೇವನ, ಶ್ರುತಿ ವೇದದ, ಸಮಾಮನನಂ=ಉಚ್ಚಾರಣೆಯು, ಗುರೋಃ=ಉಪಾಧ್ಯಾಯರಿಗೆ ಮಾತ್ರ, ಕುತೂಹಲಂ=ಕೌತುಕವನ್ನು, ನ ವ್ಯಧಾತ್=ಉಂಟು ಮಾಡಲಿಲ್ಲ. ತತ್ರ=ಆ ಸಭೆಯಲ್ಲಿ, ಸುಮನಸಾಂ ಅಪಿ=ದೇವತೆಗಳಿಗೂ ಕೂಡ, ಕುತೂಹಲಂ=ಕೌತುಕವನ್ನು, ವ್ಯಧಾತ್=ಉಂಟುಮಾಡಿತು.

ತಾ :—ಆಗ ವಾಸುದೇವನು ಸಂಪ್ರದಾಯದಂತೆ ವೇದೋಚ್ಚಾರಣೆಯನ್ನು ಮಾಡುವ ಸಕಲ ಲಕ್ಷಣಗಳಿಂದ ಕೂಡಿ ಸ್ವಲ್ಪವೂ ತಪ್ಪದೆ ವರ್ಗಗಳ ಕ್ರಮದಿಂದ ತನಗೆ ಗುರುಗಳು ಹೇಳಿಕೊಡದಿರುವ ಮುಂದಿನ ವೇದ ಮಂತ್ರಗಳನ್ನು ಹೇಳಿದನು. ಆಗ ಗುರುಗಳು ಆಶ್ಚರ್ಯಗೊಂಡರು. ಅಷ್ಟೇ ಅಲ್ಲದೆ ದೇವತೆಗಳೂ ಆಶ್ಚರ್ಯಗೊಂಡರು.

ವ್ಯಾ.ವಿ. :—ಸಕಲಾನಿ ಚ ತಾನಿ ಲಕ್ಷಣಾನಿ ಚ, ಸಕಲಲಕ್ಷಣಾನಾಂ ಶಿಕ್ಷಣಂ, ಸಕಲ....ಶಿಕ್ಷಣಸ್ಯ ಮೂಲಭೂಃ=ಸಕಲ....ಮೂಲಭೂಃ. ಶ್ರುತೇಃ ಸಮಾಮನಂ=ಶ್ರುತಿಸಮಾಮನಂ. ಸ್ಖಲನೇನ ಉಜ್ಝಿತಂ=ಸ್ಖಲನೋಜ್ಝಿ-ತಮ್. ವ್ಯಧಾತ್–(ಸರ್ಗ ೩ ಶ್ಲೋ. ೧೪ ನೋಡಿರಿ).

ಪ್ರಿಯವಯಸ್ಯಶಿರೋಗುರುವೇದನಾ-
ಮಶಮಯುತ್ಸಹಜಾಮಪಿ ದುಸ್ಸಹಾಮ್ ।
ಸ ವಿಪಿನೇ ವಿಜನೇ ಮುಖವಾಯುನಾ
ಶ್ರವಣಗೋಚರಿತೇನ ಕದಾಚನ ॥ ೫೩ ॥

Rarest Archiver

ಅ :—ಸಃ ಕದಾಚನ ವಿಜನೇ ವಿಪಿನೇ ದುಸ್ಸಹಾಂ ಸಹಜಾಂ ಅಪಿ ಪ್ರಿಯವಯಸ್ಯಶಿರೋಗುರುವೇದನಾಂ ಶ್ರವಣಗೋಚರಿತೇನ ಮುಖವಾಯುನಾ ಅಶಮಯತ್.

ಅ :—ಸಃ=ಆ ವಾಸುದೇವನು, ಕದಾಚನ=ಒಂದಾನೊಂದು ದಿನ, ವಿಜನೇ=ಜನರಿಲ್ಲದ, ವಿಪಿನೇ=ಕಾಡಿನಲ್ಲಿ, ದುಸ್ಸಹಾಂ=ಸಹಿಸಲಾಗದ, ಸಹಜಾಂ ಅಪಿ=ಹುಟ್ಟಿದ ಮೊದಲ್ಗೊಂಡು ಬರುತ್ತಿದ್ದು ಸ್ವಾಭಾವಿಕವಾಗಿದ್ದರೂ, ಪ್ರಿಯವಯಸ್ಯ=ಪ್ರಿಯ ಸ್ನೇಹಿತನ, ಶಿರಃ=ತಲೆಯ, ಗುರು=ಹೆಚ್ಚಾದ, ವೇದನಾಂ=ನೋವನ್ನು, ಶ್ರವಣಗೋಚರಿತೇನ=ಕಿವಿಗೆ ವಿಷಯವಾದ (ಕಿವಿಯಲ್ಲಿ ಊದಿದ), ಮುಖವಾಯುನಾ=ಬಾಯಿಯ ಗಾಳಿಯಿಂದ, ಅಶಮಯತ್=ಹೋಗಲಾಡಿಸಿದನು.

ತಾ :—ಒಂದಾನೊಂದು ದಿನ ಆ ವಾಸುದೇವನು ಅತ್ಯಂತ ಸ್ನೇಹಿತನಾದ ಗುರುಗಳ ಮಗನೊಡನೆ ಕಾಡಿಗೆ ಹೋಗಿದ್ದನು. ಅಲ್ಲಿ ಬೇರೆ ಯಾರೂ ಇರಲಿಲ್ಲ. ಆಗ ಆ ಸ್ನೇಹಿತನನ್ನು ಹುಟ್ಟಿದಂದಿನಿಂದಲೂ ಕಾಡುತ್ತಿದ್ದ ತಲೆನೋವು ಬಹಳವಾಗಿ ಪೀಡಿಸಿತು. ಅವನು ಅದನ್ನು ಸಹಿಸಲಾರದೆ ಪೇಚಾಡುತ್ತಿದ್ದನು. ವಾಸುದೇವನು ಅವನ ಕಿವಿಯ ರಂಧ್ರದಲ್ಲಿ ಬಾಯಿಯಿಂದ ಗಾಳಿಯನ್ನು ಊದಿ ಆ ನೋವನ್ನು ಹೋಗಲಾಡಿಸಿದನು. (ಆ ಸ್ನೇಹಿತನ ಹಿಂದಿನ ಅನೇಕ ಜನ್ಮಗಳ ವೃತ್ತಾಂತವನ್ನೂ ತಿಳಿಸಿದನು) (ಭಾವ ಪ್ರಕಾಶಿಕೆ).

ವ್ಯಾ.ವಿ. :—ಪ್ರಿಯಶ್ಚಾಸೌ ವಯಸ್ಯಶ್ಚ, ಪ್ರಿಯವಯಸ್ಯಸ್ಯ ಶಿರಃ, ಪ್ರಿಯ....ಶಿರಸಃ ಗುರುವೇದನಾ = ಪ್ರಿಯವಯಸ್ಯಶಿರೋಗುರುವೇದನಾ, ತಾಮ್. ದುಃಖೇನ ಸೋಢುಂ ಶಕ್ಯಾ=ದುಸ್ಸಹಾ, ತಾಮ್. ಮುಖಸ್ಯ ವಾಯುಃ=ಮುಖವಾಯುಃ, ತೇನ. ಶ್ರವಣೇ ಗೋಚರಿತಃ=ಶ್ರವಣಗೋಚರಿತಃ, ತೇನ. ಅಶಮಯತ್–ಶಮು ಉಪಶಮೇ, ನಾಲ್ಕನೆ ಗಣ, ಸಕ. ಣಿಜನ್ತ, ಲಙ್, ಪರ. ಪ್ರ. ಏ. ಅಶಮಯತ್, ಅಶಮಯತಾಂ, ಅಶಮಯನ್. ಅಶಮಯಃ, ಅಶಮಯತಂ, ಅಶಮಯತ. ಅಶಮಯಂ, ಅಶಮಯಾವ, ಅಶಮಯಾಮ.

ಅಧಿಗತೋಪನಿಷಚ್ಚ ಸಕೃಚ್ಛ್ರುತಾ
ಪ್ರಕಟಭಾಗವತೀತಿ ನ ವಿಸ್ಮಯಃ ।

Rarest Archiver

ಅಧಿಗತಾ ನನು ಜಾತ್ವಪಿ ನ ಶ್ರುತಾಃ
ಪ್ರತಿಭಯಾ ಶ್ರುತಯಃ ಶತಶೋಽಮುನಾ || ೫೪ ||

ಅ :—ಅಮುನಾ ಸಕೃತ್ ಶ್ರುತಾ ಪ್ರಕಟಭಾಗವತೀ ಉಪನಿಷತ್ ಚ ಅಧಿಗತಾ ಇತಿ ವಿಸ್ಮಯಃ ನ. ಜಾತು ಅಪಿ ನ ಶ್ರುತಾಃ ಶತಶಃ ಶ್ರುತಯಃ ಪ್ರತಿಭಯಾ ಅಧಿಗತಾ ನನು.

ಅ:—ಅಮುನಾ=ಈ ವಾಸುದೇವನಿಂದ, ಸಕೃತ್=ಒಂದು ಸಲ, ಶ್ರುತಾ=ಕೇಳಲ್ಪಟ್ಟ, ಪ್ರಕಟಭಾಗವತೀ=ಸ್ಪಷ್ಟವಾಗಿ ಪರಮಾತ್ಮನನ್ನು ಪ್ರತಿಪಾದಿಸುವ, ಉಪನಿಷಚ್ಚ=ನಾರಾಯಣೋಪನಿಷತ್ತೂ, ಅಧಿಗತಾ ಇತಿ =ತಿಳಿಯಲ್ಪಟ್ಟಿತು ಎಂಬುದು, ವಿಸ್ಮಯಃ=ಆಶ್ಚರ್ಯವು, ನ=ಅಲ್ಲ. ಜಾತು ಅಪಿ =ಒಂದು ಸಲವೂ, ನ ಶ್ರುತಾಃ=ಕೇಳಲ್ಪಡದ, ಶತಶಃ=ನೂರಾರು, ಶ್ರುತಯಃ=ವೇದಗಳು, ಪ್ರತಿಭಯಾ=ಸ್ವಾಭಾವಿಕ ಜ್ಞಾನದಿಂದ, ಅಧಿ-ಗತಾಃ ನನು=ತಿಳಿಯಲ್ಪಟ್ಟವೆಯಷ್ಟೆ.

ತಾ :—ಈ ವಾಸುದೇವನು ತಾನು ಒಂದು ಸಲ ಕೇಳಿದ ಪರಮಾತ್ಮನನ್ನು ಬೋಧಿಸುವ ನಾರಾಯಣೋಪನಿಷತ್ತನ್ನೂ ತಿಳಿದುಕೊಂಡನೆಂಬುದು ಆಶ್ಚರ್ಯವಲ್ಲ. ಇವನು ಒಂದು ಸಲವೂ ಕೇಳದ ನೂರಾರು ವೇದಮಂತ್ರಗಳನ್ನು ಪ್ರತಿಭಾಶಕ್ತಿಯಿಂದ ಮೊದಲೇ ಅರಿತಿದ್ದನು. ಕೇಳದಿರುವುದನ್ನು ತಿಳಿದುಕೊಂಡಿರುವ ಇವನು ಕೇಳಿದ್ದನ್ನು ತಿಳಿದಿರುವುದು ಆಶ್ಚರ್ಯವಲ್ಲ.

ವ್ಯಾ. ವಿ :—ಭಗವತಃ ಸಂಬಂಧಿನೀ=ಭಾಗವತೀ, ಪ್ರಕಟಂ ಯಥಾ ಭವತಿ ತಥಾ ಭಾಗವತೀ=ಪ್ರಕಟಭಾಗವತೀ.

*ಸಾಕ್ಷಾದಥೋಪನಿಷದೋ ವಿಭುರೈತರೇಯ್ಯಾಃ
ಪಾಠಚ್ಛಲೇನ ವಿಜನೇಽರ್ಥರಸಾನ್ ಬ್ರುವಾಣಃ |
ಅಧ್ಯಾಪಕಾಯ ವಿತತಾರ ವಿಮೋಕ್ಷಬೀಜಂ
ಗೋವಿಂದಭಕ್ತಿಮುಚಿತಾಂ ಗುರುದಕ್ಷಿಣಾಂ ಸಃ || ೫೫||

---

*ಉಕ್ತಾ ವಸಂತತಿಲಕಾ ತಭಜಾ ಜಗೌ ಗಃ" ಈ ಲಕ್ಷಣದಂತೆ ಈ ಪದ್ಯವು ವಸಂತತಿಲಕಾವೃತ್ತದಲ್ಲಿದೆ.

Rarest Archive

ಅ :—ಅಥ ವಿಭುಃ ಸಃ ವಿಜನೇ ಐತರೇಯ್ಯಾಃ ಉಪನಿಷದಃ ಪಾಠಚ್ಛಲೇನ ಅಧ್ಯಾಪಕಾಯ ಸಾಕ್ಷಾತ್ ಅರ್ಥರಸಾನ್ ಬ್ರುವಾಣಃ ಉಚಿತಾಂ ವಿಮೋಕ್ಷಬೀಜಂ ಗೋವಿಂದಭಕ್ತಿಂ ಗುರುದಕ್ಷಿಣಾಂ ವಿತತಾರ.

ಅ :—ಅಥ = ತರುವಾಯ, ವಿಭುಃ = ಸಮರ್ಥನಾದ, ಸಃ = ಆ ವಾಸುದೇವನು, ವಿಜನೇ = ಜನರಿಲ್ಲದ ಸ್ಥಳದಲ್ಲಿ, ಐತರೇಯ್ಯಾಃ = ಇತರಾದೇವಿಯು ಮಗನಾದ ಮಹಿದಾಸನೆಂಬ ಹೆಸರಿನ ವಿಷ್ಣುವಿನಿಂದ ಕಂಡುಹಿಡಿಯಲ್ಪಟ್ಟ, ಉಪನಿಷದಃ = ಉಪನಿಷತ್ತಿನ, ಪಾಠಚ್ಛಲೇನ = ಪಾಠ ಓದುವ ನೆಪದಿಂದ, ಅಧ್ಯಾಪಕಾಯ = ಉಪಾಧ್ಯಾಯರಿಗೆ, ಸಾಕ್ಷಾತ್ = ಪ್ರತ್ಯಕ್ಷವಾಗಿ, ಅರ್ಥರಸಾನ್ = ಉತ್ತಮವಾದ ಅರ್ಥಗಳನ್ನು, ಬ್ರುವಾಣಃ = ಹೇಳುವವನಾಗಿ, ಉಚಿತಾಂ = ಯೋಗ್ಯವಾದ, ವಿಮೋಕ್ಷಬೀಜಂ = ಮೋಕ್ಷಕ್ಕೆ ಕಾರಣವಾದ, ಗೋವಿಂದಭಕ್ತಿಂ = ವಿಷ್ಣುವಿಷಯಕ ಭಕ್ತಿರೂಪವಾದ, ಗುರುದಕ್ಷಿಣಾಂ = ಗುರುವಿಗೆ ಕೊಡತಕ್ಕ ದಕ್ಷಿಣೆಯನ್ನು, ವಿತತಾರ = ಕೊಟ್ಟನು.

ತಾ :—ಸಮರ್ಥನಾದ ವಾಸುದೇವನು ಗುರುಗಳ ಹತ್ತಿರ ಐತರೇಯೋಪನಿಷತ್ತನ್ನು ಪಠಿಸುತ್ತಿದ್ದನು. ಹೀಗೆ ಓದುತ್ತ ಈ ನೆಪದಿಂದ ಆ ಉಪನಿಷತ್ತಿನ ಉತ್ತಮವಾದ ಅರ್ಥಗಳನ್ನು ಅವರಿಗೆ ಹೇಳಿಕೊಡುತ್ತಾ ಆ ಗುರುಗಳಿಗೆ ಅವರಲ್ಲಿಲ್ಲದ, ಮೋಕ್ಷಕ್ಕೆ ಕಾರಣವಾದ ಉತ್ತಮವಾದ ವಿಷ್ಣುಭಕ್ತಿ ಸ್ವರೂಪವನ್ನು ಉಪದೇಶಿಸಿದನು. ಅದೇ ಅವರಿಗೆ ಕೊಡಬೇಕಾದ ಗುರುದಕ್ಷಿಣೆಯಾಯಿತು.

ವ್ಯಾ.ವಿ. :—ಇತರಾಯಾಃ ಅಪತ್ಯಂ ಪುಮಾನ್ = ಐತರೇಯಃ, ಐತರೇಯೇಣ ಪ್ರೋಕ್ತಾ = ಐತರೇಯೀ, ತಸ್ಯಾಃ. ಪಾಠಸ್ಯ ಛಲಂ = ಪಾಠಚ್ಛಲಂ, ತೇನ. ವಿಗತಾಃ ಜನಾಃ ಯಸ್ಮಾತ್ಸಃ = ವಿಜನಃ, ತಸ್ಮಿನ್. ಅರ್ಥಸ್ಯ ರಸಾಃ = ಅರ್ಥರಸಾಃ, ತಾನ್. ವಿಮೋಕ್ಷಸ್ಯ ಬೀಜಂ = ವಿಮೋಕ್ಷ-ಬೀಜಂ, ತತ್. ಗೋವಿಂದೇ ಭಕ್ತಿಃ = ಗೋವಿಂದಭಕ್ತಿಃ, ತಾಂ. ಗುರವೇ ದಕ್ಷಿಣಾ = ಗುರುದಕ್ಷಿಣಾ, ತಾಮ್. ವಿತತಾರ-ತೄ ಪ್ಲವನತರಣಯೋಃ, ಒಂದನೇ ಗಣ ಸಕ. ಲಿಟ್, ಪರ. ಪ್ರ. ಏ. ವಿ. ಉಪಸರ್ಗ. ವಿ+ತತಾರ, ತೇರತುಃ, ತೇರುಃ, ತೇರಿಥ, ತೇರಥುಃ, ತೇರ ತತಾರ ತತರ, ತೇರಿವ, ತೇರಿಮ.

Rarest Archiver

*ಅಯಿ ಸ್ವಾಮಿನ್ ದುಷ್ಟಾನ್ ದಮಯ ದಮಯ ವ್ಯಕ್ತಮಚಿರಾತ್
ಗುಣಾನ್ ಗೂಢಾನ್ ವಿಷ್ಣೋಃ ಕಥಯ
ಕಥಯ ಸ್ವಾನ್ ಪ್ರಮದಯನ್ ।
ತದಾನಂದಂ ತನ್ವನ್ನಿತಿ ಸುಮನಸಾಂ ಸೋಽನುಸರತಾ-
ಮನುಜ್ಞಾಮಾದತ್ತ ತ್ರಿಭುವನಗುರುರ್ಬ್ರಾಹ್ಮಣಗುರೋಃ ॥ ೫೬ ॥

ಇತಿ ಶ್ರೀಮತ್ಕವಿಕುಲತಿಲಕಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯಸುತ-
ನಾರಾಯಣಪಂಡಿತಾಚಾರ್ಯವಿರಚಿತೇ ಶ್ರೀಮತ್ಸುಮಧ್ವವಿಜಯೇ
ಮಹಾಕಾವ್ಯೇ ಆನಂದಾಂಕೇ ತೃತೀಯಸ್ಸರ್ಗಃ

ಅ :—ಅಯಿ ಸ್ವಾಮಿನ್ ! ದುಷ್ಟಾನ್ ದಮಯ ದಮಯ. ಸ್ವಾನ್ ಪ್ರಮದಯನ್ ವಿಷ್ಣೋಃ ಗೂಢಾನ್ ಗುಣಾನ್ ಅಚಿರಾತ್ ವ್ಯಕ್ತಂ ಕಥಯ ಕಥಯ ಇತಿ ಅನುಸರತಾಂ ಸುಮನಸಾಂ ಆನಂದಂ ತನ್ವನ್ ತ್ರಿಭುವನಗುರುಃ ಸಃ ತದಾ ಬ್ರಾಹ್ಮಣಗುರೋಃ ಅನುಜ್ಞಾಂ ಆದತ್ತ.

ಅ :—ಅಯಿ ಸ್ವಾಮಿನ್ = ಎಲೈ ಸ್ವಾಮಿಯೇ ! ದುಷ್ಟಾನ್ = ದುರ್ಜನರನ್ನು, ದಮಯ ದಮಯ = ಶಿಕ್ಷಿಸು ಶಿಕ್ಷಿಸು. ಸ್ವಾನ್ = ನಿನ್ನವರಾದ ಸಜ್ಜನರನ್ನು, ಪ್ರಮದಯನ್ = ಸಂತೋಷಗೊಳಿಸುತ್ತ, ವಿಷ್ಣೋಃ = ಶ್ರೀಮನ್ನಾರಾಯಣನ, ಗೂಢಾನ್ = ಗುಟ್ಟಾಗಿರುವ, ಗುಣಾನ್ = ಗುಣಗಳನ್ನು, ಅಚಿರಾತ್ = ಜಾಗ್ರತೆಯಾಗಿ, ವ್ಯಕ್ತಂ = ಸ್ಪಷ್ಟವಾಗಿ, ಕಥಯ ಕಥಯ = ಹೇಳು ಹೇಳು. ಇತಿ = ಹೀಗೆ, ಅನುಸರತಾಂ = ಪ್ರಾರ್ಥಿಸುವ, ಸುಮನಸಾಂ = ದೇವತೆಗಳಿಗೆ, ಆನಂದಂ = ಸಂತೋಷವನ್ನು, ತನ್ವನ್ = ಉಂಟುಮಾಡುತ್ತ, ತ್ರಿಭುವನಗುರುಃ = ಮೂರುಲೋಕದ ಗುರುವಾದ, ಸಃ = ಆ ವಾಸುದೇವನು, ತದಾ = ಆಗ, ಬ್ರಾಹ್ಮಣಗುರೋಃ = ಬ್ರಾಹ್ಮಣೋಪಾಧ್ಯಾಯರಿಂದ, ಅನುಜ್ಞಾಂ = ಅಪ್ಪಣೆಯನ್ನು, ಆದತ್ತ = ತೆಗೆದುಕೊಂಡನು.

---

*"ರಸೈಃ ರುದ್ರೈಶ್ಛಿನ್ನಾ ಯಮನಸಭಲಾ ಗಃ ಶಿಖರಿಣೀ" ಈ ಲಕ್ಷಣದಂತೆ ಈ ಪದ್ಯವು ಶಿಖರಿಣೀ ವೃತ್ತದಲ್ಲಿದೆ.

Rarest Archiver

ತಾ :—ಹೀಗೆ ವಾಸುದೇವನ ಗುರುಕುಲದ ವಿದ್ಯಾಭ್ಯಾಸವು ಮುಗಿಯಿತು. ಆಗ ದೇವತೆಗಳು ಅವನನ್ನು ಸಮೀಪಿಸಿ 'ಸ್ವಾಮಿ ! ನೀನು ಜಗತ್ತಿನಲ್ಲಿರುವ ದುಷ್ಟಜನರನ್ನು ಶಿಕ್ಷಿಸು. ನಿನ್ನ ಭಕ್ತರಾದ ಸಜ್ಜನರನ್ನು ಸಂತೋಷಗೊಳಿಸುತ್ತ ಅದ್ವೈತಿಗಳು ವಿಷ್ಣುವು ನಿರ್ಗುಣನೆಂದು ವಾದಿಸಿ ಮುಚ್ಚಿಟ್ಟ ಅವನ ಆನಂದಾದಿ ಗುಣಗಳನ್ನು ಸಪ್ರಮಾಣವಾಗಿ ಶೀಘ್ರವಾಗಿ ಪ್ರಕಟಿಸು'. ಎಂದು ಬೇಡಿಕೊಂಡರು ; ಮೂರುಲೋಕದ ಗುರುವಾದ ಆ ವಾಸುದೇವನು ದೇವತೆಗಳ ಆ ಪ್ರಾರ್ಥನೆಯನ್ನು ಮನ್ನಿಸಿ ಅವರನ್ನು ಆನಂದಗೊಳಿಸಿದನು. ಆ ವಿಷ್ಣುವಿನ ಗುಣಗಳನ್ನು ಪ್ರಸಿದ್ಧಿಗೊಳಿಸುವ ಕಾರ್ಯವನ್ನು ನೆರವೇರಿಸಲು ಬ್ರಾಹ್ಮಣರಾದ ಉಪಾಧ್ಯಾಯರಿಂದ ಆಜ್ಞೆಯನ್ನು ಪಡೆದು ಮನೆಗೆ ಹಿಂದಿರುಗಿದನು.

ವ್ಯಾ. ವಿ. :—ತ್ರಯಾಣಾಂ ಭುವನಾನಾಂ ಸಮಾಹಾರಃ, ತ್ರಿಭುವನಸ್ಯ ಗುರುಃ=ತ್ರಿಭುವನಗುರುಃ. ಬ್ರಾಹ್ಮಣಶ್ಚಾಸೌ ಗುರುಶ್ಚ=ಬ್ರಾಹ್ಮಣಗುರುಃ, ತಸ್ಮಾತ್. ದಮಯ–ದಮು ಉಪಶಮೇ, ಒಂದನೆ ಗಣ, ಸಕ. ಣಿಜನ್ತ. ಲೋಟ್, ಪರ. ಮ. ಏ. ದಮಯತು ದಮಯತಾತ್, ದಮಯತಾಂ, ದಮಯಂತು, ದಮಯ ದಮಯತಾತ್, ದಮಯತಂ, ದಮಯತ, ದಮಯಾನಿ. ದಮಯಾವ, ದಮಯಾಮ. ಆದತ್ತ–ಡು ದಾಞ್ ದಾನೇ, ಮೂರನೆ ಗಣ, ಸಕ. ಲಙ್, ಆತ್ಮ. ಪ್ರ. ಏ. ಆ ಉಪಸರ್ಗ. ಆ+ಅದತ್ತ, ಅದದಾತಾಂ, ಅದದತ. ಅದತ್ಥಾಃ, ಅದದಾಥಾಂ, ಅದದ್ಧ್ವಮ್. ಅದದಿ, ಅದದ್ವಹಿ, ಅದದ್ಮಹಿ.

ಹೀಗೆ ಶ್ರೀಕವಿಕುಲತಿಲಕ ಶ್ರೀಮನ್ನಾರಾಯಣಪಂಡಿತಾಚಾರ್ಯ
ರಚಿತವಾದ ಶ್ರೀಸುಮಧ್ವವಿಜಯ ಮಹಾಕಾವ್ಯದ
ಮೂರನೆ ಸರ್ಗದ ಕನ್ನಡ ಟೀಕೆಯು ಮುಗಿದುದು.

Rarest Archiver

## ಚತುರ್ಥಸರ್ಗದ ಕಥಾಸಾರ

ವಾಸುದೇವನು ಗುರುಕುಲದಿಂದ ಮನೆಗೆ ಮರಳಿದನು. ಅನಂತರ ವೇದ ಮೊದಲಾದವುಗಳಿಗೆ ವಿರುದ್ಧಾರ್ಥವನ್ನು ಕಲ್ಪಿಸಿ ಜನರನ್ನು ವಂಚಿಸುವ ಅದ್ವೈತ ಮತವನ್ನು ಖಂಡಿಸಲಿಚ್ಛಿಸಿದನು. ಆದ್ದರಿಂದ ವಿಷಯಾಸೆಗಳನ್ನು ನೀಗಿಸುವ ಸಂನ್ಯಾಸವನ್ನು ಸ್ವೀಕರಿಸಲು ಬಯಸಿದನು. ಅದರಂತೆ ಆಜ್ಞೆಯನ್ನು ಪಡೆಯಲು ತನ್ನ ಮನೆಯಲ್ಲಿರುವ ನಾರಾಯಣನನ್ನು ವಂದಿಸಿದನು. ಅನಂತರ ಗುರುಗಳನ್ನು ಹುಡುಕಿಕೊಂಡು ಹೋದನು. ಆಗ ಅಲ್ಲಿಯೇ ವಿಷ್ಣುಭಕ್ತರಾದ ಅಚ್ಯುತ ಪ್ರೇಕ್ಷರೆಂಬ ಓರ್ವ ಸಂನ್ಯಾಸಿಗಳು ಸಿಕ್ಕಿದರು. ಅವರು ಹಿಂದಿನ ಜನ್ಮದಲ್ಲಿ ಪಾಂಡವರ ಮನೆಯಲ್ಲಿ ಭಿಕ್ಷಾಟನಮಾಡುತ್ತಾ ಜೀವಿಸಿಕೊಂಡಿದ್ದರು. ಒಂದಾ ನೊಂದು ದಿನ ತಮ್ಮ ಮರಣಕಾಲವನ್ನರಿತ ಅವರ ಗುರುಗಳು ಅಚ್ಯುತ ಪ್ರೇಕ್ಷರಿಗೆ ಇಂತೆಂದರು.

"ಅಚ್ಯುತಪ್ರೇಕ್ಷ ! ಅದ್ವೈತಿಗಳು ಜೀವಬ್ರಹ್ಮರಿಗೆ ಭೇದವಿಲ್ಲವೆನ್ನುವರು. ನೀನು ಅವರ ಮತವನ್ನು ನಂಬಬೇಡ. ಮುಕ್ತಿಯನ್ನೀಯುವ ನಾರಾಯಣ ನನ್ನು ಭಜಿಸು". ಹೀಗೆಂದು ಗುರುಗಳು ಮೃತರಾಗಲು ಅಚ್ಯುತಪ್ರೇಕ್ಷರು ಗುರುಗಳ ಅಪ್ಪಣೆಯಂತೆ ಉಡುಪಿಯಲ್ಲಿರುವ ಅನಂತಾಸನನನ್ನು ಸೇವಿಸು ತ್ತಿದ್ದರು. ಆಗ ಆ ಅನಂತಾಸನನು ಒಬ್ಬ ಮನುಷ್ಯನಲ್ಲಿ ಆವೇಶಗೊಂಡು 'ನಿನಗೆ ಇಲ್ಲಿ ಒಬ್ಬ ಶಿಷ್ಯನು ದೊರಕುವನು. ನೀನು ಅವನಿಂದ ನನ್ನನ್ನು ತಿಳಿದುಕೊ' ಎಂದನು. ಆವರು ಆದರಂತೆ ಶಿಷ್ಯನನ್ನು ನಿರೀಕ್ಷಿಸುತ್ತಿರಲು ದ್ವೈತಮತವನ್ನು ಪ್ರಚಾರ ಮಾಡಲು ಈ ವಾಸುದೇವನ ರೂಪದಿಂದ ಅವತರಿ ಸಿದ ವಾಯುದೇವರು ಅವರ ಹತ್ತಿರ ಶಿಷ್ಯರಾಗಲು ಹೋದರು. ಹೀಗೆ ಮಗನು ಅಚ್ಯುತಪ್ರೇಕ್ಷರ ಶಿಷ್ಯನಾಗಿ ಸಂನ್ಯಾಸ ಸ್ವೀಕರಿಸಲು ನಿಶ್ಚಯಿಸಿರುವುದನ್ನು ಕೇಳಿ ಅವನ ತಂದೆ ತಾಯಿಗಳು ಅಲ್ಲಿಗೆ ಬಂದರು. "ಮಗು ! ನೀನು ವೃದ್ಧರಾದ ನಮ್ಮನ್ನು ತ್ಯಜಿಸಿಸಂನ್ಯಾಸ ಸ್ವೀಕರಿಸಬೇಡ" ಎಂದು ಪ್ರದಕ್ಷಿಣೆ ನಮಸ್ಕಾರ ಮಾಡಿ ಕೇಳಿಕೊಂಡರು. ವಾಸುದೇವನು 'ಪೂಜ್ಯರಾದ ನೀವು ನನಗೆ ವಂದಿ ಸಿದ್ದರಿಂದ ನಾನು ಸಂನ್ಯಾಸಿ ಯಾಗಲು ನೀವು ಅಪ್ಪಣೆಕೊಟ್ಟಂತಾಯಿತು' ಎಂದರು. ಮಧ್ಯಗೇಹಭಟ್ಟರಿಗೆ ಉತ್ತರಕೊಡಲು ತೋರಲಿಲ್ಲ. ಅವರು 'ಮಗು ! ನೀನು ಯತಿಯಾಗಕೂಡದೆಂ'ದು ಪುನಃ ಬೇಡಿಕೊಂಡು ವ್ಯಥೆಯಿಂದ ಮನೆಗೆ

Rarest Archives

ತೆರಳಿದರು. ಮರಳಿ ಬಂದ ಅವರು ಕುತ್ಯಾಡಿಯೆಂಬ ಮಠದಲ್ಲಿ ಅಚ್ಯುತಪ್ರೇಕ್ಷ ರೊಡನೆ ನಿಯಮನಿಷ್ಠನಾದ ಮಗನನ್ನು ಕಂಡರು. ಅವರು ಮಗನು ಯತಿ ಯಾಗಿ ಕೌಪೀನವನ್ನು ಧರಿಸಿದರೆ ತಾವು ಉಪವಾಸ ಮಾಡುವುದಾಗಿ ತಿಳಿಸಿ ದರು. ಅದನ್ನು ಕೇಳಿ ವಾಸುದೇವನು ಕೂಡಲೇ ತನ್ನ ಬಟ್ಟೆಯನ್ನು ಸೀಳಿ ಕೌಪೀನವನ್ನುಟ್ಟನು. ನನ್ನ ಸಂನ್ಯಾಸಕ್ಕೆ ಅಡ್ಡಿ ಮಾಡಬೇಡಿ ಎಂದನು.

ಆಗ ಮಧ್ಯಗೇಹಭಟ್ಟರು 'ಮಗನು ತಂದೆ ತಾಯಿಗಳನ್ನು ಅವಶ್ಯವಾಗಿ ಕಾಪಾಡಬೇಕು. ನಮ್ಮ ಮಕ್ಕಳಿಬ್ಬರು ಮೃತರಾಗಿರುವುದರಿಂದ ನಮಗೆ ಬೇರೆ ರಕ್ಷಕರಿಲ್ಲ. ಆದ್ದರಿಂದ ನೀನು ನಮ್ಮನ್ನು ಬಿಟ್ಟು ಸಂನ್ಯಾಸಿಯಾಗುವುದು ಉಚಿತವಲ್ಲ' ಎಂದರು. ವಾಸುದೇವನು 'ಮನುಷ್ಯನಿಗೆ ವೈರಾಗ್ಯವುಂಟಾದ ಕೂಡಲೇ ಅವನು ಸಂನ್ಯಾಸಿಯಾಗಬಹುದು. ಆದರೂ ನಾನು ನಿಮಗೆ ಸೇವಕ ನೊಬ್ಬನನ್ನು ನೇಮಿಸದೆ ಸಂನ್ಯಾಸಿಯಾಗುವುದಿಲ್ಲ' ಎಂದನು. ತಂದೆಯು 'ನಾನು ಒಂದು ವೇಳೆ ನಿನ್ನ ಅಗಲಿಕೆಯನ್ನು ಸಹಿಸಿದರೂ ನಿನ್ನ ತಾಯಿಯು ಸಹಿಸಲಾರಳು' ಎನ್ನಲು 'ಹಾಗಾದರೆ ನೀವು ನನ್ನ ಸಂನ್ಯಾಸಕ್ಕೆ ಅಪ್ಪಣೆಕೊಡಿ' ಎಂದು ತಂದೆಯನ್ನು ವಂದಿಸಿದನು. ಆಗ ಅವರಿಗೆ ಉತ್ತರ ಕೊಡಲಾಗಲಿಲ್ಲ. 'ತಾಯಿಯು ಒಪ್ಪಿದರೆ ಸಂನ್ಯಾಸ ಸ್ವೀಕರಿಸು' ಎಂದು ಹೇಳಿ ಮನೆಗೆ ಹೋಗಿ ಹೆಂಡತಿಗೆ ನಡೆದ ವಿಷಯವನ್ನು ತಿಳಿಸಿದರು.

ಬಳಿಕ ಆ ಮಧ್ಯಗೇಹಭಟ್ಟರಿಗೆ ಮತ್ತೊಬ್ಬ ಮಗನು ಹುಟ್ಟಿದನು. ಒಂದಾನೊಂದು ದಿನ ವಾಸುದೇವನು ಮನೆಗೆ ಹೋದನು. ತಮ್ಮನನ್ನು ಕಂಡು 'ಇಗೋ, ಇವನು ನಿಮ್ಮನ್ನು ರಕ್ಷಿಸುವನು' ಎಂದು ತಂದೆ ತಾಯಿಗಳಿಗೆ ಹೇಳಿ ದನು. ಆದರೂ ತಾಯಿಯು ಇವನ ಸಂನ್ಯಾಸಕ್ಕೆ ಒಪ್ಪಿಗೆ ಕೊಡಲಿಲ್ಲ. ವಾಸು ದೇವನು 'ಅಮ್ಮ ! ನೀನು ಯಾವಾಗಲಾದರೂ ನನ್ನನ್ನು ನೋಡಲು ಬಯಸು ವುದಾದರೆ ಕೂಡಲೇ ನನ್ನ ಸಂನ್ಯಾಸಕ್ಕೆ ಒಪ್ಪಿಗೆಕೊಡು. ಇಲ್ಲದಿದ್ದರೆ ನೀನು ಯಾವಾಗಲೂ ನನ್ನನ್ನು ನೋಡಲಾರೆ' ಎಂದನು. ತಾಯಿಗೆ ಮಾತಾಡಲು ತೋರಲಿಲ್ಲ. ಅವಳು ವ್ಯಥೆಗೊಂಡಳು ಕಷ್ಟದಿಂದ ಅನುಮೋದಿಸಿದಳು.

ಅನಂತರ ವಾಸುದೇವನು ಅಚ್ಯುತಪ್ರೇಕ್ಷಾಚಾರ್ಯರ ಹತ್ತಿರ ಹೋದನು. ಅವರನ್ನು ತನ್ನ ಸದ್ಗುಣಗಳಿಂದ ಒಲಿಸಿಕೊಂಡನು. ಮಾಡಬೇಕಾದ ಸಕಲ

Rarest Archiver

ಕಾರ್ಯಗಳನ್ನು ಪೂರೈಸಿ ಗುರುಗಳಿಂದ ಸಂನ್ಯಾಸವನ್ನು ಸ್ವೀಕರಿಸಿದನು. ಅವನು ಯತಿಗಳು ಜಪಿಸಲು ಅರ್ಹವಾದ ಓಂಕಾರವನ್ನು ಜಪಿಸತೊಡಗಿದನು. ಗುರುಗಳು ಅವನಿಗೆ ಪೂರ್ಣಪ್ರಜ್ಞ ಎಂಬ ಅನ್ವರ್ಥವಾದ ಹೆಸರನ್ನಿಟ್ಟರು. ಪೂರ್ಣಪ್ರಜ್ಞರು ಒಡವೆ ಮೊದಲಾದುವುಗಳನ್ನು ಧರಿಸದಿದ್ದರೂ ಸ್ವಾಭಾವಿಕವಾದ ಕಾಂತಿಯಿಂದ ಬೆಳಗುತ್ತಿದ್ದರು. ಅವರು ರುದ್ರಾದಿ ದೇವತೆಗಳಿಂದ ವಂದಿತರಾದ ವಾಯುದೇವರಾದರೂ ಸಾಮಾನ್ಯ ಜನರ ತಿಳುವಳಿಕೆಗಾಗಿ ಅಚ್ಯುತಪ್ರೇಕ್ಷರನ್ನು ನಮಸ್ಕರಿಸುತ್ತಿದ್ದರು. ಆ ಗುರುಗಳು ಪೂರ್ಣಪ್ರಜ್ಞರಿಗೆ ಉತ್ತಮವಾದ ಯತ್ಯಾಚಾರಗಳನ್ನು ಹೇಳಿಕೊಡಲು ಬಯಸಿದರು. ಆದರೆ ಪೂರ್ಣಪ್ರಜ್ಞರೇ ಸ್ವತಃ ಉತ್ತಮವಾದ ಆಚಾರವನ್ನು ಮಾಡುವುದನ್ನು ಕಂಡು ಆಶ್ಚರ್ಯದಿಂದ ತಾವೂ ಅದನ್ನು ಕಲಿತುಕೊಂಡರು.

ಅನಂತರ ಈ ಪೂರ್ಣಪ್ರಜ್ಞರು ಉಡುಪಿಯ ಅನಂತಾಸನಸ್ವಾಮಿಯನ್ನು ನಮಸ್ಕರಿಸಲು ಅವನು ಒಬ್ಬ ಮನುಷ್ಯನಲ್ಲಿ ಆವೇಶಗೊಂಡು ಇವರ ಕೈಯನ್ನು ಹಿಡಿದುಕೊಂಡನು. ಅಚ್ಯುತಪ್ರೇಕ್ಷರ ಹತ್ತಿರ ಬಂದು ಇವರು ನಿಮಗೆ ಬಹು ದಿವಸಗಳಿಂದ ಬಯಸಿದ ಅಧ್ಯಾತ್ಮತತ್ತ್ವವಿಚಾರವನ್ನು ತಿಳಿಸುವರು ಎಂದು ಅವರನ್ನು ಅಚ್ಯುತಪ್ರೇಕ್ಷರಿಗೆ ಒಪ್ಪಿಸಿದನು. ಆ ಅಚ್ಯುತಪ್ರೇಕ್ಷರು ಎಲ್ಲವನ್ನೂ ತ್ಯಜಿಸಿದ ಸಂನ್ಯಾಸಿಗಳಾದರೂ ಆ ಅನಂತಾಸನದೇವರಿತ್ತ ಪೂರ್ಣಪ್ರಜ್ಞರನ್ನು ಸ್ವೀಕರಿಸಿದರು.

ಒಂದು ದಿನ ಪೂರ್ಣಪ್ರಜ್ಞರು ಗಂಗೆಯಲ್ಲಿ ಸ್ನಾನಮಾಡಲು ಕಾಶಿಗೆ ಹೋಗಲು ಅಪೇಕ್ಷಿಸಿ ಅಚ್ಯುತಪ್ರೇಕ್ಷರ ಅಪ್ಪಣೆಯನ್ನು ಕೇಳಿದರು. ಅವರು ಶಿಷ್ಯರ ಅಗಲಿಕೆಯನ್ನು ತಾಳಲಾರದೆ ಅನಂತಾಸನದೇವರನ್ನು ಧ್ಯಾನಿಸಿದರು. ಆಗ ಅನಂತಾಸನದೇವರು ಒಬ್ಬ ಮನುಷ್ಯನಲ್ಲಿ ಆವೇಶಗೊಂಡು 'ಪೂರ್ಣಪ್ರಜ್ಞ ! ಇಂದಿನಿಂದ ಮೂರನೆ ದಿನದಲ್ಲಿ ಭಾಗೀರಥಿಯು ಈ ನಮ್ಮ ಕೊಳಕ್ಕೆ ಬರುತ್ತಾಳೆ. ಆದ್ದರಿಂದ ನೀನು ಕಾಶಿಗೆ ಹೋಗಬೇಡ' ಎಂದನು. ಅದರಂತೆ ಗಂಗೆಯು ಆ ಕೊಳಕ್ಕೆ ಬರಲು ಅಲ್ಲಿಯ ಜನರೆಲ್ಲ ಪೂರ್ಣಪ್ರಜ್ಞರೊಡನೆ ಅಲ್ಲಿ ಮಿಂದರು. ಗಂಗೆಯು ಅದರಂತೆ ಈಗಲೂ ಹನ್ನೆರಡು ವರ್ಷಗಳಿಗೊಮ್ಮೆ ಆ ಮಧ್ವ ಸರೋವರಕ್ಕೆ ಬರುತ್ತಿರುವಳು. ಆ ಪೂರ್ಣಪ್ರಜ್ಞರು ಸಂನ್ಯಾಸವನ್ನು ಸ್ವೀಕರಿಸಿ ನಲವತ್ತು ದಿವಸಗಳಾಗಲು ಅವರನ್ನು ಜಯಿಸಲು ವಾಸುದೇವಪಂಡಿತ ಮೊದಲಾದವರು ಬಂದು ವಾದಮಾಡಿ ಸೋತುಹೋದರು. ಗುರುಗಳು ಶಿಷ್ಯರಿಗೆ

Rarest Archiver

ಅದ್ವೈತವನ್ನು ಬೋಧಿಸುವ ಇಷ್ಟಸಿದ್ಧಿಯೆಂಬ ಗ್ರಂಥವನ್ನು ಓದುವಂತೆ ಹೇಳಿದರು. ಆದರೆ ಪೂರ್ಣಪ್ರಜ್ಞರಿಗೆ ಅದನ್ನು ಓದಲು ಇಷ್ಟವಿರಲಿಲ್ಲ. ಆದರೂ ಗುರುಗಳ ಅಪೇಕ್ಷೆಯಂತೆ ಅದನ್ನು ಓದಲು ಪ್ರಾರಂಭಿಸಿದರು. ಅದರ ಮೊದಲಿನ ಪದ್ಯದಲ್ಲಿಯೇ ಮೂವತ್ತೆರಡು ದೋಷಗಳಿವೆ ಎಂದರು. ಗುರುಗಳು ಅವುಗಳನ್ನೆಲ್ಲ ಗ್ರಂಥಕರ್ತರು ಮುಂದೆ ಪರಿಹರಿಸಿದ್ದಾರೆ ಎಂದರು. ಅವರು 'ಹಾಗಾದರೆ ಅದನ್ನು ಹೇಳಿ' ಎಂದು ಕೇಳಿದರು. ಅಚ್ಯುತಪ್ರೇಕ್ಷರು ದೋಷವನ್ನು ಪರಿಹರಿಸಲಾರದೆ ಕೋಪಗೊಂಡು ನಿನಗೆ ಹೇಳಲು ನನಗೆ ಶಕ್ತಿಯಿಲ್ಲ ಎಂದರು. ಆಗ ಅಲ್ಲಿ ನೆರೆದಿದ್ದ ಜನರು ಅದ್ವೈತಸಿದ್ಧಾಂತವು ಸರಿಯೋ ಅಲ್ಲವೋ ಎಂದು ಸಂದೇಹಗೊಂಡರು. ಪೂರ್ಣಪ್ರಜ್ಞರನ್ನು ಯತಿಗಳಾದ ನೀವು ಅದ್ವೈತಸಿದ್ಧಾಂತವನ್ನು ವಿವರಿಸಿ ಎಂದು ಕೇಳಿಕೊಂಡರು. ಅದರಂತೆ ಅವರು ಆ ಸಿದ್ಧಾಂತವನ್ನು ವಿವರಿಸಿದರು. ಆ ಶಾಸ್ತ್ರವನ್ನು ಓದಿದ ವಿದ್ವಾಂಸರೂ ಅವರ ವಿವರಣೆಯನ್ನು ಕೇಳಲು ಅಲ್ಲಿಗೆ ಬಂದು ಆಸಕ್ತಿಯಿಂದ ಕೇಳುತ್ತಿದ್ದರು.

ಒಂದಾನೊಂದು ದಿನ ಅಚ್ಯುತಪ್ರೇಕ್ಷರು ಭಾಗವತಪುರಾಣವನ್ನು ಹೇಳುತ್ತಿದ್ದರು. ಆಗ ಐದಾರು ಜನ ಬ್ರಾಹ್ಮಣರು ತಾವು ಇಟ್ಟುಕೊಂಡಿದ್ದ ಲಿಖಿತ ಪುಸ್ತಕಗಳ ಬೇರೆ ಬೇರೆ ವಿಧದ ಪಾಠವನ್ನು ಓದಿದರು. ಆಗ ಪೂರ್ಣಪ್ರಜ್ಞರು ಅವುಗಳಲ್ಲಿ ಒಂದು ಪುಸ್ತಕದ ಪಾಠವು ಸರಿಯಾದುದೆಂದು ನಿಶ್ಚಯಿಸಿ ಹೇಳಿದರು. ಗುರುಗಳು ಅದು ಹೇಗೆ ಎಂದು ಕೇಳಲು ಸಯುಕ್ತಿಕವಾಗಿ ಇದೇ ವೇದವ್ಯಾಸರಿಗೆ ಅಭಿಮತವಾದ ಪಾಠವೆಂದರು. 'ಹಾಗಾದರೆ ಐದನೆ ಸ್ಕಂಧದ ಒಂದು ಗದ್ಯವನ್ನು ಹೇಳು' ಎಂದು ಗುರುಗಳು ಕೇಳಿದಾಗ ಪೂರ್ಣಪ್ರಜ್ಞರು ಅದನ್ನು ಸರಿಯಾಗಿ ಅರ್ಥಸಹಿತವಾಗಿ ಹೇಳಿದರು. ಎಲ್ಲ ಶಿಷ್ಯರೂ ಗುರುಗಳ ಅಪ್ಪಣೆಯಂತೆ ಬೇರೆ ಬೇರೆ ಪುಸ್ತಕಗಳನ್ನು ನೋಡುತ್ತಿದ್ದರು. ಇವರು ಅವುಗಳಲ್ಲಿ ಒಂದು ಪುಸ್ತಕವನ್ನನುಸರಿಸಿ ಅಧ್ಯಾಯಗಳನ್ನೆಲ್ಲ ಹೇಳಿದರು. ಗುರುಗಳು 'ನೀನು ಇವುಗಳನ್ನು ಈ ಜನ್ಮದಲ್ಲಿ ಓದಲಿಲ್ಲ. ಇದು ಹೇಗೆ ನಿನಗೆ ಬಂತು.?' ಎಂದು ಕೇಳಿದರು. ಪೂರ್ಣಪ್ರಜ್ಞರು 'ಹಿಂದಿನ ಜನ್ಮಗಳಲ್ಲಿ ಓದಿದ್ದೇನೆ' ಎಂದರು. ಈ ರೀತಿ ಪೂರ್ಣಪ್ರಜ್ಞರ ಕೀರ್ತಿಯು ಸೂರ್ಯಚಂದ್ರರ ಕಾಂತಿಯಂತೆ ಪ್ರಪಂಚದಲ್ಲಿ ಹರಡಿತು.

---

Rarest Archiver

# ಚತುರ್ಥಸರ್ಗ

## ಶ್ರೀಗುರುಭ್ಯೋ ನಮಃ

*ಅಥೈಷ ಸಲ್ಲೋಕದಯಾಸುಧಾರ್ದ್ರಯಾ
ಸದಾಗಮಸ್ತೇನನಿರಾಸಕಾಮ್ಯಯಾ ।
ರಮಾವರಾವಾಸಭುವಾ ವಿಶಾರದೋ
ವಿಶಾಲಯಾಚಿಂತಯದಾತ್ಮನೋ ಧಿಯಾ ॥ ೧ ॥

ಅ :—ಅಥ ವಿಶಾರದಃ ಏಷಃ ಸಲ್ಲೋಕದಯಾಸುಧಾರ್ದ್ರಯಾ ಸದಾಗಮಸ್ತೇನನಿರಾಸಕಾಮ್ಯಯಾ ರಮಾವರಾವಾಸಭುವಾ ವಿಶಾಲಯಾ ಆತ್ಮನಃ ಧಿಯಾ ಅಚಿಂತಯತ್.

ಅ :—ಅಥ=ಗುರುಕುಲವಾಸದ ತರುವಾಯ, ವಿಶಾರದಃ=ಬುದ್ಧಿವಂತನಾದ, ಏಷಃ=ಈ ವಾಸುದೇವನು, ಸಲ್ಲೋಕ=ಸಜ್ಜನರಲ್ಲಿ, ದಯಾ=ಕರುಣೆಯೆಂಬ, ಸುಧಾ=ಅಮೃತದಿಂದ, ಆರ್ದ್ರಯಾ=ಒದ್ದೆಯಾದ, ಸದಾಗಮ=ವೇದ ಮೊದಲಾದುವುಗಳ, ಸ್ತೇನ=ಕಳ್ಳನಾದ ಸಂಕರನನ್ನು, ನಿರಾಸಕಾಮ್ಯಯಾ=ಖಂಡಿಸುವ ಅಪೇಕ್ಷೆಯುಳ್ಳ, ರಮಾವರ=ಲಕ್ಷ್ಮೀಪತಿಯಾದ ನಾರಾಯಣನ, ಆವಾಸಭುವಾ=ವಾಸಕ್ಕೆ ಸ್ಥಾನವಾದ, ವಿಶಾಲಯಾ=ವಿಶಾಲವಾದ (ಹೆಚ್ಚಾದ), ಆತ್ಮನಃ=ತನ್ನ, ಧಿಯಾ=ಬುದ್ಧಿಯಿಂದ, ಅಚಿಂತಯತ್=ಆಲೋಚಿಸಿದನು.

ತಾ :—ವಾಸುದೇವನು ಗುರುಕುಲದಿಂದ ಮನೆಗೆ ಒಂದು ಶ್ರೀಮನ್ನಾರಾಯಣನಲ್ಲಿ ನೆಲೆಸಿದ ಬುದ್ಧಿಯುಳ್ಳವನಾದನು. ವೇದ ಮೊದಲಾದುವುಗಳಿಗೆ ವಿರುದ್ಧಾರ್ಥವನ್ನು ಕಲ್ಪಿಸಿ ಜನರನ್ನು ವಂಚಿಸಿದ ಸಂಕರನ ಅದ್ವೈತಮತವನ್ನು ಖಂಡಿಸಿ ಸಜ್ಜನರಲ್ಲಿ ದಯೆಯಿಂದ ಉಪಕಾರ ಮಾಡಬೇಕೆಂದು ಹೀಗೆ ಆಲೋಚಿಸಿದನು.

---

*'ಜತೌ ತು ವಂಶಸ್ಥಮುದೀರಿತಂ ಜರೌ' ಎಂಬ ಲಕ್ಷಣದಂತೆ ಈ ಸರ್ಗದಲ್ಲಿ ೫೨ನೆ ಪದ್ಯದವರೆಗೆ ವಂಶಸ್ಥವೃತ್ತ.

Rarest Archiver

ವ್ಯಾ.ವಿ. :—ಸಂತಶ್ಚ ತೇ ಲೋಕಾಶ್ಚ, ಸಲ್ಲೋಕೇಷು ದಯಾ, ಸಲ್ಲೋಕದಯೈವ ಸುಧಾ, ಸಲ್ಲೋಕ .... ಸುಧಯಾ ಆರ್ದ್ರ=ಸಲ್ಲೋಕ-ದಯಾಸುಧಾರ್ದ್ರ, ತಯಾ. ಸಂತಶ್ಚ ತೇ ಆಗಮಾಶ್ಚ, ಸದಾಗಮಾನಾಂ ಸ್ತೋಮಃ, ಸದಾ....ಸ್ತೋಮಸ್ಯ ನಿರಾಸಃ, ಸದಾ....ನಿರಾಸೇ ಕಾಮಃ ಯಸ್ಯಾಸ್ಸಾ =ಸದಾಗಮಸ್ತೋಮನಿರಾಸಕಾಮಾ, ತಯಾ. ರಮಾಯಾಃ ವರಃ, ರಮಾವರಸ್ಯ ಆವಾಸಭೂಃ = ರಮಾವರಾವಾಸಭೂಃ, ತಯಾ. ಅಚಿಂತಯತ್—ಚಿತಿ ಸ್ಮೃತ್ಯಾಂ, ಹತ್ತನೆ ಗಣ, ಸಕ. ಲಙ್, ಪರ. ಪ್ರ. ಏ. ಅಚಿಂತಯತ್, ಅಚಿಂತಯತಾಂ, ಅಚಿಂತಯನ್, ಅಚಿಂತಯಃ, ಅಚಿಂತಯತಂ, ಅಚಿಂತಯತ. ಅಚಿಂತಯಂ, ಅಚಿಂತಯಾವ, ಅಚಿಂತಯಾಮ.

ಅನನ್ಯಸಂಗಾದ್ಗುಣಸಂಗಿತಾ ಹರೇ-
ರ್ಜನಸ್ಯ ಮಾನಂ ತು ವಿಶಿಷ್ಟಚೇಷ್ಟಿತಮ್ ।
ಅಸಂಗಮಸ್ಮಾತ್ಪ್ರಕಟೀಕರೋಮ್ಯಹಂ
ನಿಜಂ ಭಜನ್ ಪಾರಮಹಂಸ್ಯಮಾಶ್ರಮಮ್ ॥ ೨ ॥

ಅ :—ಅನನ್ಯ ಸಂಗಾತ್ ಹರೇಃ ಗುಣಸಂಗಿತಾ (ಘಟತೇ) ಜನಸ್ಯ ತು ವಿಶಿಷ್ಟಚೇಷ್ಟಿತಂ ಮಾನಂ. ಅಸ್ಮಾತ್ ಅಹಂ ಪಾರಮಹಂಸ್ಯಂ ಆಶ್ರಮಂ ಭಜನ್ ನಿಜಂ ಅಸಂಗಂ ಪ್ರಕಟೀಕರೋಮಿ.

ಅ :—ಅನನ್ಯಸಂಗಾತ್=ಭಗವಂತನಿಗಿಂತ ಬೇರೆಯಾದ ವಸ್ತುಗಳಲ್ಲಿ ಆಸಕ್ತಿಯಿಲ್ಲದಿರುವುದರಿಂದ, ಹರೇಃ = ವಿಷ್ಣುವಿನ, ಗುಣಸಂಗಿತಾ=ಗುಣಗಳಲ್ಲಿ ಆಸಕ್ತಿಯು, (ಘಟತೇ=ಉಂಟಾಗುವುದು) ಜನಸ್ಯ ತು=ಜನರಿಗಾದರೊ, ವಿಶಿಷ್ಟ=ಉತ್ತಮರ, ಚೇಷ್ಟಿತಂ=ಕೆಲಸವು (ಆಚರಣೆಯು), ಮಾನಂ=ಪ್ರಮಾಣವು. ಅಸ್ಮಾತ್=ಈ ಕಾರಣದಿಂದ, ಅಹಂ=ನಾನು, ಪಾರಮಹಂಸ್ಯಂ=ಸಂನ್ಯಾಸಿ ಸಂಬಂಧವಾದ, ಆಶ್ರಮಂ=ಆಶ್ರಮವನ್ನು, ಭಜನ್=ಸೇವಿಸುವವನಾಗಿ, ನಿಜಂ = ನನ್ನ ಸ್ವಭಾವವಾದ, ಅಸಂಗಂ= ವಿಷಯಗಳಲ್ಲಿ ಆಸಕ್ತಿಯಿಲ್ಲದಿರುವಿಕೆಯನ್ನು, ಪ್ರಕಟೀಕರೋಮಿ=ಸ್ಪಷ್ಟಪಡಿಸುತ್ತೇನೆ.

ತಾ :—ಮಾನವನಿಗೆ ದೇವರಿಗಿಂತ ಬೇರೆಯಾದ ವಿಷಯಗಳಲ್ಲಿ ಆಸಕ್ತಿ

Rarest Archiver

ಯಿಲ್ಲದಿದ್ದರೆ ದೇವರ ಗುಣಗಳಲ್ಲಿ ಆಸಕ್ತಿಯುಂಟಾಗುವುದು. ಪ್ರಪಂಚದ ಜನರು ದೊಡ್ಡವರ ಆಚರಣೆಯನ್ನು ಅನುಸರಿಸುವರು (ದೊಡ್ಡವರಂತೆ ನಡೆಯುವರು). ಆದ್ದರಿಂದ ನಾನು ಸಂನ್ಯಾಸವನ್ನು ಸ್ವೀಕರಿಸುವೆನು. ಅದೇ ವಿಷಯಾಶೆಯನ್ನು ನೀಗಲು ಸಾಧನವಾದುದು. ಅದರಿಂದಲೇ ನನ್ನ ಸ್ವಭಾವಸಿದ್ಧವಾದ ವಿಷಯಾಶೆಯ ಅಭಾವವನ್ನು ವ್ಯಕ್ತಗೊಳಿಸುವೆನು.

ವ್ಯಾ.ವಿ. :—ಅನ್ಯೇಷಾಂ ಸಂಗಃ, ಅನ್ಯಸಂಗಸ್ಯ ಅಭಾವಃ=ಅನನ್ಯಸಂಗಃ, ತಸ್ಮಾತ್. ಗುಣಾನಾಂ ಸಂಗಃ, ಗುಣಸಂಗಃ ಅಸ್ಯಾಸ್ತೀತಿ=ಗುಣಸಂಗೀ, ಗುಣಸಂಗಿನಃ ಭಾವಃ=ಗುಣಸಂಗಿತಾ, ವಿಶಿಷ್ಟಾನಾಂ ಚೇಷ್ಟಿತಂ =ವಿಶಿಷ್ಟಚೇಷ್ಟಿತಂ. ಪರಮಹಂಸಾನಾಂ ಸಂಬಂಧೀ = ಪಾರಮಹಂಸ್ಯಃ, ತಮ್. ಪ್ರಕಟೀಕರೋಮಿ-ಪ್ರಕಟಿ ಉಪಪದ, ಡುಕೃಞ್ ಕರಣೇ ಧಾತು. ಲಟ್.

ಈಗ ತಾವು ಸಂನ್ಯಾಸವನ್ನು ಸ್ವೀಕರಿಸಲು ಕಾರಣವನ್ನು ಹೇಳುತ್ತಾರೆ :—

ಮಮ ಪ್ರಭೋಃ ನಾಪರಥಾ ಹಿ ಶೋಭತೇ
ದ್ವಿಷತ್ಸು ವಿಷ್ಣುಂ ಯದದಂಡಧಾರಣಮ್ ।
ಹರಿಸ್ವಸಾ ನನ್ವಚಿರಾದಸದ್ಭಿದೇ
ಭವೇದತೋ ನಾಸ್ಮಿ ಚ ದಂಡಧಾರಕಃ ॥ ೩ ॥

ಅ :—ವಿಷ್ಣುಂ ದ್ವಿಷತ್ಸು ಯತ್ ಅದಂಡಧಾರಣಂ ಪ್ರಭೋಃ ಮಮ ಅಪರಥಾ ನ ಹಿ ಶೋಭತೇ. ಹರಿಸ್ವಸಾ ಅಸದ್ಭಿದೇ ಅಚಿರಾತ್ ಭವೇತ್ ನನು. ಅತಃ ಚ ದಂಡಧಾರಕಃ ನ ಅಸ್ಮಿ.

ಅ :—ವಿಷ್ಣುಂ=ಶ್ರೀಮನ್ನಾರಾಯಣನನ್ನು, ದ್ವಿಷತ್ಸು=ದ್ವೇಷಿಸುವವರಲ್ಲಿ, ಯತ್=ಯಾವ, ಅದಂಡಧಾರಣಂ=ನಾಲಿಗೆಯನ್ನು ಸೀಳುವುದೇ ಮೊದಲಾದ ಶಿಕ್ಷೆಯನ್ನು ಮಾಡದಿರುವಿಕೆಯೊ (ಅದು) ಪ್ರಭೋಃ=ಸಮರ್ಥನಾದ, ಮಮ=ನನಗೆ, ಅಪರಥಾ=ಸಂನ್ಯಾಸವನ್ನು ಸ್ವೀಕಾರ ಮಾಡದಿದ್ದರೆ, ನ ಹಿ ಶೋಭತೇ=ಪ್ರಕಾಶಿಸುವುದಿಲ್ಲ. ಹರಿಸ್ವಸಾ=ಶ್ರೀಕೃಷ್ಣನ ತಂಗಿಯಾದ ದುರ್ಗಾದೇವಿಯು, ಅಸದ್ಭಿದೇ=ದುಷ್ಟರನ್ನು ಕೊಲ್ಲಲು, ಅಚಿರಾತ್=ಜಾಗ್ರತೆ

Rarest Archiver

ಯಾಗಿ. ಭವೇತ್ ನನು—ಅವತಾರ ಮಾಡಿಯೇ ಮಾಡುವಳು. ಅತಃ ಚ— ಆದುದರಿಂದಲೇ, ದಂಡಧಾರಕಃ—ಶಿಕ್ಷೆಮಾಡುವವನ್, ನ ಅಸ್ಮಿ — ಆಗುವುದಿಲ್ಲ.

ತಾ :—ನಾನು ವಿಷ್ಣುದ್ವೇಷಿಗಳನ್ನು ದಂಡಿಸಲು ಸಮರ್ಥನು. ಹೀಗಿದ್ದರೂ ಹಾಗೆ ಮಾಡದಿರುವುದು ದಂಡವನ್ನು ಧರಿಸದೆ ಸಂನ್ಯಾಸಿಯಾಗದೆ ಇದ್ದರೆ ನನಗೆ ಉಚಿತವಲ್ಲ. ನಾನು ಸಂನ್ಯಾಸಿಯಾಗುತ್ತೇನೆ. ಈಗ ದುಷ್ಟರನ್ನು ಶಿಕ್ಷಿಸುವುದಿಲ್ಲ. ಏಕೆಂದರೆ ಅಂತಹ ದುಷ್ಟರನ್ನು ಶಿಕ್ಷಿಸಲು ಶ್ರೀಕೃಷ್ಣನ ತಂಗಿ ದುರ್ಗೆಯು ಶೀಘ್ರದಲ್ಲಿಯೇ ಅವತರಿಸುವಳು. ಇದರಿಂದ ನಾನು ಆ ಕೆಲಸವನ್ನು ಮಾಡಲು ಹೋಗುವುದಿಲ್ಲ. ನಾನು ದಂಡಿಸಲನರ್ಹವಾದ ಸಂನ್ಯಾಸಾಶ್ರಮವನ್ನು ಸ್ವೀಕರಿಸುವೆನು.

ವ್ಯಾ.ವಿ. :—ದಂಡಸ್ಯ ಧಾರಣಂ, ದಂಡಧಾರಣಸ್ಯ ಅಭಾವಃ— ಅದಂಡಧಾರಣಮ್. ಹರೇಃ ಸ್ವಸಾ—ಹರಿಸ್ವಸಾ. ಅಸತಾಂ ಭಿತ್— ಅಸದ್ಭಿತ್, ತಸ್ಮೈ. ಶೋಭತೇ-ಶುಭ ದೀಪ್ತೌ, ಒಂದನೆ ಗಣ, ಅಕ. ಲಟ್, ಆತ್ಮ. ಪ್ರ. ಏ. ಶೋಭತೇ, ಶೋಭೇತೇ, ಶೋಭಂತೇ. ಶೋಭಸೇ, ಶೋಭೇಥೇ, ಶೋಭಧ್ವೇ. ಶೋಭೇ, ಶೋಭಾವಹೇ, ಶೋಭಾಮಹೇ.

ವಿಚಿಂತಯನ್ನಿತ್ಥಮನಂತಚಿಂತಕಃ
ಸಮಸ್ತಸನ್ನ್ಯಾಸನಿಬದ್ಧನಿಶ್ಚಯಃ ।
ಅಸಾವನುಜ್ಞಾರ್ಥಮಥಾನಮದ್ಧರಿಂ
ಸಮಸ್ತಸಂವ್ಯಾಪಿನಮಾತ್ಮದಾಯುಗಮ್ ॥ ೪ ॥

ಅ :—ಅನಂತಚಿಂತಕಃ ಅಸೌ ಇತ್ಥಂ ವಿಚಿಂತಯನ್ ಅಥ ಸಮಸ್ತಸಂನ್ಯಾಸನಿಬದ್ಧನಿಶ್ಚಯಃ ಅನುಜ್ಞಾರ್ಥಂ ಸಮಸ್ತಸಂವ್ಯಾಪಿನಂ ಆತ್ಮದಾಯುಗಂ ಹರಿಂ ಅನಮತ್.

ಅ :—ಅನಂತಚಿಂತಕಃ—ಪರಮಾತ್ಮನ ಧ್ಯಾನದಲ್ಲಿ ಆಸಕ್ತನಾದ, ಅಸೌ—ಈ ವಾಸುದೇವನು, ಇತ್ಥಂ—ಈ ರೀತಿ, ವಿಚಿಂತಯನ್—ಆಲೋಚಿಸುತ್ತ, ಅಥ—ತರುವಾಯ, ಸಮಸ್ತ—ಎಲ್ಲವನ್ನೂ, ಸಂನ್ಯಾಸ—ಬಿಡುವುದರಲ್ಲಿ, ನಿಬದ್ಧನಿಶ್ಚಯಃ—ಮಾಡಲ್ಪಟ್ಟ ನಿಶ್ಚಯವುಳ್ಳವನಾಗಿ, ಅನುಜ್ಞಾರ್ಥಂ —ಅಪ್ಪಣೆಯನ್ನು ಪಡೆಯುವುದಕ್ಕಾಗಿ, ಸಮಸ್ತ—ಎಲ್ಲ ಪ್ರಪಂಚವನ್ನು,

Rarest Archiver

ಸಂವ್ಯಾಪಿನಂ=ವ್ಯಾಪಿಸಿಕೊಂಡಿರುವ, ಆತ್ಮದಾಯಗಂ=ತನ್ನ ಮನೆ ಮೊದಲಾದುವುಗಳಲ್ಲಿರುವ, ಹರಿಂ=ವಿಷ್ಣುವನ್ನು, ಅನಮತ್=ವಂದಿಸಿದನು.

ತಾ :—ಅದರಂತೆ ಪರಮಾತ್ಮನ ಧ್ಯಾನದಲ್ಲಿ ಆಸಕ್ತನಾದ ಈ ವಾಸುದೇವನು ಈ ರೀತಿ ಆಲೋಚಿಸುತ್ತ ಎಲ್ಲವನ್ನು ತ್ಯಾಗಮಾಡಲು ನಿಶ್ಚಯಿಸಿದನು. ಅಂತೆಯೇ ಸಂನ್ಯಾಸಕ್ಕೆ ಅಜ್ಞೆಯನ್ನು ಪಡೆಯಲು ಸರ್ವವ್ಯಾಪಿಯಾದ ತನ್ನ ಮನೆ ಗದ್ದೆ ಮುಂತಾದುವುಗಳಲ್ಲಿರುವ ವಿಷ್ಣುವನ್ನು ವಂದಿಸಿದನು.

ವ್ಯಾ.ವಿ. :—ಅನಂತಸ್ಯ ಚಿಂತಕಃ=ಅನಂತಚಿಂತಕಃ. ಸಮಸ್ತಸ್ಯ ಸನ್ಯಾಸಃ, ಸಮಸ್ತಸನ್ಯಾಸೇ ನಿಬದ್ಧಃ, ಸಮಸ್ತಸನ್ಯಾಸನಿಬದ್ಧಃ ನಿಶ್ಚಯಃ ಯಸ್ಯ ಸಃ=ಸಮಸ್ತಸಂನ್ಯಾಸನಿಬದ್ಧನಿಶ್ಚಯಃ. ಸಮಸ್ತಂ ಸಂವ್ಯಾಪ್ತುಂ ಶೀಲಮಸ್ಯಾಸ್ತೀತಿ=ಸಮಸ್ತಸಂವ್ಯಾಪೀ, ತಮ್. ಆತ್ಮನಃ ದಾಯಃ, ಆತ್ಮದಾಯಂ ಗಚ್ಛತೀತಿ=ಆತ್ಮದಾಯಗಃ, ತಮ್.

ನಿಜೇ ಜನೇ ಕಿಂ ನಮಸೀತಿ ಪೃಚ್ಛತಿ
ಬ್ರುವನ್ ಸ್ವವಸ್ತುಪ್ರಣತಿಂ ವ್ಯಧಾಮಿತಿ ।
ಗುರೋಃ ಕಿಲಾನ್ವೇಷಣವಾನ್ ಜಗದ್ಗುರು-
ಸ್ತದಾ ಜಗಾಮಾಖಿಲಲೋಕಶಿಕ್ಷಕಃ ॥ ೫ ॥

ಅ :—ತದಾ ನಿಜೇ ಜನೇ ಕಿಂ ನಮಸಿ ಇತಿ ಪೃಚ್ಛತಿ ಸ್ವವಸ್ತುಪ್ರಣತಿಂ ವ್ಯಧಾಂ ಇತಿ ಬ್ರುವನ್ ಜಗದ್ಗುರುಃ ಅಖಿಲಲೋಕಶಿಕ್ಷಕಃ ಗುರೋಃ ಅನ್ವೇಷಣವಾನ್ ಜಗಾಮ ಕಿಲ.

ಅ :—ತದಾ=ಆಗ, ನಿಜೇ=ತಮ್ಮವರಾದ ತಂದೆ ಮೊದಲಾದ, ಜನೇ=ಜನರು, ಕಿಂ=ಏತಕ್ಕೆ, ನಮಸಿ=ನಮಸ್ಕಾರ ಮಾಡುತ್ತೀ ? ಇತಿ =ಹೀಗೆಂದು, ಪೃಚ್ಛತಿ=ಕೇಳುತ್ತಿರಲು, ಸ್ವವಸ್ತು=ನನ್ನ ಪದಾರ್ಥದ (ವಿಷ್ಣುವಿನ), ಪ್ರಣತಿಂ=ನಮಸ್ಕಾರವನ್ನು, ವ್ಯಧಾಂ=ಮಾಡಿದೆನು. ಇತಿ =ಹೀಗೆಂದು, ಬ್ರುವನ್=ಹೇಳುತ್ತಿದ್ದ, ಜಗದ್ಗುರುಃ=ಸಮಸ್ತಲೋಕಗಳ ಗುರುವಾದ, ಅಖಿಲ=ಎಲ್ಲ, ಲೋಕ=ಜನರ, ಶಿಕ್ಷಕಃ=ಉಪದೇಶಕನಾದ ಆ

Rarest Archiver

ವಾಸುದೇವನು, ಗುರೋಃ=ಗುರುವಿನ, ಅನ್ವೇಷಣವಾನ್=ಹುಡುಕುವಿಕೆ ಯುಳ್ಳವನಾಗಿ, ಜಗಾಮ ಕಿಲ=ಹೊರಟನು.

ತಾ :—ಹೀಗೆ ಈ ವಾಸುದೇವನು ಮನೆ ಮುಂತಾದ ಪದಾರ್ಥಗಳಲ್ಲಿ ಅಂತರ್ಯಾಮಿಯಾಗಿರುವ ವಿಷ್ಣುವನ್ನು ನಮಸ್ಕರಿಸುತ್ತಿರಲು ಅವನ ಅಭಿಪ್ರಾಯ ವನ್ನರಿಯದ ತಂದೆ ಮೊದಲಾದ ಬಂಧುಗಳು 'ಏಕೆ ಹೀಗೆ ನಮಿಸುತ್ತಿರುವಿ?' ಎಂದು ಕೇಳಿದರು. ಇವನು ತಾನು ವಿಷ್ಣುವಿಗೆ ನಮಸ್ಕಾರ ಮಾಡುತ್ತಿದ್ದೇನೆ ಎಂದು ತಿಳಿಸದೆ 'ನನ್ನ ಪದಾರ್ಥಗಳಿಗೆ ವಂದಿಸುತ್ತಿದ್ದೇನೆ' ಎಂದನು. ಹೀಗೆ ಜಗತ್ತಿಗೆ ಗುರುವಾದ ಸಮಸ್ತ ಜನರಿಗೆ ತನ್ನ ಆಚರಣೆಯಿಂದ ತಿಳುವಳಿಕೆ ಯನ್ನುಂಟುಮಾಡುವ ಆ ವಾಸುದೇವನು ಸಂನ್ಯಾಸ ಸ್ವೀಕಾರಕ್ಕಾಗಿ ಗುರು ಗಳನ್ನು ಹುಡುಕಿಕೊಂಡು ಹೊರಟನು.

ವ್ಯಾ.ವಿ. :—ಸ್ವಸ್ಯ ವಸೂನಿ, ಸ್ವವಸೂನಾಂ ಪ್ರಣತಿಃ=ಸ್ವವಸ್ತು-ಪ್ರಣತಿಃ, ತಾಮ್. ಅಖಿಲಾಶ್ಚ ತೇ ಲೋಕಾಶ್ಚ, ಅಖಿಲಲೋಕಾನಾಂ ಶಿಕ್ಷಕಃ =ಅಖಿಲಲೋಕಶಿಕ್ಷಕಃ.

ಯತಿರ್ಯತಾತ್ಮಾ ಭುವಿ ಕಶ್ಚನಾಭವ-
ದ್ವಿಭೂಷಣೋ ಭೂರಿವಿರಕ್ತಿಭೂಷಣಃ ।
ನ ನಾಮಮಾತ್ರಾಚ್ಛುಚಿಮರ್ಥತೋಽಪಿ ಯಂ
ಜನೋಽಚ್ಯುತಪ್ರೇಕ್ಷಮುದಾಹರತ್ಸ್ಫುಟಮ್ ॥ ೬ ॥

ಅ :—ಜನಃ ಶುಚಿಂ ಯಂ ನಾಮಮಾತ್ರಾತ್ ಅಚ್ಯುತಪ್ರೇಕ್ಷಂ ನ ಉದಾಹರತ್. ಸ್ಫುಟಂ ಅರ್ಥತಃ ಅಪಿ ಉದಾಹರತ್. ಭುವಿ ಯತಾತ್ಮಾ ವಿಭೂಷಣಃ ಭೂರಿವಿರಕ್ತಿಭೂಷಣಃ ಕಶ್ಚನ ಯತಿಃ ಅಭವತ್.

ಅ :—ಜನಃ=ಜನರು, ಶುಚಿಂ=ಶುದ್ಧರಾದ, ಯಂ=ಯಾವ ಯತಿ ಯನ್ನು, ನಾಮಮಾತ್ರಾತ್=ಹೆಸರಿನಿಂದ ಮಾತ್ರ, ಅಚ್ಯುತಪ್ರೇಕ್ಷಂ= ಅಚ್ಯುತಪ್ರೇಕ್ಷರೆಂಬ ಹೆಸರುಳ್ಳವರನ್ನಾಗಿ, ನ ಉದಾಹರತ್=ಹೇಳಲಿಲ್ಲವೊ; ಸ್ಫುಟಂ=ಸ್ಪಷ್ಟವಾಗಿ, ಅರ್ಥತಃ ಅಪಿ=ಅರ್ಥದಿಂದಲೂ, ಉದಾಹರತ್= ಅಚ್ಯುತಪ್ರೇಕ್ಷರೆಂದು ಹೇಳಿದರೊ, ಭುವಿ=ಭೂಮಿಯಲ್ಲಿ, ಯತಾತ್ಮಾ=

Rarest Archiver

ಜಿತೇಂದ್ರಿಯರಾದ, ವಿಭೂಷಣಃ = ಒಡವೆಗಳನ್ನು ಧರಿಸದಿರುವ, ಭೂರಿ = ಹೆಚ್ಚಾದ, ವಿರಕ್ತಿ = ವೈರಾಗ್ಯವೇ, ಭೂಷಣಃ = ಅಲಂಕಾರವಾಗುಳ್ಳ, ಕಶ್ಚನ = ಒಬ್ಬ, ಯತಿಃ = ಸಂನ್ಯಾಸಿಗಳು, ಅಭವತ್ = ಇದ್ದರು.

ತಾ :—ಆಗ ಭೂಮಿಯಲ್ಲಿ ಸಂನ್ಯಾಸಾಶ್ರಮಕ್ಕೆ ತಕ್ಕಂತೆ ಜಿತೇಂದ್ರಿಯರೂ, ಶುದ್ಧರೂ, ಅತ್ಯಂತ ವೈರಾಗ್ಯಶಾಲಿಗಳೂ ಆದ ಅಚ್ಯುತಪ್ರೇಕ್ಷರೆಂಬ ಒಬ್ಬ ಸಂನ್ಯಾಸಿಗಳಿದ್ದರು. ಅವರು ಅಚ್ಯುತಪ್ರೇಕ್ಷ ಎಂಬ ಹೆಸರಿಗೆ ಅನುಗುಣವಾಗಿ ಶ್ರೀಮನ್ನಾರಾಯಣನ ವಿಷಯಕವಾದ ತತ್ವಜ್ಞಾನವನ್ನೂ ಪಡೆದಿದ್ದರು.

ವ್ಯಾ. ವಿ. :—ಯತಃ ಆತ್ಮಾ ಯಸ್ಯ ಸಃ = ಯತಾತ್ಮಾ. ಭೂರಿಶ್ಚ ಸಾ ವಿರಕ್ತಿಶ್ಚ, ಭೂರಿವಿರಕ್ತಿಃ ಏವ ಭೂಷಣಂ ಯಸ್ಯ ಸಃ = ಭೂರಿವಿರಕ್ತಿಭೂಷಣಃ. ಅಚ್ಯುತಸ್ಯ ಪ್ರೇಕ್ಷಾ ಯಸ್ಯ ಸಃ = ಅಚ್ಯುತಪ್ರೇಕ್ಷಃ, ತವನ್.

ಪುರೈಷ ಕೃಷ್ಣಾ ಕರಸಿದ್ಧ ಶುದ್ಧಿ ಮ-
ದ್ವರಾನ್ನಭುಕ್ತ್ಯಾ ಕಿಲ ಪಾಂಡವಾಲಯೇ ।
ವಿಶೋಧಿತಾತ್ಮಾ ಮಧುಕೃತ್ಪ್ರವೃತ್ತಿಮಾನ್
ಚಚಾರ ಕಾಂಶ್ಚಿತ್ ಪರಿವತ್ಸರಾನ್ ಮುದಾ ॥ ೭ ॥

ಅ :—ಏಷಃ ಪುರಾ ಮಧುಕೃತ್ಪ್ರವೃತ್ತಿಮಾನ್ ಕೃಷ್ಣಾಕರಸಿದ್ಧಶುದ್ಧಿಮದ್ವರಾನ್ನಭುಕ್ತ್ಯೈ ವಿಶೋಧಿತಾತ್ಮಾ ಪಾಂಡವಾಲಯೇ ಕಾಂಶ್ಚಿತ್ ಪರಿವತ್ಸರಾನ್ ಮುದಾ ಚಚಾರ ಕಿಲ.

ಅ :—ಏಷಃ = ಈ ಅಚ್ಯುತಪ್ರೇಕ್ಷರು, ಪುರಾ = ಹಿಂದಿನ ಜನ್ಮದಲ್ಲಿ, ಮಧುಕೃತ್ = ಜೇನುನೊಣದ, ಪ್ರವೃತ್ತಿಮಾನ್ = ಕೆಲಸವುಳ್ಳವರಾಗಿ, (ಭಿಕ್ಷಾಟನೆ = ಮಧುಕರೀವೃತ್ತಿ ಮಾಡುತ್ತ) ಕೃಷ್ಣಾ = ದ್ರೌಪದಿಯ, ಕರ = ಕೈಯಿಂದ, ಸಿದ್ಧ = ಸಿದ್ಧಗೊಳಿಸಲ್ಪಟ್ಟ, ಶುದ್ಧಿಮತ್ = ಶುದ್ಧವಾದ, ವರಾನ್ನ = ಉತ್ತಮವಾದ ಅನ್ನದ, ಭುಕ್ತ್ಯಾ = ಭೋಜನದಿಂದ, ವಿಶೋಧಿತ = ಶುದ್ಧ ಮಾಡಲ್ಪಟ್ಟ, ಆತ್ಮಾ = ದೇಹ ಮತ್ತು ಮನಸ್ಸುಳ್ಳವರಾಗಿ, ಪಾಂಡವಾಲಯೇ = ಪಾಂಡವರ ಮನೆಯಲ್ಲಿ, ಕಾಂಶ್ಚಿತ್ = ಕೆಲವು, ಪರಿವತ್ಸರಾನ್ = ಸಂವತ್ಸರ ಕಾಲ, ಮುದಾ = ಸಂತೋಷದಿಂದ, ಚಚಾರ ಕಿಲ = ಸಂಚಾರ ಮಾಡಿದರು.

Rarest Archiver

ತಾ :– ಹಿಂದಿನ ಜನ್ಮದಲ್ಲಿಯೂ ಸನ್ಯಾಸಿಗಳಾಗಿದ್ದ ಈ ಅಚ್ಯುತ ಪ್ರೇಕ್ಷರು ಜೇನುನೊಣವು ಒಂದೊಂದು ಹೂವಿನಿಂದಲೂ ಹೂವಿನ ರಸವನ್ನು ಸಂಗ್ರಹಿಸುವಂತೆ ಭಿಕ್ಷಾಟನೆ ಮಾಡುತ್ತಿದ್ದರು. ಇವರು ದ್ರೌಪದಿಯು ಅಡಿಗೆ ಮಾಡಿದ್ದರಿಂದ ಶುದ್ಧವಾದ ಅನ್ನವನ್ನು ಭುಂಜಿಸುವುದರಿಂದ ಪವಿತ್ರವಾದ ಮನಸ್ಸುಳ್ಳವರಾಗಿ ಪಾಂಡವರ ಮನೆಯಲ್ಲಿ ಕೆಲವು ವರ್ಷಕಾಲ ಸಂಚರಿಸುತ್ತಿದ್ದರು.

ವ್ಯಾ. ವಿ. :—ಕೃಷ್ಣಾಯಾಃ ಕರಃ, ಕೃಷ್ಣಾಕರೇಣ ಸಿದ್ಧಂ, ಶುದ್ಧಿ-ರಸ್ಯಾಸ್ತೀತಿ=ಶುದ್ಧಿಮತ್, ವರಂ ಚ ತತ್ ಅನ್ನಂ ಚ. ಶುದ್ಧಿಮಚ್ಚ ತತ್ ವರಾನ್ನಂ ಚ, ಕೃಷ್ಣಾಕರಸಿದ್ಧಂ ಚ ತತ್ ಶುದ್ಧಿಮದ್ವರಾನ್ನಂ ಚ, ಕೃಷ್ಣಾ.... ವರಾನ್ನಸ್ಯಭುಕ್ತಿಃ = ಕೃಷ್ಣಾಕರಸಿದ್ಧಶುದ್ಧಿಮದ್ವರಾನ್ನಭುಕ್ತಿಃ, ತಯಾ. ಪಾಂಡವಾನಾಂ ಆಲಯಃ=ಪಾಂಡವಾಲಯಃ, ತಸ್ಮಿನ್. ವಿಶೋಧಿತಃ ಆತ್ಮಾ ಯಸ್ಯ ಸಃ=ವಿಶೋಧಿತಾತ್ಮಾ. ಮಧು ಕರೋತೀತಿ, ಮಧುಕೃತ್=ಮಧು-ಕೃತಃ ಪ್ರವೃತ್ತಿಃ ಯಸ್ಯ ಸಃ=ಮಧುಕೃತ್ಪ್ರವೃತ್ತಿಃ. ಚಚಾರ–ಚರ ಗತಿ ಭಕ್ಷಣಯೋಃ, ಒಂದನೆ ಗಣ, ಸಕ. ಲಿಟ್, ಪರ. ಪ್ರ. ಏ. ಚಚಾರ, ಚೇರತುಃ, ಚೇರುಃ. ಚೇರಿಥ, ಚೇರತುಃ, ಚೇರ. ಚಚಾರ ಚಚರ, ಚೇರಿವ, ಚೇರಿಮ.

ಅಭೂತ್ಕುಶಾಸ್ತ್ರಾಭ್ಯಸನಂ ನ ಪಾತಕಂ
ಕ್ರಮಾಗತಾದ್ವಿಪ್ರತಿಸಾರತೋ ಯತೇಃ ।
ಯಥಾ ಕುಶಸ್ತ್ರಾಧ್ಯಸನಂ ಮುರದ್ವಿಷಃ
ಪದಾಂಬುಜೇ ವ್ಯಾಧವರಸ್ಯ ಗರ್ಹಿತಮ್ ॥ ೮ ॥

ಅ :—ಯತೇಃ ಕ್ರಮಾಗತಾತ್ ವಿಪ್ರತಿಸಾರತಃ ಕುಶಾಸ್ತ್ರಾಭ್ಯಸನಂ ಮುರದ್ವಿಷಃ ಪದಾಂಬುಜೇ ವ್ಯಾಧವರಸ್ಯ ಗರ್ಹಿತಂ ಕುಶಸ್ತ್ರಾಧ್ಯಸನಂ ಯಥಾ ಪಾತಕಂ ನ ಅಭೂತ್.

ಅ :—ಯತೇಃ = ಸನ್ಯಾಸಿಯಾದ ಅಚ್ಯುತಪ್ರೇಕ್ಷರಿಗೆ, ಕ್ರಮಾ-ಗತಾತ್ = ಕಾಲಕ್ರಮದಿಂದ ಬಂದ, ವಿಪ್ರತಿಸ್ಸಾರತಃ = ಪಶ್ಚಾತ್ತಾಪದಿಂದ, ಕುಶಾಸ್ತ್ರಾಭ್ಯಸನಂ=ದುಷ್ಟಶಾಸ್ತ್ರದ ಅಭ್ಯಾಸವು, ಮುರದ್ವಿಷಃ=ಶ್ರೀಕೃಷ್ಣನ, ಪದಾಂಬುಜೇ = ಕಮಲ ಸಮಾನವಾದ ಪಾದದಲ್ಲಿ, ವ್ಯಾಧವರಸ್ಯ = ಜರಾ

Rarest Archiver

ಎಂಬ ಶ್ರೇಷ್ಠ ಬೇಡನ, ಗರ್ಹಿತಂ=ನಿಂದಿತವಾದ, ಕುಶಸ್ತ್ರ=ಕೆಟ್ಟ ಬಾಣದ, ಅಧ್ಯಸನಂ ಯಥಾ=ಪ್ರಯೋಗದಂತೆ, ಪಾತಕಂ=ಪಾಪಕ್ಕೆ ಕಾರಣವು ನ ಅಭೂತ್=ಆಗಲಿಲ್ಲ.

ತಾ :—ಆ ಅಚ್ಯುತಪ್ರೇಕ್ಷರು ಮಧ್ವಶಾಸ್ತ್ರವನ್ನು ಓದಿದ ತರುವಾಯ ತಾವು ಹಿಂದೆ ದುಷ್ಟ ಅದ್ವೈತಸಿದ್ಧಾಂತ ಓದಿದ್ದಕ್ಕೆ ಪಶ್ಚಾತ್ತಾಪಗೊಂಡರು. ಹಿಂದೆ ಜರಾ ಎಂಬ ವ್ಯಾಧಶ್ರೇಷ್ಠನು, ಎಲ್ಲ ಯಾದವರು ಸ್ವರ್ಗಕ್ಕೆ ತೆರಳುವ ಕಾಲದಲ್ಲಿ ಅಶ್ವತ್ಥ ಮರದ ಕೆಳಗೆ ಮಲಗಿರುವ ಶ್ರೀಕೃಷ್ಣನ ಪಾದಕಮಲಕ್ಕೆ ಅರಿಯದೆ ಮೃಗವೆಂಬ ಭ್ರಾಂತಿಯಿಂದ ಬಾಣ ಪ್ರಯೋಗಿಸಿ ಅನಂತರ ಪಶ್ಚಾತ್ತಾಪಗೊಂಡನು. ಅದರಿಂದ ಅವನಿಗೆ ಪಾಪವುಂಟಾಗಲಿಲ್ಲ. ಹಾಗೆಯೇ ಈ ಅಚ್ಯುತಪ್ರೇಕ್ಷರಿಗೂ ಪಾಪವುಂಟಾಗಲಿಲ್ಲ.

ವ್ಯಾ. ವಿ. :—ಕುತ್ಸಿತಂ ಚ ತತ್ ಶಾಸ್ತ್ರಂ ಚ, ಕುಶಾಸ್ತ್ರಸ್ಯ ಅಭ್ಯಸನಂ=ಕುಶಾಸ್ತ್ರಾಭ್ಯಸನಮ್. ಕ್ರಮೇಣ ಆಗತಃ=ಕ್ರಮಾಗತಃ, ತಸ್ಮಾತ್. ಕುತ್ಸಿತಂ ಚ ತತ್ ಶಸ್ತ್ರಂ ಚ, ಕುಶಸ್ತ್ರಸ್ಯ ಅಧ್ಯಸನಂ=ಕುಶಸ್ತ್ರಾಧ್ಯಸನಮ್. ಮುರಂ ದ್ವೇಷ್ಟೀತಿ=ಮುರದ್ವಿಟ್, ತಸ್ಯ. ಪದಂ ಅಂಬುಜಂ ಇವ=ಪದಾಂಬುಜಂ, ತಸ್ಮಿನ್. ವ್ಯಾಧೇಷು ವರಃ=ವ್ಯಾಧವರಃ, ತಸ್ಯ.

ವಿನೀತಮಾಮ್ನಾಯಶಿರೋವಿಶಾರದಂ
ಸದೈವ ತತ್ತ್ವಂ ಪ್ರಬುಭುತ್ಸುಮಾದರಾತ್ ।
ಗುರುರ್ವಿದಿತ್ವೋಪಗತಾಂ ನಿಜಾಂ ಮೃತಿಂ
ಕದಾಚಿದೂಚೇ ತಮುಪಹ್ವರೇ ಗಿರಮ್ ॥ ೯ ॥

ಅ :—ಗುರುಃ ಕದಾಚಿತ್ ನಿಜಾಂ ಮೃತಿಂ ಉಪಗತಾಂ ವಿದಿತ್ವಾ ವಿನೀತಂ ಆಮ್ನಾಯಶಿರೋವಿಶಾರದಂ ಸದಾ ತತ್ತ್ವಂ ಏವ ಆದರಾತ್ ಪ್ರಬುಭುತ್ಸುಂ ತಂ ಉಪಹ್ವರೇ ಗಿರಂ ಊಚೇ.

ಅ :—ಗುರುಃ=ಅಚ್ಯುತಪ್ರೇಕ್ಷಾಚಾರ್ಯರ ಗುರುಗಳು, ಕದಾಚಿತ್=ಒಂದಾನೊಂದುವೇಳೆ, ನಿಜಾಂ=ತಮ್ಮ, ಮೃತಿಂ=ಮರಣವನ್ನು, ಉಪಗತಾಂ=ಸಮೀಪಿಸಿದ್ದನ್ನಾಗಿ, ವಿದಿತ್ವಾ=ತಿಳಿದು, ವಿನೀತಂ=ವಿಧೇಯನಾದ,

Rarest Archiver

ಆಮ್ನಾಯ = ವೇದಗಳ, ಶಿರಃ = ತಲೆಯಂತಿರುವ ಉಪನಿಷತ್ತುಗಳಲ್ಲಿ, ವಿಶಾರದಂ = ಕುಶಲರಾದ, ಸದಾ = ಯಾವಾಗಲೂ, ತತ್ತ್ವಂ ಏವ= ಭಗವಂತನ ನಿಜ ಸ್ಥಿತಿಯನ್ನೇ, ಆದರಾತ್ =ಆಸಕ್ತಿಯಿಂದ, ಪ್ರಬುಭುತ್ಸುಂ =ತಿಳಿಯಲಪೇಕ್ಷಿಸುವ, ತಂ=ಆ ಶಿಷ್ಯರಾದ ಅಚ್ಯುತಪ್ರೇಕ್ಷರನ್ನು ಕುರಿತು, ಉಪಹ್ವರೇ=ಗುಟ್ಟಿನಲ್ಲಿ, ಗಿರಂ=ಮಾತನ್ನು, ಊಚೇ=ಹೇಳಿದರು.

ತಾ :—ಆ ಅಚ್ಯುತಪ್ರೇಕ್ಷಾಚಾರ್ಯರ ಗುರುಗಳು ಒಂದಾನೊಂದು ದಿನ ತಮಗೆ ಮರಣವು ಸಮೀಪಿಸಿರುವುದನ್ನರಿತರು. ಅವರು ವಿಧೇಯರೂ, ಉಪನಿಷತ್ತುಗಳಲ್ಲಿ ಕುಶಲರೂ, ಯಾವಾಗಲೂ ಪ್ರೀತಿಯಿಂದ ಭಗವತ್ತತ್ತ್ವವನ್ನು ಅರಿಯಲು ಉತ್ಸುಕರೂ ಆಗಿರುವ ಶಿಷ್ಯರಾದ ಅಚ್ಯುತಪ್ರೇಕ್ಷರನ್ನು ಕುರಿತು ಗುಟ್ಟಿನಲ್ಲಿ ಇಂತೆಂದರು.

ವ್ಯಾ. ವಿ. :—ಆಮ್ನಾಯಾನಾಂ ಶಿರಾಂಸೀವ=ಆಮ್ನಾಯಶಿರಾಂಸಿ. ಆಮ್ನಾಯಶಿರಸ್ಸು ವಿಶಾರದಃ = ಆಮ್ನಾಯಶಿರೋವಿಶಾರದಃ, ತಮ್. ಪ್ರಕರ್ಷೇಣ ಬೋದ್ಧುಮಿಚ್ಛುಃ = ಪ್ರಬುಭುತ್ಸುಃ, ತಮ್. ಊಚೇ = ಬ್ರೂಞ್ ವ್ಯಕ್ತಾಯಾಂ ವಾಚಿ, ಎರಡನೆ ಗಣ, ಸಕ. ಲಿಟ್, ಆತ್ಮ. ಪ್ರ. ಏ. ಊಚೇ, ಊಚಾತೇ, ಊಚಿರೇ. ಊಚಿಷೇ, ಊಚಾಥೇ, ಊಚಿಧ್ವೇ. ಊಚೇ, ಊಚಿವಹೇ, ಊಚಿಮಹೇ.

ಅಹಂ ಸ್ವಯಂ ಬ್ರಹ್ಮ ನ ಕಿಂಚಿದಸ್ತಿ ಮ-
ತ್ಪರಂ ವಿಜೃಂಭೇತ ಯದಾ ಸ್ಫುಟಂ ಚಿತಿಃ ।
ಇತೀಹ ಮಾಯಾಸಮುಪೋಪಪಾದಿತಂ
ನಿರನ್ವಯಂ ಸುವ್ರತ ಮಾ ಸ್ಮ ವಿಶ್ವಸೀಃ ॥ ೧೦ ॥

ಅ :—ಸುವ್ರತ ! ಅಹಂ ಸ್ವಯಂ ಬ್ರಹ್ಮ. ಚಿತಿಃ ಯದಾ ಸ್ಫುಟಂ ವಿಜೃಂಭೇತ ಮತ್ಪರಂ ಕಿಂಚಿತ್ ನ ಅಸ್ತಿ ಇತಿ ಇಹ ಮಾಯಾಸಮುಪೋಪ-ಪಾದಿತಂ ನಿರನ್ವಯಂ ಮಾ ಸ್ಮ ವಿಶ್ವಸೀಃ.

ಅ :—ಸುವ್ರತ=ಒಳ್ಳೆ ನಿಯಮವುಳ್ಳ ಅಚ್ಯುತಪ್ರೇಕ್ಷನೆ! ಅಹಂ= ನಾನು, ಸ್ವಯಂ ಬ್ರಹ್ಮ=ಸಾಕ್ಷಾತ್ ಬ್ರಹ್ಮನು. (ಎಂದು) ಚಿತಿಃ=ಜ್ಞಾನವು,

Rarest Archiver

ಯದಾ = ಯಾವಾಗ, ಸ್ಫುಟಂ = ಸ್ಪಷ್ಟವಾಗಿ, ವಿಜೃಂಭೇತ = ಪಕ್ವವಾದೀತೋ ; (ಆಗ) ಮತ್ಪರಂ = ನನಗಿಂತ ಬೇರೆಯಾದ, ಕಿಂಚಿತ್ = ಯಾವ ವಸ್ತುವೂ, ನಾಸ್ತಿ = ಇಲ್ಲ. ಇತಿ = ಹೀಗೆಂದು, ಇಹ = ಈ ಬ್ರಹ್ಮತತ್ವ ವಿಷಯದಲ್ಲಿ, ಮಾಯಾಸಮಯ = ಮಾಯಾವಾದಿ ಶಾಸ್ತ್ರದಿಂದ, ಉಪಪಾಧಿತಂ = ಸಮರ್ಥಿಸಲ್ಪಟ್ಟ ವಿಷಯವು, ನಿರನ್ವಯಂ = ಯುಕ್ತಿಯಿಲ್ಲದ್ದು. (ಇಹ = ಈ ಪ್ರಮೇಯದಲ್ಲಿ) ಮಾ ಸ್ಮ ವಿಶ್ವಸೀಃ = ನಂಬಿಕೆ ಇಡಬೇಡ.

ತಾ :—ನಿಯಮಾಸಕ್ತನಾದ ಅಚ್ಯುತಪ್ರೇಕ್ಷನೆ ! ಮಾಯಾವಾದಿಗಳು ತಾನೇ ಬ್ರಹ್ಮ (ದೇವರು) ಎಂಬ ಜ್ಞಾನವು ಪಕ್ವವಾದಾಗ ಪ್ರಪಂಚದಲ್ಲಿ ನನಗಿಂತ ಬೇರೆ ಯಾವ ವಸ್ತುವೂ ಇಲ್ಲ ಎಂದು ಅರಿವಾಗುವುದು. ಇದೇ ಅದ್ವೈತಸಿದ್ಧಾಂತ ಎಂದು ಪ್ರತಿಪಾದಿಸುವರು. ಹೀಗೆ ಆ ಮಾಯಾವಾದಿಗಳು ಸಮರ್ಥಿಸುವ ವಿಷಯವು ಯುಕ್ತಿಯಿಲ್ಲದ್ದು. ಆದ್ದರಿಂದ ಅದನ್ನು ನಂಬಬೇಡ.

ವ್ಯಾ. ವಿ. :—ಮಾಯಾಕಲ್ಪಿತಃ ಸಮಯಃ, ಮಾಯಾಸಮಯೇ ಉಪಪಾದಿತಂ = ಮಾಮಾಸಮಯೋಪಪಾದಿತಮ್. ನಿರ್ಗತಾಃ ಅನ್ವಯಾಃ ಯಸ್ಮಾತ್ತತ್ = ನಿರನ್ವಯಂ, ತತ್. ಶೋಭನಂ ವ್ರತಂ ಯಸ್ಯ ಸಃ = ಸುವ್ರತಃ, ತಸ್ಯ ಸಂಬುದ್ಧಿಃ. ವಿಜೃಂಭೇತ–ಜೃಭೀ ಗಾತ್ರವಿನಾಮೇ, ಒಂದನೆ ಗಣ, ಅಕ. ವಿಧಿಲಿಙ್, ಆತ್ಮ. ಪ್ರ. ಏ. ವಿ. ಉಪಸರ್ಗ. ವಿ+ಜೃಂಭೇತ, ಜೃಂಭೇಯಾತಾಂ, ಜೃಂಭೇರನ್. ಜೃಂಭೇಥಾಃ, ಜೃಂಭೇಯಾಥಾಂ, ಜೃಂಭೇಧ್ವಮ್. ಜೃಂಭೇಯ, ಜೃಂಭೇವಹಿ, ಜೃಂಭೇಮಹಿ. ವಿಶ್ವಸೀಃ–ಶ್ವಸಪ್ರಾಣನೇ, ಎರಡನೆ ಗಣ, ಅಕ. ಲುಙ್, ಪರ. ಮ. ಏ. ವಿ. ಉಪಸರ್ಗ. ವಿ+ಅಶ್ವಸೀತ್, ಅಶ್ವಸಿಷ್ಟಾಂ, ಅಶ್ವಸಿಷುಃ. ಅಶ್ವಸೀಃ, ಅಶ್ವಸಿಷ್ಟಂ, ಅಶ್ವಸಿಷ್ಟ, ಅಶ್ವಸಿಷಂ, ಅಶ್ವಸಿಷ್ವ, ಅಶ್ವಸಿಷ್ಮ. 'ನ ಮಾಙ್ಯೋಗೇ' ಇದರಿಂದ ಲುಙಿನಲ್ಲಿ 'ಮಾ' ಬಂದಾಗ ಅಡಾಗಮವಿಲ್ಲ.

ಯದೇತದಾತ್ಮೈಕ್ಯಮುಪಾಸ್ತಿ ಚೋದಿತಂ
ನ ಮೇ ಗುರೋರಪ್ಯಪರೋಕ್ಷತಾಂ ಗತಮ್ ।
ಪುರಾತನಾನಾಮಪಿ ಸೌಮ್ಯ ಕುತ್ರಚಿ–
ತ್ತತೋ ಮುಕುಂದಂ ಭಜ ಸಂವಿದೇ ಮುದಾ ॥ ೧೧ ॥

Rarest Archive

ಅ :—ಉಪಾಸ್ತಿಚೋದಿತಂ ಯತ್ ಆತ್ಮೈಕ್ಯಂ ಏತತ್ ಮೇ ಗುರೋಃ ಅಪಿ ಪುರಾತನಾನಾಂ ಅಪಿ ಕುತ್ರಚಿತ್ ಅಪರೋಕ್ಷತಾಂ ನ ಗತಂ. ಸೌಮ್ಯ! ತತಃ ಮುಕುಂದಂ ಮುದಾ ಸಂವಿದೇ ಭಜ.

ಅ :—ಉಪಾಸ್ತಿ = ಉಪಾಸನೆಗಾಗಿ (ಧ್ಯಾನಕ್ಕಾಗಿ) ಚೋದಿತಂ= ಮಾಯಾವಾದಿಗಳಿಂದ ಹೇಳಲ್ಪಟ್ಟ, ಯತ್=ಯಾವ, ಆತ್ಮೈಕ್ಯಂ=ಜೀವ ಬ್ರಹ್ಮಾಭೇದವೊ, ಏತತ್=ಇದು, ಮೇ=ನನ್ನ, ಗುರೋಃ ಅಪಿ=ಗುರು ಗಳಿಗೂ, ಪುರಾತನಾನಾಂ ಅಪಿ=ಹಿಂದಿನವರಿಗೂ, ಕುತ್ರಚಿತ್=ಎಲ್ಲಿಯೂ, ಅಪರೋಕ್ಷತಾಂ = ಪ್ರತ್ಯಕ್ಷತ್ವವನ್ನು, ನ ಗತಂ = ಹೊಂದಲಿಲ್ಲ (ಪ್ರತ್ಯಕ್ಷ ವಾಗಲಿಲ್ಲ). ಸೌಮ್ಯ=ಎಲೈ ಮಂಗಳಕರನೆ! ತತಃ=ಆದ್ದರಿಂದ, ಮುಕುಂ-ದಂ = ಮೋಕ್ಷವನ್ನು ಕೊಡುವ ಶ್ರೀಮನ್ನಾರಾಯಣನನ್ನು, ಮುದಾ = ಸಂತೋಷದಿಂದ, ಸಂವಿದೇ=ತತ್ವಜ್ಞಾನಕ್ಕಾಗಿ, ಭಜ=ಸೇವಿಸು.

ತಾ :—ಅಚ್ಯುತಪ್ರೇಕ್ಷ! ಮಾಯಾವಾದಿಗಳು ಜೀವಬ್ರಹ್ಮಾಭೇದ ವನ್ನು ಉಪಾಸನೆಮಾಡಬೇಕೆಂದು ಹೇಳಿದ್ದಾರೆ. ಇದು ನನ್ನ ಗುರುಗಳಿಗೂ, ಅವರಿಗಿಂತ ಹಿಂದಿನವರಿಗೂ ಎಲ್ಲಿಯೂ ಅನುಭವದಿಂದ ಪ್ರತ್ಯಕ್ಷವಾಗಿಲ್ಲ. ಆದ್ದರಿಂದ ನೀನು ಇದನ್ನು ತ್ಯಜಿಸಿ, ಮುಕ್ತಿಯನ್ನೀಯುವ ಶ್ರೀಮನ್ನಾರಾಯಣ ನನ್ನು ತತ್ವಜ್ಞಾನಕ್ಕಾಗಿ ಸೇವಿಸು.

ವ್ಯಾ. ವಿ. :—ಏಕಸ್ಯ ಭಾವಃ=ಐಕ್ಯಂ, ಆತ್ಮನಃ ಐಕ್ಯಂ=ಆತ್ಮೈ-ಕ್ಯಮ್. ಉಪಾಸ್ತ್ಯೈ ಚೋದಿತಮ್ = ಉಪಾಸ್ತಿಚೋದಿತಮ್. ಅಪ-ರೋಕ್ಷಸ್ಯ ಭಾವಃ=ಅಪರೋಕ್ಷತಾ, ತಾಮ್, ಭಜ—ಭಜ ಸೇವಾಯಾಂ, ಒಂದನೆ ಗಣ, ಸಕ. ಲೋಟ್, ಪರ. ಮ. ಏ. ಭಜತು ಭಜತಾತ್, ಭಜತಾಂ, ಭಜಂತು. ಭಜ ಭಜತಾತ್, ಭಜತಂ, ಭಜತ. ಭಜಾನಿ, ಭಜಾವ, ಭಜಾಮ.

ಇತೀದಮಾದಿಶ್ಯ ವಚೋ ವಚಸ್ವಿನಿ
ಸ್ವಕೇ ಗುರೌ ಲೋಕಮಥಾನ್ಯಮೀಯುಷಿ ।
ಅಸೇವತಾಲೋಚ್ಯ ಮುಹುರ್ಗುರೋರ್ಗಿರಂ
ಸ ರೌಪ್ಯಪೀಠಾಲಯಮಿಂದಿರಾವರಮ್ ॥ ೧೨ ॥

Rarest Archives

ಅ :—ವಚಸ್ವಿನಿ ಸ್ವಕೇ ಗುರೌ ಇತಿ ಇದಂ ವಚಃ ಆದಿಶ್ಯ ಅನ್ಯಂ ಲೋಕಂ ಈಯುಷಿ ಅಥ ಸಃ ಗುರೋಃ ಗಿರಂ ಮುಹುಃ ಆಲೋಚ್ಯ ರೌಪ್ಯ ಪೀಠಾಲಯಂ ಇಂದಿರಾವರಂ ಅಸೇವತ.

ಅ :—ವಚಸ್ವಿನಿ=ವಚನಚತುರರಾದ, ಸ್ವಕೇ=ತನ್ನ, ಗುರೌ=ಗುರುಗಳು, ಇತಿ=ಹೀಗೆ, ಇದಂ=ಈ, ವಚಃ=ಮಾತನ್ನು, ಆದಿಶ್ಯ=ಅಪ್ಪಣೆಮಾಡಿ, ಅನ್ಯಂ=ಬೇರೆ, ಲೋಕಂ=ಲೋಕವನ್ನು, ಈಯುಷಿ=ಹೊಂದಲು, (ಮೃತರಾಗಲು), ಅಥ=ಬಳಿಕ, ಸಃ=ಆ ಅಚ್ಯುತಪ್ರೇಕ್ಷರು, ಗುರೋಃ=ಗುರುಗಳ, ಗಿರಂ = ಮಾತನ್ನು, ಮುಹುಃ = ಬಾರಿಬಾರಿಗೂ, ಆಲೋಚ್ಯ=ಆಲೋಚಿಸಿ, ರೌಪ್ಯಪೀಠಾಲಯಂ=ರಜತಪೀಠವೇ ವಾಸಸ್ಥಾನ ವಾಗುಳ್ಳ, ಇಂದಿರಾವರಂ = ಲಕ್ಷ್ಮೀಪತಿಯಾದ ಅನಂತಾಸನದೇವರನ್ನು, ಅಸೇವತ=ಸೇವಿಸಿದರು.

ತಾ :—ವಾಗ್ಮಿಗಳಾದ ಗುರುಗಳು ಹೀಗೆ ಹೇಳಿ ಕೀರ್ತಿಶೇಷರಾದರು. ಅನಂತರ ಅಚ್ಯುತಪ್ರೇಕ್ಷರು ಗುರುಗಳ ಆ ಮಾತನ್ನು ಮತ್ತು ಮತ್ತು ಪರಿಶೀಲಿಸಿ ಉಡುಪಿಯಲ್ಲಿರುವ ಅನಂತಾಸನದೇವರನ್ನು ಭಜಿಸಿದರು.

ವ್ಯಾ. ವಿ. :—ವಚಃ ಅಸ್ಯಾಸ್ತೀತಿ = ವಚಸ್ವೀ, ತಸ್ಮಿನ್. ರೌಪ್ಯ ಪೀಠಂ ಆಲಯಃ ಯಸ್ಯ ಸಃ=ರೌಪ್ಯಪೀಠಾಲಯಃ, ತಂ. ಇಂದಿರಾಯಾಃ ವರಃ=ಇಂದಿರಾವರಃ ತಮ್.

ಸುಭಕ್ತಿನಾ ತೇನ ಸ ಭಕ್ತವತ್ಸಲೋ
ನಿಷೇವಿತಸ್ತತ್ರ ಪರಂ ಬುಭುತ್ಸುನಾ ।
ಭವಿಷ್ಯತಃ ಶಿಷ್ಯವರಾದ್ಧಿ ವಿದ್ಧಿ ಮಾ-
ಮಿತಿ ಪ್ರವಿಷ್ಟಃ ಪುರುಷಂ ತಮಭ್ಯಧಾತ್ ॥ ೧೩ ॥

ಅ :—ಪರಂ ಬುಭುತ್ಸುನಾ ಸುಭಕ್ತಿನಾ ತೇನ ತತ್ರ ನಿಷೇವಿತಃ ಭಕ್ತ-ವತ್ಸಲಃ ಸಃ ಪುರುಷಂ ಪ್ರವಿಷ್ಟಃ ತಂ ಭವಿಷ್ಯತಃ ಶಿಷ್ಯವರಾತ್ ಹಿ ಮಾಂ ವಿದ್ಧಿ ಇತಿ ಅಭ್ಯಧಾತ್.

Rarest Archiver

ಅ :—ಪರಂ=ಸರ್ವೋತ್ತಮನಾದ ವಿಷ್ಣುವನ್ನು, ಬುಭುತ್ಸುನಾ=ತಿಳಿಯಲಪೇಕ್ಷೆಯುಳ್ಳ, ಸುಭಕ್ತಿನಾ = ಒಳ್ಳೆಯಭಕ್ತಿಯುಳ್ಳ, ತೇನ = ಆ ಅಚ್ಯುತಪ್ರೇಕ್ಷರಿಂದ, ತತ್ರ=ಆ ಉಡುಪಿಯಲ್ಲಿ, ನಿಷೇವಿತಃ=ಸೇವಿಸಲ್ಪಟ್ಟ, ಭಕ್ತವತ್ಸಲಃ=ಭಕ್ತರಲ್ಲಿ ಪ್ರೀತಿಯುಳ್ಳ, ಸಃ=ಆ ಅನಂತಾಸನನು, ಪುರುಷಂ =ಒಬ್ಬ ಮನುಷ್ಯನನ್ನು, ಪ್ರವಿಷ್ಟಃ=ಆವೇಶಗೊಂಡವನಾಗಿ, ತಂ=ಆ ಅಚ್ಯುತಪ್ರೇಕ್ಷರನ್ನು ಕುರಿತು, ಭವಿಷ್ಯತಃ=ಮುಂದೆ ಬರುವ, ಶಿಷ್ಯವರಾತ್ ಹಿ=ಶಿಷ್ಯ ಶ್ರೇಷ್ಠನಿಂದಲೇ, ಮಾಂ = ನನ್ನನ್ನು, ವಿದ್ಧಿ=ತಿಳಿ, ಇತಿ= ಹೀಗೆಂದು, ಅಭ್ಯಧಾತ್=ಹೇಳಿದನು.

ತಾ :—ಹೀಗೆ ಆ ಅಚ್ಯುತಪ್ರೇಕ್ಷರು ಗುರುಗಳ ಅಪ್ಪಣೆಯಂತೆ ಪರಮಾತ್ಮನನ್ನು ಅರಿಯಲು ಆ ಉಡುಪಿಯಲ್ಲಿರುವ ಅನಂತಾಸನನನ್ನು ಸೇವಿಸುತ್ತಿರಲು ಆ ಅನಂತಾಸನನು ಒಬ್ಬ ಮನುಷ್ಯನಲ್ಲಿ ಆವೇಶಗೊಂಡು ಇಲ್ಲಿ ನಿನಗೆ ಒಬ್ಬನು ಶಿಷ್ಯನಾಗುವನು. ಅವನಿಂದಲೇ ನೀನು ನನ್ನನ್ನು ತಿಳಿ ಎಂದನು.

ವ್ಯಾ. ವಿ. :—ಶೋಭನಾ ಭಕ್ತಿಃ ಯಸ್ಯ ಸಃ=ಸುಭಕ್ತಿಃ, ತೇನ. ಭಕ್ತೇಷು ವತ್ಸಲಃ=ಭಕ್ತವತ್ಸಲಃ. ಬೋದ್ಧುಮಿಚ್ಛುಃ = ಬುಭುತ್ಸುಃ, ತೇನ. ಶಿಷ್ಯೇಷು ವರಃ=ಶಿಷ್ಯವರಃ, ತಸ್ಮಾತ್. ವಿದ್ಧಿ–ವಿದ ಜ್ಞಾನೇ, ಎರಡನೇ ಗಣ, ಸಕ. ಲೋಟ್, ಮ. ಏ. ವೇತ್ತು ವಿತ್ತಾತ್, ವಿತ್ತಾಂ, ವಿದಂತು. ವಿದ್ಧಿ ವಿತ್ತಾತ್, ವಿತ್ತಂ, ವಿತ್ತ. ವೇದಾನಿ, ವೇದಾವ, ವೇದಾಮ.

ಪ್ರತೀಕ್ಷಮಾಣಂ ತಮನುಗ್ರಹಂ ಮುದಾ
ನಿಷೇವಮಾಣಂ ಪುನರಂಬುಜೇಕ್ಷಣಮ್ ।
ಸತಾಂ ಗುರುಃ ಕಾರಣಮಾನುಷಾಕೃತಿ-
ರ್ಯತಿಂ ಪ್ರಶಾಂತಂ ತಮುಪಾಸಸಾದ ಸಃ ॥ ೧೪ ॥

ಅ :—ಸತಾಂ ಗುರುಃ ಕಾರಣಮಾನುಷಾಕೃತಿಃ ಸಃ, ತಂ ಅನುಗ್ರಹಂ ಪ್ರತೀಕ್ಷಮಾಣಂ ಪುನಃ ಮುದಾ ಅಂಬುಜೇಕ್ಷಣಂ ನಿಷೇವಮಾಣಂ ಪ್ರಶಾಂತಂ ತಂ ಯತಿಂ ಉಪಾಸಸಾದ.

ಅ :—ಸತಾಂ = ಸಜ್ಜನರಿಗೆ, ಗುರುಃ=ಉಪದೇಶಕನಾದ, ಕಾರಣ

Rarest Archiver

—ಮತತತ್ತ್ವವನ್ನು ಪ್ರಚಾರಮಾಡುವ ಕಾರಣದಿಂದ, ಮಾನುಷಾಕೃತಿಃ— ಮನುಷ್ಯಾಕೃತಿಯುಳ್ಳ, ಸಃ—ಆ ವಾಸುದೇವನು, ತಂ — ಆ ವಿಷ್ಣುವು ಮಾಡಿದ, ಅನುಗ್ರಹಂ — ಅನುಗ್ರಹವನ್ನು, ಪ್ರತೀಕ್ಷಮಾಣಂ — ನಿರೀಕ್ಷಿಸುತ್ತಿರುವ, ಪುನಃ—ಮತ್ತೆಯೂ, ಮುದಾ—ಸಂತೋಷದಿಂದ, ಅಂಬುಜೇಕ್ಷಣಂ—ತಾವರೆಹೂವಿನಂತೆ ಕಣ್ಣುಳ್ಳ ಶ್ರೀಅನಂತಾಸನನನ್ನು, ನಿಷೇವಮಾಣಂ—ಸೇವಿಸುತ್ತಿರುವ, ಪ್ರಶಾಂತಂ—ಶಾಂತನಾದ, ತಂ—ಆ, ಯತಿಂ —ಅಚ್ಯುತಪ್ರೇಕ್ಷರನ್ನು, ಉಪಾಸಸಾದ—ಸಮೀಪಿಸಿದನು.

ತಾ :—ಆ ಅಚ್ಯುತಪ್ರೇಕ್ಷರು ಭಗವಂತನ ಆ ಅನುಗ್ರಹವನ್ನು ನಿರೀಕ್ಷಿಸುತ್ತ ಸಂತೋಷದಿಂದ ಮತ್ತೆ ಅನಂತಾಸನನನ್ನು ಸೇವಿಸುತ್ತಿದ್ದರು. ಆಗ ದ್ವೈತಮತತತ್ತ್ವವನ್ನು ಪ್ರಚಾರಮಾಡಲು ವಾಸುದೇವನ ರೂಪದಿಂದ ಅವತರಿಸಿದ ಸಜ್ಜನರ ಗುರುಗಳಾದ ವಾಯುದೇವರು ಶಾಂತರಾದ ಆ ಯತಿವರ್ಯರಿಗೆ ಶಿಷ್ಯರಾಗಲು ಹತ್ತಿರಹೋದರು.

ವ್ಯಾ.ವಿ. :—ಅಂಬುಜೇ ಇವ ಈಕ್ಷಣೇ ಯಸ್ಯ ಸಃ—ಅಂಬುಜೇಕ್ಷಣಃ, ತಮ್ ಮಾನುಷಸ್ಯ ಆಕೃತಿಃ—ಮಾನುಷಾಕೃತಿಃ. ಕಾರಣೇನ ಮಾನುಷಾಕೃತಿಃ ಯಸ್ಯ ಸಃ—ಕಾರಣಮಾನುಷಾಕೃತಿಃ. ಉಪಾಸಸಾದ-ಷದ್ಲೃ ವಿಶರಣಗತ್ಯವಸಾದನೇಷು, ಒಂದನೆ ಗಣ, ಸಕ. ಲಿಟ್. ಪರ. ಪ್ರ. ಏ. ಉಪ. ಆ ಉಪಸರ್ಗಗಳು. ಉಪ+ಆ+ಸಸಾದ, ಸೇದತುಃ, ಸೇದುಃ. ಸೇದಿಥ ಸಸತ್ಥ, ಸೇದಥುಃ, ಸೇದ, ಸಸಾದ ಸಸದ, ಸೇದಿವ, ಸೇದಿಮ.

ಸುತಂ ಯತೀಂದ್ರಾನುಚರಂ ವಿರಾಗಿಣಂ
ನಿಶಮ್ಯ ಸಂನ್ಯಾಸನಿಬದ್ಧ ಮಾನಸಮ್ ।
ಸುವತ್ಸಲೌ ರೂಪ್ಯತಲಾಲಯಸ್ಥಿತಂ
ವಿಯೋಗಶಾಂತೌ ಪಿತರೌ ಸಮೀಯತುಃ ॥ ೧೫ ॥

ಅ :—ಸುವತ್ಸಲೌ ವಿಯೋಗತಾಂತೌ ಪಿತರೌ ಯತೀಂದ್ರಾನುಚರಂ ವಿರಾಗಿಣಂ ಸಂನ್ಯಾಸನಿಬದ್ಧಮಾನಸಂ ರೂಪ್ಯತಲಾಲಯಸ್ಥಿತಂ ಸುತಂ ನಿಶಮ್ಯ ಸಮೀಯತುಃ.

Rarest Archiver

ಅ :—ಸುವತ್ಸಲೌ=ಅತ್ಯಂತ ಪ್ರೀತಿಯುಳ್ಳ, ವಿಯೋಗತಾಂತೌ= ಅಗಲಿಕೆಯಿಂದ ವ್ಯಥೆಗೊಂಡ, ಪಿತರೌ = ವಾಸುದೇವನ ತಂದೆತಾಯಿಗಳು, ಯತೀಂದ್ರಾನುಚರಂ=ಯತಿವರ್ಯರ ಶಿಷ್ಯನಾದ, ವಿರಾಗಿಣಂ=ವೈರಾಗ್ಯವುಳ್ಳ, ಸಂನ್ಯಾಸ = ಸಂನ್ಯಾಸದಲ್ಲಿ, ನಿಬದ್ಧಮಾನಸಂ = ಇಡಲ್ಪಟ್ಟ ಮನಸ್ಸುಳ್ಳ, ರೂಪ್ಯತಲಾಲಯಸ್ಥಿತಂ=ಉಡುಪಿಯಲ್ಲಿರುವ, ಸುತಂ=ಮಗನನ್ನು, ನಿಶಮ್ಯ =ಕೇಳಿ, ಸಮೀಯತುಃ=ಸಮೀಪಕ್ಕೆ ಬಂದರು.

ತಾ :—ಆಗ ಮಗನಲ್ಲಿ ಅತಿಶಯ ಮಮತೆಯುಳ್ಳ ವಾಸುದೇವನ ತಂದೆ ತಾಯಿಗಳು ಅವನ ಅಗಲಿಕೆಯಿಂದ ವ್ಯಥೆಗೊಂಡವರಾಗಿ ತಮ್ಮ ಮಗನು ಅಚ್ಯುತಪ್ರೇಕ್ಷರ ಶಿಷ್ಯನಾಗಿ ವೈರಾಗ್ಯಶಾಲಿಯಾಗಿದ್ದಾನೆ. ಸಂನ್ಯಾಸವನ್ನು ಸ್ವೀಕರಿಸುವುದರಲ್ಲಿ ನಿಶ್ಚಿತ ಮನಸ್ಸುಳ್ಳವನಾಗಿ ಉಡುಪಿಯಲ್ಲಿದ್ದಾನೆ. ಎಂಬು ದನ್ನು ಕೇಳಿ ಅವನಿದ್ದಲ್ಲಿಗೆ ಬಂದರು.

ವ್ಯಾ.ವಿ. :—ಯತೀನಾಂ ಇಂದ್ರಃ, ಯತೀಂದ್ರಸ್ಯ ಅನುಚರಃ= ಯತೀಂದ್ರಾನುಚರಃ, ತಮ್. ವಿರಾಗಃ ಅಸ್ಯಾಸ್ತೀತಿ=ವಿರಾಗೀ, ತಮ್. ಸಂನ್ಯಾಸೇ ನಿಬದ್ಧಂ, ಸಂನ್ಯಾಸನಿಬದ್ಧಂ ಮಾನಸಂ ಯಸ್ಯ ಸಃ=ಸಂನ್ಯಾಸ-ನಿಬದ್ಧಮಾನಸಃ, ತಮ್. ರೂಪ್ಯತಲೇ ಆಲಯಃ, ರೂಪ್ಯತಲಾಲಯೇ ಸ್ಥಿತಃ =ರೂಪ್ಯತಲಾಲಯಸ್ಥಿತಃ, ತಮ್. ವಿಯೋಗೇನ ತಾಂತೌ=ವಿಯೋಗ-ತಾಂತೌ. ಮಾತಾ ಚ ಪಿತಾ ಚ=ಪಿತರೌ "ಪಿತಾ ಮಾತ್ರಾ" ಇದರಿಂದ ಏಕಶೇಷ ಬಂದು ಪಿತೃ ಶಬ್ದ ಮಾತ್ರ ಉಳಿದಿದೆ. ಸಮೀಯತುಃ–ಇಣ್ ಗತೌ, ಎರಡನೆ ಗಣ, ಸಕ. ಲಿಟ್, ಪರ. ಪ್ರ. ದ್ವಿ. ಸಮ್ ಉಪಸರ್ಗ. ಸಮ್+ ಇಯಾಯ, ಈಯತುಃ, ಈಯುಃ. ಇಯಯಿಥ ಇಯೇಥ, ಈಯಥುಃ, ಈಯ. ಇಯಾಯ ಇಯಯ, ಈಯಿವ, ಈಯಿಮ.

ವರಾಶ್ರಮಸ್ಥೇ ಜರತೋರನಾಥಯೋ-<br>
ರ್ನಜೀವತೋಃ ಸ್ಯಾದಯಿ ನಂದನಾವಯೋಃ ।<br>
ಸಯಾಚನಂ ವಾಕ್ಯಮುದೀರ್ಯ ತಾವಿದಂ<br>
ಪರೀತ್ಯ ಪುತ್ರಾಯ ನತಿಂ ವಿತೇನತುಃ ॥ ೧೬ ॥

ಅ :—ತೌ 'ಅಯಿ ನಂದನ ! ಜರತೋಃ ಅನಾಥಯೋಃ ಅವಯೋಃ ಜೀವತೋಃ (ಸತೋಃ) ತೇ ವರಾಶ್ರಮಃ ನ ಸ್ಯಾತ್.' ಸಯಾಚನಂ ಇತಿ ಇದಂ ವಾಕ್ಯಂ ಉದೀರ್ಯ ಪರೀತ್ಯ ಪುತ್ರಾಯ ನತಿಂ ವಿತೇನತುಃ.

ಅ :—ತೌ = ಆ ತಂದೆ ತಾಯಿಗಳು, ಅಯಿ ನಂದನ = ಎಲೈ ಮಗುವೆ ! ಜರತೋಃ = ಮುದುಕರಾದ, ಅನಾಥಯೋಃ = ಕಾಪಾಡುವವರಿಲ್ಲದ, ಅವಯೋಃ = ನಾವಿಬ್ಬರು, ಜೀವತೋಃ (ಸತೋಃ) ಬದುಕಿರಲು, ತೇ = ನಿನಗೆ, ವರಾಶ್ರಮಃ = ಸಂನ್ಯಾಸಾಶ್ರಮವು, ನ ಸ್ಯಾತ್ = ಆಗದಿರಲಿ, (ಎಂದು) ಸಯಾಚನಂ = ಬೇಡಿಕೆಯಿಂದ ಸಹಿತವಾಗಿ, ಇದಂ = ಈ, ವಾಕ್ಯಂ = ಮಾತನ್ನು, ಉದೀರ್ಯ = ಹೇಳಿ, ಪರೀತ್ಯ = ಪ್ರದಕ್ಷಿಣೆಮಾಡಿ, ಪುತ್ರಾಯ = ಮಗನಿಗೆ, ನತಿಂ = ನಮಸ್ಕಾರವನ್ನು, ವಿತೇನತುಃ = ಮಾಡಿದರು.

ತಾ :—ಆ ತಂದೆ ತಾಯಿಗಳು 'ಮಗು ! ನಾವು ಮುದುಕರು. ನಮ್ಮನ್ನು ಕಾಪಾಡುವವರು ನಿನಗಿಂತ ಬೇರೆ ಯಾರೂ ಇಲ್ಲ. ಇಂತಹ ನಾವು ಬದುಕಿರುವಾಗ ನೀನು ಸಂನ್ಯಾಸವನ್ನು ಸ್ವೀಕರಿಸುವುದು ಉಚಿತವಲ್ಲ.' ಎಂದು ಬೇಡಿಕೊಂಡರು. ಹೀಗೆ ಹೇಳಿ ಅವರು ಮಗನ ಮನಸ್ಸನ್ನು ಬದಲಾಯಿಸಲು ಅವನಿಗೆ ಪ್ರದಕ್ಷಿಣೆಮಾಡಿ ವಂದಿಸಿದರು.

ವ್ಯಾ. ವಿ. :—ನ ವಿದ್ಯತೇ ನಾಥಃ ಯಯೋಸ್ತೌ = ಅನಾಥೌ. ಯಾಚನಯಾಸಹಿತಂ = ಸಯಾಚನಮ್. ವಿತೇನತುಃ-ತನು ವಿಸ್ತಾರೇ, ಎಂಟನೆ ಗಣ, ಸಕ. ಲಿಟ್, ಪರ. ಪ್ರ. ದ್ವಿವಚನ. ವಿ ಉಪಸರ್ಗ. ವಿ+ತತಾನ, ತೇನತುಃ, ತೇನುಃ. ತೇನಿಥ, ತೇನಥುಃ, ತೇನ. ತತಾನ ತತನ, ತೇನಿವ, ತೇನಿಮ.

ನತಿರ್ನ ಶುಶ್ರೂಷುಜನಾಯ ಶಸ್ಯತೇ
ನತಂ ಭವದ್ಭ್ಯಾಂ ಸ್ಫುಟಮತ್ರ ಸಾಂಪ್ರತಮ್ ।
ಅಹೋ ವಿಧಾತ್ರಾ ಸ್ವಯಮೇವ ದಾಪಿತಾ
ತದಭ್ಯನುಜ್ಞೇತಿ ಜಗಾದ ಸ ಪ್ರಭುಃ ॥ ೧೭ ॥

ಅ :—ಶುಶ್ರೂಷುಜನಾಯ ನತಿಃ ನ ಶಸ್ಯತೇ. ಅತ್ರ ಸಾಂಪ್ರತಂ ಸ್ಫುಟಂ ಭವದ್ಭ್ಯಾಂ ನತಂ. ವಿಧಾತ್ರಾ ಸ್ವಯಂ ಏವ ತದಭ್ಯನುಜ್ಞಾ ದಾಪಿತಾ. ಅಹೋ ಇತಿ ಪ್ರಭುಃ ಸಃ ಜಗಾದ.

Rarest Archiver

ಅ :—ಶುಶ್ರೂಷುಜನಾಯ=ಸೇವಕರಿಗೆ. ನತಿಃ=ನಮಸ್ಕಾರವು, ನ ಶಸ್ಯತೇ=ಶ್ರೇಷ್ಠವಾಗುವುದಿಲ್ಲ. ಅತ್ರ=ಈ ಸೇವಕನಾದ ನನ್ನಲ್ಲಿ, ಸಾಂಪ್ರತಂ =ಈಗ, ಸ್ಫುಟಂ=ಸ್ಪಷ್ಟವಾಗಿ, ಭವದ್ಭ್ಯಾಂ=ನಿಮ್ಮಿಬ್ಬರಿಂದ, ನತಂ=ನಮಸ್ಕಾರ ಮಾಡಲ್ಪಟ್ಟಿತು. ವಿಧಾತ್ರಾ=ಸರ್ವರನ್ನು ಪ್ರೇರಿಸುವ ವಿಷ್ಣುವಿನಿಂದ, ಸ್ವಯಂ ಏವ=ತಾನಾಗಿಯೇ, ತದಭ್ಯನುಜ್ಞಾ=ಆ ಸಂನ್ಯಾಸಾಶ್ರಮಕ್ಕೆ ಅನುಮತಿಯು, ದಾಪಿತಾ=ಕೊಡಿಸಲ್ಪಟ್ಟಿತು. ಅಹೋ=ಆಶ್ಚರ್ಯ, ಇತಿ=ಹೀಗೆಂದು, ಪ್ರಭುಃ=ಸಮರ್ಥನಾದ, ಸಃ=ಆ ವಾಸುದೇವನು ಜಗಾದ=ಹೇಳಿದನು.

ತಾ :—'ಉತ್ತಮರು ಸೇವಕರಿಗೆ ನಮಸ್ಕಾರ ಮಾಡುವುದು ಉಚಿತವಲ್ಲ. ಈಗ ನೀವಿಬ್ಬರು ಎಲ್ಲರ ಮುಂದೆ ನನಗೆ ನಮಸ್ಕಾರ ಮಾಡಿದ್ದೀರಿ. ಇದರಿಂದ ನಾನು ನಿಮಗಿಂತ ಶ್ರೇಷ್ಠನಾದಂತಾಯಿತು. ಹಾಗೆ ಆಗಬೇಕಾದರೆ ನಾನು ಸನ್ಯಾಸಿಯಾಗಬೇಕಾಯಿತು. ಭಗವಂತನು ನನಗೆ ತಾನಾಗಿಯೇ ನಿಮ್ಮಿಂದ ಸನ್ಯಾಸಕ್ಕೆ ಅಪ್ಪಣೆಯನ್ನು ಕೊಡಿಸಿದ್ದಾನೆ. ಆಶ್ಚರ್ಯ!' ಎಂದು ಸಮರ್ಥನಾದ ವಾಸುದೇವನು ಹೇಳಿದನು.

ವ್ಯಾ.ವಿ. :—ಶುಶ್ರೂಷುಶ್ಚಾಸೌ ಜನಶ್ಚ=ಶುಶ್ರೂಷುಜನಃ, ತಸ್ಮೈ. ತಸ್ಯ ಅಭ್ಯನುಜ್ಞಾ=ತದಭ್ಯನುಜ್ಞಾ. ಜಗಾದ–ಗದ ವ್ಯಕ್ತಾಯಾಂ ವಾಚಿ, ಒಂದನೆ ಗಣ, ಸಕ. ಲಿಟ್, ಪರ. ಪ್ರ. ಏ. ಜಗಾದ, ಜಗದತುಃ, ಜಗದುಃ. ಜಗದಿಥ, ಜಗದಥುಃ, ಜಗದ. ಜಗಾದ ಜಗದ, ಜಗದಿವ, ಜಗದಿಮ. ಶಸ್ಯತೇ–ಶಂಸು ಸ್ತುತೌ, ಒಂದನೆ ಗಣ, ಸಕ. ಕರ್ಮಣಿ, ಲಟ್, ಆತ್ಮ. ಪ್ರ. ಏ. ಶಸ್ಯತೇ, ಶಸ್ಯೇತೇ, ಶಸ್ಯಂತೇ. ಶಸ್ಯಸೇ, ಶಸ್ಯೇಥೇ, ಶಸ್ಯಧ್ವೇ. ಶಸ್ಯೇ, ಶಸ್ಯಾವಹೇ, ಶಸ್ಯಾಮಹೇ.

ಅನುತ್ತರಜ್ಞಃ ಸ ತಮರ್ಥಯನ್ ಪುನ-
ರ್ಯತೀಂದ್ರಮಾನಮ್ಯ ಗತಃ ಪ್ರಿಯಾಯುತಃ ।
ಗೃಹೇ ವಸನ್ ಕಲ್ಪಸಮಾನ್ ಕ್ಷಣಾನ್ನಯನ್
ಸುತಾನನೇಂದೋರನಿಶಂ ತತೋಽಸ್ಮರತ್ ॥ ೧೮ ॥

ಅ :—ತತಃ ಅನುತ್ತರಜ್ಞಃ ಪ್ರಿಯಾಯುತಃ ಸಃ ಪುನಃ ತಂ ಅರ್ಥಯನ್

Rarest Archiver

ಯತೀಂದ್ರಂ ಆನಮ್ಯ ಗತಃ ಗೃಹೇ ವಸನ್ ಕ್ಷಣಾನ್ ಕಲ್ಪಸಮಾನ್ ನಯನ್ ಅನಿಶಂ ಸುತಾನನೇಂದೋಃ ಅಸ್ಮರತ್.

ಅ :—ತತಃ = ತರುವಾಯ, ಅನುತ್ತರಜ್ಞಃ = ಉತ್ತರ ಕೊಡಲರಿಯದ, ಪ್ರಿಯಾಯುತಃ = ಪತ್ನಿಯಿಂದ ಸಹಿತರಾದ, ಸಃ = ಆ ಮಧ್ಯಗೇಹ ಭಟ್ಟರು, ಪುನಃ = ತಿರುಗಿ, ತಂ = ಆ ಮಗನನ್ನು, ಅರ್ಥಯನ್ = ಪ್ರಾರ್ಥಿಸುತ್ತ, ಯತೀಂದ್ರಂ = ಯತಿಶ್ರೇಷ್ಠರಾದ ಅಚ್ಯುತಪ್ರೇಕ್ಷರನ್ನು, ಆನಮ್ಯ = ವಂದಿಸಿ, ಗತಃ (ಸನ್) = ಮನೆಗೆ ಹೋದವರಾಗಿ, ಗೃಹೇ = ಮನೆಯಲ್ಲಿ, ವಸನ್ = ವಾಸಮಾಡುತ್ತ, ಕ್ಷಣಾನ್ = ಕ್ಷಣ ಕಾಲಗಳನ್ನು, ಕಲ್ಪಸಮಾನ್ = ಕಲ್ಪಕಾಲಕ್ಕೆ ಸಮಗಳನ್ನಾಗಿ, ನಯನ್ = ಕಳೆಯುತ್ತ, ಅನಿಶಂ = ಯಾವಾಗಲೂ, ಸುತಾನನೇಂದೋಃ = ಮಗನ ಚಂದ್ರನಂತಿರುವ ಮುಖವನ್ನು, ಅಸ್ಮರತ್ = ಸ್ಮರಿಸಿದರು.

ತಾ :—ಆಗ ಮಧ್ಯಗೇಹಭಟ್ಟರು ಮಗನ ಮಾತಿಗೆ ಉತ್ತರವನ್ನು ಕೊಡಲು ಸಮರ್ಥರಾಗಲಿಲ್ಲ. ಆದ್ದರಿಂದ ಅವರು 'ಮಗು ! ನೀನು ಸನ್ಯಾಸವನ್ನು ಸ್ವೀಕರಿಸಬೇಡ' ಎಂದು ಮಗನನ್ನು ಪ್ರಾರ್ಥಿಸುತ್ತ ಅಚ್ಯುತಪ್ರೇಕ್ಷರಿಗೆ ವಂದಿಸಿ ಹೆಂಡತಿಯೊಡನೆ ತಮ್ಮ ಮನೆಗೆ ತೆರಳಿದರು. ಅಲ್ಲಿ ಅವರು ಒಂದೊಂದು ಕ್ಷಣವನ್ನೂ ಕಲ್ಪ ಕಾಲಕ್ಕೆ ಸರಿಯಾದ್ದನ್ನಾಗಿ ಭಾವಿಸುತ್ತ ಯಾವಾಗಲೂ ಮಗನ ಮುಖವನ್ನು ಜ್ಞಾಪಿಸಿಕೊಳ್ಳುತ್ತಿದ್ದರು.

ವ್ಯಾ.ವಿ. :—ಉತ್ತರಂ ಜಾನಾತೀತಿ, ಉತ್ತರಜ್ಞಃ ನ ಭವತೀತಿ = ಅನುತ್ತರಜ್ಞಃ. ಯತೀನಾಂ ಇಂದ್ರಃ = ಯತೀಂದ್ರಃ, ತಮ್. ಪ್ರಿಯಯಾ ಯುತಃ = ಪ್ರಿಯಾಯುತಃ. ಕಲ್ಪೇನ ಸಮಾಃ = ಕಲ್ಪಸಮಾಃ, ತಾನ್. ಸುತಸ್ಯ ಆನನಂ, ಸುತಾನನಂ ಇಂದುರಿವ = ಸುತಾನನೇಂದುಃ, ತಸ್ಯ. ಸುತಾನನೇಂದೋಃ ಅಸ್ಮರತ್–'ಅಧೀಗರ್ಥದಯೇಶಾಂ ಕರ್ಮಣಿ' ಇದರಿಂದ ಸ್ಮರಣಾರ್ಥಕ ಧಾತುಯೋಗವಿರುವಾಗ ಷಷ್ಠೀ ವಿಭಕ್ತಿ ಬಂದಿದೆ.

ಸ ಚಿಂತಯನ್ ಪುತ್ರಮನೋರಥಂ ಶುಚಾ<br>
ಪುನಶ್ಚ ಶೀತೋರ್ವ್ಯುಪಗತೋ ಮಹಾನದೀಮ್ ।<br>
ವ್ರತೀಶ್ವರಾನುವ್ರತಮಾತ್ಮನಂದನಂ<br>
ತಮೈಕ್ಷತ ಗ್ರಾಮವರೇ ಮಠಾಂತರೇ ॥ ೧೯ ॥

Rarest Archiver

ಅ :—ಶುಚಾ ಪುತ್ರಮನೋರಥಂ ಚಿಂತಯನ್ ಸಃ ಪುನಃ ಚ ಮಹಾನದೀಂ ತೀರ್ತ್ವಾ ಉಪಗತಃ ಗ್ರಾಮವರೇ ಮಠಾಂತರೇ ವ್ರತೀಶ್ವರಾನುವ್ರತಂ ತಂ ಆತ್ಮನಂದನಂ ಐಕ್ಷತ.

ಅ :—ಶುಚಾ=ದುಃಖದಿಂದ, ಪುತ್ರ=ಮಗನ, ಮನೋರಥಂ=ಸನ್ಯಾಸವನ್ನು ಸ್ವೀಕರಿಸುವ ಅಪೇಕ್ಷೆಯನ್ನು, ಚಿಂತಯನ್=ಆಲೋಚಿಸುತ್ತಿರುವ, ಸಃ=ಮಧ್ಯಗೇಹಭಟ್ಟರು, ಪುನಶ್ಚ=ಮರಳಿ, ಮಹಾನದೀಂ=ನೇತ್ರಾವತೀ ನದಿಯನ್ನು, ತೀರ್ತ್ವಾ=ದಾಟಿ, ಉಪಗತಃ=ಬಂದವರಾಗಿ, ಗ್ರಾಮವರೇ=ಕಾರೇ ಊರು ಗ್ರಾಮದಲ್ಲಿ, ಮಠಾಂತರೇ=ಕುತ್ಯಾಡಿಯೆಂಬ ಮಠದಲ್ಲಿ, ವ್ರತೀಶ್ವರಾನುವ್ರತಂ=ಅಚ್ಯುತಪ್ರೇಕ್ಷರಿಗೆ ಅನುಕೂಲವಾದ ನಿಯಮವುಳ್ಳ, ತಂ=ಆ, ಆತ್ಮನಂದನಂ=ತಮ್ಮ ಮಗನನ್ನು, ಐಕ್ಷತ=ನೋಡಿದರು.

ತಾ :—ಮನೆಯಲ್ಲಿ ಆ ಮಧ್ಯಗೇಹಭಟ್ಟರು ಮಗನು ಸನ್ಯಾಸವನ್ನು ಸ್ವೀಕರಿಸಲು ಇಚ್ಛಿಸುವುದನ್ನು ಆಲೋಚಿಸುತ್ತ ದಃಖಪಡುತ್ತಿದ್ದರು. ಅವರು ಮರಳಿ ನೇತ್ರಾವತಿ ನದಿಯನ್ನು ದಾಟಿ ಕಾರೆ ಊರುಗ್ರಾಮದಲ್ಲಿರುವ ಕುತ್ಯಾಡಿಯೆಂಬ ಮಠದಲ್ಲಿ ಅಚ್ಯುತಪ್ರೇಕ್ಷರಂತೆಯೇ ನಿಯಮವನ್ನು ಆಚರಿಸುತ್ತಿರುವ ಅವರ ಬಳಿಯಲ್ಲಿರುವ ಮಗನನ್ನು ಕಂಡರು.

ವಾ.ವಿ. :—ಪುತ್ರಸ್ಯ ಮನೋರಥಃ=ಪುತ್ರಮನೋರಥಃ, ತಮ್. ಮಹತೀ ಚ ಸಾ ನದೀ ಚ=ಮಹಾನದೀ, ತಾಮ್. ವ್ರತಿನಾಂ ಈಶ್ವರಃ, ವ್ರತೀಶ್ವರಸ್ಯ ಅನುವ್ರತಃ=ವ್ರತೀಶ್ವರಾನುವ್ರತಃ, ತಮ್. ಆತ್ಮನಃ ನಂದನಃ =ಆತ್ಮನಂದನಃ, ತಮ್. ಅನ್ಯಃ ಮಠಃ=ಮಠಾಂತರಂ, ತಸ್ಮಿನ್. ಐಕ್ಷತ–ಈಕ್ಷಧಾತು, ಲಙ್, ಆತ್ಮ, ಪ್ರ. ಏ. ಐಕ್ಷತ, ಐಕ್ಷೇತಾಂ, ಐಕ್ಷಂತ. ಐಕ್ಷಥಾಃ, ಐಕ್ಷೇಥಾಂ, ಐಕ್ಷಧ್ವಮ್. ಐಕ್ಷೇ, ಐಕ್ಷಾವಹಿ, ಐಕ್ಷಾಮಹಿ.

ಸ ಜಾತಕೋಪಾಕುಲಿತೋ ಧರಾಸುರೋ  
ಮಹಾತ್ಮನಾಂ ಲಂಘನಭೀರುರಪ್ಯಲಮ್ ।  
ಸುತಸ್ಯ ಕೌಪೀನಧೃತೌ ಹಿ ಸಾಹಸ-  
ಪ್ರತಿಶ್ರವೋ ಮೇ ದೃಢ ಇತ್ಯಭಾಷತ ॥ ೨೦ ॥

Rarest Archiver

ಅ :—ಸಃ ಧರಾಸುರಃ ಅಲಂ ಮಹಾತ್ಮನಾಂ ಲಂಘನಭೀರುಃ ಅಪಿ ಜಾತಕೋಪಾಕುಲಿತಃ ಸುತಸ್ಯ ಕೌಪೀನಧೃತೌ ಹಿ, ಮೇ ಸಾಹಸಪ್ರತಿಶ್ರವಃ ದೃಢಃ ಇತಿ ಅಭಾಷತ.

ಅ :—ಸಃ ಧರಾಸುರಃ=ಬ್ರಾಹ್ಮಣರಾದ ಆ ಮಧ್ಯಗೇಹಭಟ್ಟರು, ಅಲಂ =ಬಹಳವಾಗಿ, ಮಹಾತ್ಮನಾಂ = ಶ್ರೀವಿಷ್ಣುಭಕ್ತರನ್ನು, ಲಂಘನಭೀರುಃ ಅಪಿ=ಮೀರುವುದರಿಂದ ಭಯಶೀಲರಾದಾಗ್ಯೂ, ಜಾತ=ಉಂಟಾದ, ಕೋಪ =ಸಿಟ್ಟಿನಿಂದ, ಆಕುಲಿತಃ = ವ್ಯಥೆಗೊಂಡವರಾಗಿ, ಸುತಸ್ಯ = ಮಗನ, ಕೌಪೀನಧೃತೌ ಹಿ=ಸನ್ಯಾಸವನ್ನು ಸ್ವೀಕರಿಸಿ ಕೌಪೀನಧಾರಣೆ ಮಾಡುವ ವಿಷಯದಲ್ಲಿ, ಮೇ=ನನ್ನ, ಸಾಹಸಪ್ರತಿಶ್ರವಃ=ಸಾಹಸಕಾರ್ಯವಿಷಯಕ ವಾದ ಪ್ರತಿಜ್ಞೆಯು, ದೃಢಃ=ಸ್ಥಿರವಾದದ್ದು, ಇತಿ=ಹೀಗೆಂದು, ಅಭಾಷತ =ಹೇಳಿದರು.

ತಾ :—ಮಧ್ಯಗೇಹಭಟ್ಟರು ದೊಡ್ಡವರನ್ನು ಮೀರುವುದರಿಂದ ಭಯ ಪಡುವ ಸ್ವಭಾವದವರು. ಆದರೂ ಅವರು ಕೋಪಗೊಂಡು 'ನನ್ನ ಮಗನು ಸನ್ಯಾಸಿಯಾಗಿ ಕೌಪೀನಧಾರಿಯಾದರೆ ನಾನು ನಿಶ್ಚಯವಾಗಿಯೂ ಉಪ ವಾಸ ಮೊದಲಾದ ಸಾಹಸಕಾರ್ಯಗಳನ್ನು ಮಾಡುವೆನೆ'ಂದರು.

ವಾ.ವಿ. :—ಜಾತಶ್ಚಾಸೌ ಕೋಪಶ್ಚ, ಜಾತಕೋಪೇನ ಆಕುಲಿತಃ= ಜಾತಕೋಪಾಕುಲಿತಃ. ಧರಾಯಾಂ ಸುರಃ=ಧರಾಸುರಃ. ಮಹಾನ್ ಆತ್ಮಾ ಯೇಷಾಂ ತೇ=ಮಹಾತ್ಮಾನಃ, ತೇಷಾಮ್. ಲಂಘನಾತ್ ಭೀರುಃ= ಲಂಘನಭೀರುಃ. ಕೌಪೀನಸ್ಯ ಧೃತಿಃ =ಕೌಪೀನಧೃತಿಃ, ತಸ್ಯಾಮ್. ಸಾಹಸಸ್ಯ ಪ್ರತಿಶ್ರವಃ=ಸಾಹಸಪ್ರತಿಶ್ರವಃ, ಅಭಾಷತ=ಭಾಷ ವ್ಯಕ್ತಾಯಾಂ ವಾಚಿ, ಒಂದನೆ ಗುಣ, ಸಕ. ಲಙ್, ಆತ್ಮ. ಪ್ರ. ಏ. ಅಭಾಷತ, ಅಭಾಷೇ-ತಾಂ, ಅಭಾಷಂತ. ಅಭಾಷಥಾಃ, ಅಭಾಷೇಥಾಮ್, ಅಭಾಷಧ್ವಮ್. ಅಭಾಷೇ, ಅಭಾಷಾವಹಿ, ಅಭಾಷಾಮಹಿ.

ಕ್ಷಣೇನ ಕೌಪೀನಧರೋ ನಿಜಂ ಪಟಂ
ವಿದಾರ್ಯ ಹೇ ತಾತ ಕುರುಷ್ವ ಸಾಹಸಮ್ ।
ಇತೀಮಮುಕ್ತ್ವಾ ವಿಭುರಬ್ರವೀತ್ಪುನಃ
ಶುಭಾಂತರಾಯಂ ನ ಭವಾಂಶ್ಚರೇದಿತಿ ॥ ೨೦ ॥

Rarest Archiver

ಅ :—ವಿಭುಃ ಕ್ಷಣೇನ ನಿಜಂ ಪಟಂ ವಿದಾರ್ಯ ಕೌಪೀನಧರಃ ಹೇ ತಾತ ಸಾಹಸಂ ಕುರುಷ್ವ ಇತಿ ಇಮಂ ಉಕ್ತ್ವಾ ಭವಾನ್ ಶುಭಾಂತರಾಯಂ ನ ಚರೇತ್ ಇತಿ ಪುನಃ ಅಬ್ರವೀತ್.

ಅ :—ವಿಭುಃ=ಸಮರ್ಥನಾದ ವಾಸುದೇವನು, ಕ್ಷಣೇನ=ಕ್ಷಣಕಾಲದಲ್ಲಿಯೇ, ನಿಜಂ=ತನ್ನ, ಪಟಂ=ಬಟ್ಟೆಯನ್ನು, ವಿದಾರ್ಯ=ಸೀಳಿ, ಕೌಪೀನ-ಧರಃ=ಕೌಪೀನವನ್ನುಟ್ಟವನಾಗಿ, ಹೇ ತಾತ=ಎಲೈ ತಂದೆಯೇ! ಸಾಹಸಂ =ಸಾಹಸಕಾರ್ಯವನ್ನು, ಕುರುಷ್ವ=ಮಾಡಿರಿ, ಇತಿ=ಹೀಗೆಂದು, ಇಮಂ= ಈ ತಂದೆಯನ್ನು ಕುರಿತು, ಉಕ್ತ್ವಾ=ಹೇಳಿ, ಭವಾನ್=ನೀವು, ಶುಭ= ಮಂಗಳಕಾರ್ಯಕ್ಕೆ, ಅಂತರಾಯಂ=ಅಡ್ಡಿಯನ್ನು, ನ ಚರೇತ್=ಮಾಡಬೇಡಿ, ಇತಿ=ಹೀಗೆಂದು, ಪುನಃ=ತಿರುಗಿ, ಅಬ್ರವೀತ್=ಹೇಳಿದನು.

ತಾ :—ಶಕ್ತನಾದ ವಾಸುದೇವನು ತಂದೆಯ ಪ್ರತಿಜ್ಞೆಯನ್ನು ಕೇಳಿದ ಕೂಡಲೆ ತನ್ನ ಬಟ್ಟೆಯನ್ನು ಸೀಳಿ ಕೌಪೀನವನ್ನುಟ್ಟನು. 'ಅಪ್ಪ! ಈಗ ಸಾಹಸಕಾರ್ಯವನ್ನು ಮಾಡಿರಿ' ಎಂದನು. ತಿರುಗಿ 'ನೀವು ನಾನು ಸಂನ್ಯಾಸ ಸ್ವೀಕರಿಸುವ ಶುಭಕಾರ್ಯಕ್ಕೆ ಅಡ್ಡಿಮಾಡಬೇಡಿರಿ' ಎಂದು ಹೇಳಿದನು.

ವ್ಯಾ.ವಿ. :—ಕೌಪೀನಸ್ಯ ಧರಃ=ಕೌಪೀನಧರಃ. ಶುಭಸ್ಯ ಅಂತ-ರಾಯಃ=ಶುಭಾಂತರಾಯಃ, ತಮ್. ಕುರುಷ್ವ–ಡು ಕೃಞ್ ಕರಣೇ ಧಾತು, ಲೋಟ್, ಆತ್ಮ. ಮ. ಏ. ಕುರುತಾಂ, ಕುರ್ವಾತಾಂ, ಕುರ್ವತಾಮ್. ಕುರುಷ್ವ, ಕುರ್ವಾಥಾಂ, ಕುರುಧ್ವಮ್. ಕರವೈ, ಕರವಾವಹೈ, ಕರವಾ-ಮಹೈ. ಚರೇತ್–ಚರ ಗತಿಭಕ್ಷಣಯೋಃ, ಒಂದನೆ ಗಣ, ಸಕ. ವಿಧಿಲಿಙ್, ಪರ. ಪ್ರ. ಏ. ಚರೇತ್, ಚರೇತಾಂ, ಚರೇಯುಃ. ಚರೇಃ, ಚರೇತಂ, ಚರೇತ. ಚರೇಯಂ, ಚರೇವ, ಚರೇಮ.

ನ ಪುತ್ರ! ಪಿತ್ರೋರಿರವನಂ ವಿನಾ ಶುಭಂ
ವದಂತಿ ಸಂತೋ ನನು ತೌ ಸುತೌ ಮೃತೌ ।
ನಿವರ್ತಮಾನೇ ನ ಹಿ ಪಾಲಕೋಽಸ್ತಿ ನೌ
ತ್ವಯೀತಿ ವಕ್ತಾರಮಮುಂ ಸುತೋಽಬ್ರವೀತ್ ॥ ೨೨ ॥

Rarest Archiver

ಅ :— ಪುತ್ರ ! ಸಂತಃ ಪಿತ್ರೋಃ ಅವನಂ ವಿನಾ ಶುಭಂ ನ ವದಂತಿ. ತೌ ಸುತೌ ಮೃತೌ ನನು. ತ್ವಯಿ ನಿವರ್ತಮಾನೇ ನೌ ಪಾಲಕಃ ನ ಅಸ್ತಿ ಹಿ. ಇತಿ ವಕ್ತಾರಂ ಅಮುಂ ಸುತಃ ಅಬ್ರವೀತ್.

ಅ :—ಪುತ್ರ=ಮಗು ! ಸಂತಃ=ಧರ್ಮಶಾಸ್ತ್ರವನ್ನು ರಚಿಸಿರುವ ಮನ್ವಾದಿಗಳು, ಪಿತ್ರೋಃ = ತಂದೆತಾಯಿಗಳ, ಅವನಂ = ಕಾಪಾಡುವಿಕೆಯನ್ನು, ವಿನಾ=ಬಿಟ್ಟು, ಶುಭಂ=ಮಂಗಳಕಾರ್ಯವನ್ನು, ನ ವದಂತಿ=ಹೇಳುವುದಿಲ್ಲ. ತೌ=ಆ, ಸುತೌ=ನಮ್ಮ ಮಕ್ಕಳಿಬ್ಬರು, ಮೃತೌ ನನು = ಸತ್ತುಹೋಗಿರುವರಷ್ಟೆ. ತ್ವಯಿ = ನೀನು, ನಿವರ್ತಮಾನೇ (ಸತಿ)= ಸಂನ್ಯಾಸವನ್ನು ಸ್ವೀಕರಿಸಲು, ನೌ=ನಮ್ಮಿಬ್ಬರಿಗೆ, ಪಾಲಕಃ=ರಕ್ಷಕನು, ನಾಸ್ತಿ ಹಿ=ಇಲ್ಲವಷ್ಟೆ. ಇತಿ=ಹೀಗೆಂದು, ವಕ್ತಾರಂ=ಹೇಳುವ, ಅಮುಂ = ಈ ತಂದೆಯನ್ನು ಕುರಿತು, ಸುತಃ=ಮಗನು, ಅಬ್ರವೀತ್=ಹೇಳಿದನು.

ತಾ :—ಆಗ ಮಧ್ಯಗೇಹಭಟ್ಟರು 'ಮಗು ! ಮಗನಿಗೆ ತಂದೆತಾಯಿಗಳನ್ನು ಕಾಪಾಡುವುದನ್ನು ಬಿಟ್ಟು ಬೇರೆ ಶುಭಕಾರ್ಯವಿಲ್ಲ, ಎಂದು ಧರ್ಮಶಾಸ್ತ್ರವನ್ನು ರಚಿಸಿದ ಮನ್ವಾದಿಗಳು ಹೇಳಿರುತ್ತಾರೆ. ಆದ್ದರಿಂದ ನಿನ್ನೀ ಸಂನ್ಯಾಸಸ್ವೀಕಾರವು ನಿನಗೆ ಶುಭಕಾರ್ಯವಲ್ಲ. ನಿನ್ನ ಸಹೋದರರಿಬ್ಬರು ಮೃತರಾಗಿರುವುದರಿಂದ ನೀನು ಸಂನ್ಯಾಸಿಯಾದರೆ ನಮಗೆ ಬೇರೆ ರಕ್ಷಕರಿಲ್ಲ' ಎಂದರು. ಆಗ ವಾಸುದೇವನು ತಂದೆಯನ್ನು ಕುರಿತು ಇಂತೆಂದನು.

ಯದಾ ವಿರಕ್ತಃ ಪುರುಷಃ ಪ್ರಜಾಯತೇ
ತದೈವ ಸಂನ್ಯಾಸವಿಧಿಃ ಶ್ರುತೌ ಶ್ರುತಃ ।
ನ ಸಂಗಹೀನೋಽಪಿ ಪರಿವ್ರಜಾಮಿ ವಾ-
ಮಹಂ ತು ಶುಶ್ರೂಷುಮಕಲ್ಪಯನ್ನಿತಿ ॥ ೨೩ ॥

ಅ :—ಪುರುಷಃ ಯದಾ ವಿರಕ್ತಃ ಪ್ರಜಾಯತೇ ತದಾ ಏವ ಸಂನ್ಯಾಸ-ವಿಧಿಃ ಶ್ರುತೌ ಶ್ರುತಃ. ಅಹಂ ತು ಸಂಗಹೀನಃ ಅಪಿ ವಾಂ ಶುಶ್ರೂಷುಂ ಅಕಲ್ಪಯನ್ ನ ಪರಿವ್ರಜಾಮಿ ಇತಿ.

ಅ :—ಪುರುಷಃ=ಮನುಷ್ಯನು, ಯದಾ=ಯಾವಾಗ, ವಿರಕ್ತಃ=

Rarest Archiver

ವಿಷಯಗಳಲ್ಲಿ ಆಶೆಯಿಲ್ಲದವನು, ಪ್ರಜಾಯತೇ=ಆಗುವನೋ, ತದೈವ= ಅದೇ ಸಮಯದಲ್ಲಿಯೇ, ಸಂನ್ಯಾಸವಿಧಿಃ=ಸಂನ್ಯಾಸ ಸ್ವೀಕಾರವು, ಶ್ರುತೌ =ವೇದದಲ್ಲಿ, ಶ್ರುತಃ = ಪ್ರಸಿದ್ಧವಾಗಿದೆ. ಅಹಂ ತು=ನಾನಾದರೋ, ಸಂಗಹೀನಃ ಅಪಿ=ವಿಷಯಾಸಕ್ತಿಯಿಲ್ಲದವನಾದರೂ, ವಾಂ=ನಿಮ್ಮಿಬ್ಬರಿಗೆ ಶುಶ್ರೂಷುಂ=ಸೇವಕನನ್ನು, ಅಕಲ್ಪಯನ್ (ಸನ್)=ನಿಯಮಿಸದವನಾಗಿ, ನ ಪರಿವ್ರಜಾಮಿ ಇತಿ=ಸಂನ್ಯಾಸವನ್ನು ಸ್ವೀಕರಿಸುವುದಿಲ್ಲವೆಂದು (ಅಬ್ರವೀತ್ =ಹೇಳಿದನು).

ತಾ :—ಅಪ್ಪ ! ಮನುಷ್ಯನಿಗೆ ವೈರಾಗ್ಯವುಂಟಾದ ಕೂಡಲೆ ಅವನು ಸಂನ್ಯಾಸವನ್ನು ಸ್ವೀಕರಿಸಬೇಕೆಂದು ವೇದವು ಸಾರುತ್ತಿದೆ. ಆದ್ದರಿಂದ ನಾನೀಗ ವಿರಕ್ತನಾಗಿದ್ದರೂ ನಿಮ್ಮ ಸೇವೆಗೊಬ್ಬ ಸೇವಕನನ್ನು ನೇಮಿಸದೆ ಸಂನ್ಯಾಸಿಯಾಗುವುದಿಲ್ಲ.

ವ್ಯಾ.ವಿ :—ಸನ್ನ್ಯಾಸಸ್ಯ ವಿಧಿಃ=ಸನ್ನ್ಯಾಸವಿಧಿಃ. ಸಂಗೇನ ಹೀನಃ =ಸಂಗಹೀನಃ. ಪರಿವ್ರಜಾಮಿ-ವ್ರಜ ಗತೌ, ಒಂದನೆ ಗಣ, ಸಕ, ಲಟ್, ಪರ. ಉ. ಏ. ಪರಿ ಉಪಸರ್ಗ. ಪರಿ+ವ್ರಜತಿ, ವ್ರಜತಃ, ವ್ರಜಂತಿ. ವ್ರಜಸಿ, ವ್ರಜಥಃ, ವ್ರಜಥ. ವ್ರಜಾಮಿ. ವ್ರಜಾವಃ, ವ್ರಜಾಮಃ.

ಬಹುಶ್ರುತತ್ವಾದ್ಯದಿ ತತ್ಸಹೇ ಬಲಾ-
ನ್ನ ಸಾ ಸವಿತ್ರೀ ವಿರಹಂ ಸಹೇತ ತೇ ।
ಇತಿ ದ್ವಿಜೇನಾಭಿಹಿತೇಽನಮತ್ಸ ತಂ
ಭವಾನನುಜ್ಞಾಂ ಪ್ರದದಾತ್ವಿತಿ ಬ್ರುವನ್ ॥ ೨೪ ॥

ಅ :—ಯದಿ ಬಹುಶ್ರುತತ್ವಾತ್ ಬಲಾತ್ ತತ್ ಸಹೇ, ತೇ ಸಾ ಸವಿತ್ರೀ ವಿರಹಂ ನ ಸಹೇತ. ಇತಿ ದ್ವಿಜೇನ ಅಭಿಹಿತೇ ಸಃ ಭವಾನ್ ಅನುಜ್ಞಾಂ ಪ್ರದದಾತು. ಇತಿ ಬ್ರುವನ್ ತಂ ಅನಮತ್.

ಅ :—ಯದಿ=ಆಲೋಚಿಸಿದರೆ, ಬಹುಶ್ರುತತ್ವಾತ್ = ಅನೇಕಶಾಸ್ತ್ರಗಳನ್ನು ಕೇಳಿರುವುದರಿಂದ (ನಾನು), ಬಲಾತ್=ಶಕ್ತಿಯಿಂದ, ತತ್=ಆ ನಿನ್ನ ಸಂನ್ಯಾಸ ಸ್ವೀಕಾರವನ್ನು, ಸಹೇ=ಸಹಿಸುತ್ತೇನೆ. ತೇ=ನಿನ್ನ, ಸಾ= ಆ, ಸವಿತ್ರೀ=ತಾಯಿಯು, ವಿರಹಂ=ಅಗಲಿಕೆಯನ್ನು, ನ ಸಹೇತ=ಸಹಿಸ

Rarest Archiver

ಲಾರಳು. ಇತಿ=ಹೀಗೆಂದು, ದ್ವಿಜೇನ=ಮಧ್ಯಗೇಹಭಟ್ಟರಿಂದ, ಅಭಿಹಿತೇ =ಹೇಳಲ್ಪಡಲು, ಸಃ=ಆ ವಾಸುದೇವನು, ಭವಾನ್=ನೀವು, ಅನುಜ್ಞಾಂ =ಅನುಮತಿಯನ್ನು, ಪ್ರದದಾತು=ಕೊಡಿರಿ, ಇತಿ=ಹೀಗೆಂದು, ಬ್ರುವನ್ =ಹೇಳುತ್ತ, ತಂ=ಆ ತಂದೆಯನ್ನು, ಅನಮತ್=ವಂದಿಸಿದನು.

ತಾ :—'ಮಗು! ನಾನು ಅನೇಕ ಶಾಸ್ತ್ರಗಳನ್ನು ಕೇಳಿರುವುದರಿಂದ ಒಂದು ವೇಳೆ ನಿನ್ನ ಸಂನ್ಯಾಸ ಸ್ವೀಕಾರದಿಂದಾಗುವ ಅಗಲಿಕೆಯನ್ನು ಶಕ್ತಿಯಿಂದ ಸಹಿಸಿಯೇನು; ಆದರೆ ನಿನ್ನ ತಾಯಿಯು ಅದನ್ನು ತಾಳಲಾರಳು'. ಎಂದು ಮಧ್ಯಗೇಹಭಟ್ಟರು ಹೇಳಲು ವಾಸುದೇವನು 'ಹಾಗಾದರೆ ನೀವು ಅಪ್ಪಣೆ ಕೊಡಿರಿ' ಎಂದು ಹೇಳುತ್ತ ತಂದೆಗೆ ವಂದಿಸಿದನು.

ವ್ಯಾ.ವಿ. :—ಬಹೂನಾಂ (ಬಹು) ಶ್ರುತಂ ಯಸ್ಯ ಸಃ, ಬಹುಶ್ರುತಸ್ಯ ಭಾವಃ=ಬಹುಶ್ರುತತ್ವಂ, ತಸ್ಮಾತ್. ಸಹೇತ-ಷಹ ಮರ್ಷಣೇ, ಒಂದನೇ ಗಣ, ಸಕ. ವಿಧಿಲಿಙ್, ಆತ್ಮ ಪ್ರ. ಏ. ಸಹೇತ, ಸಹೇಯಾತಾಂ. ಸಹೇರನ್. ಸಹೇಥಾಃ, ಸಹೇಯಾಥಾಂ, ಸಹೇಧ್ವಮ್. ಸಹೇಯ, ಸಹೇವಹಿ, ಸಹೇಮಹಿ. ಪ್ರದದಾತು-ಡು ದಾಞ್ ದಾನೆ ಧಾತು, ಲೋಟ್, ಪರ. ಪ್ರ. ಏ. ಪ್ರ. ಉಪಸರ್ಗ. ಪ್ರ+ದದಾತು ದತ್ತಾತ್, ದತ್ತಾಂ, ದದತು. ದೇಹಿ ದತ್ತಾತ್, ದತ್ತಂ, ದತ್ತ. ದದಾನಿ, ದದಾವ ದದಾಮ.

ವಿಚಿಂತ್ಯ ವಿದ್ವಾನ್ ಸ ನಿರುತ್ತರೀಕೃತ-
ಸ್ತಥಾಸ್ತು ಮಾತಾನುಮದೇದ್ಯದೀತಿ ತಮ್ ।
ಉದೀರ್ಯ ಕೃಚ್ಛ್ರಾದುಪಗಮ್ಯ ಮಂದಿರಂ
ಪ್ರಿಯಾಸಕಾಶೇ ತಮುದಂತಮಬ್ರವೀತ್ ॥ ೨೫ ॥

ಅ :—ನಿರುತ್ತರೀಕೃತಃ ವಿದ್ವಾನ್ ಸಃ ವಿಚಿಂತ್ಯ ಮಾತಾ ಯದಿ ಅನುಮದೇತ್ ತಥಾ ಅಸ್ತು. ಇತಿ ತಂ ಉದೀರ್ಯ ಕೃಚ್ಛ್ರಾತ್ ಮಂದಿರಂ ಉಪಗಮ್ಯ ಪ್ರಿಯಾಸಕಾಶೇ ತಂ ಉದಂತಂ ಅಬ್ರವೀತ್.

ಅ :—ನಿರುತ್ತರೀಕೃತಃ = ಪ್ರತ್ಯುತ್ತರವಿಲ್ಲದಂತೆ ಮಾಡಲ್ಪಟ್ಟ, ವಿದ್ವಾನ್=ತಿಳಿವಳಿಕೆಯುಳ್ಳ, ಸಃ=ಆ ತಂದೆಯಾದ ಮಧ್ಯಗೇಹಭಟ್ಟರು,

Rarest Archiver

ವಿಚಿಂತ್ಯ=ಆಲೋಚಿಸಿ, ಮಾತಾ=ತಾಯಿಯು, ಯದಿ ಅನುವದೇತ್=ಒಪ್ಪಿದ್ದೇ ಆದರೆ (ಆಗ), ತಥಾ=ನೀನು ಹೇಳಿದಂತೆ, ಅಸ್ತು=ಆಗಲಿ, ಇತಿ=ಹೀಗೆಂದು, ತಂ=ಆ ಮಗನನ್ನು ಕುರಿತು, ಉದೀರ್ಯ=ಹೇಳಿ, ಕೃಚ್ಛ್ರಾತ್=ಕಷ್ಟದಿಂದ, ಮಂದಿರಂ=ಮನೆಯನ್ನು, ಉಪಗಮ್ಯ=ಸೇರಿ, ಪ್ರಿಯಾಸಕಾಶೇ=ಹೆಂಡತಿಯ ಹತ್ತಿರ, ತಂ=ಆ, ಉದಂತಂ=ಸಮಾಚಾರವನ್ನು, ಅಬ್ರವೀತ್=ಹೇಳಿದರು.

ತಾ :—ಮಗನು ನಮಸ್ಕಾರ ಮಾಡಿದ ಕೂಡಲೇ ವಿದ್ವಾಂಸರಾದ ತಂದೆಗೆ ಪ್ರತ್ಯುತ್ತರ ಕೊಡಲಾಗಲಿಲ್ಲ. ಆಗ ಅವರು ಆಲೋಚಿಸಿ 'ನಿನ್ನ ತಾಯಿಯು ಒಪ್ಪಿದರೆ ನೀನು ನಿನ್ನ ಇಷ್ಟದಂತೆ ಸಂನ್ಯಾಸವನ್ನು ಸ್ವೀಕರಿಸು.' ಎಂದು ಹೇಳಿ ಮಗನ ಅಗಲಿಕೆಯನ್ನು ಕಷ್ಟದಿಂದ ಸಹಿಸಿಕೊಂಡು ಮನೆಗೆ ಹೋದರು. ಅಲ್ಲಿ ಪತ್ನಿಯ ಹತ್ತಿರ ತನಗೂ ಮಗನಿಗೂ ನಡೆದ ವಿವಾದವನ್ನು ಹೇಳಿದರು.

ವ್ಯಾ.ವಿ. :—ನಿರ್ಗತಂ ಉತ್ತರಂ ಯಸ್ಮಾತ್ಸಃ=ನಿರುತ್ತರಃ, ಅನಿರುತ್ತರಃ ನಿರುತ್ತರಃ ಸಂಪದ್ಯಮಾನಃ ಕೃತಃ=ನಿರುತ್ತರೀಕೃತಃ. ಪ್ರಿಯಾಯಾಃ ಸಕಾಶಃ=ಪ್ರಿಯಾಸಕಾಶಃ. ತಸ್ಮಿನ್. ಅಸ್ತು-ಅಸ್ ಭುವಿ, ಎರಡನೆ ಗಣ, ಅಕ. ಲೋಟ್, ಪರ. ಪ್ರ. ಏ. ಅಸ್ತು ಸ್ತಾತ್, ಸ್ತಾಂ, ಸಂತು. ಏಧಿ ಸ್ತಾತ್, ಸ್ತಂ, ಸ್ತ. ಅಸಾನಿ, ಅಸಾವ, ಅಸಾಮ.

ನಿಶಾಚರಾರೇರಿವ ಲಕ್ಷ್ಮಣಃ ಪುರಾ
ವೃಕೋದರಸ್ಯೇವ ಸುರೇಂದ್ರನಂದನಃ ।
ಗದೋಽಥ ಶೌರೇರಿವ ಕರ್ಮಕೃತ್ ಪ್ರಿಯಃ
ಸುಭಕ್ತಿಮಾನ್ ವಿಶ್ವವಿದೋಽನುಜೋಽಭವತ್ ॥ ೨೬ ॥

ಅ :—ಅಥ ಪುರಾ ನಿಶಾಚರಾರೇಃ ಲಕ್ಷ್ಮಣಃ ಇವ, ವೃಕೋದರಸ್ಯ ಸುರೇಂದ್ರನಂದನಃ ಇವ, ಶೌರೇಃ ಗದಃ ಇವ ವಿಶ್ವವಿದಃ ಸುಭಕ್ತಿಮಾನ್ ಪ್ರಿಯಃ ಕರ್ಮಕೃತ್ ಅನುಜಃ ಅಭವತ್.

ಅ :—ಅಥ=ಬಳಿಕ, ಪುರಾ=ಹಿಂದೆ ತ್ರೇತಾಯುಗದಲ್ಲಿ, ನಿಶಾಚರ=ರಾವಣಾದಿ ರಾಕ್ಷಸರಿಗೆ, ಅರೇಃ=ಶತ್ರುವಾದ ರಾಮನಿಗೆ, ಲಕ್ಷ್ಮಣಃ ಇವ=ಲಕ್ಷ್ಮಣನಂತೆಯೂ, ವೃಕೋದರಸ್ಯ=ಭೀಮನಿಗೆ, ಸುರೇಂದ್ರನಂದನಃ

Rarest Archiver

ಇವ = ಇಂದ್ರನ ಮಗನಾದ ಅರ್ಜುನನಂತೆಯೂ, ಶೌರೇಃ = ಕೃಷ್ಣನಿಗೆ, ಗದಃ ಇವ = ಗದನೆಂಬವನಂತೆಯೂ, ವಿಶ್ವವಿದಃ = ಸರ್ವಜ್ಞನಾದ ವಾಸುದೇವನಿಗೆ, ಸುಭಕ್ತಿಮಾನ್ = ಅತಿಶಯ ಭಕ್ತಿಯುಳ್ಳ, ಪ್ರಿಯಃ = ಇಷ್ಟನಾದ, ಕರ್ಮ- ಕೃತ್ = ಸೇವಕನಾದ, ಅನುಜಃ = ತಮ್ಮನು, ಅಭವತ್ = ಆದನು.

ತಾ :—ಶ್ರೀರಾಮನಿಗೆ ಲಕ್ಷ್ಮಣನು ಭಕ್ತಿಯುಳ್ಳ ತಮ್ಮನಾಗಿದ್ದನು. ಭೀಮಸೇನನಿಗೆ ಅರ್ಜುನನು ಸ್ನೇಹವುಳ್ಳ ತಮ್ಮನಾಗಿದ್ದನು. ಶ್ರೀಕೃಷ್ಣನಿಗೆ ಗದನೆಂಬವನು ಸೇವಾಕಾರ್ಯವನ್ನು ಮಾಡುವ ತಮ್ಮನಾಗಿದ್ದನು. ಹಾಗೆಯೇ ತರುವಾಯ ಸರ್ವಜ್ಞನಾದ ಆ ವಾಸುದೇವನಿಗೆ ಅತ್ಯಂತ ಭಕ್ತಿಯುಳ್ಳವನೂ, ಸ್ನೇಹವುಳ್ಳವನೂ, ಸೇವಕನೂ ಆದ ಒಬ್ಬ ತಮ್ಮನು ಹುಟ್ಟಿದನು.

ವ್ಯಾ. ವಿ. :—ನಿಶಾಯಾಂ ಚರಂತೀತಿ, ನಿಶಾಚರಾಣಾಂ ಅರಿಃ = ನಿಶಾ- ಚರಾರಿಃ, ತಸ್ಯ. ವೃಕಃ ಉದರೇ ಯಸ್ಯ ಸಃ = ವೃಕೋದರಃ, ತಸ್ಯ. ಸುರೇಂದ್ರಸ್ಯ ನಂದನಃ = ಸುರೇಂದ್ರನಂದನಃ. ಕರ್ಮ ಕರೋತೀತಿ = ಕರ್ಮಕೃತ್. ಶೋಭನಾ ಚ ಸಾ ಭಕ್ತಿಶ್ಚ, ಸುಭಕ್ತಿಃ ಅಸ್ಯಾಸ್ತೀತಿ = ಸುಭಕ್ತಿಮಾನ್. ವಿಶ್ವಂ ವೇತ್ತೀತಿ = ವಿಶ್ವವಿತ್, ತಸ್ಯ.

ಕದಾಚಿದಾಪ್ಯಾಲಯಮಬುದ್ಧಿರಾಲಯಂ
ನಿವೇದಯನ್ ಪಾಲಕಮೇನಮೇತಯೋಃ ।
ದೃಢಸ್ವಸನ್ಯಾಸನಿಷೇಧನಿಶ್ಚಯಾಂ
ಧವಾನುಮತ್ಯೇದಮುವಾಚ ಮಾತರಮ್ ॥ ೨೭ ॥

ಅ :—ಅಲಯಬುದ್ಧಿಃ ಕದಾಚಿತ್ ಆಲಯಂ ಆಪ್ಯ ಏನಂ ಏತಯೋಃ ಪಾಲಕಂ ನಿವೇದಯನ್ ಧವಾನುಮತ್ಯಾ ದೃಢಸ್ವಸನ್ಯಾಸನಿಷೇಧನಿಶ್ಚಯಾಂ ಮಾತರಂ ಇದಂ ಉವಾಚ.

ಅ :—ಅಲಯಬುದ್ಧಿಃ = ನಾಶವಿಲ್ಲದ ಜ್ಞಾನವುಳ್ಳ ವಾಸುದೇವನು, ಕದಾಚಿತ್ = ಒಂದಾನೊಂದು ದಿನ, ಆಲಯಂ = ತಂದೆಯಿರುವ ಮನೆಯನ್ನು, ಆಪ್ಯ = ಹೊಂದಿ, ಏನಂ = ಈ ತನ್ನ ತಮ್ಮನನ್ನು, ಏತಯೋಃ = ಈ ತಂದೆ, ತಾಯಿಗಳಿಗೆ, ಪಾಲಕಂ = ರಕ್ಷಕನನ್ನಾಗಿ, ನಿವೇದಯನ್ = ತಿಳಿಸುತ್ತ, ಧವ =

Rarest Archives

ಪತಿಯ, ಅನುಮತ್ಯಾ=ಒಪ್ಪಿಗೆಯಿಂದ, ದೃಢ=ಸ್ಥಿರವಾದ, ಸ್ವಸಂನ್ಯಾಸ=ತನ್ನ ಸಂನ್ಯಾಸದ, ನಿಷೇಧ=ತಡೆಯುವಿಕೆಯ, ನಿಶ್ಚಯಾಂ=ನಿಶ್ಚಯವುಳ್ಳ, ಮಾತರಂ=ತಾಯಿಯನ್ನು ಕುರಿತು, ಇದಂ=ಈ ಮಾತನ್ನು, ಉವಾಚ=ಹೇಳಿದನು.

ತಾ :—ಪ್ರಳಯಕಾಲದಲ್ಲಿಯೂ ನಾಶವಾಗದ ಜ್ಞಾನವುಳ್ಳ ಆ ವಾಸುದೇವನು ಒಂದಾನೊಂದು ದಿನ ತಂದೆಯಿರುವ ತನ್ನ ಮನೆಗೆ ಹೋದನು. ಅಲ್ಲಿರುವ ತಮ್ಮನನ್ನು ತೋರಿಸಿ 'ನಾನು ಸಂನ್ಯಾಸವನ್ನು ಸ್ವೀಕರಿಸಿದ ತರುವಾಯ ಇವನು ನಿಮ್ಮನ್ನು ಕಾಪಾಡುವನು' ಎಂದು ತಂದೆ ತಾಯಿಗಳಿಗೆ ಹೇಳಿದನು. ಹೀಗೆಂದರೂ ಪತಿಯ ಅಭಿಪ್ರಾಯದಂತೆ ತನ್ನ ಸಂನ್ಯಾಸಕ್ಕೆ ಅಡ್ಡಿ ಮಾಡಲು ನಿಶ್ಚಯಿಸಿಕೊಂಡಿರುವ ತಾಯಿಯನ್ನು ಕುರಿತು ಇಂತೆಂದನು.

ವ್ಯಾ.ವಿ. :—ನ ವಿದ್ಯತೇ ಲಯಃ ಯಸ್ಯಾಸ್ಸಾ, ಅಲಯಾ ಬುದ್ಧಿಃ ಯಸ್ಯ ಸಃ=ಅಲಯಬುದ್ಧಿಃ, ಸ್ವಸ್ಯ ಸನ್ನ್ಯಾಸಃ, ಸ್ವಸನ್ನ್ಯಾಸಸ್ಯ ನಿಷೇಧಃ, ದೃಢಂ ಯಥಾ ತಥಾ ಸ್ವಸನ್ನ್ಯಾಸನಿಷೇಧಃ, ದೃಢಸ್ವಸನ್ನ್ಯಾಸನಿಷೇಧೇ ನಿಶ್ಚಯಃ. ಯಸ್ಯಾಸ್ಸಾ = ದೃಢಸ್ವಸನ್ನ್ಯಾಸನಿಷೇಧನಿಶ್ಚಯಾ, ತಾಮ್, ಧವಸ್ಯ ಅನುಮತಿಃ=ಧವಾನುಮತಿಃ, ತಯಾ.

ವರಾಶ್ರಮಾಪ್ತಿಂ ಮಮ ಸಂವದಸ್ವ ಮಾಂ
ಕದಾಚಿದಪ್ಯಂಬ ಯದೀಚ್ಛಸೀಕ್ಷಿತುಮ್ ।
ಯದನ್ಯಥಾ ದೇಶಮಿಮಂ ಪರಿತ್ಯಜ-
ನ್ನ ಜಾತು ದೃಷ್ಟೇರ್ವಿಷಯೋ ಭವಾಮಿ ವಃ ॥ ೨೮ ॥

ಅ :—ಅಂಬ! ಕದಾಚಿತ್ ಅಪಿ ಮಾಂ ಈಕ್ಷಿತುಂ ಯದಿ ಇಚ್ಛಸಿ ಮಮ ವರಾಶ್ರಮಾಪ್ತಿಂ ಸಂವದಸ್ವ. ಯದನ್ಯಥಾ ಇಮಂ ದೇಶಂ ಪರಿತ್ಯಜನ್ ಜಾತು ವಃ ದೃಷ್ಟೇಃ ವಿಷಯಃ ನ ಭವಾಮಿ.

ಅ :—ಅಂಬ = ಅಮ್ಮ, ಕದಾಚಿತ್ ಅಪಿ = ಯಾವಾಗಲಾದರೂ, ಮಾಂ=ನನ್ನನ್ನು, ಈಕ್ಷಿತುಂ=ನೋಡುವುದಕ್ಕೆ, ಯದಿ ಇಚ್ಛಸಿ=ಅಪೇಕ್ಷಿಸಿದ್ದೇ ಆದರೆ, ಮಮ = ನನ್ನ, ವರಾಶ್ರಮಾಪ್ತಿಂ = ಸಂನ್ಯಾಸಾಶ್ರಮದ

Rarest Archive

ಸ್ವೀಕಾರವನ್ನು, ಸಂವದಸ್ವ = ಅನುಮೋದಿಸು. ಯದನ್ಯಥಾ = ಇದಕ್ಕೆ ವ್ಯತ್ಯಾಸವಾಗಿ ಒಪ್ಪದೇ ಇದ್ದರೆ, ಇಮಂ = ಈ, ದೇಶಂ = ದೇಶವನ್ನು, ಪರಿತ್ಯಜನ್ = ಬಿಡುವವನಾಗಿ, ಜಾತು = ಒಂದುಸಲವೂ, ವಃ = ನಿಮ್ಮ, ದೃಷ್ಟೇಃ ವಿಷಯಃ = ಕಣ್ಣಿಗೆ ಬೀಳುವವನು, ನ ಭವಾಮಿ = ಆಗುವುದಿಲ್ಲ.

ತಾ :—'ಅಮ್ಮ ! ನೀನು ಯಾವಾಗಲಾದರೂ ನನ್ನನ್ನು ನೋಡಲು ಅಪೇಕ್ಷಿಸುವುದಾದರೆ ಈಗ ಸಂನ್ಯಾಸ ಸ್ವೀಕರಿಸಲು ನನಗೆ ಅಪ್ಪಣೆಯನ್ನು ನೀಡು. ಹಾಗೆ ಒಪ್ಪದಿದ್ದರೆ ನಾನು ಈ ದೇಶವನ್ನೇ ಬಿಟ್ಟು ಹೊರಟು ಹೋಗು ವೆನು. ಅನಂತರ ನೀನು ಯಾವಾಗಲಾದರೂ ಒಂದು ಸಲವೂ ನನ್ನನ್ನು ನೋಡಲಾರೆ'.

ವ್ಯಾ.ವಿ. :—ವರಶ್ಚಾಸೌ ಆಶ್ರಮಶ್ಚ, ವರಾಶ್ರಮಸ್ಯ ಆಪ್ತಿಃ = ವರಾಶ್ರಮಾಪ್ತಿಃ, ತಾಮ್. ಸಂವದಸ್ವ—'ಭಾಸನೋಪಸಂಭಾಷಾಜ್ಞಾನಯತ್ನವಿಮತ್ಯುಪಮಂತ್ರಣೇಷು ವದಃ' ಈ ಸೂತ್ರದಿಂದ ಪ್ರಾರ್ಥನಾರ್ಥದಲ್ಲಿ ವದ ಧಾತುವು ಆತ್ಮನೇಪದಿಯಾಗಿದೆ. ಲೋಟ್, ಮ. ಏ. ಸಂ ಉಪಸರ್ಗ. ಸಂ + ವದತಾಂ, ವದೇತಾಂ, ವದಂತಾಮ್. ವದಸ್ವ, ವದೇಥಾಂ, ವದಧ್ವಂ. ವದೈ, ವದಾವಹೈ, ವದಾಮಹೈ.

ಇತಿ ಬ್ರುವಾಣೇ ತನಯೇ ಕದಾಚಿದ-
ಪ್ಯದರ್ಶನಂ ತಸ್ಯ ಮೃತೇರ್ನಿದರ್ಶನಮ್ ।
ವಿಚಿಂತ್ಯ ಪರ್ಯಾಕುಲಿತಾ ಚಿಕೀರ್ಷಿತಂ
ಸುತಸ್ಯ ಕೃಚ್ಛ್ರಾನ್ನ್ಯರುಣನ್ನ ಸಾ ಶುಭಾ ॥ ೨೯ ॥

ಅ :—ತನಯೇ ಇತಿ ಬ್ರುವಾಣೇ ಪರ್ಯಾಕುಲಿತಾ ಶುಭಾ ಸಾ ತಸ್ಯ ಕದಾಚಿತ್ ಅಪಿ ಅದರ್ಶನಂ ಮೃತೇಃ ನಿದರ್ಶನಂ (ಇತಿ) ವಿಚಿಂತ್ಯ ತಸ್ಯ ಚಿಕೀರ್ಷಿತಂ ಕೃಚ್ಛ್ರಾತ್ ನ ನ್ಯರುಣತ್.

ಅ :—ತನಯೇ = ಮಗನು, ಇತಿ = ಈ ರೀತಿ, ಬ್ರುವಾಣೇ (ಸತಿ) = ಹೇಳುತ್ತಿರಲು, ಪರ್ಯಾಕುಲಿತಾ = ವ್ಯಥೆಗೊಂಡ, ಶುಭಾ = ಮಂಗಳಕರಳಾದ, ಸಾ = ಆ ತಾಯಿಯು, ತಸ್ಯ = ಆ ಮಗನ, ಕದಾಚಿದಪಿ = ಯಾವಾಗಲಾದರೂ ಒಂದು ಬಾರಿ, ಅದರ್ಶನಂ = ನೋಡದಿರುವುದು, ಮೃತೇಃ = ಮರಣಕ್ಕೆ, ನಿದ-

Rarest Archiver

ರ್ಶನಂ = ಸಮಾನವಾದುದು, (ಎಂದು) ವಿಚಿಂತ್ಯ = ಆಲೋಚಿಸಿ, ತಸ್ಯ = ಆ, ಸುತಸ್ಯ = ಮಗನ, ಚಿಕೀರ್ಷಿತಂ = ಮಾಡಲಪೇಕ್ಷಿಸಲ್ಪಟ್ಟದ್ದನ್ನು, ಕೃಚ್ಛ್ರಾತ್ = ಕಷ್ಟದಿಂದ, ನ ನ್ಯರುಣತ್ = ತಡೆಯಲಿಲ್ಲ.

ತಾ :—ಮಗನು ಈ ರೀತಿ ಹೇಳಲು ತಾಯಿಯು ಏನನ್ನೂ ಹೇಳಲು ತೋರದೆ ವ್ಯಥೆಗೊಂಡಳು. ಮಂಗಳಕಾರ್ಯಕ್ಕೆ ಅನುಕೂಲಳಾದ ಅವಳು 'ಮಗನು ಸಂನ್ಯಾಸ ಸ್ವೀಕರಿಸಿದಲ್ಲಿ ಅವನನ್ನು ಯಾವಾಗಲಾದರೂ ನೋಡಬಹುದು. ಸಂನ್ಯಾಸಕ್ಕೆ ಒಪ್ಪದಿದ್ದಲ್ಲಿ ಅವನ ದರ್ಶನವೇ ಇಲ್ಲದಂತಾಗುವುದು. ಅದು ಅವನ ಮರಣಕ್ಕೆ ಸಮಾನವಾದುದ್ದು'. ಎಂದು ಆಲೋಚಿಸಿ ಅತಿಕಷ್ಟದಿಂದ ಮಗನ ಸಂನ್ಯಾಸ ಸ್ವೀಕಾರವನ್ನು ಒಪ್ಪಿಕೊಂಡಳು.

ವ್ಯಾ.ವಿ. :—ದರ್ಶನಸ್ಯ ಅಭಾವಃ = ಅದರ್ಶನಮ್, ನ್ಯರುಣತ್. ರುಧಿರ್ ಆವರಣೇ, ಏಳನೆ ಗಣ, ಸಕ. ಲಙ್, ಪರ. ಪ್ರ. ಏ. ನಿ ಉಪಸರ್ಗ. ನಿ + ಅರುಣತ್, ಅರುಂಧಾಂ, ಅರುಂಧನ್, ಅರುಣತ್ ಅರುಣಃ, ಅರುಂಧಂ, ಅರುಂಧ. ಅರುಣಧಂ, ಅರುಂಧ್ವ, ಅರುಂಧ್ಮ.

ಅಥೋಪಗಮ್ಯೈಷ ಗುರುಂ ಜಗದ್ಗುರುಃ
ಪ್ರಸಾದ್ಯ ತಂ ದೇವವರಪ್ರಸಾದಿತಃ ।
ಸದಾ ಸಮಸ್ತಾಶ್ರಮಭಾಕ್ ಸುರೇಶ್ವರೋ
ವಿಶೇಷತಃ ಖಲ್ವಭಜದ್ವರಾಶ್ರಮಮ್ ॥ ೩೦ ॥

ಅ :—ಅಥ ದೇವವರಪ್ರಸಾದಿತಃ ಜಗದ್ಗುರುಃ ಸುರೇಶ್ವರಃ ಏಷಃ ಗುರುಂ ಉಪಗಮ್ಯ ತಂ ಪ್ರಸಾದ್ಯ ಸದಾ ಸಮಸ್ತಾಶ್ರಮಭಾಕ್ ವಿಶೇಷತಃ ವರಾಶ್ರಮಂ ಅಭಜತ್ ಖಲು.

ಅ : = ಅಥ = ಬಳಿಕ, ದೇವವರ = ದೇವಶ್ರೇಷ್ಠರಿಂದ, ಪ್ರಸಾದಿತಃ = ಅನುಗ್ರಹ ಮಾಡುವಂತೆ ಮಾಡಲ್ಪಟ್ಟ, ಜಗದ್ಗುರುಃ = ಪ್ರಪಂಚದ ಗುರುವಾದ, ಸುರೇಶ್ವರಃ = ದೇವೋತ್ತಮನಾದ, ಏಷಃ = ಈ ವಾಸುದೇವನು, ಗುರುಂ = ಅಚ್ಯುತಪ್ರೇಕ್ಷಾಚಾರ್ಯರನ್ನು, ಉಪಗಮ್ಯ = ಸಮೀಪಿಸಿ, ತಂ = ಅವರನ್ನು, ಪ್ರಸಾದ್ಯ = ಸಂತೋಷಗೊಳಿಸಿ, ಸದಾ = ಯಾವಾಗಲೂ,

Rarest Archiver

ಸಮಸ್ತಾಶ್ರಮ = ಎಲ್ಲ ಆಶ್ರಮಗಳನ್ನು, ಭಾಕ್ =(ದೇವತೆಯಾದ್ದರಿಂದ) ಹೊಂದಿದವನಾದರೂ, ವಿಶೇಷತಃ = ಅತಿಶಯವಾಗಿ, ವರಾಶ್ರಮಂ = ಸಂನ್ಯಾಸಾಶ್ರಮವನ್ನು, ಅಭಜತ್ ಖಲು = ಹೊಂದಿದನು.

ತಾ :—ಬಳಿಕ ದೇವತೆಗಳಿಂದ ದುರ್ಮತಗಳನ್ನು ಖಂಡಿಸಿ ಸನ್ಮತವನ್ನು ಸ್ಥಾಪಿಸೆಂದು ಪ್ರಾರ್ಥಿಸಲ್ಪಟ್ಟ ಪ್ರಪಂಚಕ್ಕೆ ಗುರುವಾದ ವಾಯುದೇವರ ಅವತಾರನಾದ ಆ ವಾಸುದೇವನು ಅಚ್ಯುತಪ್ರೇಕ್ಷಾಚಾರ್ಯರ ಹತ್ತಿರಕ್ಕೆ ಹೋದನು. ಅವರನ್ನು ತನ್ನ ಗುಣಗಳಿಂದ ಸಂತೋಷಗೊಳಿಸಿದನು. ತಾನು ದೇವತೆಯಾದ್ದರಿಂದ ಎಲ್ಲಾ ಆಶ್ರಮಗಳನ್ನು ಹೊಂದಿದವನಾದರೂ ವಿಶೇಷವಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನು.

ವ್ಯಾ.ವಿ. :—ಜಗತಾಂ ಗುರುಃ = ಜಗದ್ಗುರುಃ. ದೇವವರ್ಯೈಃ ಪ್ರಸಾದಿತಃ = ದೇವವರಪ್ರಸಾದಿತಃ. ಸಮಸ್ತಾಶ್ಚ, ತೇ ಆಶ್ರಮಾಶ್ಚ, ಸಮಸ್ತಾಶ್ರಮಾನ್ ಭಜತೀತಿ = ಸಮಸ್ತಾಶ್ರಮಭಾಕ್. ಸುರಾಣಾಂ ಈಶ್ವರಃ = ಸುರೇಶ್ವರಃ. ವರಶ್ಚಾಸೌ ಆಶ್ರಮಶ್ಚ = ವರಾಶ್ರಮಃ, ತಮ್. ಅಭಜತ್– ಭಜ ಸೇವಾಯಾಂ, ಒಂದನೆ ಗಣ, ಸಕ. ಲಙ್, ಪರ. ಪ್ರ. ಏ. ಅಭಜತ್, ಅಭಜತಾಂ, ಅಭಜನ್. ಅಭಜಃ, ಅಭಜತಂ, ಅಭಜತ. ಅಭಜಂ, ಅಭಜಾವ, ಅಭಜಾಮ.

ಕ್ರಿಯಾಕಲಾಪಂ ಸಕಲಂ ಸ ಕಾಲವಿ-
ದ್ವಿಧಾನಮಾರ್ಗೇಣ ವಿಧಾಯ ಕೇವಲಮ್ ।
ಸದಾಪ್ರಸನ್ನಸ್ಯ ಹರೇಃ ಪ್ರಸತ್ತಯೇ
ಮುಹುಃ ಸಮಸ್ತನ್ಯಸನಂ ಸಮಭ್ಯಧಾತ್ ॥ ೩೧ ॥

ಅ :—ಕಾಲವಿತ್ ಸಃ ಸಕಲಂ ಕ್ರಿಯಾಕಲಾಪಂ ವಿಧಾನಮಾರ್ಗೇಣ ಕೇವಲಂ ವಿಧಾಯ ಸದಾ ಪ್ರಸನ್ನಸ್ಯ ಹರೇಃ ಪ್ರಸತ್ತಯೇ ಮುಹುಃ ಸಮಸ್ತನ್ಯಸನಂ ಸಮಭ್ಯಧಾತ್.

ಅ :—ಕಾಲವಿತ್ = ಸಮಯವನ್ನರಿತ, ಸಃ = ಆ ವಾಸುದೇವನು, ಸಕಲಂ = ಎಲ್ಲ, ಕ್ರಿಯಾಕಲಾಪಂ = ಜೀವಚ್ಛ್ರಾದ್ಧ ಮೊದಲಾದ ಕಾರ್ಯ ಸಮೂಹವನ್ನು, ವಿಧಾನಮಾರ್ಗೇಣ = ಶಾಸ್ತ್ರ ವಿಹಿತ ರೀತಿಯಿಂದ, ಕೇವಲಂ

Rarest Archive

ವಿಧಾಯ = ಚೆನ್ನಾಗಿ ಮಾಡಿ, ಸದಾ = ಯಾವಾಗಲೂ, ಪ್ರಸನ್ನಸ್ಯ = ಸಂತುಷ್ಟನಾದ, ಹರೇಃ = ಶ್ರೀಮನ್ನಾರಾಯಣನ, ಪ್ರಸತ್ತ್ಯೈ = ಅನುಗ್ರಹಕ್ಕಾಗಿ, ಮುಹುಃ = ಮತ್ತೂ, ಸಮಸ್ತನ್ಯಸನಂ = ಎಲ್ಲವನ್ನೂ ಭಗವಂತನಲ್ಲಿ ಸಮರ್ಪಿಸುವಿಕೆಯನ್ನು, ಸಮಭ್ಯಧಾತ್ = ಹೇಳಿದನು.

ತಾ :—ಯಾವ ಕಾಲದಲ್ಲಿ ಏನನ್ನು ಮಾಡಬೇಕು ಎಂಬುದನ್ನರಿತ ಆ ವಾಸುದೇವನು ಜೀವಚ್ಛ್ರಾದ್ಧ ಮೊದಲಾದ ಸನ್ಯಾಸಸ್ವೀಕಾರಕ್ಕಿಂತ ಮೊದಲು ಮಾಡಬೇಕಾದ ಕಾರ್ಯಗಳನ್ನು ಶಾಸ್ತ್ರರೀತಿಯಿಂದ ಮಾಡಿದನು. ಶ್ರೀಮನ್ನಾರಾಯಣನ ಅನುಗ್ರಹವನ್ನು ಪಡೆಯುವುದಕ್ಕಾಗಿ ಅವನಲ್ಲಿ ಎಲ್ಲವನ್ನೂ ಸಮರ್ಪಿಸಿದ್ದೇನೆಂದು ಮತ್ತೂ ಮತ್ತೂ ಹೇಳಿ ಹಾಗೆಯೇ ಮಾಡಿದನು.

ವ್ಯಾ. ವಿ. :—ಕ್ರಿಯಾಣಾಂ ಕಲಾಪಃ = ಕ್ರಿಯಾಕಲಾಪಃ, ತಮ್, ಕಾಲಂ ವೇತ್ತೀತಿ = ಕಾಲವಿತ್. ವಿಧಾನಸ್ಯ ಮಾರ್ಗಃ = ವಿಧಾನಮಾರ್ಗಃ, ತೇನ. ಸಮಸ್ತಾನಾಂ ನ್ಯಸನಂ = ಸಮಸ್ತನ್ಯಸನಂ, ತತ್. ಸಮಭ್ಯಧಾತ್— ಡುಧಾಞ್ ಧಾರಣಪೋಷಣಯೋಃ, ಧಾತು. ಲುಙ್, ಪರ. ಪ್ರ. ಏ. ಸಮ್, ಅಭಿ ಉಪಸರ್ಗ, ಸಮ್ ಅಭಿ + ಅಧಾತ್, ಅಧಾತಾಂ, ಅಧುಃ. ಅಧಾಃ, ಅಧಾತಂ, ಅಧಾತ. ಅಧಾಂ, ಅಧಾವ, ಅಧಾಮ.

ಅನಂತಮಾತ್ರಾಂತಮುದಾಹರಂತಿ ಯಂ
ತ್ರಿಮಾತ್ರಪೂರ್ವಂ ಪ್ರಣವೋಚ್ಚಯಂ ಬುಧಾಃ ।
ತದಾಭವದ್ಭಾವಿಚತುರ್ಮುಖಾಕೃತಿ-
ರ್ಜಪಾಧಿಕಾರೀ ಯತಿರಸ್ಯ ಸೂಚಿತಃ ॥ ೩೨ ॥

ಅ :—ಬುಧಾಃ ತ್ರಿಮಾತ್ರಪೂರ್ವಂ ಯಂ ಪ್ರಣವೋಚ್ಚಯಂ ಅನಂತಮಾತ್ರಾಂತಂ ಉದಾಹರಂತಿ, ಅಸ್ಯ ತದಾ ಭಾವಿಚತುರ್ಮುಖಾಕೃತಿಃ ಸೂಚಿತಃ ಜಪಾಧಿಕಾರೀ ಯತಿಃ ಅಭವತ್.

ಅ :—ಬುಧಾಃ = ಜ್ಞಾನಿಗಳು, ತ್ರಿಮಾತ್ರಪೂರ್ವಂ = ಅಕಾರ, ಉಕಾರ, ಮಕಾರವೆಂಬ ಮೂರು ವರ್ಣಗಳೇ ಮೊದಲುಳ್ಳ, ಯಂ = ಯಾವ, ಪ್ರಣವೋಚ್ಚಯಂ = ಓಂಕಾರರೂಪವಾದ ಅಕ್ಷರಗಳ ಸಮೂಹವನ್ನು, ಅನಂತಮಾತ್ರಾಂತಂ = ವೇದದಿಂದ ನಿಶ್ಚಯಿಸಲ್ಪಡುವ ಅರ್ಥವುಳ್ಳದ್ದನ್ನಾಗಿ,

Rarest Archive

(ಅಸಂಖ್ಯ ಮಾತ್ರೆಗಳೇ ಕೊನೆಯುಳ್ಳದ್ದಾಗಿ) ಉದಾಹರಂತಿ = ಹೇಳುತ್ತಾರೋ ; ಅಸ್ಯ = ಈ ಓಂಕಾರಕ್ಕೆ, ತದಾ = ಆಗ, ಭಾವಿ = ಮುಂದಿನ, ಚತುರ್ಮುಖಾಕೃತಿಃ = ಬ್ರಹ್ಮದೇವರ ಸ್ವರೂಪವುಳ್ಳ ವಾಸುದೇವನು, ಸೂಚಿತಃ = ಅತ್ಯಂತ ಯೋಗ್ಯನಾದ, ಜಪಾಧಿಕಾರೀ = ಜಪಿಸುವ ಅಧಿಕಾರವುಳ್ಳ, ಯತಿಃ = ಸಂನ್ಯಾಸಿಯು, ಅಭವತ್ = ಆದನು.

ತಾ :—ಜ್ಞಾನಿಗಳು ಅಕಾರ, ಉಕಾರ, ಮಕಾರರೂಪವಾದ ಓಂಕಾರದಿಂದ ಕೂಡಿದ ಅಷ್ಟಾಕ್ಷರಮಂತ್ರದ ಅರ್ಥವನ್ನು ವೇದವು ನಿರ್ಣಯಿಸಿ ಹೇಳುವುದೆಂದೂ ಈ ಪ್ರಣವಕ್ಕೆ ಅಸಂಖ್ಯಮಾತ್ರೆಗಳಿವೆಯೆಂದೂ ಹೇಳುತ್ತಾರೆ. ಇದನ್ನು ಜಪಿಸಲು ಮುಖ್ಯಾಧಿಕಾರಿಗಳು ಯತಿಗಳಾಗಿರುತ್ತಾರೆ. ಅದರಲ್ಲಿಯೂ ವಾಸುದೇವನು ಮುಂದೆ ಬ್ರಹ್ಮಪದವಿಗೆ ಬರುವ ವಾಯುದೇವರ ಅವತಾರನಾದ್ದರಿಂದ ಇಂತಹ ಪ್ರಣವಜಪಕ್ಕೆ ಅತ್ಯಂತ ಯೋಗ್ಯ ಮುಖ್ಯಾಧಿಕಾರಿಯಾದನು.

ವ್ಯಾ. ವಿ :—ಅನಂತಾಃ ಮಾತ್ರಾಃ ಯಸ್ಯ ಸಃ, ಅನಂತಮಾತ್ರಃ ಅಂಶಃ ಯಸ್ಯ ಸಃ = ಅನಂತಮಾತ್ರಾಂಶಃ, ತಮ್. ತಿಸ್ರಶ್ಚ ತಾಃ ಮಾತ್ರಾಶ್ಚ, ತ್ರಿಮಾತ್ರಾಃ ಪೂರ್ವಾಃ ಯಸ್ಯ ಸಃ = ತ್ರಿಮಾತ್ರಪೂರ್ವಃ, ತಮ್. ಪ್ರಣವರೂಪಶ್ಚಾಸೌ ಉಚ್ಚಯಶ್ಚ = ಪ್ರಣವೋಚ್ಚಯಃ, ತಮ್. ಭಾವೀ ಚಾಸೌ ಚತುರ್ಮುಖಶ್ಚ, ಭಾವಿಚತುರ್ಮುಖಸ್ಯ ಆಕೃತಿಃ ಯಸ್ಯ ಸಃ = ಭಾವಿಚತುರ್ಮುಖಾಕೃತಿಃ, ಜಪಸ್ಯ ಅಧಿಕಾರೀ = ಜಪಾಧಿಕಾರೀ.

ಗುಣಾನುರೂಪೋನ್ನತಿಪೂರ್ಣಬೋಧ
ಇತ್ಯಮುಷ್ಯ ನಾಮದ್ವಿಜವೃಂದವಂದಿತಃ ।
ಉದಾಹರದ್ಭೂರಿಯಶಾ ಹಿ ಕೇವಲಂ
ನ ಮಂತ್ರವರ್ಣಃ ಸ ಚ ಮಂತ್ರವರ್ಣಕಃ ॥ ೩೩ ॥

ಅ :—ಗುಣಾನುರೂಪೋನ್ನತಿಪೂರ್ಣಬೋಧ ಇತಿ ಅಮುಷ್ಯ ನಾಮ ದ್ವಿಜವೃಂದವಂದಿತಃ ಭೂರಿಯಶಾಃ ಮಂತ್ರವರ್ಣಃ ಕೇವಲಂ ನ ಉದಾಹರತ್ ದ್ವಿಜವೃಂದವಂದಿತಃ ಭೂರಿಯಶಾಃ ಸಃ ಮಂತ್ರವರ್ಣಕಃ ಚ ಉದಾಹರತ್ ಹಿ.

ಅ :—ಗುಣಾನುರೂಪೋನ್ನತಿ = ಗುಣಗಳಿಗೆ ಅನುಗುಣವಾದ ಅರ್ಥದ

Rarest Archiver

ಅತಿಶಯವುಳ್ಳ, ಪೂರ್ಣಬೋಧಃ ಇತಿ — ಪೂರ್ಣಬೋಧ ಎಂಬ, ಅಮುಷ್ಯ — ಈ ಯತಿಯ, ನಾಮ — ಹೆಸರನ್ನು, ದ್ವಿಜವೃಂದವಂದಿತಃ — ಬ್ರಾಹ್ಮಣರ ಸಮೂಹದಿಂದ ನಮಸ್ಕರಿಸಲ್ಪಟ್ಟ, ಭೂರಿಯಶಾಃ — ಹೆಚ್ಚಾದ ಕೀರ್ತಿಯುಳ್ಳ, ಮಂತ್ರವರ್ಣಃ ಕೇವಲಂ — ವೇದಮಂತ್ರವುಮಾತ್ರ, ನ ಉದಾಹರತ್ — ಹೇಳಲಿಲ್ಲ. ದ್ವಿಜವೃಂದವಂದಿತಃ — ಬ್ರಾಹ್ಮಣಸಮೂಹದಿಂದ ನಮಸ್ಕರಿಸಲ್ಪಟ್ಟ, ಭೂರಿಯಶಾಃ — ಹೆಚ್ಚಾದ ಕೀರ್ತಿಯುಳ್ಳ, ಸಃ — ಆ, ಮಂತ್ರವರ್ಣಕಃ ಚ — ಪ್ರಣವಮಂತ್ರವನ್ನು ಉಪದೇಶಿಸಿದ ಅಚ್ಯುತಪ್ರೇಕ್ಷಾಚಾರ್ಯರೂ, ಉದಾಹರತ್ ಹಿ — ಹೇಳಿದರೆಂಬುದು ಪ್ರಸಿದ್ಧವು.

ತಾ :— ವಾಸುದೇವನು ಸರ್ವಜ್ಞನಾದ್ದರಿಂದಲೇ ಪೂರ್ಣಬೋಧ, ಪೂರ್ಣಪ್ರಜ್ಞ, ದಶಪ್ರಮತಿ ಎಂಬ ಅನ್ವರ್ಥವಾದ ಹೆಸರನ್ನು ಪಡೆದನು. ಈ ಹೆಸರನ್ನು ಬ್ರಾಹ್ಮಣರಿಂದ ಪೂಜಿಸಲ್ಪಟ್ಟ ಅತಿಯಶಸ್ವಿಯಾದ ವೇದವು 'ದಶಪ್ರಮತಿಂ ಜನಯಂತ' ಇತ್ಯಾದಿ ಮಾತುಗಳಿಂದ ಹೊಗಳಿರುತ್ತದೆ. ಅದರಂತೆ ಬ್ರಾಹ್ಮಣ ಪೂಜ್ಯರೂ, ಕೀರ್ತಿವಂತರೂ ಆದ ಪ್ರಣವಮಂತ್ರವನ್ನು ಉಪದೇಶಿಸಿದ ಅಚ್ಯುತಪ್ರೇಕ್ಷರೂ ಈ ಹೊಸ ಯತಿಗೆ ಪೂರ್ಣಪ್ರಜ್ಞ ಎಂದೇ ಹೆಸರಿಟ್ಟರು.

ವ್ಯಾ. ವಿ. :— ಗುಣಾನಾಂ ಅನುರೂಪಾ, ಗುಣಾನುರೂಪಾ ಉನ್ನತಿಃ ಯಸ್ಯ ತತ್ — ಗುಣಾನುರೂಪೋನ್ನತಿ. ಪೂರ್ಣಃ ಬೋಧಃ ಯಸ್ಯ ಸಃ — ಪೂರ್ಣಬೋಧಃ, ದ್ವಿಜಾನಾಂ ವೃಂದಂ, ದ್ವಿಜವೃಂದೇನ ವಂದಿತಃ — ದ್ವಿಜವೃಂದವಂದಿತಃ. ಭೂರಿ ಯಶಃ ಯಸ್ಯ ಸಃ — ಭೂರಿಯಶಾಃ.

ನಿರಂಗರಾಗಂ ಮುಖರಾಗವರ್ಜಿತಂ-
ವಿಭೂಷಣಂ ವಿಷ್ಟಪಭೂಷಣಾಯಿತಮ್ ।
ಅಮುಂ ಧೃತಾಷಾಢಮವೇಕ್ಷ್ಯ ಮೇನಿರೇ
ಸ್ವಭಾವಶೋಭಾನುಪಮೇತಿ ಜಂತವಃ ॥ ೩೪ ॥

ಅ :— ಜಂತವಃ ನಿರಂಗರಾಗಂ ಮುಖರಾಗವರ್ಜಿತಂ ವಿಭೂಷಣಂ ವಿಷ್ಟಪಭೂಷಣಾಯಿತಂ ಧೃತಾಷಾಢಂ ಅಮುಂ ಅವೇಕ್ಷ್ಯ ಸ್ವಭಾವಶೋಭಾ ಅನುಪಮಾ ಇತಿ ಮೇನಿರೇ.

Rarest Archiver

ಅ :—ಜಂತವಃ=ಜನರು, ನಿರಂಗರಾಗಂ=ಗಂಧ ಮೊದಲಾದ ಲೇಪನ ದ್ರವ್ಯಗಳನ್ನು ಹಚ್ಚಿಕೊಳ್ಳದಿರುವ, ಮುಖರಾಗವರ್ಜಿತಂ=ಬಾಯಿ ಕೆಂಪಿಲ್ಲದ, ವಿಭೂಷಣಂ=ಒಡವೆಗಳಿಲ್ಲದ, ವಿಷ್ಟಪ=ಲೋಕಗಳಿಗೆ, ಭೂಷಣಾಯಿತಂ=ಅಲಂಕಾರದಂತೆ ಆಚರಿಸುವ, ಧೃತಾಷಾಢಂ=ದಂಡವನ್ನು ಹಿಡಿದಿರುವ, ಅಮುಂ=ಈ ಪೂರ್ಣಪ್ರಜ್ಞರನ್ನು, ಅವೇಕ್ಷ್ಯ=ನೋಡಿ, ಸ್ವಭಾವಶೋಭಾ=ಸ್ವಾಭಾವಿಕ ಕಾಂತಿಯು, ಅನುಪಮಾ=ಎಣೆಯಿಲ್ಲದ್ದು, ಇತಿ=ಹೀಗೆಂದು, ಮೇನಿರೇ=ತಿಳಿದರು.

ತಾ :—ಈ ಪೂರ್ಣಪ್ರಜ್ಞರು ಗಂಧ ಮೊದಲಾದ ಲೇಪನ ದ್ರವ್ಯಗಳನ್ನು ಹಚ್ಚಿಕೊಳ್ಳುತ್ತಿರಲಿಲ್ಲ. ತಾಂಬೂಲ ಮೊದಲಾದ್ದನ್ನು ಸವಿದು ಬಾಯಿಯನ್ನು ಕೆಂಪು ಮಾಡಿಕೊಳ್ಳುತ್ತಿರಲಿಲ್ಲ. ಒಡವೆಗಳನ್ನು ಧರಿಸುತ್ತಿರಲಿಲ್ಲ. ಹೀಗಿದ್ದರೂ ಪ್ರಪಂಚಕ್ಕೆ ಅಲಂಕಾರಪ್ರಾಯರಾಗಿದ್ದರು. ದಂಡವನ್ನು ಹಿಡಿದಿರುವ ಇಂತಹ ಪೂರ್ಣಪ್ರಜ್ಞರನ್ನು ಕಂಡು ಜನರು ಇವರು ಸ್ವಾಭಾವಿಕವಾದ ಕಾಂತಿಯುಳ್ಳವರು. ಈ ಸ್ವಾಭಾವಿಕ ಕಾಂತಿಗೆ ಎಣೆಯಿಲ್ಲವೆಂದು ತಿಳಿದರು.

ವ್ಯಾ. ವಿ. :—ನಿರ್ಗತಃ ಅಂಗರಾಗಃ ಯಸ್ಮಾತ್ ಸಃ=ನಿರಂಗರಾಗಃ, ತಂ. ಮುಖಸ್ಯ ರಾಗಃ, ಮುಖರಾಗೇಣ ವರ್ಜಿತಃ=ಮುಖರಾಗವರ್ಜಿತಃ, ತಮ್. ವಿಷ್ಟಪಸ್ಯ ಭೂಷಣವತ್ ಆಚರತೀತಿ=ವಿಷ್ಟಪಭೂಷಣಾಯಿತಃ, ತಮ್. ಧೃತಃ ಆಷಾಢಃ ಯೇನ ಸಃ=ಧೃತಾಷಾಢಃ, ತಮ್. ಸ್ವಭಾವಾ ಚ ಸಾ ಶೋಭಾ ಚ=ಸ್ವಭಾವಶೋಭಾ. ನ ವಿದ್ಯತೇ ಉಪಮಾ ಯಸ್ಯಾಃ ಸಾ=ಅನುಪಮಾ. ಮೇನಿರೇ=ಮನ ಜ್ಞಾನೇ, ನಾಲ್ಕನೇ ಗಣ, ಸಕ. ಲಿಟ್, ಆತ್ಮ. ಪ್ರ. ಬ. ಮೇನೇ, ಮೇನಾತೇ, ಮೇನಿರೇ. ಮೇನಿಷೇ, ಮೇನಾಥೇ, ಮೇನಿಧ್ವೇ. ಮೇನೇ, ಮೇನಿವಹೇ, ಮೇನಿಮಹೇ.

ಭುಜಂಗಭೂತೇಶವಿಹಂಗಪಾದಿಕೈಃ
ಪ್ರವಂದಿತಃ ಸಾವಸರಪ್ರತೀಕ್ಷಣೈಃ ।
ನನಾಮ ಸೋಽಯಂ ಗುರುಪೂರ್ವಕಾನ್ ಯತೀ-
ನಹೋ ಮಹೀಯೋ ಮಹತಾಂ ವಿಡಂಬನಮ್ ॥ ೩೫ ॥

Rarest Archiver

ಅ :—ಸಾವಸರಪ್ರತೀಕ್ಷಣೈಃ ಭುಜಂಗಭೂತೇಶವಿಹಂಗಪಾದಿಕೈಃ ಪ್ರವಂದಿತಃ ಸಃ ಅಯಂ ಗುರುಪೂರ್ವಕಾನ್ ಯತೀನ್ ನನಾಮ. ಮಹತಾಂ ವಿಡಂಬನಂ ಮಹೀಯಃ ಅಹೋ.

ಅ :—ಸಾವಸರಪ್ರತೀಕ್ಷಣೈಃ = ದರ್ಶನ ಸಮಯದ ನಿರೀಕ್ಷಣೆಯಿಂದ ಕೂಡಿದ, ಭುಜಂಗ = ಹಾವುಗಳು, ಭೂತ = ಪ್ರಾಣಿಗಳು ಇವುಗಳಿಗೆ, ಈಶ = ಒಡೆಯರಾದ ಮಹಾಶೇಷ ಮತ್ತು ರುದ್ರದೇವರು, ವಿಹಂಗಪ = ಪಕ್ಷಿಗಳನ್ನು ಕಾಪಾಡುವ ಗರುಡದೇವರು ಇವರೇ, ಆದಿಕೈಃ = ಮೊದಲಾದವರಿಂದ, ಪ್ರವಂದಿತಃ = ನಮಸ್ಕಾರ ಮಾಡಲ್ಪಟ್ಟ, ಸಃ ಅಯಂ = ಆ ಈ ಪೂರ್ಣ ಪ್ರಜ್ಞರು, ಗುರುಪೂರ್ವಕಾನ್ = ಅಚ್ಯುತಪ್ರೇಕ್ಷರೇ ಮೊದಲಾಗುಳ್ಳ, ಯತೀನ್ = ಯತಿಗಳನ್ನು, ನನಾಮ = ನಮಸ್ಕಾರ ಮಾಡಿದರು. ಮಹತಾಂ = ದೊಡ್ಡವರ, ವಿಡಂಬನಂ = ಸಾಮಾನ್ಯ ಜನರಂತೆ ನಟಿಸುವಿಕೆಯು, ಮಹೀಯಃ ಅತಿ ಹೆಚ್ಚಾದದ್ದು, ಅಹೋ = ಆಶ್ಚರ್ಯ.

ತಾ :—ಈ ಪೂರ್ಣಪ್ರಜ್ಞರನ್ನು ಮಹಾಶೇಷ, ರುದ್ರ, ಗರುಡ ಮೊದಲಾದ ದೇವತೆಗಳು ಸಮಯ ನಿರೀಕ್ಷಿಸಿ ವಂದಿಸುತ್ತಿದ್ದರು. ಅಂತಹ ಇವರು ತಮಗಿಂತ ಕಡಿಮೆಯವರಾದ ಅಚ್ಯುತಪ್ರೇಕ್ಷ ಮೊದಲಾದ ಯತಿಗಳನ್ನು ವಂದಿಸಿದರು. ದೊಡ್ಡವರು ಸಾಮಾನ್ಯಜನರ ತಿಳುವಳಿಕೆಗಾಗಿ ಸಾಮಾನ್ಯ ಜನರಂತೆ ನಟಿಸುವುದು ಆಶ್ಚರ್ಯಕರವಾದುದು.

ವ್ಯಾ. ವಿ. —ಭುಜಂಗಾಶ್ಚ ಭೂತಾಶ್ಚ, ಭುಜಂಗಭೂತಾನಾಂ ಈಶೌ, ವಿಹಂಗಾನ್ ಪಾತೀತಿ = ವಿಹಂಗಪಃ, ಭುಜಂಗಭೂತೇಶೌ ಚ ವಿಹಂಗಪಶ್ಚ, ಭುಜಂಗಭೂತೇಶವಿಹಂಗಪಾಃ ಆದಯಃ ಯೇಷಾಂ ತೇ = ಭುಜಂಗಭೂತೇಶ-ವಿಹಂಗಪಾದಿಕಾಃ, ತೈಃ, ಅವಸರಸ್ಯ ಪ್ರತೀಕ್ಷಣಂ, ಅವಸರಪ್ರತೀಕ್ಷಣೇನ ಸಹಿತಾಃ = ಸಾವಸರಪ್ರತೀಕ್ಷಣಾಃ, ತೈಃ. ಗುರುಃ ಪೂರ್ವಃ ಯೇಷಾಂ ತೇ = ಗುರುಪೂರ್ವಕಾಃ, ತಾನ್.

ವರಾಶ್ರಮಾಚಾರವಿಶೇಷಶಿಕ್ಷಣಂ
ವಿಧಿತ್ಸುರಸ್ಯಾಚರಿತಂ ನಿಶಾಮಯನ್ ।

Rarest Archiver

ವಿಶೇಷಶಿಕ್ಷಾಂ ಸ್ವಯಮಾಪ್ಯ ಧೀರಧೀ-
ರ್ಯತೀಶ್ವರೋ ವಿಸ್ಮಯಮಾಯತಾಂತರಮ್ ॥ ೩೬ ॥

ಅ :—ಧೀರಧೀಃ ಯತೀಶ್ವರಃ ಅಸ್ಯ ವರಾಶ್ರಮಾಚಾರವಿಶೇಷಶಿಕ್ಷಣಂ ವಿಧಿತ್ಸುಃ ಆಚರಿತಂ ನಿಶಾಮಯನ್ ಸ್ವಯಂ ವಿಶೇಷಶಿಕ್ಷಾಂ ಆಪ್ಯ ಆಂತರಂ ವಿಸ್ಮಯಂ ಆಯತ.

ಅ :—ಧೀರಧೀಃ = ಉತ್ತಮ ಶಿಷ್ಯನು ಸಿಕ್ಕಿದ್ದರಿಂದ ಸ್ಥಿರವಾದ ಮನಸ್ಸುಳ್ಳ, ಯತೀಶ್ವರಃ = ಸಂನ್ಯಾಸಿಶ್ರೇಷ್ಠರಾದ ಅಚ್ಯುತಪ್ರೇಕ್ಷರು, ಅಸ್ಯ = ಈ ಪೂರ್ಣಪ್ರಜ್ಞರಿಗೆ, ವರಾಶ್ರಮ = ಸಂನ್ಯಾಸಾಶ್ರಮದ, ಆಚಾರವಿಶೇಷ = ಉತ್ತಮಾಚಾರದ, ಶಿಕ್ಷಣಂ = ಅಭ್ಯಾಸವನ್ನು, ವಿಧಿತ್ಸುಃ = ಮಾಡಲಪೇಕ್ಷೆಯುಳ್ಳವರಾಗಿ, ಆಚರಿತಂ = ಆಚಾರವನ್ನು, ನಿಶಾಮಯನ್ = ನೋಡುತ್ತ, ಸ್ವಯಂ = ತಾವು, ವಿಶೇಷಶಿಕ್ಷಾಂ = ಅತಿಶಯ ಶಿಕ್ಷಣವನ್ನು, ಆಪ್ಯ = ಹೊಂದಿ, ಆಂತರಂ = ಮಾನಸಿಕವಾದ, ವಿಸ್ಮಯಂ = ಆಶ್ಚರ್ಯವನ್ನು, ಆಯತ = ಹೊಂದಿದರು.

ತಾ :—ಶ್ರೇಷ್ಠ ಶಿಷ್ಯನು ಸಿಕ್ಕಿದ್ದರಿಂದ ಸ್ವಸ್ಥ ಮನಸ್ಸುಳ್ಳ ಅಚ್ಯುತಪ್ರೇಕ್ಷರು ಈ ಪೂರ್ಣಪ್ರಜ್ಞರಿಗೆ ಸಂನ್ಯಾಸಾಶ್ರಮದ ಉತ್ತಮಾಚಾರವನ್ನು ಹೇಳಿಕೊಡಲು ಬಯಸಿದರು. ಆದರೆ ಅವರು ತಾವಾಗಿಯೇ ಮಾಡುತ್ತಿರುವ ತಮಗೆ ತಿಳಿಯದ ವಿಶೇಷಾಚಾರಗಳನ್ನು ನೋಡಿ ತಾವೇ ಉತ್ತಮಾಚಾರವನ್ನು ಅವರಿಂದ ಕಲಿತವರಾಗಿ ಮನಸ್ಸಿನಲ್ಲಿಯೇ ಆಶ್ಚರ್ಯಗೊಂಡರು.

ವ್ಯಾ. ವಿ. :—ವರಶ್ಚಾಸೌ ಆಶ್ರಮಶ್ಚ, ಆಚಾರಸ್ಯವಿಶೇಷಃ, ವರಾಶ್ರಮಸ್ಯ ಆಚಾರವಿಶೇಷಃ, ವರಾಶ್ರಮಾಚಾರವಿಶೇಷಸ್ಯ ಶಿಕ್ಷಣಂ = ವರಾಶ್ರಮಾಚಾರವಿಶೇಷಶಿಕ್ಷಣಂ, ತತ್. ವಿಧಾತುಮಿಚ್ಛುಃ = ವಿಧಿತ್ಸುಃ. ವಿಶೇಷಾ ಚ ಸಾ ಶಿಕ್ಷಾ ಚ = ವಿಶೇಷಶಿಕ್ಷಾ, ತಾಮ್. ಧೀರಾ ಧೀಃ ಯಸ್ಯ ಸಃ = ಧೀರಧೀಃ. ಯತೀನಾಂ ಈಶ್ವರಃ = ಯತೀಶ್ವರಃ. ಆಯತ—ಅಯ ಗತೌ, ಒಂದನೆ ಗಣ, ಸಕ. ಲಙ್, ಆತ್ಮ. ಪ್ರ. ಏ. ಆಯತ, ಆಯೇತಾಂ, ಆಯಂತ. ಆಯಥಾಃ, ಆಯೇಥಾಮ್, ಆಯಧ್ವಮ್. ಆಯೇ, ಆಯಾವಹಿ, ಆಯಾಮಹಿ.

Rarest Archiver

ಸ ರೌಪ್ಯಪೀಠಾಲಯವಾಸಿನೇ ಯದಾ
ನನಾಮ ನಾಥಾಯ ಮಹಾಮತಿರ್ಮುದಾ ।
ತದಾಮುನಾಗ್ರಾಹಿನರಪ್ರವೇಶಿನಾ
ಭುಜೇ ಭುಜೇನಾಶು ಭುಜಂಗಶಾಯಿನಾ ॥ ೩೭ ॥

ಅ :—ಮಹಾಮತಿಃ ಸಃ ರೂಪ್ಯಪೀಠಾಲಯವಾಸಿನೇ ನಾಥಾಯ ಮುದಾ ಯದಾ ನನಾಮ, ತದಾ ನರಪ್ರವೇಶಿನಾ ಭುಜಂಗಶಾಯಿನಾ ಅಮುನಾ ಭುಜೇನ ಭುಜೇ ಆಶು ಅಗ್ರಾಹಿ.

ಅ :—ಮಹಾಮತಿಃ = ಪೂರ್ಣಜ್ಞಾನವುಳ್ಳ, ಸಃ = ಆ ಪೂರ್ಣಪ್ರಜ್ಞರು, ರೂಪ್ಯಪೀಠಾಲಯವಾಸಿನೇ = ಉಡುಪಿಯಲ್ಲಿ ವಾಸಿಸುವ, ನಾಥಾಯ = ಅನಂತಾಸನಸ್ವಾಮಿಗೆ, ಮುದಾ = ಸಂತೋಷದಿಂದ, ಯದಾ = ಯಾವಾಗ, ನನಾಮ = ವಂದಿಸಿದರೋ, ತದಾ = ಆಗ, ನರಪ್ರವೇಶಿನಾ = ಮನುಷ್ಯನಲ್ಲಿ ಆವೇಶಗೊಂಡ, ಭುಜಂಗಶಾಯಿನಾ = ಶೇಷಶಾಯಿಯಾದ, ಅಮುನಾ = ಈ ಅನಂತಾಸನದೇವರಿಂದ, ಭುಜೇನ = ತನ್ನ ತೋಳಿನಿಂದ, ಭುಜೇ = ಪೂರ್ಣಪ್ರಜ್ಞರ ತೋಳಿನಲ್ಲಿ, ಆಶು = ಜಾಗ್ರತೆಯಾಗಿ, ಅಗ್ರಾಹಿ = ಹಿಡಿದುಕೊಳ್ಳಲ್ಪಟ್ಟರು.

ತಾ :—ಈ ಪೂರ್ಣಪ್ರಜ್ಞರು ಆಶ್ರಮವನ್ನು ಸ್ವೀಕಾರಮಾಡಿದ ತರುವಾಯ ಉಡುಪಿಯಲ್ಲಿರುವ ಅನಂತಾಸನಸ್ವಾಮಿಗೆ ಸಂತೋಷದಿಂದ ನಮಸ್ಕಾರ ಮಾಡಿದರು. ಆಗ ಅವನು ಒಬ್ಬ ಮನುಷ್ಯನಲ್ಲಿ ಆವೇಶಗೊಂಡು ತನ್ನ ಕೈಯಿಂದ ಅವರ ತೋಳನ್ನು ಹಿಡಿದುಕೊಂಡನು.

ವ್ಯಾ. ವಿ. :—ರೂಪ್ಯಪೀಠೇ ಆಲಯಃ, ರೂಪ್ಯಪೀಠಾಲಯೇ ವಸ್ತುಂ ಶೀಲಮಸ್ಯೇತಿ = ರೂಪ್ಯಪೀಠಾಲಯವಾಸೀ, ತಸ್ಮೈ. ಮಹತೀ ಮತಿಃ ಯಸ್ಯ ಸಃ = ಮಹಾಮತಿಃ. ನರಂ ಪ್ರವೇಷ್ಟುಂ ಶೀಲಂ ಅಸ್ಯೇತಿ = ನರಪ್ರವೇಶೀ, ತೇನ. ಭುಜಂಗೇ ಶೇತೇ ಇತಿ = ಭುಜಂಗಶಾಯೀ, ತೇನ.

ಚಿರಾತ್ಸುತತ್ತ್ವಂ ಪ್ರಬುಭುತ್ಸುನಾ ತ್ವಯಾ
ನಿಷೇವಣಂ ಮೇ ಯದಕಾರಿ ತತ್ಫಲಮ್ ।
ಇಮಂ (ಅಮುಂ) ದದಾಮೀತ್ಯಭಿಧಾಯ ಸೋಽಮುನಾ
ತದಾ ಪ್ರಣೇಯ ಪ್ರದದೇಽಚ್ಯುತಾತ್ಮನೇ ॥ ೩೮ ॥

Rarest Archiver

ಅ :—ತದಾ ಅಮುನಾ ಪ್ರಣೀಯ ಸುತತ್ವಂ ಪ್ರಬುಭುತ್ಸುನಾ ತ್ವಯಾ ಚಿರಾತ್ ಮೇ ನಿಸೇವಣಂ ಯತ್ ಅಕಾರಿ ತತ್ಫಲಂ ಇಮಂ (ಅಮುಂ) ದದಾಮಿ ಇತಿ ಅಭಿಧಾಯ ಅಚ್ಯುತಾತ್ಮನೇ ಸಃ ಪ್ರದದೇ.

ಅ :—ತದಾ = ಆಗ, ಅಮುನಾ = ಈ ಅನಂತಾಸನಸ್ವಾಮಿಯಿಂದ, ಪ್ರಣೀಯ = ಅಚ್ಯುತಪ್ರೇಕ್ಷರ ಹತ್ತಿರ ಕರೆತಂದು, ಸುತತ್ತ್ವಂ = ಒಳ್ಳೆ ಅಧ್ಯಾತ್ಮ ತತ್ತ್ವವನ್ನು, ಪ್ರಬುಭುತ್ಸುನಾ = ತಿಳಿಯಲಪೇಕ್ಷೆಯುಳ್ಳ, ತ್ವಯಾ = ನಿಮ್ಮಿಂದ, ಚಿರಾತ್ = ಬಹಳ ಕಾಲದಿಂದ, ಮೇ = ನನ್ನ, ನಿಸೇವಣಂ = ಸೇವೆಯು, ಯತ್ = ಯಾವ ಕಾರಣದಿಂದ, ಅಕಾರಿ = ಮಾಡಲ್ಪಟ್ಟಿತೋ, ತತ್ = ಆ ಸೇವೆಯ, ಫಲಂ = ಫಲವಾದ, ಇಮಂ (ಅಮುಂ) = ಈ ಪೂರ್ಣ ಪ್ರಜ್ಞರನ್ನು ದದಾಮಿ = ಕೊಡುತ್ತೇನೆ. ಇತಿ = ಹೀಗೆಂದು, ಅಭಿಧಾಯ = ಹೇಳಿ, ಅಚ್ಯುತಾತ್ಮನೇ = ಹರಿಯಲ್ಲಿ ಮನಸ್ಸುಳ್ಳ ಅಚ್ಯುತಪ್ರೇಕ್ಷರಿಗೆ, ಸಃ = ಅವರು, ಪ್ರದದೇ = ಕೊಡಲ್ಪಟ್ಟರು.

ತಾ :—ಆ ಮನುಷ್ಯನಲ್ಲಿ ಆವೇಶಗೊಂಡ ಅನಂತಾಸನಸ್ವಾಮಿಯು ಪೂರ್ಣಪ್ರಜ್ಞರನ್ನು ಕೈಯಿಂದ ಹಿಡಿದುಕೊಂಡು ಅಚ್ಯುತಪ್ರೇಕ್ಷರ ಹತ್ತಿರ ಬಂದನು. "ಅಚ್ಯುತಪ್ರೇಕ್ಷರೇ, ನೀವು ಬಹಳಕಾಲದಿಂದ ನನ್ನ ತತ್ತ್ವವನ್ನು ತಿಳಿಯಲು ನನ್ನನ್ನು ಸೇವಿಸಿದ್ದೀರಿ. ಅದಕ್ಕೆ ಫಲವಾಗಿ ಈ ಪೂರ್ಣಪ್ರಜ್ಞರನ್ನು ನಿಮಗೆ ಕೊಡುತ್ತೇನೆ. ಇವರು ನಿಮಗೆ ಅಧ್ಯಾತ್ಮತತ್ತ್ವವನ್ನು ತಿಳಿಸುವರು" ಎಂದು ಅವರನ್ನು ಆ ಅಚ್ಯುತಪ್ರೇಕ್ಷರಿಗೆ ಒಪ್ಪಿಸಿದನು.

ವ್ಯಾ. ವಿ. :—ಪ್ರಬೋದ್ಧುಂ ಇಚ್ಛುಃ = ಪ್ರಬುಭುತ್ಸುಃ, ತೇನ. ತಸ್ಯ ಫಲಂ = ತತ್ಫಲಂ. ಅಚ್ಯುತೇ ಆತ್ಮಾ ಯಸ್ಯ ಸಃ = ಅಚ್ಯುತಾತ್ಮಾ, ತಸ್ಮೈ. ಅಕಾರಿ–ಕೃಞ್ ಧಾತು, ಕರ್ಮಣಿ, ಲಙ್, ಆತ್ಮ. ಪ್ರ. ಏ. ಅಕಾರಿ, ಅಕಾರಿಷಾತಾಂ, ಅಕಾರಿಷತ. ಅಕಾರಿಷ್ಠಾಃ, ಅಕಾರಿಷಾಥಾಂ, ಅಕಾರಿಧ್ವಂ ಅಕಾರಿಢ್ವಂ. ಅಕಾರಿಷಿ, ಅಕಾರಿಷ್ವಹಿ, ಅಕಾರಿಷ್ಮಹಿ.

ಅನುಗ್ರಹಂ ತಂ ಪ್ರತಿಗೃಹ್ಯ ಸಾಗ್ರಹಂ (ಸಾದರಂ)
ಮುದಾತ್ಮನಾಪ್ತಾಂ ಕೃತಕೃತ್ಯತಾಂ ಸ್ಮರನ್ ।
ಅಭೂದಸಂಗೋಽಪಿ ಸ ತತ್ಸುಸಂಗವಾ-
ನಸಂಗಭೂಷಾ ನನು ಸಾಧುಸಂಗಿತಾ ॥ ೩೯ ॥

Rarest Archiver

ಅ :—ಸಃ ತಂ ಅನುಗ್ರಹಂ ಸಾಗ್ರಹಂ ಮುದಾ (ಸಾದರಂ) ಪ್ರತಿಗೃಹ್ಯ ಆತ್ಮನಾ ಕೃತಕೃತ್ಯತಾಂ ಅಪ್ತಾಂ ಸ್ಮರನ್ ಅಸಂಗಃ ಅಪಿ ತತ್ಸುಸಂಗವಾನ್ ಅಭೂತ್. ಸಾಧುಸಂಗಿತಾ ಅಸಂಗಭೂಷಾ ನನು.

ಅ :—ಸಃ = ಆ ಅಚ್ಯುತಪ್ರೇಕ್ಷಾಚಾರ್ಯರು, ತಂ = ಆ, ಅನುಗ್ರಹಂ = ಅನುಗ್ರಹವನ್ನು, ಸಾಗ್ರಹಂ (ಸಾದರಂ) = ಆದರದಿಂದ ಸಹಿತವಾಗಿ, ಮುದಾ = ಸಂತೋಷದಿಂದ, ಪ್ರತಿಗೃಹ್ಯ = ಸ್ವೀಕರಿಸಿ, ಆತ್ಮನಾ = ತಮ್ಮಿಂದ, ಕೃತಕೃತ್ಯತಾಂ = ಮಾಡಲ್ಪಟ್ಟ ಪ್ರಯೋಜನವುಳ್ಳತನವನ್ನು, ಅಪ್ತಾಂ = ಹೊಂದಲ್ಪಟ್ಟದ್ದನ್ನಾಗಿ, ಸ್ಮರನ್ = ಸ್ಮರಿಸುವವರಾಗಿ, ಅಸಂಗಃ ಅಪಿ = ಸಾಮಾನ್ಯ ಜನರ ಸಹವಾಸವಿಲ್ಲದವರಾದರೂ, ತತ್ = ಆ ಪೂರ್ಣಪ್ರಜ್ಞರಲ್ಲಿ, ಸುಸಂಗವಾನ್ = ಒಳ್ಳೆ ಸಹವಾಸವುಳ್ಳವರು, ಅಭೂತ್ = ಆದರು. ಸಾಧುಸಂಗಿತಾ = ಸಜ್ಜನರ ಸಂಬಂಧವು, ಅಸಂಗ = ವಿಷಯ ಸಂಬಂಧವಿಲ್ಲದವರಿಗೆ, ಭೂಷಾ ನನು = ಅಲಂಕಾರವಷ್ಟೆ.

ತಾ :—ಆ ಅಚ್ಯುತಪ್ರೇಕ್ಷರು ಎಲ್ಲವನ್ನು ತ್ಯಜಿಸಿದ ಸಂನ್ಯಾಸಿಗಳು. ಆದರೂ ಆ ಅನಂತಾಸನಸ್ವಾಮಿಯು ಅನುಗ್ರಹರೂಪವಾಗಿ ಕೊಟ್ಟಿರುವ ಪೂರ್ಣಪ್ರಜ್ಞರನ್ನು ಸಂತೋಷದಿಂದ ಸ್ವೀಕರಿಸಿ ತಾವು ಧನ್ಯರೆಂದು ಭಾವಿಸಿದರು. ಆ ಪೂರ್ಣಪ್ರಜ್ಞರ ಸಹವಾಸವನ್ನು ಮಾಡಿದರು. ವಿಷಯಗಳನ್ನು ತ್ಯಜಿಸಿದವರಿಗೂ ಸಜ್ಜನರ ಸಹವಾಸವು ಅಲಂಕಾರರೂಪವಾದುದೆ.

ವ್ಯಾ.ವಿ. :—ಆಗ್ರಹೇಣ ಸಹಿತಂ ಯಥಾ ಭವತಿ ತಥಾ = ಸಾಗ್ರಹಂ. ಕೃತಂ ಕೃತ್ಯಂ ಯೇನ ಸಃ, ಕೃತಕೃತ್ಯಸ್ಯ ಭಾವಃ = ಕೃತಕೃತ್ಯತಾ, ತಾಮ್. ನ ವಿದ್ಯತೇ ಸಂಗಃ ಯಸ್ಯ ಸಃ = ಅಸಂಗಃ. ಶೋಭನಶ್ಚಾಸೌ ಸಂಗಶ್ಚ, ತಸ್ಮಿನ್ ಸುಸಂಗಃ, ತತ್ಸುಸಂಗಃ ಅಸ್ಯಾಸ್ತೀತಿ = ತತ್ಸುಸಂಗವಾನ್. ನ ವಿದ್ಯತೇ ಸಂಗಃ ಯೇಷಾಂ ತೇ, ಅಸಂಗಾನಾಂ ಭೂಷಾ = ಅಸಂಗಭೂಷಾ. ಸಾಧುಷು ಸಂಗಃ, ಸಾಧುಸಂಗಃ ಅಸ್ಯಾಸ್ತೀತಿ, ಸಾಧುಸಂಗಿನಃ ಭಾವಃ ಸಾಧುಸಂಗಿತಾ.

ಯಿಯಾಸತಿ ಸ್ವಸ್ತಟಿನೀಂ ಮುಹುರ್ಮುಹು- — ಸ್ವಸ್ತಟಿ
ರ್ನಮತ್ಯನುಜ್ಞಾರ್ಥಿನಿ ಭೂರಿಚೇತಸಿ । — ಗಮನೇಚ್ಛೆ
ತಮುಸ್ಮರತ್ಸ್ವಾಮಿನಮೇವ ದೂನಧೀ-
ರ್ಗುರುರ್ಭವಿಷ್ಯದ್ವಿರಹಾಗ್ನಿಶಂಕಯಾ ॥ ೪೦ ॥

ಅ :—ಸ್ವಸ್ತಟಿನೀಂ ಯಿಯಾಸತಿ ಅನುಜ್ಞಾರ್ಥಿನಿ ಭೂರಿಚೇತಸಿ ಮುಹುಃ ಮುಹುಃ ನಮತಿ ಭವಿಷ್ಯದ್ವಿರಹಾಗ್ನಿಶಂಕಯಾ ದೂನಧೀಃ ಗುರುಃ ತಂ ಸ್ವಾಮಿನಂ ಏವ ಅಸ್ಮರತ್.

ಅ :—ಸ್ವಸ್ತಟಿನೀಂ=ಗಂಗಾನದಿಯನ್ನು ಕುರಿತು, ಯಿಯಾಸತಿ= ಹೋಗಲಪೇಕ್ಷೆಯುಳ್ಳ, ಅನುಜ್ಞಾರ್ಥಿನಿ=ಅನುಮತಿಯನ್ನು ಅಪೇಕ್ಷಿಸುವ, ಭೂರಿಚೇತಸಿ=ಹೆಚ್ಚು ಬುದ್ಧಿಯುಳ್ಳ ಪೂರ್ಣಪ್ರಜ್ಞರು, ಮುಹುಃ ಮುಹುಃ ಬಾರಿಬಾರಿಗೂ, ನಮತಿ (ಸತಿ)=ನಮಸ್ಕಾರ ಮಾಡುತ್ತಿರಲು, ಭವಿಷ್ಯತ್= ಮುಂದಿನ, ವಿರಹ=ಅಗಲಿಕೆಯೆಂಬ, ಅಗ್ನಿ=ಬೆಂಕಿಯ, ಶಂಕಯಾ=ಭಯ ದಿಂದ, ದೂನಧೀಃ = ದುಃಖಗೊಂಡ ಮನಸ್ಸುಳ್ಳ, ಗುರುಃ = ಅಚ್ಯುತ-ಪ್ರೇಕ್ಷರು, ತಂ=ಆ, ಸ್ವಾಮಿನಂ ಏವ=ಅನಂತಾಸನದೇವರನ್ನೇ, ಅಸ್ಮರತ್ =ಧ್ಯಾನಿಸಿದರು.

ತಾ :—ಪೂರ್ಣಪ್ರಜ್ಞರು ಕಾಶಿಯಲ್ಲಿರುವ ಗಂಗೆಯಲ್ಲಿ ಸ್ನಾನಮಾಡಲು ಹೋಗಬೇಕೆಂದು ಅಪೇಕ್ಷಿಸಿದರು. ಅದಕ್ಕಾಗಿ ಗುರುಗಳಾದ ಅಚ್ಯುತಪ್ರೇಕ್ಷರನ್ನು ಅಪ್ಪಣೆಕೊಡಬೇಕೆಂದು ಅನೇಕ ಬಾರಿ ನಮಸ್ಕರಿಸಿ ಕೇಳಿಕೊಂಡರು. ಆದರೆ ಅಚ್ಯುತಪ್ರೇಕ್ಷರು ಅವರ ವಿರಹದುಃಖವನ್ನು ಸಹಿಸಲಾರದೆ ವ್ಯಥೆಗೊಂಡವರಾಗಿ ಆ ಅನಂತಾಸನಸ್ವಾಮಿಯನ್ನೇ ಧ್ಯಾನಿಸಿದರು.

ವ್ಯಾ.ವಿ. :—ಯಾತುಮಿಚ್ಛತೀತಿ = ಯಿಯಾಸನ್, ತಸ್ಮಿನ್, ಸ್ವಃ ತಟಿನೀ=ಸ್ವಸ್ತಟಿನೀ, ತಾಮ್. ಅನುಜ್ಞಾಂ ಅರ್ಥಯಿತುಂ ಶೀಲಮಸ್ಯೇತಿ ಅನುಜ್ಞಾರ್ಥೀ, ತಸ್ಮಿನ್. ಭೂರಿ ಚೇತಃ ಯಸ್ಯ ಸಃ = ಭೂರಿಚೇತಾಃ, ತಸ್ಮಿನ್. ದೂನಾ ಧೀಃ ಯಸ್ಯ ಸಃ = ದೂನಧೀಃ. ಭವಿಷ್ಯನ್ ಚಾಸೌ ವಿರಹಶ್ಚ, ಭವಿಷ್ಯದ್ವಿರಹಃ ಏವ ಅಗ್ನಿಃ=ಭವಿಷ್ಯದ್ವಿರಹಾಗ್ನಿಃ, ಭವಿಷದ್ವಿರ-ಹಾಗ್ನೇಃ ಶಂಕಾ=ಭವಿಷ್ಯದ್ವಿರಹಾಗ್ನಿಶಂಕಾ, ತಯಾ. ಅಸ್ಮರತ್-ಸ್ಮೃಧಾತು, ಪರಸ್ಮೈಪದ, ಲಜ್, ಪರ. ಪ್ರ. ಏ. ಅಸ್ಮರತ್, ಅಸ್ಮರತಾಂ, ಅಸ್ಮರನ್, ಅಸ್ಮರಃ, ಅಸ್ಮರತಂ, ಅಸ್ಮರತ. ಅಸ್ಮರಂ, ಅಸ್ಮರಾವ, ಅಸ್ಮರಾಮ.

ಇತಸ್ತೃತೀಯೇ ದಿವಸೇ ದ್ಯುನಿಮ್ನಗಾ
ತ್ವದರ್ಥಮಾಸ್ಥಾಕತಟಾಕಮಾವ್ರಜೇತ್ ।

Rarest Archiver

ಅತೋ ನ ಯಾಯಾ ಇತಿ ತಂ ತದಾವದ-
ತ್ಪ್ರವಿಶ್ಯ ಕಂಚಿತ್ಕರುಣಾಕರೋ ಹರಿಃ || ೪೧ ||

ಅ :—ತದಾ ಕರುಣಾಕರಃ ಹರಿಃ ಕಂಚಿತ್ ಪ್ರವಿಶ್ಯ ದ್ಯುನಿಮ್ನಗಾ ತ್ವದರ್ಥಂ ಇತಃ ತೃತೀಯೇ ದಿವಸೇ ಆಸ್ಮಾಕತಟಾಕಂ ಅವ್ರಜೇತ್. ಅತಃ ನ ಯಾಯಾಃ ಇತಿ ತಂ ಅವದತ್.

ಅ :—ತದಾ = ಆಗ, ಕರುಣಾಕರಃ = ದಯಾಳುವಾದ, ಹರಿಃ = ಅನಂತಾಸನಸ್ವಾಮಿಯು, ಕಂಚಿತ್ = ಒಬ್ಬ ಮನುಷ್ಯನನ್ನು, ಪ್ರವಿಶ್ಯ = ಆವೇಶಗೊಂಡು, ದ್ಯುನಿಮ್ನಗಾ = ಭಾಗೀರಥಿಯು, ತ್ವದರ್ಥಂ = ನಿನಗಾಗಿ, ಇತಃ = ಇಲ್ಲಿಂದ, ತೃತೀಯೇ ದಿವಸೇ = ಮೂರನೆ ದಿನ, ಆಸ್ಮಾಕ = ನಮ್ಮ, ತಟಾಕಂ = ಕೊಳಕ್ಕೆ, ಅವ್ರಜೇತ್ = ಬರುವಳು. ಅತಃ = ಈ ಕಾರಣದಿಂದ, ನ ಯಾಯಾಃ = ಹೋಗಬೇಡ. ಇತಿ = ಹೀಗೆಂದು, ತಂ = ಆ ಪೂರ್ಣಪ್ರಜ್ಞರನ್ನು ಕುರಿತು, ಅವದತ್ = ಹೇಳಿದನು.

ತಾ :—ಆಗ ದಯಾಳುವಾದ ಅನಂತಾಸನಸ್ವಾಮಿಯು ಒಬ್ಬ ಮನುಷ್ಯನಲ್ಲಿ ಆವೇಶಗೊಂಡನು. 'ಎಲೈ ಪೂರ್ಣಪ್ರಜ್ಞನೆ, ಗಂಗೆಯು ನಿನಗಾಗಿ ಇಂದಿನಿಂದ ಮೂರನೆ ದಿನ ನಮ್ಮ ಕೊಳಕ್ಕೆ ಬರುವಳು. ಆದ್ದರಿಂದ ನೀನು ಕಾಶಿಗೆ ಹೋಗಬೇಡ' ಎಂದು ಅವರಿಗೆ ಹೇಳಿದನು.

ವ್ಯಾ.ವಿ. :—ದಿವಃ ನಿಮ್ನಗಾ = ದ್ಯುನಿಮ್ನಗಾ. ತುಭ್ಯಂ = ತ್ವದರ್ಥಂ. ಅಸ್ಮಾಕಂ ಸಂಬಂಧೀ, ಆಸ್ಮಾಕಶ್ಚಾಸೌ ತಟಾಕಶ್ಚ = ಆಸ್ಮಾಕತಟಾಕಃ, ತಮ್. ಕರುಣಾಯಾಃ ಆಕರಃ = ಕರುಣಾಕರಃ. ಯಾಯಾಃ-ಯಾ ಪ್ರಾಪಣೇ, ಎರಡನೆ ಗಣ, ಸಕ./ ವಿಧಿಲಿಙ್, ಪರ. ಮ. ಏ. ಯಾಯಾತ್, ಯಾಯಾತಾಂ, ಯಾಯುಃ. ಯಾಯಾಃ, ಯಾಯಾತಂ, ಯಾಯಾತ. ಯಾಯಾಂ, ಯಾಯಾವ, ಯಾಯಾಮ.

ತದಾಜ್ಞಯೋಪಾಗತಜಾಹ್ನವೀಜಲೇ
ಜನೋಽತ್ರ ಸಸ್ನೌ ಸಹ ಪೂರ್ಣಬುದ್ಧಿನಾ ।
ತತಃ ಪರಂ ದ್ವಾದಶವತ್ಸರಾಂತರೇ
ಸದಾವ್ರಜೇತ್ಸಾ ತದನುಗ್ರಹಾಂಕಿನೀ || ೪೨ ||

Rarest Archiver

ಅ :—ಜನಃ ತದಾಜ್ಞಯಾ ಅತ್ರ ಉಪಾಗತಜಾಹ್ನವೀಜಲೇ ಪೂರ್ಣ-ಬುದ್ಧಿನಾ ಸಹ ಸಸ್ನೌ. ಸಾ ತತಃ ಪರಂ ದ್ವಾದಶವತ್ಸರಾಂತರೇ ತದನು-ಗ್ರಹಾಂಕಿನೀ ಸದಾ ಆವ್ರಜೇತ್.

ಅ :—ಜನಃ = ಜನರು, ತದಾಜ್ಞಯಾ = ಆ ಅನಂತಾಸನಸ್ವಾಮಿಯ ಅಪ್ಪಣೆಯಿಂದ, ಅತ್ರ = ಈ ಕೊಳದಲ್ಲಿ, ಉಪಾಗತಜಾಹ್ನವೀಜಲೇ = ಬಂದ ಗಂಗೆಯ ನೀರಿನಲ್ಲಿ, ಪೂರ್ಣಬುದ್ಧಿನಾ ಸಹ = ಪೂರ್ಣಪ್ರಜ್ಞರೊಡನೆ, ಸಸ್ನೌ = ಸ್ನಾನಮಾಡಿದರು. ಸಾ = ಆ ಗಂಗೆಯು, ತತಃ ಪರಂ = ಅಲ್ಲಿಂದ ಮುಂದೆ, ದ್ವಾದಶವತ್ಸರಾಂತರೇ = ಹನ್ನೆರಡು ವರ್ಷಗಳ ಮಧ್ಯದಲ್ಲಿ, ತದನುಗ್ರಹ = ಆ ಪೂರ್ಣಪ್ರಜ್ಞರಲ್ಲಿ ಮಾಡಿದ ಅನುಗ್ರಹದ, ಅಂಕಿನೀ = ಚಿಹ್ನೆಯುಳ್ಳವಳಾಗಿ, ಸದಾ = ಯಾವಾಗಲೂ, ಆವ್ರಜೇತ್ = ಬರುವಳು.

ತಾ :—ಅಲ್ಲಿಯ ಜನರೆಲ್ಲ ಆ ಅನಂತಾಸನಸ್ವಾಮಿಯ ಅಪ್ಪಣೆಯಿಂದ ಆ ಕೊಳಕ್ಕೆ ಬಂದ ಗಂಗೆಯ ನೀರಿನಲ್ಲಿ ಪೂರ್ಣಪ್ರಜ್ಞರೊಡನೆ ಮಿಂದರು. ಅನಂತರ ಆ ಪೂರ್ಣಪ್ರಜ್ಞರಿಗೆ ಅನಂತಪದ್ಮನಾಭನು ಮಾಡಿದ ಅನುಗ್ರಹವನ್ನು ಜ್ಞಾಪಿಸಿಕೊಡುತ್ತಾ ಆ ಗಂಗೆಯು ಹನ್ನೆರಡು ವರ್ಷಗಳಿಗೊಮ್ಮೆ ಆ ಕೊಳಕ್ಕೆ ಯಾವಾಗಲೂ ಬರುವಳು.

ವ್ಯಾ. ವಿ. :—ಉಪಾಗತಾ ಚ ಸಾ ಜಾಹ್ನವೀ ಚ, ಉಪಾಗತಜಾಹ್ನ-ವ್ಯಾಃ ಜಲಂ = ಉಪಾಗತಜಾಹ್ನವೀಜಲಂ, ತಸ್ಮಿನ್. ಪೂರ್ಣಾ ಬುದ್ಧಿಃ ಯಸ್ಯ ಸಃ = ಪೂರ್ಣಬುದ್ಧಿಃ, ತೇನ. ದ್ವ್ಯಧಿಕಾಃ ದಶ, ದ್ವಾದಶ ಚ ತೇ ವತ್ಸರಾಶ್ಚ, ದ್ವಾದಶವತ್ಸರಾಃ ಅಂತರಂ ಯಸ್ಯ ಸಃ = ದ್ವಾದಶವತ್ಸರಾಂತರಃ, ತಸ್ಮಿನ್. ತಸ್ಯ ಅನುಗ್ರಹಃ, ತದನುಗ್ರಹಸ್ಯ ಅಂಕಃ, ತದನುಗ್ರಹಾಂಕಃ ಅಸ್ಯಾಃ ಅಸ್ತೀತಿ = ತದನುಗ್ರಹಾಂಕಿನೀ. ಸಸ್ನೌ = ಷ್ಣಾ ಶೌಚೇ, ಎರಡನೆ ಗಣ, ಅಕ. ಲಿಟ್, ಪರ, ಪ್ರ. ಏ. ಸಸ್ನೌ, ಸಸ್ನತುಃ, ಸಸ್ನುಃ, ಸಸ್ನಿಥ ಸಸ್ನಾಥ, ಸಸ್ನಥುಃ, ಸಸ್ನ. ಸಸ್ನೌ, ಸಸ್ನಿವ, ಸಸ್ನಿಮ.

ಗತೇ ದಿನಾನಾಂ ದಶಕೇ ಸಮಾಸಕೇ
ವರಾಶ್ರಮಂ ಪ್ರಾಪ್ಯ ಸಪತ್ರಲಂಬನಮ್ ।

Rarest Archiver

**ಜಿಗಾಯ ಜೈತ್ರಾನ್ ಬಹುತರ್ಕಕರ್ಕಶಾನ್**
**ಸ ವಾಸುದೇವಾಹ್ವಯಪಂಡಿತಾದಿಕಾನ್** ॥ ೪೩ ॥

**ಅ :**—ಸಃ ಪರಾಶ್ರಮಂ ಪ್ರಾಪ್ಯ ಸಮಾಸಕೇ ದಿನಾನಾಂ ದಶಕೇ ಗತೇ ಬಹುತರ್ಕಕರ್ಕಶಾನ್ ಜೈತ್ರಾನ್ ವಾಸುದೇವಾಹ್ವಯಪಂಡಿತಾದಿಕಾನ್ ಸಪತ್ರಲಂಬನಂ ಜಿಗಾಯ.

**ಅ :**—ಸಃ = ಪೂರ್ಣಪ್ರಜ್ಞಾಚಾರ್ಯರು, ಪರಾಶ್ರಮಂ=ಸಂನ್ಯಾಸಾಶ್ರಮವನ್ನು, ಪ್ರಾಪ್ಯ ಹೊಂದಿ, ಸಮಾಸಕೇ=ತಿಂಗಳಿನಿಂದ ಸಹಿತವಾದ, ದಿನಾನಾಂ=ದಿವಸಗಳ, ದಶಕೇ=ಹತ್ತು, ಗತೇ=ಕಳೆಯಲು, ಬಹು=ಬಹಳವಾದ, ತರ್ಕಕರ್ಕಶಾನ್=ಅನುಮಾನಗಳಿಂದ ಕಠಿನರಾದ, ಜೈತ್ರಾನ್=ಜಯಶೀಲರಾದ, ವಾಸುದೇವಾಹ್ವಯ = ವಾಸುದೇವನೆಂದು ಹೆಸರುಳ್ಳ ಪಂಡಿತಾದಿಕಾನ್=ಪಂಡಿತರೇ ಮೊದಲಾದವರನ್ನು, ಸಪತ್ರಲಂಬನಂ=ಜಯಪತ್ರವನ್ನು ಬರೆದುಕೊಡುವುದರಿಂದ ಸಹಿತವಾಗಿ, ಜಿಗಾಯ=ಗೆದ್ದರು.

**ತಾ :**—ಆ ಪೂರ್ಣಪ್ರಜ್ಞಾಚಾರ್ಯರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಒಂದು ತಿಂಗಳು ಹತ್ತು ದಿವಸಗಳಾದುವು. ಆಗ ಅವರನ್ನು ಜಯಿಸಲು ವಾಸುದೇವ ಪಂಡಿತನೇ ಮೊದಲಾದ ತರ್ಕಶಾಸ್ತ್ರದಲ್ಲಿ ಬುದ್ಧಿಶಾಲಿಗಳಾಗಿ, ಎಲ್ಲರನ್ನೂ ಜಯಿಸಿದ ಪಂಡಿತರು ವಾದಕ್ಕೆ ಬಂದರು. ಆಗ ಆಚಾರ್ಯರು ಅವರನ್ನೆಲ್ಲ ವಾದದಲ್ಲಿ ಗೆದ್ದು ಅವರಿಂದ ಜಯಪತ್ರವನ್ನು ಬರೆಸಿಕೊಂಡರು.

**ವಿಶೇಷಾಂಶ :**—

ತ್ರಿದಿನಂ ಯ ಉಪನ್ಯಾಸಂ ವ್ಯಧಾದ್ವಿದ್ವಾನ್ ನಿರಂತರಂ ।
ವೈಶೇಷಿಕಾಗ್ರ್ಯೋ ವಿಜಿತೋ ವಾಸುದೇವಾಹ್ವಯೋಽಮುನಾ ॥

ಮೂರುದಿನ ನಿರಂತರವಾಗಿ ಶಾಸ್ತ್ರೋಪನ್ಯಾಸ ಮಾಡಿದ ವೈಶೇಷಿಕ ಪಂಡಿತವಾಸುದೇವನು ಆಚಾರ್ಯರಿಂದ ಪರಾಜಿತನಾದನು. (ಭಾ. ಪ್ರ.)

**ವ್ಯಾ. ವಿ. :**—ಮಾಸೇನ ಸಹಿತಂ=ಸಮಾಸಕಂ, ತಸ್ಮಿನ್. ಪರಶ್ಚಾಸೌ ಆಶ್ರಮಶ್ಚ=ಪರಾಶ್ರಮಃ, ತಮ್. ಪತ್ರಲಂಬನೇನ ಸಹಿತಂ ಯಥಾ ಭವತಿ

Rarest Archiver

ತಥಾ=ಸಪತ್ರಲಂಬನವನ್. ಬಹವಶ್ಚ ತೇ ತರ್ಕಾಶ್ಚ, ಬಹುತರ್ಕೈಃ ಕರ್ಕಶಾಃ-=ಬಹುತರ್ಕಕರ್ಕಶಾಃ, ತಾನ್. ವಾಸುದೇವ ಇತಿ ಆಹ್ವಯಃ ಯಸ್ಯ ಸಃ, ವಾಸುದೇವಾಹ್ವಯಶ್ಚಾಸೌ ಪಂಡಿತಶ್ಚ, ವಾಸುದೇವಾಹ್ವಯಪಂಡಿತಃ ಆದಿಃ ಯೇಷಾಂ ತೇ=ವಾಸುದೇವಾಹ್ವಯಪಂಡಿತಾದಿಕಾಃ, ತಾನ್.

ಗುರೋಃ ಸ್ವಶಿಷ್ಯಂ ಚತುರಂ ಚಿಕೀರ್ಷತಃ
ಪ್ರಚೋದನಾಚ್ಛ್ರೋತುಮಿಹೋಪಚಕ್ರಮೇ ।
ಅಥೇಷ್ಟಸಿದ್ಧಿಶ್ಛಲಜಾತಿವಾರಿಧಿ-
ರ್ನಿರಾದರೇಣಾಪಿ ಮಹಾತ್ಮನಾಮುನಾ ॥ ೪೪ ॥

ಅ :—ಅಥ ಮಹಾತ್ಮನಾ ಅಮುನಾ ಇಹ ನಿರಾದರೇಣ ಅಪಿ ಛಲಜಾತಿವಾರಿಧಿಃ ಇಷ್ಟಸಿದ್ಧಿಃ ಸ್ವಶಿಷ್ಯಂ ಚತುರಂ ಚಿಕೀರ್ಷತಃ ಗುರೋಃ ಪ್ರಚೋದನಾತ್ ಶ್ರೋತುಂ ಉಪಚಕ್ರಮೇ.

ಅ :—ಅಥ=ತರುವಾಯ, ಮಹಾತ್ಮನಾ=ಮಹಾತ್ಮರಾದ, ಅಮುನಾ ಈ ಪೂರ್ಣಪ್ರಜ್ಞಾಚಾರ್ಯರಿಂದ, ಇಹ=ಈ ಇಷ್ಟಸಿದ್ಧಿಯೆಂಬ ಗ್ರಂಥದಲ್ಲಿ, ನಿರಾದರೇಣ ಅಪಿ=ಆಸಕ್ತಿಯಿಲ್ಲದವರಾದಾಗ್ಯೂ, ಛಲ=ಛಲೋತ್ತರ, ಜಾತಿ =ಜಾತ್ಯುತ್ತರ, ಇವುಗಳಿಂದ, ವಾರಿಧಿಃ=ಸಮುದ್ರದಂತೆ ಪೂರ್ಣವಾದ, ಇಷ್ಟ ಸಿದ್ಧಿಃ=ಮಾಯಾವಾದಿಗಳು ಹೇಳುವ ಜೀವಾತ್ಮೈಕ್ಯವನ್ನು ಬೋಧಿಸುವ ಇಷ್ಟ ಸಿದ್ಧಿಯೆಂಬ ಗ್ರಂಥವು, ಸ್ವಶಿಷ್ಯಂ=ತಮ್ಮ ಶಿಷ್ಯನನ್ನು, ಚತುರಂ= ಕುಶಲನನ್ನಾಗಿ, ಚಿಕೀರ್ಷತಃ=ಮಾಡಲಿಚ್ಛಿಸುವ, ಗುರೋಃ=ಅಚ್ಯುತ-ಪ್ರೇಕ್ಷಾಚಾರ್ಯರ, ಪ್ರಚೋದನಾತ್=ಪ್ರೇರಣೆಯಿಂದ, ಶ್ರೋತುಂ=ಕೇಳುವುದಕ್ಕೆ, ಉಪಚಕ್ರಮೇ=ಆರಂಭಿಸಲ್ಪಟ್ಟಿತು.

ತಾ :—ಅಚ್ಯುತಪ್ರೇಕ್ಷಾಚಾರ್ಯರು ತಮ್ಮ ಶಿಷ್ಯರಾದ ಪೂರ್ಣಪ್ರಜ್ಞರನ್ನು ಬುದ್ಧಿವಂತರನ್ನಾಗಿ ಮಾಡಬೇಕೆಂದು ಬಯಸಿದರು. ಅದರಿಂದವರು ಛಲೋತ್ತರ ಜಾತ್ಯುತ್ತರಗಳಿಂದ ತುಂಬಿ ದೋಷಪೂರ್ಣವಾದ, ಜೀವ ಮತ್ತು ಬ್ರಹ್ಮರಿಗೆ ಭೇದವಿಲ್ಲವೆಂದು ಬೋಧಿಸುವ ಅದ್ವೈತ ಗ್ರಂಥವಾದ ಇಷ್ಟಸಿದ್ಧಿಯನ್ನು ಕೇಳಬೇಕೆಂದು ಪ್ರೇರಿಸಿದರು. ಮಹಾತ್ಮರಾದ ಪೂರ್ಣಪ್ರಜ್ಞರು ತಮಗೆ ಅದರಲ್ಲಿ ಆಸಕ್ತಿಯಿಲ್ಲದಿದ್ದರೂ ಅದನ್ನು ಕೇಳಲು ಆರಂಭಿಸಿದರು-

Rarest Archiver

ವ್ಯಾ.ವಿ. :—ಸ್ವಸ್ಯ ಶಿಷ್ಯಃ=ಸ್ವಶಿಷ್ಯಃ, ತವನ್. ಕರ್ತುಮಿಚ್ಛನ್= ಚಿಕೀರ್ಷನ್, ತಸ್ಯ. ಇಷ್ಟಾ ಸಿದ್ಧಿಃ ಯೇನ ಸಃ=ಇಷ್ಟಸಿದ್ಧಿಃ (ಗ್ರಂಥಃ), ಫಲಾನಿ ಚ ಜಾತಯಶ್ಚ, ಫಲಜಾತೀನಾಂ ವಾರಿಧಿಃ=ಫಲಜಾತಿವಾರಿಧಿಃ, ನಿರ್ಗತಃ ಆದರಃ ಯಸ್ಮಾತ್ಸಃ=ನಿರಾದರಃ, ತೇನ. ಉಪಚಕ್ರಮೇ-ಕ್ರಮು ಪಾದವಿಕ್ಷೇಪೇ, ಒಂದನೇ ಗಣ, ಸಕ. ಲಿಟ್, ಆತ್ಮ. ಪ್ರ. ಏ. ಉಪ ಉಪಸರ್ಗ. ಉಪ ಎಂಬ ಉಪಸರ್ಗದಿಂದ ಕೂಡಿದ ಕ್ರಮಧಾತುವು ಇಲ್ಲಿ 'ಉಪಪರಾಭ್ಯಾಂ' ಈ ಸೂತ್ರದಿಂದ ಆತ್ಮನೇಪದವಾಗಿದೆ. ಉಪ+ಚಕ್ರಮೇ, ಚಕ್ರಮಾತೇ, ಚಕ್ರಮಿರೇ. ಚಕ್ರಮಿಷೇ, ಚಕ್ರಮಾಥೇ, ಚಕ್ರಮಿಧ್ವೇ. ಚಕ್ರಮೇ, ಚಕ್ರಮಿವಹೇ, ಚಕ್ರಮಿಮಹೇ.

ತದಾದ್ಯಪದ್ಯಸ್ಥಮವದ್ಯಮಂಡಲಂ
ಯದಾವದತ್ ಷೋಡಶಕದ್ವಯಾತ್ಮಕಮ್ ।
ಉಪರ್ಯಪಾಸ್ತಂ ತದಿತಿ ಬ್ರುವತ್ಯಸೌ
ಗುರೌ ತಮೂಚೇ ಪ್ರಣಿಗದ್ಯತಾಮಿತಿ ॥ ೪೫ ॥

ಅ :—ಅಸೌ ತದಾದ್ಯಪದ್ಯಸ್ಥಂ ಷೋಡಶಕದ್ವಯಾತ್ಮಕಂ ಅವದ್ಯಮಂಡಲಂ ಯದಾ ಅವದತ್ (ತದಾ) ತತ್ ಉಪರಿ ಅಪಾಸ್ತಂ ಇತಿ ಗುರೌ ಬ್ರುವತಿ ತತ್ ಪ್ರಣಿಗದ್ಯತಾಂ ಇತಿ ಊಚೇ.

ತಾ :—ಅಸೌ = ಈ ಪೂರ್ಣಪ್ರಜ್ಞರು, ತತ್ = ಆ ಇಷ್ಟಸಿದ್ಧಿ ಗ್ರಂಥದ, ಆದ್ಯಪದ್ಯಸ್ಥಂ = ಮೊದಲಿನ ಶ್ಲೋಕದಲ್ಲಿರುವ, ಷೋಡಶಕದ್ವಯಾತ್ಮಕಂ=ಮೂವತ್ತೆರಡು, ಅವದ್ಯಮಂಡಲಂ=ದೋಷಸಮೂಹವನ್ನು, ಯದಾ=ಯಾವಾಗ, ಅವದತ್=ಹೇಳಿದರೊ (ತದಾ=ಆಗ), ತತ್=ಆ ದೋಷಸಮೂಹವು, ಉಪರಿ = ಮುಂದಿನ ಗ್ರಂಥದಲ್ಲಿ, ಅಪಾಸ್ತಂ ಇತಿ= ನಿವಾರಿಸಲ್ಪಟ್ಟಿದೆ ಎಂದು, ಗುರೌ=ಗುರುಗಳಾದ ಅಚ್ಯುತಪ್ರೇಕ್ಷರು, ಬ್ರುವತಿ = ಹೇಳುತ್ತಿರಲು, ತತ್=ಅದು, ಪ್ರಣಿಗದ್ಯತಾಂ=ಹೇಳಲ್ಪಡಲಿ. ಇತಿ= ಹೀಗೆಂದು, ಊಚೇ=ಹೇಳಿದರು.

ತಾ :—ಈ ಪೂರ್ಣಪ್ರಜ್ಞರು ಆ ಇಷ್ಟಸಿದ್ಧಿಯೆಂಬ ಗ್ರಂಥದ ಮೊದಲಿನ ಪದ್ಯದಲ್ಲಿಯೇ ಮೂವತ್ತೆರಡು ದೋಷಗಳಿವೆ ಎಂದರು. ಗುರುಗಳು 'ಆ ದೋಷ

Rarest Archiver

ಗಳನ್ನೆಲ್ಲ ಮುಂದಿನ ಗ್ರಂಥದಲ್ಲಿ ಪರಿಹರಿಸಿದ್ದಾರೆ’ ಎಂದು ಹೇಳಿದರು. ಆಗ ಪೂರ್ಣಪ್ರಜ್ಞರು ‘ಹಾಗಾದರೆ ಅದನ್ನು ಹೇಳಿ’ ಎಂದು ಕೇಳಿದರು.

ವ್ಯಾ.ವಿ. :—ಆದ್ಯಂ ಚ ತತ್ ಪದ್ಯಂ ಚ, ತಸ್ಯ ಆದ್ಯಪದ್ಯಂ, ತದಾದ್ಯಪದ್ಯೇ ತಿಷ್ಠತೀತಿ=ತದಾದ್ಯಪದ್ಯಸ್ಥಮ್, ಅವದ್ಯಾನಾಂ ಮಂಡಲಂ ಅವದ್ಯಮಂಡಲಂ. ಷಡಧಿಕಾಃ ದಶ=ಷೋಡಶ, ಷೋಡಶಾನಾಂ ಸಮೂಹಃ =ಷೋಡಶಕಂ, ಷೋಡಶಕಸ್ಯ ದ್ವಯಂ, ಷೋಡಶಕದ್ವಯಂ ಆತ್ಮಾ ಯಸ್ಯ ತತ್=ಷೋಡಶಕದ್ವಯಾತ್ಮಕಮ್. ಪ್ರಣಿಗದ್ಯತಾಂ-ಗದ ವ್ಯಕ್ತಾಯಾಂ ವಾಚಿ, ಒಂದನೆ ಗಣ, ಸಕ. ಕರ್ಮಣಿ, ಲೋಟ್, ಆತ್ಮ. ಪ್ರ. ಏ. ಪ್ರ, ನಿ ಉಪಸರ್ಗಗಳು. ಪ್ರ+ಗದ್ಯತಾಂ, ಗದ್ಯೇತಾಂ, ಗದ್ಯಂತಾಮ್. ಗದ್ಯಸ್ವ, ಗದ್ಯೇಥಾಂ, ಗದ್ಯಧ್ವಂ. ಗದ್ಯೈ, ಗದ್ಯಾವಹೈ, ಗದ್ಯಾಮಹೈ.

ಭವತ್ಪ್ರವಕ್ತೃತ್ವಸಮರ್ಥತಾ ನ ಮೇ
ಸಕೋಪಮಿತ್ಥಂ ವದತಿ ಪ್ರತೀಶ್ವರೇ ।
ಅಪೀಹ ಮಾಯಾಸಮಯೇ ಪಟೌ ನೃಣಾಂ
ಬಭೂವ ತದ್ದೂಷಣಸಂಶಯಾಂಕುರಃ || ೪೬ ||

ಅ :—ಇಹ ಮಾಯಾಸಮಯೇ ಪಟೌ ಅಪಿ ಪ್ರತೀಶ್ವರೇ ಮೇ ಭವತ್ಪ್ರವಕ್ತೃತ್ವಸಮರ್ಥತಾ ನ, ಇತ್ಥಂ ಸಕೋಪಂ ವದತಿ (ಸತಿ) ನೃಣಾಂ ತದ್ದೂಷಣಸಂಶಯಾಂಕುರಃ ಬಭೂವ.

ಅ :—ಇಹ=ಈ, ಮಾಯಾಸಮಯೇ=ಅದ್ವೈತಸಿದ್ಧಾಂತದಲ್ಲಿ, ಪಟೌ ಅಪಿ=ಸಮರ್ಥರಾದರೂ, ಪ್ರತೀಶ್ವರೇ=ಯತಿಶ್ರೇಷ್ಠರಾದ ಅಚ್ಯುತಪ್ರೇಕ್ಷರು, ಮೇ=ನನಗೆ, ಭವತ್=ನಿನಗೆ, ಪ್ರವಕ್ತೃತ್ವಸಮರ್ಥತಾ=ಪ್ರವಚನ ಮಾಡುವ ಶಕ್ತಿಯು, ನ=ಇಲ್ಲ. ಇತ್ಥಂ=ಹೀಗೆ, ಸಕೋಪಂ=ಕೋಪದಿಂದ ಸಹಿತವಾಗಿ, ವದತಿ (ಸತಿ)=ಹೇಳುತ್ತಿರಲು, ನೃಣಾಂ=ಅಲ್ಲಿ ಕೇಳುತ್ತಿರುವ ಜನರಿಗೆ, ತದ್ದೂಷಣ=ಪೂರ್ಣಪ್ರಜ್ಞರು ಹೇಳಿದ ಆ ಗ್ರಂಥದ ದೋಷದ ವಿಷಯದಲ್ಲಿ, ಸಂಶಯಾಂಕುರಃ=ಸಂದೇಹದ ಮೊಳಕೆಯು, ಬಭೂವ=ಉಂಟಾಯಿತು.

Rarest Archiver

ತಾ :—ಆಗ ಅಚ್ಯುತಪ್ರೇಕ್ಷರು ಜೀವಬ್ರಹ್ಮರಿಗೆ ಭೇದವಿಲ್ಲ. ಜೀವ ಬ್ರಹ್ಮರು ಬೇರೆ ಬೇರೆ ಎಂಬುದು ಮಾಯೆಯಿಂದ ಕಲ್ಪಿಸಲ್ಪಟ್ಟಿದು ಎಂಬ ಅದ್ವೈತ ಸಿದ್ಧಾಂತದಲ್ಲಿ ತಾವು ನಿಪುಣರಾದರೂ ಉತ್ತರ ಹೇಳಲು ಸಾಧ್ಯವಾಗದೆ ಇರುವುದರಿಂದುಂಟಾದ ಕೋಪದಿಂದ, ನನಗೆ ನಿನಗೆ ವಿವರಣೆಮಾಡಿ ಹೇಳಲು ಶಕ್ತಿಯಿಲ್ಲ, ಎಂದರು. ಆಗ ಅಲ್ಲಿ ನೆರೆದಿದ್ದ, ಗುರುಶಿಷ್ಯರ ವಿವಾದವನ್ನು ಕೇಳುತ್ತಿದ್ದ ಜನರಿಗೆ ಅದ್ವೈತಸಿದ್ಧಾಂತವು ಸರಿಯಿಲ್ಲವೊ ಏನೋ ? ಎಂದು ಸಂದೇಹ ವುಂಟಾಯಿತು.

ವ್ಯಾ. ವಿ. :—ಪ್ರವಕ್ತುಃ ಭಾವಃ=ಪ್ರವಕ್ತೃತ್ವಂ, ಭವತಃ ಪ್ರವಕ್ತೃತ್ವಂ=ಭವತ್ಪ್ರವಕ್ತೃತ್ವಂ. ಭವತ್ಪ್ರವಕ್ತೃತ್ವೇ ಸಮರ್ಥತಾ=ಭವತ್ಪ್ರವಕ್ತೃತ್ವಸಮರ್ಥತಾ. ಕೋಪೇನ ಸಹಿತಂ ಯಥಾ ಭವತಿ ತಥಾ=ಸಕೋಪಂ. ವ್ರತಿನಾಂ ಈಶ್ವರಃ=ವ್ರತೀಶ್ವರಃ, ತಸ್ಮಿನ್. ಮಾಯಾಯಾಃ ಸಮಯಃ=ಮಾಯಾಸಮಯಃ, ತಸ್ಮಿನ್. ತಸ್ಯ ದೂಷಣಂ, ತದ್ದೂಷಣೇ ಸಂಶಯಾಂಕುರಃ=ತದ್ದೂಷಣಸಂಶಯಾಂಕುರಃ.

ಬುಧೋಽಭಿಧಾನಂ ಶ್ರವಣಂ ಬುಧೇತರೋ
ಧ್ರುವಂ ವಿದಧ್ಯಾದ್ವಿಮುಮುಕ್ಷುರಾತ್ಮನಃ ।
ಯತಿರ್ವಿಶೇಷಾದಿತಿ ಲೋಕಚೋದನಾ-
ತ್ಪ್ರವಕ್ತಿ ಮಾಯಾಸಮಯಂ ಸ್ಮ ಪೂರ್ಣಧೀಃ ॥ ೪೭ ॥

ಅ :—ಆತ್ಮನಃ ವಿಮುಮುಕ್ಷುಃ ಬುಧಃ ಧ್ರುವಂ ಅಭಿಧಾನಂ ವಿದಧ್ಯಾತ್. ಬುಧೇತರಃ ಶ್ರವಣಂ ವಿದಧ್ಯಾತ್. ಯತಿಃ ವಿಶೇಷಾತ್ ಇತಿ ಲೋಕಚೋದನಾತ್ ಪೂರ್ಣಧೀಃ ಮಾಯಾಸಮಯಂ ಪ್ರವಕ್ತಿ ಸ್ಮ.

ಅ :—ಆತ್ಮನಃ=ತನಗೆ, ವಿಮುಮುಕ್ಷುಃ=ಮೋಕ್ಷವನ್ನು ಅಪೇಕ್ಷಿಸುವ, ಬುಧಃ=ವಿದ್ವಾಂಸನು, ಧ್ರುವಂ=ನಿಶ್ಚಯವಾಗಿಯೂ, ಅಭಿಧಾನಂ=ವಿವರಣೆಯನ್ನು, ವಿದಧ್ಯಾತ್ = ಮಾಡಬೇಕು. ಬುಧೇತರಃ=ಪಂಡಿತನಲ್ಲದವನು, ಶ್ರವಣಂ=ಕೇಳುವಿಕೆಯನ್ನು, ವಿದಧ್ಯಾತ್ = ಮಾಡಬೇಕು. ಯತಿಃ=ಎಲ್ಲವನ್ನೂ ತ್ಯಜಿಸಿದ ಸಂನ್ಯಾಸಿಯು, ವಿಶೇಷಾತ್=ಅತಿಶಯದಿಂದ

Rarest Archiver

(ವ್ಯಾಖ್ಯಾನವನ್ನಾಗಲಿ, ಕೇಳುವಿಕೆಯನ್ನಾಗಲಿ ಮಾಡಬೇಕು) ಇತಿ= ಹೀಗೆಂದು, ಲೋಕಚೋದನಾತ್ = ಅಲ್ಲಿ ನೆರೆದ ಜನಗಳ ಪ್ರೇರಣೆಯಿಂದ, ಪೂರ್ಣಧೀಃ = ಪೂರ್ಣಪ್ರಜ್ಞರು, ಮಾಯಾಸಮಯಂ = ಅದ್ವೈತಶಾಸ್ತ್ರವನ್ನು, ಪ್ರವಕ್ತಿ ಸ್ಮ = ವ್ಯಾಖ್ಯಾನ ಮಾಡಿದರು.

ತಾ :—ಪ್ರಪಂಚದಲ್ಲಿ ತನಗೆ ಮೋಕ್ಷವನ್ನು ಬಯಸುವ ವಿದ್ವಾಂಸನು ಜನರಿಗೆ ಶಾಸ್ತ್ರವನ್ನು ವಿವರಿಸಿ ಹೇಳಬೇಕಾದುದು ಅತ್ಯಾವಶ್ಯಕ. ವಿದ್ವಾಂಸನಲ್ಲದವನು ಮೋಕ್ಷವನ್ನು ಪಡೆಯಲೋಸುಗ ತಾನೇ ಶಾಸ್ತ್ರವನ್ನು ಕೇಳಬೇಕು. ಎಲ್ಲವನ್ನೂ ತ್ಯಜಿಸಿದ ಸಂನ್ಯಾಸಿಯು ಗೃಹಸ್ಥನಿಗಿಂತ ಶ್ರೇಷ್ಠನಾದ್ದರಿಂದ ವಿವರಣೆಯನ್ನಾಗಲಿ, ಕೇಳುವುದನ್ನಾಗಲಿ ಅವಶ್ಯಕವಾಗಿ ಮಾಡಬೇಕು. ಆದ್ದರಿಂದ ಯತಿಗಳಾದ ನೀವು ಮಾಯಾವಾದ ಸಿದ್ಧಾಂತವನ್ನು ವಿವರಿಸಿ ಎಂದು ಜನರು ಒತ್ತಾಯಮಾಡಿ ಹೇಳಲು ಪೂರ್ಣಪ್ರಜ್ಞರು ಹಾಗೆಯೇ ಆ ಸಿದ್ಧಾಂತವನ್ನು ವಿವರಿಸಿದರು.

ವ್ಯಾ.ವಿ. :—ಬುಧಾತ್ ಇತರಃ=ಬುಧೇತರಃ. ವಿಮೋಕ್ತುಮಿಚ್ಛುಃ =ವಿಮುಮುಕ್ಷುಃ. ಲೋಕಸ್ಯ ಚೋದನಂ=ಲೋಕಚೋದನಂ, ತಸ್ಮಾತ್. ಮಾಯಾಯಾಃ ಸಮಯಃ=ಮಾಯಾಸಮಯಃ. ಪೂರ್ಣಾ ಧೀಃ ಯಸ್ಯ ಸಃ =ಪೂರ್ಣಧೀಃ. ವಿದಧ್ಯಾತ್–ಡು ಧಾಞ್ ಧಾರಣಪೋಷಣಯೋಃ ಧಾತು, ವಿಧಿಲಿಙ್, ಪರ. ಪ್ರ. ಏ. ವಿ ಉಪಸರ್ಗ. ವಿ+ದಧ್ಯಾತ್, ದಧ್ಯಾತಾಂ, ದಧ್ಯುಃ. ದಧ್ಯಾಃ, ದಧ್ಯಾತಂ, ದಧ್ಯಾತ. ದಧ್ಯಾಂ ದಧ್ಯಾವ, ದಧ್ಯಾಮ. ವಕ್ತಿ–ವಚ ಪರಿಭಾಷಣೇ, ಎರಡನೆ ಗಣ, ಸಕ. ಲಟ್, ಪರ. ಪ್ರ. ಏ. ಈ ಧಾತುವಿಗೆ ಬಹುವಚನದಲ್ಲಿ ಪ್ರಯೋಗವಿಲ್ಲವೆಂದು ಕೆಲವರು. ವಕ್ತಿ, ವಕ್ತಃ, ವಕ್ಷಿ, ವಕ್ಥಃ. ವಚ್ಮಿ, ವಚ್ವಃ.

ಅಖಂಡಿತೋಪನ್ಯಸನಂ ವಿಸಂಶಯಂ
ಸಸಂಪ್ರದಾಯಂ ಪ್ರವಚೋ ದೃಢೋತ್ತರಮ್ ।
ಸಮಾಗಮಂಚ್ಯೋ ್ರತುಮಮುಷ್ಯ ಸಾಗ್ರಹಾ
ಜನಾಃ ಶ್ರುತಾಢ್ಯಾಶ್ಚತುರಾ ಬುಭೂಷವಃ ॥ ೪೮ ॥

ಅ :—ಶ್ರುತಾಢ್ಯಾಃ ಜನಾಃ ಚತುರಾಃ ಬುಭೂಷವಃ ಅಖಂಡಿತೋ-

Rarest Archive

ಪನ್ಯಸನಂ ವಿಸಂಶಯಂ ದೃಢೋತ್ತರಂ ಸಸಂಪ್ರದಾಯಂ ಅಮುಷ್ಯ ಪ್ರವಚಃ ಶ್ರೋತುಂ ಸಾಗ್ರಹಾಃ ಸಮಾಗಮನ್.

ಅ :—ಶ್ರುತಾಢ್ಯಾಃ = ಶಾಸ್ತ್ರಶ್ರವಣವನ್ನು ಮಾಡಿದ, ಜನಾಃ = ಜನರು, ಚತುರಾಃ = ಜಾಣರು, ಬುಭೂಷವಃ = ಆಗಲು ಅಪೇಕ್ಷೆಯುಳ್ಳವರಾಗಿ, ಅಖಂಡಿತೋಪನ್ಯಸನಂ = ಎಡೆಬಿಡದ ಉಪನ್ಯಾಸವುಳ್ಳ, ವಿಸಂಶಯಂ = ಸಂದೇಹವಿಲ್ಲದ, ದೃಢೋತ್ತರಂ = ಸ್ಥಿರವಾದ ಉತ್ತರವುಳ್ಳ, ಸಸಂಪ್ರದಾಯಂ = ಶಾಸ್ತ್ರಮರ್ಯಾದೆಯಿಂದ ಸಹಿತವಾದ, ಅಮುಷ್ಯ = ಈ ಪೂರ್ಣಪ್ರಜ್ಞರ, ಪ್ರವಚಃ = ವ್ಯಾಖ್ಯಾನವನ್ನು, ಶ್ರೋತುಂ = ಕೇಳುವುದಕ್ಕಾಗಿ, ಸಾಗ್ರಹಾಃ = ಆಸಕ್ತಿಯಿಂದ ಸಹಿತರಾಗಿ, ಸಮಾಗಮನ್ = ಬಂದರು.

ತಾ :—ಶಾಸ್ತ್ರಗಳನ್ನು ಓದಿದ ಜನರು ತಾವು ಪೂರ್ಣಪ್ರಜ್ಞರ ವ್ಯಾಖ್ಯಾನವನ್ನು ಕೇಳಿ ಬುದ್ಧಿಶಾಲಿಗಳಾಗಬೇಕೆಂದು ಬಯಸಿದರು. ಅವರು ಆ ಆಚಾರ್ಯರ ತಡೆಯಿಲ್ಲದ ವಾಗ್ಧೋರಣೆಯುಳ್ಳ, ಸಂಶಯವಿಲ್ಲದ, ಸ್ಥಿರೋತ್ತರವುಳ್ಳ ಶಾಸ್ತ್ರಸಂಪ್ರದಾಯವನ್ನು ಅನುಸರಿಸಿದ ಶಾಸ್ತ್ರವಿವರಣೆಯನ್ನು ಕೇಳಲು ಆಸಕ್ತಿಯಿಂದ ಅಲ್ಲಿಗೆ ಬಂದರು.

ವ್ಯಾ.ವಿ. :—ನ ಖಂಡಿತಂ, ಅಖಂಡಿತಂ ಉಪನ್ಯಸನಂ ಯಸ್ಮಿನ್ ತತ್ = ಅಖಂಡಿತೋಪನ್ಯಸನಮ್. ವಿಗತಃ ಸಂಶಯಃ ಯಸ್ಮಾತ್ತತ್ = ವಿಸಂಶಯಮ್. ದೃಢಾನಿ ಉತ್ತರಾಣಿ ಯಸ್ಮಿನ್ ತತ್ = ದೃಢೋತ್ತರಮ್. ಶ್ರುತೇನ ಆಢ್ಯಾಃ = ಶ್ರುತಾಢ್ಯಾಃ.

ಗುರೋರುಪಾಂತೇ ಶ್ರವಣೇ ರತೈರ್ದ್ವಿಜೈಃ
ಸ ಪಂಚಷೈರ್ಭಾಗವತೇ ಕದಾಚನ ।
ಬಹುಪ್ರಕಾರೇ ಲಿಖಿತೇ ತು ವಾಚಿತೇ
ಪ್ರಕಾರಮೇಕಂ ಪ್ರಭುರಭ್ಯಧಾದ್ದೃಢಮ್ ॥ ೪೯ ॥

ಅ :—ಕದಾಚನ ಗುರೋಃ ಉಪಾಂತೇ ಶ್ರವಣೇ ರತೈಃ ಪಂಚಷೈಃ ದ್ವಿಜೈಃ ಬಹುಪ್ರಕಾರೇ ಲಿಖಿತೇ ಭಾಗವತೇ ವಾಚಿತೇ ತು ಪ್ರಭುಃ ಸಃ ದೃಢಂ ಏಕಂ ಪ್ರಕಾರಂ ಅಭ್ಯಧಾತ್.

Rarest Archiver

ಅ :—ಕದಾಚನ = ಒಂದಾನೊಂದು ವೇಳೆ, ಗುರೋಃ = ಅಚ್ಯುತ ಪ್ರೇಕ್ಷಾಚಾರ್ಯರ, ಉಪಾಂತೇ=ಹತ್ತಿರ, ಶ್ರವಣೇ=ಕೇಳುವುದರಲ್ಲಿ, ರಕ್ತೈಃ= ಆಸಕ್ತರಾದ, ಪಂಚಷೈಃ = ಐದಾರು ಮಂದಿ, ದ್ವಿಜೈಃ = ಬ್ರಾಹ್ಮಣರಿಂದ, ಬಹುಪ್ರಕಾರೇ=ಅನೇಕ ರೀತಿಯುಳ್ಳ, ಲಿಖಿತೇ=ಬರೆಯಲ್ಪಟ್ಟ, ಭಾಗವತೇ =ಭಾಗವತಗ್ರಂತವು, ವಾಚಿತೇ ತು=ಓದಲ್ಪಡಲು, ಪ್ರಭುಃ=ಸಮರ್ಥ ರಾದ, ಸಃ=ಆ ಪೂರ್ಣಪ್ರಜ್ಞಾಚಾರ್ಯರು, ದೃಢಂ=ನಿಶ್ಚಯವಾಗಿ, ಏಕಂ= ಒಂದು, ಪ್ರಕಾರಂ=ರೀತಿಯನ್ನು, ಅಭ್ಯಧಾತ್=ಹೇಳಿದರು.

ತಾ :—ಒಂದಾನೊಂದು ದಿನ ಅಚ್ಯುತಪ್ರೇಕ್ಷಾಚಾರ್ಯರು ಭಾಗವತ ಪುರಾಣವನ್ನು ಹೇಳುತ್ತಿದ್ದರು. ಆಗ ಪುರಾಣವನ್ನು ಕೇಳುತ್ತಿದ್ದ ಐದಾರು ಮಂದಿ ಬ್ರಾಹ್ಮಣರು ಬೇರೆ ಬೇರೆ ರೀತಿ ಬರೆದ ಪಾಠದ ಭಾಗವತ ಗ್ರಂಥವನ್ನು ಓದಿದರು. ಆಗ ಸಮರ್ಥರಾದ ಪೂರ್ಣಪ್ರಜ್ಞರು ಅವುಗಳಲ್ಲಿ ಒಂದು ಪುಸ್ತಕದ ಪಾಠವು ವೇದವ್ಯಾಸರಿಗೆ ಸಮ್ಮತವಾಗಿ ಸರಿಯಾದುದೆಂದು ನಿಶ್ಚಯಿಸಿ ಹೇಳಿದರು.

ವ್ಯಾ. ವಿ. :—ಪಂಚ ವಾ ಷಡ್ವಾ=ಪಂಚಷಾಃ, ತೈಃ. ಬಹವಃ ಪ್ರಕಾರಾಃ ಯಸ್ಯ ತತ್=ಬಹುಪ್ರಕಾರಂ, ತಸ್ಮಿನ್.

ಪರಪ್ರಕಾರೇಷ್ವಪಿ ಸಂಭವತ್ಸು ತೇ
ವಿನಿರ್ಣಯೋಽಸ್ಮಿನ್ ಕಥಮಿತ್ಯುದೀರಿತೇ ।
ಮುಕುಂದಬೋಧೇನ ಮಹಾಹೃದಬ್ರವೀ–
ತ್ಪ್ರಕಾರಮೇಕಂ ಭಗವತ್ಕೃತಂ ಸ್ಫುಟಮ್ ॥ ೫೦ ॥

ಅ :—ಪರಪ್ರಕಾರೇಷು ಸಂಭವತ್ಸು ಅಪಿ ತೇ ಅಸ್ಮಿನ್ ವಿನಿರ್ಣಯಃ ಕಥಂ ಇತಿ ಮುಕುಂದಬೋಧೇನ ಉದೀರಿತೇ ಮಹಾಹೃತ್ ಭಗವತ್ಕೃತಂ ಏಕಂ ಪ್ರಕಾರಂ ಸ್ಫುಟಂ ಅಬ್ರವೀತ್.

ಅ :—ಪರಪ್ರಕಾರೇಷು=ಬೇರೆ ರೀತಿಯ ಪಾಠಗಳು, ಸಂಭವತ್ಸು ಅಪಿ =ಕೂಡುತ್ತಿದ್ದರೂ, ತೇ=ನಿನಗೆ, ಅಸ್ಮಿನ್=ಈ ಪಾಠದಲ್ಲಿ, ವಿನಿರ್ಣಯಃ =ನಿಶ್ಚಯವು, ಕಥಂ=ಹೇಗೆ? ಇತಿ=ಹೀಗೆಂದು, ಮುಕುಂದಬೋಧೇನ =ಶ್ರೀಮನ್ನಾರಾಯಣನಲ್ಲಿ ಆಸಕ್ತವಾದ ಮನಸ್ಸುಳ್ಳ ಅಚ್ಯುತಪ್ರೇಕ್ಷಾಚಾರ್ಯ

Rarest Archiver

ರಿಂದ, ಉದೀರಿತೇ = ಹೇಳಲ್ಪಡಲು, ಮಹಾಹೃತ್ = ಪೂರ್ಣಪ್ರಜ್ಞರು, ಭಗವತ್ಕೃತಂ=ಶ್ರೀವೇದವ್ಯಾಸರಿಂದ ಮಾಡಲ್ಪಟ್ಟ, ಏಕಂ=ಒಂದು, ಪ್ರಕಾರಂ =ಪಾಠದ ರೀತಿಯನ್ನು, ಸ್ಫುಟಂ = ಸಯುಕ್ತಿಕವಾಗಿ, ಅಬ್ರವೀತ್= ಹೇಳಿದರು.

ತಾ :—ಆಗ ಅಚ್ಯುತಪ್ರೇಕ್ಷರು ಇತರ ಪಾಠಗಳೂ ಹೊಂದುವುದರಿಂದ ನಿನಗೆ ಈ ಪಾಠವೇ ಸರಿ ಎಂಬ ನಿರ್ಣಯವು ಹೇಗೆಂದು ಪ್ರಶ್ನಿಸಿದರು. ಪೂರ್ಣ ಪ್ರಜ್ಞರು ವೇದವ್ಯಾಸರು ಮಾಡಿದ ಪಾಠಪ್ರಕಾರವನ್ನು ಯುಕ್ತಿಸಹಿತವಾಗಿ ಉಪಪಾದಿಸಿ ಅದೇ ಸರಿಯಾದ ಪಾಠವೆಂದರು.

ವ್ಯಾ.ವಿ. :—ಪರೇ ಚ ತೇ ಪ್ರಕಾರಾಶ್ಚ=ಪರಪ್ರಕಾರಾಃ, ತೇಷು. ಮುಕುಂದಸ್ಯ ಬೋಧಃ ಯಸ್ಯ ಸಃ=ಮುಕುಂದಬೋಧಃ, ತೇನ. ಮಹತ್ ಹೃತ್ ಯಸ್ಯ ಸಃ=ಮಹಾಹೃತ್. ಭಗವತಾ ಕೃತಂ=ಭಗವತ್ಕೃತಮ್.

ನಿಗದ್ಯತಾಂ ಗದ್ಯಮಿಹೈವ ಪಂಚಮೇ
ಜಗದ್ಗುರೋರ್ವೇತ್ಥ ಕೃತಿಸ್ಥಿತಿಂ ಯದಿ ।
ಇತಿ ಬ್ರುವಾಣೇ ಯತಿಸತ್ತಮೇ ಸ್ವಯಂ
ತದುಕ್ತಮಾರ್ಗೇಣ ಜಗಾದ ಭೂರಿಹೃತ್ ॥ ೫೧ ॥

ಅ :—ಜಗದ್ಗುರೋಃ ಕೃತಿಸ್ಥಿತಿಂ ಯದಿ ವೇತ್ಥ ಇಹ ಏವ ಪಂಚಮೇ ಗದ್ಯಂ ನಿಗದ್ಯತಾಮ್. ಇತಿ ಯತಿಸತ್ತಮೇ ಬ್ರುವಾಣೇ ಭೂರಿಹೃತ್ ಸ್ವಯಂ ತದುಕ್ತಮಾರ್ಗೇಣ ಜಗಾದ.

ಅ :—ಜಗದ್ಗುರೋಃ = ಪ್ರಪಂಚದ ಗುರುಗಳಾದ ವೇದವ್ಯಾಸರ, ಕೃತಿಸ್ಥಿತಿಂ=ರಚನೆಯ ಕ್ರಮವನ್ನು, ಯದಿ ವೇತ್ಥ=ತಿಳಿಯುತ್ತೀಯಾದರೆ, ಇಹ ಏವ= ಈ ಭಾಗವತ ಗ್ರಂಥದಲ್ಲಿಯೇ, ಪಂಚಮೇ=ಐದನೆ ಸ್ಕಂಧದಲ್ಲಿರುವ, ಗದ್ಯಂ=ಗದ್ಯವು (ಛಂದಸ್ಸಿಲ್ಲದ ವಾಕ್ಯವು), ನಿಗದ್ಯತಾಂ=ಹೇಳಲ್ಪಡಲಿ. ಇತಿ=ಹೀಗೆಂದು, ಯತಿಸತ್ತಮೇ=ಸಂನ್ಯಾಸಿಗಳಲ್ಲಿ ಶ್ರೇಷ್ಠವಾದ ಅಚ್ಯುತ ಪ್ರೇಕ್ಷರು, ಬ್ರುವಾಣೇ (ಸತಿ)=ಹೇಳಲು, ಭೂರಿಹೃತ್=ಪೂರ್ಣಪ್ರಜ್ಞರು, ಸ್ವಯಂ=ಸ್ವಂತವಾಗಿ, ತದುಕ್ತಮಾರ್ಗೇಣ=ವೇದವ್ಯಾಸರು ಹೇಳಿದ ರೀತಿ ಯಿಂದ, ಜಗಾದ=ಹೇಳಿದರು.

Rarest Archiver

ತಾ :—ಆಗ ಅಚ್ಯುತಪ್ರೇಕ್ಷಯತಿವರ್ಯರು ನೀನು ವೇದವ್ಯಾಸರು ಮಾಡಿರುವ ಭಾಗವತಗ್ರಂಥದ ಪಾಠಕ್ರಮವನ್ನು ಸರಿಯಾಗಿ ತಿಳಿದವನಾದರೆ ಇದೇ ಭಾಗವತ ಗ್ರಂಥದ ಐದನೆ ಸ್ಕಂಧದಲ್ಲಿರುವ ಒಂದು ಗದ್ಯವನ್ನು (ಛಂದಸ್ಸಿಲ್ಲದ ವಾಕ್ಯವನ್ನು) ಹೇಳಿ ಅದರ ಅರ್ಥವನ್ನು ವಿವರಿಸು ನೋಡೋಣ. ಎಂದು ಹೇಳಿದರು. ಪೂರ್ಣಪ್ರಜ್ಞರು ತಾವೇ ವೇದವ್ಯಾಸರು ಹೇಳಿದ ರೀತಿಯಿಂದ ಆ ಗದ್ಯವನ್ನು ಅರ್ಥಸಹಿತವಾಗಿ ಹೇಳಿದರು. ಹೀಗೆ ಆಚಾರ್ಯರು ತಾನು ಅನೇಕ ಜನ್ಮಸಂಸಿದ್ಧನೆಂದು ಪ್ರಕಾಶಪಡಿಸಿದರು.

ವ್ಯಾ.ವಿ. :—ಜಗತಃ ಗುರುಃ=ಜಗದ್ಗುರುಃ, ತಸ್ಯ. ಕೃತೇಃ ಸ್ಥಿತಿಃ= ಕೃತಿಸ್ಥಿತಿಃ, ತಾಮ್. ಯತಿಷು ಸತ್ತಮಃ=ಯತಿಸತ್ತಮಃ, ತಸ್ಮಿನ್. ತೇನ ಉಕ್ತಃ, ತದುಕ್ತಶ್ಚಾಸೌ ಮಾರ್ಗಶ್ಚ=ತದುಕ್ತಮಾರ್ಗಃ, ತೇನ. ಭೂರಿ ಹೃತ್ ಯಸ್ಯ ಸಃ=ಭೂರಿಹೃತ್. ವೇತ್ಥ–ವಿದ ಜ್ಞಾನೇ, ಎರಡನೆ ಗಣ, ಸಕ. ಲಟ್, ಪರ. ಪ್ರ. ಏ. ವೇದ ವಿದತುಃ ವಿದುಃ, ವೇತ್ಥವಿದಥುಃ. ವಿದ, ವೇದ ವಿದ್ವ ವಿದ್ಮ. ಸೂ. ವಿದೋಲಟೋವಾಃ. ಲಟ್‌ಗೆ ಲಿಟ್ ಲಕಾರದ ಆದೇಶಗಳು.

ಅಶೇಷಶಿಷ್ಯೈಶ್ಚ ತದಾಜ್ಞಯಾ ತದಾ
ಪರೀಕ್ಷಣಾಯೈಕ್ಷಿ ಸಮಸ್ತಪುಸ್ತಕಮ್ ।
ಸ ತತ್ರ ಹಂತೈಕತಮೋಕ್ಷಿತಂ (ಸ್ಥಿರಂ) ತ್ಯಜ-
ನ್ನ ತಾವದಧ್ಯಾಯನಿಕಾಯಮಭ್ಯಧಾತ್ ॥ ೫೨ ॥

ಅ :—ತದಾ ತದಾಜ್ಞಯಾ ಅಶೇಷಶಿಷ್ಯೈಃ ಚ ಪರೀಕ್ಷಣಾಯ ಸಮಸ್ತ-ಪುಸ್ತಕಂ ಐಕ್ಷಿ. ಸಃ ತತ್ರ ಏಕತಮೋಕ್ಷಿತಂ (ಸ್ಥಿತಂ) ನ ತ್ಯಜನ್ ತಾವತ್ ಅಧ್ಯಾಯನಿಕಾಯಂ ಅಭ್ಯಧಾತ್ ಹಂತ.

ಅ :—ತದಾ = ಆ ಸಮಯದಲ್ಲಿ, ತದಾಜ್ಞಯಾ = ಆ ಗುರುಗಳ ಅಪ್ಪಣೆಯಿಂದ, ಅಶೇಷಶಿಷ್ಯೈಃ ಚ=ಎಲ್ಲ ಶಿಷ್ಯರಿಂದಲು, ಪರೀಕ್ಷಣಾಯ= ಪರೀಕ್ಷೆಗಾಗಿ, ಸಮಸ್ತಪುಸ್ತಕಂ=ಎಲ್ಲ ಪುಸ್ತಕಗಳೂ, ಐಕ್ಷಿ=ನೋಡಲ್ಪಟ್ಟವು. ಸಃ=ಆ ಪೂರ್ಣಪ್ರಜ್ಞರು, ತತ್ರ=ಆ ಎಲ್ಲ ಪುಸ್ತಕಗಳ ನಡುವೆ, ಏಕತ-

Rarest Archives

ಮೇಕ್ಷಿತಂ (ಸ್ಥಿತಂ)=ಒಂದು ಪುಸ್ತಕದಲ್ಲಿ ನೋಡಲ್ಪಟ್ಟ (ಇರುವ) ಪಾಠವನ್ನು, ನ ತ್ಯಜನ್=ಬಿಡದಿದ್ದವರಾಗಿ, ತಾವತ್=ಆ ಶಿಷ್ಯರು ಪುಸ್ತಕವನ್ನು ನೋಡುತ್ತಿರುವಾಗಲೆ, ಅಧ್ಯಾಯನಿಕಾಯಂ=ಅಧ್ಯಾಯಗಳ ಸಮೂಹವನ್ನು, ಅಭ್ಯಧಾತ್=ಹೇಳಿದರು, ಹಂತ=ಆಶ್ಚರ್ಯ.

ತಾ:—ಆ ಪೂರ್ಣಪ್ರಜ್ಞರು ಗದ್ಯವನ್ನು ಹೇಳುತ್ತಿರುವಾಗ ಅಚ್ಯುತಪ್ರೇಕ್ಷ ಗುರುಗಳು ಎಲ್ಲ ಶಿಷ್ಯರಿಗೂ ಎಲ್ಲ ಪುಸ್ತಕಗಳನ್ನೂ ಪರೀಕ್ಷೆಗಾಗಿ ನೋಡುವಂತೆ ಹೇಳಿದರು. ಅವರೆಲ್ಲ ಹಾಗೆಯೇ ಪುಸ್ತಕಗಳ ಪಾಠವನ್ನು ನೋಡುತ್ತಿದ್ದರು. ಆಗ ಪೂರ್ಣಪ್ರಜ್ಞರು ಯಾವುದೋ ಒಂದು ಪುಸ್ತಕದ ಪಾಠಕ್ರಮವನ್ನನುಸರಿಸಿ ಅಧ್ಯಾಯಗಳ ಸಮೂಹವನ್ನು ಹೇಳಿದರು.

ವ್ಯಾ.ವಿ.:—ಅಶೇಷಾಶ್ಚ ತೇ ಶಿಷ್ಯಾಶ್ಚ=ಅಶೇಷಶಿಷ್ಯಾಃ, ತೈಃ. ತಸ್ಯ ಆಜ್ಞಾ=ತದಾಜ್ಞಾ, ತಯಾ. ಸಮಸ್ತಂ ಚ ತತ್ ಪುಸ್ತಕಂ ಚ=ಸಮಸ್ತಪುಸ್ತಕಮ್. ಏಕತಮೇನ ಈಕ್ಷಿತಂ=ಏಕತಮೇಕ್ಷಿತಮ್. ಅಧ್ಯಾಯಾನಾಂ ನಿಕಾಯಃ = ಅಧ್ಯಾಯನಿಕಾಯಃ, ತಮ್. ಐಕ್ಷಿ = ಈಕ್ಷ ದರ್ಶನೇ, ಒಂದನೆ ಗಣ, ಕರ್ಮಣಿ, ಲುಙ್, ಆತ್ಮ, ಪ್ರ. ಏ. ಐಕ್ಷಿ, ಐಕ್ಷಿಷಾತಾಂ, ಐಕ್ಷಿಷತ. ಐಕ್ಷಿಷ್ಠಾಃ, ಐಕ್ಷಿಷಾಥಾಂ, ಐಕ್ಷಿಢ್ವಂ ಐಕ್ಷಿಢ್ವಮ್. ಐಕ್ಷಿಷಿ, ಐಕ್ಷಿಷ್ವಹಿ, ಐಕ್ಷಿಷ್ಮಹಿ.

*ಅತ್ರ ಜನ್ಮನಿ ನ ಯತ್ಪಠಿತಂ ತೇ
ಜೈತ್ರ ಭಾತಿ ಕಥಮಿತ್ಯಮುನೋಕ್ತೇ ।
ಪೂರ್ವಜನ್ಮಸು ಹಿ ವೇದ ಪುರೇದಂ
ಸರ್ವಮಿತ್ಯಮಿತಬುದ್ಧಿರುವಾಚ ॥ ೫೩ ॥

ಅ:—ಜೈತ್ರ! ತೇ ಅತ್ರ ಜನ್ಮನಿ ಯತ್ ನ ಪಠಿತಂ (ತತ್) ಕಥಂ ಭಾತಿ ಇತಿ ಅಮುನಾ ಉಕ್ತೇ ಅಮಿತಬುದ್ಧಿಃ ಇದಂ ಸರ್ವಂ ಪೂರ್ವಜನ್ಮಸು ವೇದ ಪುರಾ ಹಿ ಇತಿ ಉವಾಚ.

ಅ:—ಜೈತ್ರ!=ಜಯಶೀಲನೆ! ತೇ=ನಿನ್ನಿಂದ, ಅತ್ರ ಜನ್ಮನಿ=ಈ ಜನ್ಮದಲ್ಲಿ, ಯತ್ = ಯಾವುದು, ನ ಪಠಿತಂ = ಓದಲ್ಪಡಲಿಲ್ಲವೋ.

* ಈ ಪದ್ಯವು ರಥೋದ್ಧತಾ ವೃತ್ತದಲ್ಲಿದೆ.

Rarest Archiver

(ಅದು) ಕಥಂ = ಹೇಗೆ, ಭಾತಿ = ಸ್ಫುರಿಸುತ್ತದೆ. ಇತಿ = ಹೀಗೆಂದು, ಅಮುನಾ = ಈ ಗುರುಗಳಿಂದ, ಉಕ್ತೇ = ಹೇಳಲ್ಪಡಲು, ಅಮಿತಬುದ್ಧಿಃ = ಪೂರ್ಣಪ್ರಜ್ಞರು, ಇದಂ = ಈ, ಸರ್ವಂ = ಎಲ್ಲವನ್ನು, ಪೂರ್ವಜನ್ಮಸು = ಹಿಂದಿನ ಜನ್ಮಗಳಲ್ಲಿ, ವೇದ ಪುರಾ ಹಿ = ತಿಳಿದುಕೊಂಡೆನು. ಇತಿ = ಹೀಗೆಂದು, ಉವಾಚ = ಹೇಳಿದರು.

ತಾ :—"ವಿಜಯಶಾಲಿಯಾದ ಪೂರ್ಣಪ್ರಜ್ಞನೇ ! ನೀನು ಈ ಪುರಾಣಾದಿಗಳನ್ನು ಈ ಜನ್ಮದಲ್ಲಿ ಓದಲಿಲ್ಲ. ಆದರೂ ಅದು ನಿನಗೆ ಹೇಗೆ ಬರುತ್ತದೆ ?" ಎಂದು ಗುರುಗಳು ಕೇಳಿದರು. ಆದಕ್ಕೆ ಪೂರ್ಣಪ್ರಜ್ಞರು 'ನಾನು ಇದನ್ನೆಲ್ಲ ಹಿಂದಿನ ಜನ್ಮಗಳಲ್ಲಿ ಕಲಿತುಕೊಂಡಿದ್ದೇನೆ' ಎಂದು ಉತ್ತರ ಕೊಟ್ಟರು.

ವ್ಯಾ. ವಿ. :—ಪೂರ್ವಾಣಿ ಚ ತಾನಿ ಜನ್ಮಾನಿ ಚ = ಪೂರ್ವಜನ್ಮಾನಿ, ತೇಷು. ಅಮಿತಾ ಬುದ್ಧಿಃ ಯಸ್ಯ ಸಃ = ಅಮಿತಬುದ್ಧಿಃ. ವೇದ–ವಿದ ಜ್ಞಾನೇ ಲಟ್, ಪರ. ಉತ್ತ. ಏ. ವೇದ, ವಿದತುಃ, ವಿದುಃ. ವೇತ್ಥ, ವಿದಥುಃ, ವಿದ. ವೇದ, ವಿದ್ವ. ವಿದ್ಮ. ಪುರಾ ವೇದ 'ಪುರಿಲುಙ್ ಚಾಸ್ಮೆ (3–2–122) ಇದರಿಂದ ಪುರಾ ಶಬ್ದದ ಯೋಗವಿರುವ ಕಾರಣ ಭೂತಾರ್ಥದಲ್ಲಿ ಲಟ್ ಲಕಾರವನ್ನು ಪ್ರಯೋಗಿಸಲಾಗಿದೆ.

*ಇತಿ ಬಹುವಿಧವಿಶ್ವಾಶ್ಚರ್ಯಚಿತ್ರಪ್ರವೃತ್ತೇ–
ರ್ಜಗತಿ ವಿತತಿಮಾಪನ್ನೂತನಾಪ್ಯಸ್ಯ ಕೀರ್ತಿಃ ।
ಕ್ಷಪಿತತತತಮಸ್ಕಾ ಭಾಸ್ಕರೀವ ಪ್ರಭಾಲಂ
ಸುಜನಕುಮುದವೃಂದಾನಂದದಾ ಚಂದ್ರಿಕೇವ ॥ ೫೪ ॥

ಇತಿ ಶ್ರೀಮತ್ಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯಸುತನಾರಾಯಣ–
ಪಂಡಿತಾಚಾರ್ಯವಿರಚಿತೇ ಶ್ರೀಮತ್ಸುಮಧ್ವವಿಜಯೇ ಮಹಾಕಾವ್ಯೇ
ಆನಂದಾಂಕೇ ಚತುರ್ಥಸ್ಸರ್ಗಃ

ಅ :—ಇತಿ ಬಹುವಿಧವಿಶ್ವಾಶ್ಚರ್ಯಚಿತ್ರಪ್ರವೃತ್ತೇಃ ಅಸ್ಯ, ಕ್ಷಪಿತತತ–

---

* ಈ ಪದ್ಯವು ಮಾಲಿನೀವೃತ್ತದಲ್ಲಿದೆ.

Rarest Archives

ತಮಸ್ಕಾ ಸುಜನಕುಮುದವೃಂದಾನಂದದಾ ಕೀರ್ತಿಃ ನೂತನಾ ಅಪಿ ಭಾಸ್ಕರೀ ಪ್ರಭಾ ಇವ ಚಂದ್ರಿಕಾ ಇವ ಜಗತಿ ವಿತತಿಂ ಅಲಂ ಆಪತ್.

ಅ :—ಇತಿ= ಈ ರೀತಿಯಾಗಿ, ಬಹುವಿಧ=ಅನೇಕ ಪ್ರಕಾರವಾದ, ವಿಶ್ವಾಶ್ಚರ್ಯ = ಸಮಸ್ತಜನರಿಗೆ ಆಶ್ಚರ್ಯವನ್ನುಂಟುಮಾಡುವ, ಚಿತ್ತ-ಪ್ರವೃತ್ತೇಃ=ಮನಸ್ಸಿನವ್ಯಾಪಾರಉಳ್ಳ, ಅಸ್ಯ= ಈ ಪೂರ್ಣಪ್ರಜ್ಞರ, ಕ್ಷಪಿತ =ನಾಶಗೊಳಿಸಲ್ಪಟ್ಟ, ತತ=ವ್ಯಾಪ್ತವಾದ, ತಮಸ್ಕಾ = ಅಜ್ಞಾನವೆಂಬ ಕತ್ತಲೆಯುಳ್ಳ, ಸುಜನ=ಸಜ್ಜನರೆಂಬ, ಕುಮುದವೃಂದ=ನೈದಿಲೆಹೂವುಗಳ ಸಮೂಹಕ್ಕೆ, ಆನಂದದಾ = ಸಂತೋಷವನ್ನುಂಟುಮಾಡುವ, ಕೀರ್ತಿಃ= ಯಶಸ್ಸು, ನೂತನಾ ಅಪಿ=ಹೊಸದಾಗಿದ್ದರೂ, ಭಾಸ್ಕರೀ=ಸೂರ್ಯನಿಗೆ ಸಂಬಂಧಪಟ್ಟ, ಪ್ರಭಾ ಇವ = ಕಾಂತಿಯಂತೆಯೂ, ಚಂದ್ರಿಕಾ ಇವ= ಬೆಳದಿಂಗಳಂತೆಯೂ, ಜಗತಿ=ಲೋಕದಲ್ಲಿ, ವಿತತಿಂ=ವ್ಯಾಪ್ತಿಯನ್ನು, ಅಲಂ =ಚೆನ್ನಾಗಿ, ಆಪತ್=ಹೊಂದಿತು.

ತಾ :—ಸೂರ್ಯನ ಪ್ರಭೆಯು ದಟ್ಟವಾದ ಕತ್ತಲೆಯನ್ನು ನಿವಾರಿಸಿ ಪ್ರಪಂಚದಲ್ಲೆಲ್ಲಾ ಹರಡುತ್ತದೆ. ಚಂದ್ರನ ಬೆಳದಿಂಗಳು ನೈದಿಲೆಹೂವುಗಳನ್ನು ಅರಳಿಸಿ ಜಗತ್ತಿನ ಎಲ್ಲ ಕಡೆಯಲ್ಲಿಯೂ ವ್ಯಾಪಿಸುತ್ತದೆ. ಶ್ರೀಪೂರ್ಣಪ್ರಜ್ಞರು ಎಲ್ಲಾ ಜನರಿಗೂ ಆಶ್ಚರ್ಯಕರವಾದ ಕಾರ್ಯವನ್ನು ಮಾಡತಕ್ಕವರು. ಅವರ ಮನೋವ್ಯಾಪಾರವು ಹಾಗೆಯೇ ಅದ್ಭುತವಾದುದು. ಅವರ ಕೀರ್ತಿಯು ನೂತನವಾದರೂ ಸಮಸ್ತ ಜನರ ಅಜ್ಞಾನವನ್ನು ನಿವಾರಿಸಿ ಸಜ್ಜನರಿಗೆ ಆನಂದ ವನ್ನುಂಟುಮಾಡುತ್ತ ಪ್ರಪಂಚದಲ್ಲಿ ಹರಡಿತು. ಹೀಗೆ ಸೂರ್ಯಚಂದ್ರರಂತೆ ಶ್ರೀಪೂರ್ಣಪ್ರಜ್ಞರು ಅನಿಷ್ಟವನ್ನು ನಿವಾರಿಸಿ ಇಷ್ಟವನ್ನು ನೀಡುವ ಮಹಾ ಗುರುಗಳು ಎಂದು ಸಾತ್ತ್ವಿಕಜನತೆಗೆ ಮನವರಿಕೆಯಾಯಿತು. ಎಂದು ಅಭಿ ಪ್ರಾಯ. (ಉಪಮಾಲಂಕಾರ)

ವ್ಯಾ.ವಿ. :—ಬಹುಃ ವಿಧಾ ಯಸ್ಯಾಃ ಸಾ=ಬಹುವಿಧಾ, ವಿಶ್ವಸ್ಯ ಆಶ್ಚರ್ಯಂ ಯಸ್ಯಾಃ ಸಾ=ವಿಶ್ವಾಶ್ಚರ್ಯಾ, ಚಿತ್ತಸ್ಯ ಪ್ರವೃತ್ತಿಃ ಚಿತ್ತ ಪ್ರವೃತ್ತಿಃ, ಬಹುವಿಧಾ ವಿಶ್ವಾಶ್ಚರ್ಯಾ ಚಿತ್ತಪ್ರವೃತ್ತಿಃ ಯಸ್ಯ ಸಃ ಬಹುವಿಧ-ಶ್ವಾಶ್ಚರ್ಯಚಿತ್ತಪ್ರವೃತ್ತಿಃ ತಸ್ಯ, ತತಂ ಚ ತತ್ ತಮಶ್ಚ ತತತಮಃ. ಕ್ಷಪಿತಂ

Rarest Archiver

ತತತಮಃ ಯಯಾ ಸಾ ಕ್ಷಪಿತತತತತಮಸ್ಕಾ, ಭಾಸ್ಕರಸ್ಯ ಇಯಂ ಭಾಸ್ಕರೀ, ಸುಜನಾ ಏವ ಕುಮುದಾನಿ ಸುಜನಕುಮುದಾನಿ, ಸುಜನಕುಮುದಾನಾಂ ವೃಂದಂ=ಸುಜನಕುಮುದವೃಂದಂ, ಆನಂದಂ ದದಾತಿ ಇತಿ=ಆನಂದದಾ, ಸುಜನಕುಮುದವೃಂದಸ್ಯ ಆನಂದದಾ=ಸುಜನಕುಮುದವೃಂದಾನಂದದಾ. ಕ್ರಿಯಾಪದ–ಆಪತ್, ಆಪತಾಂ, ಆಪನ್. ಆಪಃ, ಆಪತಂ, ಆಪತ. ಆಪಂ, ಆಪಾವ, ಆಪಾಮ. ಆಪ್ಲೃ ವ್ಯಾಪ್ತೌ ಲುಙ್, ಪರ. ಪ್ರ. ಪು. ಏ.

ಇಲ್ಲಿಗೆ ಕವಿಕುಲತಿಲಕ ಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯಸುತ
ನಾರಾಯಣಪಂಡಿತಾಚಾರ್ಯ ವಿರಚಿತ ಶ್ರೀಸುಮಧ್ವವಿಜಯದ ಕನ್ನಡ
ಅನುವಾದದಲ್ಲಿ ಚತುರ್ಥಸರ್ಗವು ಸಮಾಪ್ತವಾಯಿತು.

Rarest Archiver